ಶುಕ್ರವಾರ, ಜನವರಿ 30, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವಧುವಿನ ಸಂಭ್ರಮ

ಕೋಲ್ಕತ್ತದಲ್ಲಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ವೈವಾಹಿಕ ಜೀವನಕ್ಕೆ ಕಾಲಿರಿಸಿದ ವಧುವಿನ ಸಂಭ್ರಮ

ಫೈನಲ್‌ಗೆ ಎಲಿನಾ

ಮೆಲ್ಬರ್ನ್‌ನಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಓಪನ್ ಟೆನಿಸ್ ಮಹಿಳೆಯರ ಸಿಂಗಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದ ಕಜಕಸ್ತಾನದ ಎಲಿನಾ ರಿಬಾಕಿನಾ ಅಭಿಮಾನಿಗಳತ್ತ ಕೈಬೀಸಿದರು

ವಿಷಾದ ವ್ಯಕ್ತಪಡಿಸಿದ ಹರಿಪ್ರಸಾದ್

ಅಸಂಸದೀಯ ಪದ ಬಳಕೆ: ವಿಪಕ್ಷಗಳ ಆಕ್ಷೇಪ, ಎರಡನೇ ದಿನವೂ ಧರಣಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ವಿರುದ್ಧ ಕ್ರಮಕ್ಕೆ ಆಗ್ರಹ
- ಅಸಂಸದೀಯ ಪದವನ್ನು ಕಡತದಿಂದ ತೆಗೆಸಿದ ಸಭಾಪತಿ
- ದಿನದ ಮಟ್ಟಿಗೆ ಕಲಾಪ ಮುಂದಕ್ಕೆ

ಬಿ.ಕೆ.ಹರಿಪ್ರಸಾದ್ ಅವರ ಅಮಾನತಿಗೆ ಒತ್ತಾಯಿಸಿ ವಿರೋಧ ಪಕ್ಷಗಳ ಸದಸ್ಯರು ಸಭಾಪತಿ ಪೀಠದ ಎದುರು ಧರಣಿ ನಡೆಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಸತತ ಎರಡನೇ ದಿನವೂ ವಿರೋಧ ಪಕ್ಷಗಳ ಸದಸ್ಯರ ಧರಣಿಯೊಂದಿಗೆ ಆರಂಭವಾದ ವಿಧಾನ ಪರಿಷತ್ತಿನ ಗುರುವಾರದ ಕಲಾಪವು, ಯಾವುದೇ ಚರ್ಚೆ ಇಲ್ಲದೆ ಕೊನೆಯಾಯಿತು. ಈ ಮಧ್ಯೆ, ಕಲಾಪದ ವೇಳೆ ಅಸಂಸದೀಯ ಪದಗಳನ್ನು ಬಳಸಿದ್ದಕ್ಕೆ ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್ ಅವರು ವಿಷಾದ ವ್ಯಕ್ತಪಡಿಸಿದರು.

ಗುರುವಾರ ಕಲಾಪ ಆರಂಭವಾಗುತ್ತಿದ್ದಂತೆಯೇ ವಿರೋಧ ಪಕ್ಷಗಳ ಸದಸ್ಯರು ಸಭಾಪತಿ ಪೀಠದ ಎದುರು ಧರಣಿಗೆ ಮುಂದಾದರು. ಇದರಿಂದ ಅಸಮಾಧಾನಗೊಂಡ ಸಭಾಪತಿ ಬಸವರಾಜ ಹೊರಟ್ಟಿ, 'ಯಾತಕ್ಕಾಗಿ ಇಲ್ಲಿ ಬಂದು ನಿಂತಿದ್ದೀರಿ' ಎಂದು ಕಟುವಾಗಿ ಪ್ರಶ್ನಿಸಿದರು.

ವಿರೋಧ ಪಕ್ಷಗಳ ನಾಯಕ ಛಲವಾದಿ ನಾರಾಯಣಸ್ವಾಮಿ, 'ಇದು ವಂದನಾ ನಿರ್ಣಯವೋ ಅಥವಾ ನಿಂದನಾ ನಿರ್ಣಯವೋ ಎಂಬುದನ್ನು ಸ್ಪಷ್ಟಪಡಿಸಬೇಕು' ಎಂದು ಸತತ ಮೂರನೇ ದಿನವೂ ತಕರಾರು ಎತ್ತಿದರು.

ಆಗ ಹೊರಟ್ಟಿ ಅವರು ಸಿಟ್ಟಿನಿಂದ, 'ಕಲಾಪ ನಡೆಯಬಾರದಾ? ಈಗಾಗಲೇ ಇತ್ಯರ್ಥವಾಗಿರುವುದನ್ನು ಮತ್ತೇಕೆ ಕೆದಕುತ್ತೀರಿ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸಭಾಪತಿ ಪೀಠದ ಎದುರು ನಿಂತಿದ್ದ ವಿರೋಧ ಪಕ್ಷಗಳ ಸದಸ್ಯರು ಸರ್ಕಾರಕ್ಕೆ ಧಿಕ್ಕಾರ ಕೂಗಲಾರಂಭಿಸಿದರು. ಹೊರಟ್ಟಿ ಅವರು, 'ಪೀಠದ ಎದುರು ನಿಂತಿದ್ದಾಗ ಮಾತನಾಡಬಾರದು. ಸದನ ನಡೆಯುವುದು ನಿಮಗೆ ಬೇಕಾಗಿಲ್ಲ ಎಂದು ಕಾಣುತ್ತದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿಯ ಡಿ.ಎಸ್.ಅರುಣ್, 'ಇದೇ 23ರಂದು ಸದನದಲ್ಲಿ ಮಾತನಾಡುವಾಗ ಬಿ.ಕೆ. ಹರಿಪ್ರಸಾದ್ ಅಸಂಸದೀಯ ಪದಗಳನ್ನು ಬಳಸಿದ್ದಾರೆ. ರಾಜ್ಯಪಾಲರಿಗೆ ಕೈತೋರಿಸಿ ಬೆದರಿಕೆ ಹಾಕಿದ್ದಾರೆ. ಸದನ ನಡೆಯದಿರಲು ಅವರೇ ಕಾರಣ' ಎಂದರು. ಹರಿಪ್ರಸಾದ್ ಅವರು ತಾವು ಕುಳಿತಲ್ಲಿಂದಲೇ ಅಸಂಸದೀಯ ಪದ ಬಳಸಿ ಪ್ರತಿಕ್ರಿಯಿಸಿದರು. ಸಿ.ಟಿ.ರವಿ ಅವರು ಹರಿಪ್ರಸಾದ್ ಅವರ ಆ ಮಾತನ್ನು ಉಲ್ಲೇಖಿಸಿ, ಆಕ್ಷೇಪ ಎತ್ತಿದರು. ವಿರೋಧ ಪಕ್ಷಗಳ ಸದಸ್ಯರೆಲ್ಲರೂ ಹರಿಪ್ರಸಾದ್ ಅವರಿಗೆ ಧಿಕ್ಕಾರ ಕೂಗಲಾರಂಭಿಸಿದರು. ಹೊರಟ್ಟಿ ಅವರು ಕಲಾಪವನ್ನು 10 ನಿಮಿಷ ಮುಂದೂಡಿದರು.

ನಂತರ ವಿರೋಧ ಪಕ್ಷಗಳ ಸದಸ್ಯರೆಲ್ಲರೂ ಒಟ್ಟುಗೂಡಿ ಸಭಾಪತಿ ಹೊರಟ್ಟಿ ಅವರ ಕೊಠಡಿಗೆ ಹೋಗಿ ಹರಿಪ್ರಸಾದ್ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದರು. ಹರಿಪ್ರಸಾದ್ ಅವರನ್ನು ಕರೆಯಿಸಿದ ಹೊರಟ್ಟಿ ಅವರು ಸುಮಾರು ಎರಡು ತಾಸು ಮಾತುಕತೆ ನಡೆಸಿದರು.

ಮಧ್ಯಾಹ್ನ 2ರ ಹೊತ್ತಿಗೆ ಕಲಾಪ ಆರಂಭವಾದಾಗ ಹರಿಪ್ರಸಾದ್, 'ನನ್ನ ಮಾತಿನಿಂದ ನೋವಾಗಿದ್ದರೆ ವಿಷಾದಿಸುತ್ತೇನೆ' ಎಂದು ಹೇಳಿದರು. 23ರ ಶುಕ್ರವಾರ ಮತ್ತು ಗುರುವಾರದ ಕಲಾಪದಲ್ಲಿ ಅವರು ಆಡಿದ್ದ ಮಾತುಗಳು ಅಸಂಸದೀಯವಾಗಿದ್ದು, ಅವುಗಳನ್ನು ಕಡತದಿಂದ ತೆಗೆದುಹಾಕಲು ಹೊರಟ್ಟಿ ಅವರು ಆದೇಶಿಸಿದರು. ಇದಕ್ಕೆ ತೃಪ್ತರಾಗದ ವಿಪಕ್ಷಗಳ ಸದಸ್ಯರು ಹರಿಪ್ರಸಾದ್ ಅಮಾನತಿಗೆ ಒತ್ತಾಯಿಸಿ ಧಿಕ್ಕಾರ ಕೂಗಿದರು. ಸಭಾಪತಿ ತಕ್ಷಣವೇ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

> ವಿರೋಧ ಪಕ್ಷಗಳ ಸದಸ್ಯರ ನಡೆಯನ್ನು ನೋಡಿದರೆ, ಕಲಾಪ ನಡೆಯುವುದು ಬೇಕಿಲ್ಲ ಎನಿಸುತ್ತದೆ. ನಡೆಯಬಾರದು ಎಂದಿದ್ದರೆ, ಅದನ್ನು ಹೇಳಿಬಿಡಿ
> **ಬಸವರಾಜ ಹೊರಟ್ಟಿ,** ವಿಧಾನ ಪರಿಷತ್ತಿನ ಸಭಾಪತಿ

> ವಿರೋಧ ಪಕ್ಷಗಳ ಸದಸ್ಯರು ನಿನ್ನೆಯಿಂದಲೂ ಒಂದಲ್ಲ ಒಂದು ಹೊಸ ಬೇಡಿಕೆ ಇಟ್ಟು, ಕಲಾಪಕ್ಕೆ ಅಡ್ಡಿಪಡಿಸುತ್ತಲೇ ಇದ್ದಾರೆ
> **ಸಲೀಂ ಅಹಮದ್,** ವಿಧಾನ ಪರಿಷತ್ತಿನಲ್ಲಿ ಸರ್ಕಾರದ ಮುಖ್ಯ ಸಚೇತಕ

> ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತೇವೆ ಎಂದು ನಿನ್ನೆಯೇ ಸ್ಪಷ್ಟಪಡಿಸಿದ್ದೇವೆ. ಈಗ ಮತ್ತೆ ಅದೇ ಪ್ರಶ್ನೆ ಎತ್ತುತ್ತಿದ್ದು, ಕಲಾಪ ನಡೆಯಲು ಬಿಡಬಾರದು ಎಂದು ನಿರ್ಧರಿಸಿದಂತಿದೆ
> **ಎಸ್.ಎನ್.ಬೋಸರಾಜು,** ವಿಧಾನ ಪರಿಷತ್ತಿನ ಸಭಾನಾಯಕ

> ರಾಜ್ಯಪಾಲರ ಭಾಷಣವನ್ನು ಖಂಡಿಸಿ ಸಭಾನಾಯಕರು ಮಾತನಾಡಿದ್ದು, ಅದಕ್ಕೆ ಅವರು ಸದನದಲ್ಲಿ ವಿಷಾದ ವ್ಯಕ್ತಪಡಿಸಲಿ. ಕಲಾಪ ನಡೆಯಲು ಸಹಕಾರ ನೀಡುತ್ತೇವೆ
> **ಛಲವಾದಿ ನಾರಾಯಣಸ್ವಾಮಿ,** ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ

ಅಸಹಾಯಕರಾದರೇ 'ಹೌದಾ ಹುಲಿಯಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಂದು ಕಾಲಕ್ಕೆ 'ಹೌದಾ ಹುಲಿಯಾ' ಎಂದು ಕರೆಯಿಸಿಕೊಳ್ಳುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ಅಸಹಾಯಕರು. ಇದಕ್ಕೆ ಪುತ್ರ ವ್ಯಾಮೋಹ ಕಾರಣವೊ? ಸ್ವಪಕ್ಷೀಯರ ಬೆದರಿಕೆಯೊ? ಹೈಕಮಾಂಡ್‌ನ ಬ್ಲಾಕ್‌ಮೇಲ್ ಕಾರಣವೊ' ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಪ್ರಶ್ನಿಸಿದರು.

ರಾಜ್ಯಪಾಲರ ಭಾಷಣದ ಕುರಿತ ವಂದನಾ ನಿರ್ಣಯದ ಮೇಲೆ ವಿಧಾನಸಭೆಯಲ್ಲಿ ಮಾತನಾಡಿದ ಅವರು, 'ಕಳೆದ ಎರಡೂವರೆ ವರ್ಷಗಳ ನಿಮ್ಮ ಆಡಳಿತ ಗಮನಿಸಿದಾಗ ಎಲ್ಲ ಕಡೆಯೂ ನಿಮ್ಮ ಅಸಹಾಯಕತೆ ಕಾಣುತ್ತಿದೆ. ಇದು ನಮ್ಮ ಆರೋಪ ಮಾತ್ರವಲ್ಲ, ನಿಮ್ಮ ಪಕ್ಷದ ಶಾಸಕರೇ ಈಗ ಇರುವುದು ಹಿಂದಿನ ಸಿದ್ದರಾಮಯ್ಯ ಅಲ್ಲ ಎನ್ನುತ್ತಿದ್ದಾರೆ' ಎಂದರು.

'ಸಿದ್ದರಾಮಯ್ಯ ಇಷ್ಟು ಅಸಹಾಯಕ ಆಗುತ್ತಾರೆ ಎಂದು ರಾಜ್ಯದ ಜನ ಭಾವಿಸಿರಲಿಲ್ಲ. ಶಾಸನ ಸಭೆಗೆ ಬನ್ನಿ ಎಂದು ಶಾಸಕರಿಗೆ ಮುಖ್ಯಮಂತ್ರಿ ಪತ್ರ ಬರೆಯುತ್ತಾರೆ. ಜನಪ್ರತಿನಿಧಿಗಳ ದೂರವಾಣಿ ಕರೆಯನ್ನು ಎತ್ತಬೇಕು ಎಂದು ಮುಖ್ಯ ಕಾರ್ಯದರ್ಶಿಯವರು ಅಧಿಕಾರಿಗಳಿಗೆ ತಾಕೀತು ಮಾಡುತ್ತಾರೆ. ಕೆ.ಎನ್.ರಾಜಣ್ಣ ಅವರನ್ನು ಸಂಪುಟದಿಂದ ತೆಗೆಯಿರಿ ಎಂದು ಹೈಕಮಾಂಡ್ ಹೇಳುತ್ತದೆ, ತಮ್ಮ ಆಪ್ತರಾದರೂ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕೋಗಿಲು ಪ್ರಕರಣದಲ್ಲಿ ಕೆ.ಸಿ.ವೇಣುಗೋಪಾಲ್ ಅವರ ಒಂದು 'ಎಕ್ಸ್' ಸಂದೇಶಕ್ಕೆ ಗಾಬರಿ ಬಿದ್ದು ಓಡಿ ಹೋಗುತ್ತಾರೆ. ಯಾಕೆ ಹೀಗಾಗಿದ್ದೀರಾ' ಎಂದು ಮುಖ್ಯಮಂತ್ರಿಯವರನ್ನು ಉದ್ದೇಶಿಸಿ ಸುನಿಲ್ ಪ್ರಶ್ನಿಸಿದರು.

'ಸಿದ್ದರಾಮಯ್ಯ ಅವರ ಅಸಹಾಯಕತೆಗೆ ಮತ್ತೊಂದು ಉದಾಹರಣೆ ಎಂದರೆ, ಕಾಂತರಾಜ ಆಯೋಗದ ವರದಿ ತಿರಸ್ಕರಿಸಿದ್ದು. ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳಿಗೆ ನ್ಯಾಯ ಕೊಡುತ್ತೇನೆ. ಎಷ್ಟೇ ವಿರೋಧ ಬಂದರೂ ವರದಿ ಜಾರಿ ಮಾಡುತ್ತೇನೆ ಎಂದು ಪಣ ತೊಟ್ಟಿದ್ದರು. ರಾಹುಲ್ ಗಾಂಧಿ ವರದಿ ತಿರಸ್ಕರಿಸಿ ಅಂದ ತಕ್ಷಣವೇ ವರದಿಯನ್ನು ಕಸದ ಬುಟ್ಟಿಗೆ ಹಾಕಿದರು. ಆದ್ದರಿಂದ ನಿಮ್ಮನ್ನು ಹಿಂದುಳಿದವರ ಚಾಂಪಿಯನ್ ಎಂದು ಕರೆಯಲು ಸಾಧ್ಯವೇ' ಎಂದರು.

ವಿಧಾನಸಭೆಯಲ್ಲಿ ಮಾತನಾಡಿದ ವಿ.ಸುನಿಲ್‌ಕುಮಾರ್

> ಹಳಿ ತಪ್ಪಿದ, ಹದವಿಲ್ಲದ ನಾಯಕತ್ವದ ಸರ್ಕಾರ. ಸಂವಾದವೇ ಇಲ್ಲ ಸಂಘರ್ಷವೇ ಸರ್ವಸ್ವ ಎಂದುಕೊಂಡಿರುವ ಜಾಹೀರಾತಿನ ಆಡಳಿತ ಇದು
> **ವಿ.ಸುನಿಲ್‌ಕುಮಾರ್,** ಬಿಜೆಪಿ

'ಮಾರುವೇಷದಲ್ಲಿ ಸುತ್ತಿ ಬನ್ನಿ'

'ತಮ್ಮದು ಆಲಿಸುವ ಸರ್ಕಾರ ಎಂದು ಮುಖ್ಯಮಂತ್ರಿ ಹೇಳಿಕೊಳ್ಳುತ್ತಾರೆ. ಆದರೆ, ಸರ್ಕಾರದ ಆಡಳಿತದ ಬಗ್ಗೆ ಜನರ ಅಭಿಪ್ರಾಯ ಏನಿದೆ ಎಂಬುದನ್ನು ಸಿದ್ದರಾಮಯ್ಯ ಅವರು ಮಾರುವೇಷದಲ್ಲಿ ಹೋಗಿ ತಿಳಿದುಕೊಳ್ಳಲಿ. ಆಗ ವಾಸ್ತವ ಗೊತ್ತಾಗುತ್ತದೆ. ಹಿಂದೆ ರಾಜರುಗಳು ಮಾರುವೇಷದಲ್ಲಿ ಹೋಗಿ ಅಭಿಪ್ರಾಯ ತಿಳಿದುಕೊಳ್ಳುತ್ತಿದ್ದರು' ಎಂದು ಸುನಿಲ್‌ಕುಮಾರ್ ಹೇಳಿದರು.

'ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ ಎಂದು ನಾವು ಹೇಳುವುದಲ್ಲ. ಕಾಂಗ್ರೆಸ್ ಶಾಸಕರವೇ ಹೇಳುತ್ತಿದ್ದಾರೆ. ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಎಂಬುದೇ ಇಲ್ಲ. ನಿಮ್ಮ ಪಕ್ಷದವರಿಗೊಂದು ಕಾನೂನು ಉಳಿದವರಿಗೊಂದು ಕಾನೂನು ಎಂಬಂತಾಗಿದೆ' ಎಂದರು.

'ಅನ್ನಭಾಗ್ಯ: ಜಮೆ ಆಗದ ₹657 ಕೋಟಿ'

ಪ್ರಶ್ನೋತ್ತರ

ಬೆಂಗಳೂರು: ರಾಜ್ಯ ಸರ್ಕಾರ 'ಅನ್ನಭಾಗ್ಯ' ಯೋಜನೆಯಡಿ ಫಲಾನುಭವಿಗಳಿಗೆ 2025ರ ಜನವರಿ ತಿಂಗಳ ಹಣ ಪಾವತಿ ಮಾಡದ ವಿಚಾರ ವಿಧಾನಸಭೆಯಲ್ಲಿ ಗುರುವಾರ ಭಾರಿ ಚರ್ಚೆಗೆ ಕಾರಣವಾಯಿತು.

ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಮಹೇಶ ಟೆಂಗಿನಕಾಯಿ, '2025ರ ಜನವರಿ ತಿಂಗಳಲ್ಲಿ ಅನ್ನಭಾಗ್ಯ ಯೋಜನೆಯ ಫಲಾನುಭವಿಗಳಿಗೆ ಹಣ ಜಮೆ ಆಗಿಲ್ಲ. ರಾಜ್ಯದ ಸುಮಾರು 1.27 ಕೋಟಿ ಪಡಿತರ ಚೀಟಿದಾರರಿಗೆ ಒಟ್ಟು ₹657 ಕೋಟಿ ಪಾವತಿಯಾಗಿಲ್ಲ. ಇಷ್ಟು ದೊಡ್ಡ ಮೊತ್ತದ ಬಾಕಿ ಉಳಿಸಿಕೊಂಡಿರುವುದು ಸರಿಯಲ್ಲ' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರನ್ನು ತರಾಟೆಗೆ ತೆಗೆದುಕೊಂಡರು.

ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ 5 ಕೆ.ಜಿ. ಅಕ್ಕಿ ಕೊಡಲು ಆರಂಭದ ದಿನಗಳಲ್ಲಿ ಎದುರಾಗಿದ್ದ ಅಕ್ಕಿ ಕೊರತೆ ಬಗ್ಗೆ ವಿವರಿಸಿದ ಮುನಿಯಪ್ಪ, 'ನಾವು 5 ಕೆ.ಜಿ ಅಕ್ಕಿ ಜೊತೆಗೆ ಹೆಚ್ಚುವರಿ 5 ಕೆ.ಜಿ ಅಕ್ಕಿಯ ಬದಲು ಪ್ರತಿ ಫಲಾನುಭವಿಗೆ ₹170 ಅನ್ನು ಡಿಬಿಟಿ ಮೂಲಕ ನೀಡುತ್ತಾ ಬಂದಿದ್ದೇವೆ. 2025ರ ಜನವರಿಯಲ್ಲಿ ಹೆಚ್ಚುವರಿ ಅಕ್ಕಿ ಪೂರೈಸುವುದಾಗಿ ರಾಜ್ಯಕ್ಕೆ ಕೇಂದ್ರ ಪತ್ರ ಬರೆದಿತ್ತು. ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಫೆಬ್ರುವರಿಯಿಂದ ಹಣದ ಬದಲು ಅಕ್ಕಿ ಹಂಚಿಕೆ ಮಾಡಲಾಗುತ್ತಿದೆ. ಜನವರಿ ತಿಂಗಳಿನಿಂದಲೇ ಅಕ್ಕಿ ಕೊಡುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿದ್ದರಿಂದ ಹಣ ಜಮೆ ಮಾಡಿಲ್ಲ.' ಎಂದು ಸ್ಪಷ್ಟಪಡಿಸಿದರು.

ರಾಜ್ಯದ ಖಾಸಗಿ ಅನುದಾನಿತ ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ 2016 ಜ.1ರಿಂದ 2020 ಡಿ.31ರವರೆಗೆ ನಿಧನ, ನಿವೃತ್ತಿ, ರಾಜೀನಾಮೆ ಹಾಗೂ ಇತರೆ ಕಾರಣಗಳಿಂದ ಖಾಲಿಯಾದ ಬೋಧಕರ ಹುದ್ದೆಗಳನ್ನು ಮುಂಬರುವ ಶೈಕ್ಷಣಿಕ ವರ್ಷದ ಆರಂಭಕ್ಕೂ ಮೊದಲು ಭರ್ತಿ ಮಾಡಲಾಗುವುದು
ಎಸ್. ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ
ಪ್ರಶ್ನೆ: ಎನ್.ಎಚ್. ಕೋನರೆಡ್ಡಿ, ಕಾಂಗ್ರೆಸ್

ಅಂಗವಿಕಲರನ್ನು ಸಮಾಜದ ಮುಖ್ಯವಾಹಿನಿಗೆ ತಂದು ಸಬಲೀಕರಣಗೊಳಿಸುವ ಉದ್ದೇಶದಿಂದ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಅಂಗವಿಕಲರಿಗಾಗಿಯೇ ವಿಶೇಷ ಉದ್ಯೋಗ ಮೇಳವನ್ನು ಮುಂದಿನ ಮೂರು ತಿಂಗಳ ಒಳಗೆ ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಲಾಗುವುದು
ಡಾ. ಶರಣಪ್ರಕಾಶ್ ಪಾಟೀಲ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಸಚಿವ
ಪ್ರಶ್ನೆ: ಗುರುರಾಜ್ ಶೆಟ್ಟಿ ಗಂಟಿಹೊಳೆ, ಬಿಜೆಪಿ

ಕಾರ್ಖಾನೆಗಳು-ಉದ್ದಿಮೆಗಳ ತ್ಯಾಜ್ಯ ನೀರನ್ನು ನದಿ-ಹಳ್ಳಕೊಳ್ಳಗಳಿಗೆ ವಿಸರ್ಜಿಸುವ ಕಾರ್ಖಾನೆಗಳ ವಿರುದ್ಧ ಜಲ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುವುದು. ಈ ವಿಷಯದಲ್ಲಿ ಅಧಿಕಾರಿಗಳು ಸುಳ್ಳು ಉತ್ತರ ಕೊಟ್ಟಿದ್ದರೆ ಅಂಥವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು
ಈಶ್ವರ್ ಬಿ. ಖಂಡ್ರೆ, ಅರಣ್ಯ ಸಚಿವ
ಪ್ರಶ್ನೆ: ಬಿ.ಪಿ. ಹರೀಶ್, ಬಿಜೆಪಿ

ವಾರದ 7 ದಿನ, ದಿನದ 24 ತಾಸು ವೈದ್ಯರ ಸೇವೆ ಲಭ್ಯವಿರುವಂತೆ ರಾಜ್ಯದ ಪ್ರತಿ ತಾಲ್ಲೂಕು ಆಸ್ಪತ್ರೆಗೆ ತಲಾ ಇಬ್ಬರು ಸ್ತ್ರೀರೋಗ ತಜ್ಞ ವೈದ್ಯರು, ಮಕ್ಕಳ ವೈದ್ಯರು ಮತ್ತು ಅರಿವಳಿಕೆ ತಜ್ಞರನ್ನು ನಿಯೋಜಿಸಲು ತೀರ್ಮಾನಿಸಲಾಗಿದೆ. ಶೀಘ್ರದಲ್ಲೇ ಆದೇಶ ಹೊರಡಿಸಲಾಗುವುದು
ದಿನೇಶ್ ಗುಂಡೂರಾವ್, ಆರೋಗ್ಯ ಇಲಾಖೆ ಸಚಿವ
ಪ್ರಶ್ನೆ: ಸಿಮೆಂಟ್ ಮಂಜು, ಬಿಜೆಪಿ

'ಜಾಹೀರಾತು' ವಾಕ್ಸಮರ: ವಿಪಕ್ಷ ಸಭಾತ್ಯಾಗ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಇಲಾಖೆಯು 'ವಿಬಿ ಜಿ ರಾಮ್ ಜಿ' ವಿರುದ್ಧ ನೀಡಿದ್ದ ಜಾಹೀರಾತು ವಿಧಾನಸಭೆಯಲ್ಲಿ ಗುರುವಾರ ವಿರೋಧ ಪಕ್ಷ-ಆಡಳಿತ ಪಕ್ಷದ ಸದಸ್ಯರ ನಡುವೆ ವಾಕ್ಸಮರಕ್ಕೆ ವಸ್ತುವಾಯಿತು. ಗದ್ದಲ ತಹಬದಿಗೆ ಬಾರದೇ ಇದ್ದುದರಿಂದ ಕೆಲ ಹೊತ್ತು ಮುಂದೂಡಲಾಯಿತು. ಮತ್ತೆ ಕಲಾಪ ಆರಂಭವಾದಾಗಲೂ ವಾಗ್ವಾದ ಮುಂದುವರಿಯಿತು. ಸರ್ಕಾರದ ನಡೆ ವಿರೋಧಿಸಿ ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.

ಬಿಜೆಪಿ ಟೀಕಾಪ್ರಹಾರ

'ಸಾರ್ವಜನಿಕರ ತೆರಿಗೆ ಹಣದಿಂದ ಕೇಂದ್ರ ಸರ್ಕಾರದ ವಿರುದ್ಧ ಇಲಾಖೆ ಈ ಜಾಹೀರಾತು ನೀಡಿದೆ. ಇದು ಸೇಡಿನ, ದ್ವೇಷದ ರಾಜಕಾರಣ. ತೆರಿಗೆ ಹಣದ ಲೂಟಿ' ಎಂದು ಸದನದಲ್ಲಿ ಈ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಎಸ್. ಸುರೇಶ್ ಕುಮಾರ್ ವಾಗ್ದಾಳಿ ನಡೆಸಿದರು. ವಿರೋಧ ಪಕ್ಷದ ಇತರ ಸದಸ್ಯರೂ ದನಿಗೂಡಿಸಿದರು.

ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ, 'ಯಾರಪ್ಪನ ದುಡ್ಡು ಇದು? ನೀವು ಕೇಂದ್ರ ಸರ್ಕಾರವನ್ನು ಟೀಕಿಸುವುದಾದರೆ ಕಾಂಗ್ರೆಸ್ ಪಕ್ಷದಿಂದ ಜಾಹೀರಾತು ಕೊಡಬೇಕಿತ್ತು' ಎಂದು ಅಬ್ಬರಿಸಿದರು. 'ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರದ ತೀರ್ಮಾನವನ್ನು ಪಕ್ಷ ಒಪ್ಪದಿದ್ದರೂ ಸರ್ಕಾರ ಒಪ್ಪಬೇಕು. ಕೇಂದ್ರ ಸರ್ಕಾರದ ಯೋಜನೆ ವಿರುದ್ಧ ಜಾಹೀರಾತು ನೀಡಿರುವ ಈ ಸರ್ಕಾರಕ್ಕೆ ನಾಚಿಕೆಯಾಗಬೇಕು' ಎಂದು ಬಿಜೆಪಿಯ ವಿ. ಸುನಿಲ್ ಕುಮಾರ್ ಟೀಕಿಸಿದರು. ದನಿಗೂಡಿಸಿದ ಯತ್ನಾಳ, 'ನಕಲಿ ಗಾಂಧಿಗಳನ್ನು ಮೆಚ್ಚಿಸಲು ನರೇಗಾ ಹಿಡಿದುಕೊಂಡಿದ್ದಾರೆ' ಎಂದು ಹರಿಹಾಯ್ದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ರಾಜ್ಯವು ಕೇಂದ್ರ ವಿರುದ್ಧ ಸುಖಾಸುಮ್ಮನೆ 'ತೆರಿಗೆ ಭಯೋತ್ಪಾದನೆ'ಯ ಆರೋಪ ಮಾಡುತ್ತಿದೆ. ರಾಜ್ಯ–ಕೇಂದ್ರದ ಸಂಬಂಧ ಹಾಳು ಮಾಡುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ. ಇದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇವೆ' ಎಂದರು.

ಕಾಂಗ್ರೆಸ್ ಸಮರ್ಥನೆ ಏನು?

'ಗುಜರಾತ್‌ನಲ್ಲಿ ಪ್ರಧಾನಿ ಮೋದಿಯವರ ಜನ್ಮದಿನಕ್ಕೆ ಶುಭಾಶಯ ಕೋರಿ ಸರ್ಕಾರಿ ಜಾಹೀರಾತು ನೀಡಲಾಗಿದೆ' ಎಂದ ಸಚಿವ ಪ್ರಿಯಾಂಕ್ ಖರ್ಗೆ, ಗುಜರಾತ್ ಸರ್ಕಾರ ನೀಡಿದ್ದ ಜಾಹೀರಾತುಗಳನ್ನು ಪ್ರದರ್ಶಿಸಿದರು.

'ಕರ್ನಾಟಕದಲ್ಲಿ ಕೂಡ ಹಿಂದೆ ಕೋವಿಡ್ ವ್ಯಾಕ್ಸಿನ್ ನೀಡಿದಾಗ ಯಡಿಯೂರಪ್ಪ ಹಾಗೂ ಮೋದಿ ಫೋಟೊ ಹಾಕಿ 'ಥ್ಯಾಂಕ್ಯೂ ಮೋದಿಜಿ' ಎಂದು ಜಾಹೀರಾತು ನೀಡಲಾಗಿತ್ತು' ಎಂದು ಅವರು ಹೇಳಿದರು.

'ವಿಬಿ ಜಿ ರಾಮ್ ಜಿ ಯೋಜನೆಯನ್ನು ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ತಂದಿದೆ. ಇಲ್ಲಿ ನಿಯಮ ಉಲ್ಲಂಘನೆಯಾಗಿದೆ. ಇದನ್ನೇ ನಾವು ಜಾಹೀರಾತಿನಲ್ಲಿ ಹೇಳಿದ್ದೇವೆ. ಕೇಂದ್ರ ಸರ್ಕಾರ ರೈತ ವಿರೋಧಿ, ಸಂವಿಧಾನ ವಿರೋಧಿ' ಎಂದು ಏರಿದ ದನಿಯಲ್ಲಿ ಹೇಳಿದರು.

ಅವರಿಗೆ ಧ್ವನಿಗೂಡಿಸಿದ ಸಚಿವ ದಿನೇಶ್ ಗುಂಡೂರಾವ್, 'ಈ ಹಿಂದೆ ಕೇಂದ್ರ ಸರ್ಕಾರ ಮೂರು ರೈತ ವಿರೋಧಿ ಕಾಯ್ದೆಗಳನ್ನು ಇದೇ ಸದನದಲ್ಲಿ ವಿರೋಧಿಸಿದ್ದೆವು. ಕೇಂದ್ರ ಸರ್ಕಾರ ಆ ಕಾಯ್ದೆಗಳನ್ನು ಹಿಂಪಡೆಯಲಿಲ್ಲವೇ? ರಾಜ್ಯದ ಹಿತಾಸಕ್ತಿಗೆ ವಿಬಿ ಜಿ ರಾಮ್ ಜಿ ವಿರುದ್ಧವಾಗಿದೆ' ಎಂದು ಬಿಜೆಪಿಗೆ ತಿರುಗೇಟು ನೀಡಿದರು.

ಫೆ.4ರವರೆಗೆ ಅಧಿವೇಶನ ವಿಸ್ತರಣೆ

ಬೆಂಗಳೂರು: ವಿಧಾನಮಂಡಲದ ಜಂಟಿ ಅಧಿವೇಶನ ಫೆಬ್ರುವರಿ 4ರವರೆಗೆ ನಡೆಯಲಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ಈ ಹಿಂದೆ ಇದೇ 31ರವರೆಗೆ ನಡೆಸಲು ತೀರ್ಮಾನಿಸಲಾಗಿತ್ತು. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಮತ್ತು ವಿಬಿ ಜಿ ರಾಮ್ ಜಿ ಕುರಿತ ಚರ್ಚೆ ನಡೆಯಬೇಕಿರುವುದರಿಂದ ಕಲಾಪವನ್ನು ವಿಸ್ತರಿಸಲು ಸದನ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದರು.

ಫೆ.2ರಂದು ವಂದನಾ ನಿರ್ಣಯದ ಮೇಲೆ ಮುಖ್ಯಮಂತ್ರಿ ಉತ್ತರ ನೀಡಲಿದ್ದಾರೆ. ಫೆ 4ರಂದು ವಿಬಿ ಜಿ ರಾಮ್ ಜಿ ಕಾಯ್ದೆ ಕುರಿತು ಚರ್ಚೆ ಪೂರ್ಣಗೊಳಿಸಿ ನಿರ್ಣಯ ಕೈಗೊಳ್ಳಲಾಗುವುದು.

ವಿಧಾನ ಪರಿಷತ್ತಿನಲ್ಲಿ ಗುರುವಾರ ಬಿಜೆಪಿ ಸದಸ್ಯರು ಸಭಾಪತಿ ಪೀಠದ ಮುಂಭಾಗ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಅನುದಾನಕ್ಕಿಂತ ದ್ವಿಗುಣ ಯೋಜನೆ 'ಸ್ಮಾರ್ಟ್' ವೈಫಲ್ಯ: ಸಿಎಜಿ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೀಸಲಿಟ್ಟ ಅನುದಾನಕ್ಕಿಂತ ಸರಿಸುಮಾರು ದ್ವಿಗುಣ ಮೊತ್ತದ ಯೋಜನೆಗಳನ್ನು ಕೈಗೆತ್ತಿಕೊಂಡ ಕಾರಣ ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲಾದ ಸ್ಮಾರ್ಟ್ ಸಿಟಿ ಯೋಜನೆಗಳು ನಿರೀಕ್ಷಿತ ಗುರಿ ಸಾಧಿಸಲು ವಿಫಲವಾದವು ಎಂದು ಮಹಾಲೇಖಪಾಲರ ವರದಿ ಹೇಳಿದೆ.

ಬೆಂಗಳೂರು, ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ- ಧಾರವಾಡ, ಮಂಗಳೂರು, ಶಿವಮೊಗ್ಗ ಮತ್ತು ತುಮಕೂರು ನಗರಗಳಲ್ಲಿ 2015–16ರಿಂದ ಸ್ಮಾರ್ಟ್‌ಸಿಟಿ ಯೋಜನೆಗಾಗಿ ₹817 ಕೋಟಿ ಅನುದಾನ ಮೀಸಲಿಡಲಾಗಿತ್ತು. ಆದರೆ, ₹1,462 ಕೋಟಿ ಮೊತ್ತದ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಮಾದರಿಯಾಗಿ ಆಯ್ಕೆ ಮಾಡಲಾದ ನಾಲ್ಕು ವಿಶೇಷ ಘಟಕಗಳಿಗೆ ₹200 ಕೋಟಿ ನಿಗದಿ ಮಾಡಿದ್ದರೂ ನೈಜ ಬಂಡವಾಳ ₹10 ಲಕ್ಷ ಇತ್ತು. ಇತರೆ ಕಾಮಗಾರಿಗಳೂ ಸರ್ಕಾರದ ಮೇಲೆ ಅವಲಂಬಿತವಾದವು. ಹಾಗಾಗಿ 645 ಯೋಜನೆಗಳಲ್ಲಿ 45 ಯೋಜನೆಗಳಷ್ಟೇ ನಿಗದಿತ ಅವಧಿಯ ಒಳಗೆ ಪೂರ್ಣಗೊಂಡಿವೆ. ₹186.79 ಕೋಟಿ ಮೊತ್ತದ ಯೋಜನೆಗಳು ಗುರಿಗಳೊಂದಿಗೆ ಹೊಂದಿಕೆಯಾಗಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸ್ಮಾರ್ಟ್ ನಗರಗಳು ಕೈಗೊಂಡಿರುವ ಯೋಜನೆಗಳು ದೀರ್ಘಕಾಲ ಉಳಿಯಲು ಸರ್ಕಾರದ ಅನುದಾನ ಹೊರತಾದ ಸಂಪನ್ಮೂಲಗಳನ್ನು ಬಳಕೆ ಮಾಡಬೇಕು. ಪೂರ್ಣಾವಧಿಯ ಸಿಇಒಗಳನ್ನು ನೇಮಕ ಮಾಡಬೇಕು. ಟೆಂಡರ್ ಪ್ರಕ್ರಿಯೆ ವಿಳಂಬ ತಪ್ಪಿಸಬೇಕು. ತಂತ್ರಜ್ಞಾನ ಬಳಕೆಯಲ್ಲಿ ಎಚ್ಚರ ವಹಿಸಬೇಕು, ತಜ್ಞರ ಶಿಫಾರಸುಗಳನ್ನು ಪಾಲಿಸಬೇಕು. ಅಗತ್ಯ ಕಾಮಗಾರಿಗಳ ಮೇಲ್ವಿಚಾರಣೆಯಲ್ಲಿ ಸ್ಥಳೀಯ ಸಂಸ್ಥೆಗಳ ಪ್ರಾತಿನಿಧ್ಯ ಇರಬೇಕು. ಗುಣಮಟ್ಟ ಪರಿಶೀಲನೆಗೆ ಮೇಲ್ವಿಚಾರಣಾ ಸಲಹೆಗಾರರನ್ನು ರಾಜ್ಯ ಸರ್ಕಾರ ನೇಮಿಸಬೇಕು. ಸ್ಥಳೀಯ ಅಗತ್ಯಕ್ಕೆ ತಕ್ಕಂತೆ ಕೆಲ ಮಾರ್ಪಾಡು ಮಾಡಲು ಅವಕಾಶ ನೀಡಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಅಂತಿಮ ಹಂತಕ್ಕೆ ವೇಮುಲ ಮಸೂದೆ

ಬೆಂಗಳೂರು: ವಿಶ್ವವಿದ್ಯಾಲಯಗಳು ಹಾಗೂ ಕಾಲೇಜು ಕ್ಯಾಂಪಸ್‌ನಲ್ಲಿ ಜಾತಿ ಆಧಾರಿತ ಭೇದ ತಡೆಯಲು ರಾಜ್ಯ ಸರ್ಕಾರ ಸಿದ್ಧಪಡಿಸುತ್ತಿರುವ 'ರೋಹಿತ್ ವೇಮುಲ ಮಸೂದೆ' ಅಂತಿಮ ಹಂತದಲ್ಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಜಾರಿಗೊಳಿಸಿದ್ದ 'ಸಮಾನತೆ' ಉತ್ತೇಜಿಸುವ ಹೊಸ ನಿಯಮಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಈ ನಿಯಮ ಸಾಮಾನ್ಯ ವರ್ಗಗಳ ವಿರುದ್ಧ ಭೇದವನ್ನು ಉತ್ತೇಜಿಸುತ್ತವೆ ಎಂದು ಆರೋಪಿಸಿ, ಕೆಲವರು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಜಾತಿ ಆಧಾರಿತ ಭೇದ ವ್ಯಾಖ್ಯಾನಿಸುವ ನಿಯಮಕ್ಕೂ ಆಕ್ಷೇಪ ವ್ಯಕ್ತವಾಗಿತ್ತು. ಜಾತಿ ಆಧಾರಿತ ಭೇದ ತಡೆಯುವ ಜತೆಗೆ, ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ಹಿತಾಸಕ್ತಿ ರಕ್ಷಿಸುವುದೂ ರಾಜ್ಯ ಸರ್ಕಾರದ ಆದ್ಯತೆ ಎಂದರು.

ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ವರ್ಗ (ಎಸ್‌ಟಿ) ಮತ್ತು ಇತರ ಹಿಂದುಳಿದ ವರ್ಗಗಳು (ಒಬಿಸಿ) ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಮಾನ ಅವಕಾಶ ಮತ್ತು ಶಿಕ್ಷಣ ಹಕ್ಕು ಕಲ್ಪಿಸಲು ರಾಜ್ಯ ಸರ್ಕಾರ, 'ರೋಹಿತ್ ವೇಮುಲ ಕಾಯ್ದೆ' ರೂಪಿಸಲು ಮುಂದಾಗಿತ್ತು. ಮಸೂದೆಯನ್ನು 2025ರ ಡಿಸೆಂಬರ್‌ನಲ್ಲಿ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಲು ಸಿದ್ಧತೆ ನಡೆಸಿತ್ತು. ಆದರೆ, ತಜ್ಞರ ಅಭಿಪ್ರಾಯಗಳನ್ನು ಪರಿಗಣಿಸಿ ಕೆಲ ಬದಲಾವಣೆಗಳನ್ನು ಮಾಡಲಾಗಿದೆ.

ಜನೌಷಧಿ ಕೇಂದ್ರಗಳ ಮೇಲ್ಮನವಿ ಪಿಎಂಬಿಐಗೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿದ್ದ ಜನೌಷಧಿ ಕೇಂದ್ರಗಳನ್ನು ಮುಚ್ಚುವ ಆದೇಶ ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿದೆ.

ಈ ಸಂಬಂಧ ರಾಜ್ಯ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸಲ್ಲಿಸಿದ್ದ ರಿಟ್ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಸರ್ಕಾರಿ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಔಷಧಿಗಳು ಸಂಪೂರ್ಣ ಉಚಿತವಾಗಿ ಸಿಗಬೇಕೆಂಬುದೇ ಸರ್ಕಾರದ ನೀತಿ. ಹಾಗಾಗಿಯೇ, ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿರುವ ಜನೌಷಧಿ ಕೇಂದ್ರಗಳನ್ನು ಮುಚ್ಚಲು ಸರ್ಕಾರ ನಿರ್ಧರಿಸಿತ್ತು. ಇದು ಸರ್ಕಾರದ ನೀತಿ ನಿರ್ಣಯದ ವಿಚಾರವಾಗಿದೆ' ಎಂದರು.

'ರಾಜ್ಯದಲ್ಲಿ ಒಟ್ಟು 1,200ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳಿವೆ. ಈ ಪೈಕಿ 187 ಕೇಂದ್ರಗಳು ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿದ್ದು, ಅವುಗಳನ್ನು ಮಾತ್ರ ಮುಚ್ಚಲಾಗಿದೆ. ಅದರಲ್ಲೂ ರಾಜ್ಯ ಸರ್ಕಾರವೇ ನಡೆಸುತ್ತಿದ್ದ 61 ಕೇಂದ್ರಗಳನ್ನೂ ಮುಚ್ಚಲಾಗಿದೆ. ಉಳಿದ 126 ಕೇಂದ್ರಗಳ ಪರವಾನಗಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. 2018–2021ರವರೆಗೆ ಮೂರು ವರ್ಷದವರೆಗೆ ಪರವಾನಿಗೆ ನೀಡಲಾಗಿತ್ತು' ಎಂಬುದನ್ನು ಶಶಿಕಿರಣ ಪೀಠದ ಗಮನಕ್ಕೆ ತಂದರು.

'ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಬೆಂಗಳೂರು ಪ್ರಧಾನಪೀಠ, ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಮೇಲ್ಮನವಿ ವಿಚಾರಣೆಯಲ್ಲಿ ಈ ಎಲ್ಲಾ ಪೀಠಗಳಲ್ಲಿನ ಅರ್ಜಿಗಳನ್ನು ಒಟ್ಟಿಗೇ ಒಂದೇ ನ್ಯಾಯಪೀಠದಲ್ಲಿ ವಿಚಾರಣೆ ನಡೆಸುವಂತಾದರೆ ಸೂಕ್ತವಾಗಲಿದೆ' ಎಂದು ವಿವರಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಎಲ್ಲಾ ಅರ್ಜಿಗಳನ್ನು ಒಂದೇ ನ್ಯಾಯಪೀಠದ ಮುಂದೆ ಪರಿಗಣಿಸಲು ಆಡಳಿತ ವಿಭಾಗಕ್ಕೆ ಸೂಚಿಸಿತು.

ಪ್ರತಿವಾದಿಗಳಾದ 'ಭಾರತೀಯ ಔಷಧ ಮತ್ತು ವೈದ್ಯಕೀಯ ಸಾಧನಗಳ ಬ್ಯೂರೊ' (ಪಿಎಂಬಿಐ) ಹಾಗೂ ಜನೌಷಧಿ ಕೇಂದ್ರದ ಮಾಲೀಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಫೆ.4ಕ್ಕೆ ಮುಂದೂಡಿತು.

ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಆವರಣಗಳಲ್ಲಿರುವ ಜನೌಷಧಿ ಕೇಂದ್ರಗಳನ್ನು ಮುಚ್ಚುವ ಸಂಬಂಧ 2025ರ ಮೇ 14ರಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಹಲವು ಜನೌಷಧಿ ಕೇಂದ್ರಗಳ ಮಾಲೀಕರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಸರ್ಕಾರದ ಆದೇಶವನ್ನು ರದ್ದುಪಡಿಸಿ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ 2025ರ ಡಿಸೆಂಬರ್ 19ರಂದು ಆದೇಶ ನೀಡಿತ್ತು.

ಮುಖ್ಯ ಕಾರ್ಯದರ್ಶಿ ಜೊತೆ ರಾಜ್ಯ ಸರ್ಕಾರಿ ನೌಕರರ ಸಂಘದ ಸಭೆ

'ಖಾದಿ ಬಟ್ಟೆ: ಸರ್ಕಾರದ ಸುತ್ತೋಲೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾದಿ ಉತ್ಪನ್ನಗಳನ್ನು ಉತ್ತೇಜಿಸುವ ಉದ್ದೇಶದಿಂದ ಸರ್ಕಾರಿ ಹಾಗೂ ಸರ್ಕಾರಿ ಸ್ವಾಮ್ಯದ ನಿಗಮ-ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಅನುದಾನಿತ ಸಂಸ್ಥೆಗಳ ಅಧಿಕಾರಿ, ನೌಕರರು ಪ್ರತಿ ತಿಂಗಳ ಮೊದಲ ಶನಿವಾರ ಸ್ವಯಂ ಪ್ರೇರಣೆಯಿಂದ ಖಾದಿ ಬಟ್ಟೆಗಳನ್ನು ಧರಿಸಿ ಕರ್ತವ್ಯ ನಿರ್ವಹಿಸಲಿದ್ದಾರೆ.

ಈ ಕುರಿತಂತೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳ ಜತೆ ಗುರುವಾರ ಸಭೆ ನಡೆಯಿತು. ಬಳಿಕ, ಈ ಸಂಬಂಧ ಸರ್ಕಾರ ಸುತ್ತೋಲೆ ಹೊರಡಿಸಿತು.

'ಉದ್ದೇಶಿತ ಈ ಯೋಜನೆಗೆ ಸರ್ಕಾರಿ ನೌಕರರ ದಿನಾಚರಣೆಯಂದು (ಏಪ್ರಿಲ್ 21) ಚಾಲನೆ ನೀಡಲಾಗುವುದು' ಎಂದು ಸಭೆಯ ಬಳಿಕ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ತಿಳಿಸಿದ್ದಾರೆ.

ಶಾಲಿನಿ ರಜನೀಶ್ ಜೊತೆ ಸಿ.ಎಸ್. ಷಡಾಕ್ಷರಿ ಚರ್ಚೆ ನಡೆಸಿದರು

'ಪುರುಷ ನೌಕರರು ಖಾದಿ ಬಟ್ಟೆಯ ಶರ್ಟ್-ಪ್ಯಾಂಟ್, ಓವರ್ ಕೋಟ್ ಹಾಗೂ ಇತರೆ ಶಿಸ್ತಿನ ಉಡುಗೆಯನ್ನು, ಮಹಿಳಾ ನೌಕರರು ಖಾದಿ ಹಾಗೂ ಖಾದಿ ಸಿಲ್ಕ್ ಬಟ್ಟೆಯ ಸೀರೆ, ಚೂಡಿದಾರ್ ಹಾಗೂ ಇತರೆ ಶಿಸ್ತಿನ ಉಡುಗೆ ಧರಿಸಬೇಕು. ಸರ್ಕಾರಿ ಸ್ವಾಮ್ಯದ ಖಾದಿ ಗ್ರಾಮೋದ್ಯೋಗ ಮಂಡಳಿಯ ಮಳಿಗೆಗಳಿಂದ ಈ ಬಟ್ಟೆಗಳನ್ನು ಖರೀದಿಸಬೇಕು. ಮಂಡಳಿಯು ಹಾಲಿ ನೀಡುತ್ತಿರುವ ರಿಯಾಯಿತಿಯ ಹೊರತಾಗಿ ಅಧಿಕಾರಿ-ನೌಕರರಿಗೆ ಶೇ 5ರಷ್ಟು ಹೆಚ್ಚುವರಿ ರಿಯಾಯಿತಿ ನೀಡಲಿದೆ' ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸರ್ಕಾರಕ್ಕೆ ಮನವಿ: 'ರಾಜ್ಯ ಸರ್ಕಾರಿ ನೌಕರರಿಗೆ ದಿನಬಳಕೆ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಪೂರೈಸಲು ಎಂಎಸ್‌ಐಎಲ್ ಸಂಸ್ಥೆಯ ಮೂಲಕ ಸೇನಾ ಕ್ಯಾಂಟೀನ್ ಮಾದರಿಯಲ್ಲಿ 'ಸರ್ಕಾರಿ ನೌಕರರ ಕ್ಯಾಂಟೀನ್' ಆರಂಭಿಸುವ ಯೋಜನೆಯನ್ನು 2026-27ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಬೇಕು. ಅಲ್ಲದೆ, ಕೆಎಸ್‌ಐಸಿ ಸಂಸ್ಥೆಯು ಐಎಎಸ್ ಅಧಿಕಾರಿಗಳು ಖರೀದಿಸುವ ರೇಷ್ಮೆ ಸೀರೆ ಮತ್ತು ರೇಷ್ಮೆ ವಸ್ತ್ರಗಳಿಗೆ ಹೆಚ್ಚುವರಿ ಶೇ 5ರಷ್ಟು ವಿಶೇಷ ರಿಯಾಯಿತಿ ನೀಡುತ್ತಿರುವ ಮಾದರಿಯಲ್ಲಿ ರಾಜ್ಯ ಸರ್ಕಾರದ ಎಲ್ಲ ಅಧಿಕಾರಿ, ನೌಕರರಿಗೂ ಹೆಚ್ಚುವರಿ ಶೇ 5ರಷ್ಟು ವಿಶೇಷ ರಿಯಾಯಿತಿ ನೀಡಬೇಕು' ಎಂದೂ ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

₹4 ಲಕ್ಷ ಲಂಚ ಪಿಐ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡ್ಡಿ ವ್ಯವಹಾರ, ಚೆಕ್‌ಬೌನ್ಸ್ ಮತ್ತು ಹಣ ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿ ಪರವಾಗಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ₹4 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಕೆ.ಪಿ.ಅಗ್ರಹಾರ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ (ಪಿಐ) ಗೋವಿಂದರಾಜು ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಕೆ.ಪಿ.ಅಗ್ರಹಾರ ನಿವಾಸಿ ಉದ್ಯಮಿ ಮೊಹಮ್ಮದ್ ಅಕ್ಬರ್ ಎಂಬುವವರ ವಿರುದ್ಧ ಮಹಿಳೆಯೊಬ್ಬರು ಚೆಕ್‌ಬೌನ್ಸ್ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣದಲ್ಲಿ ಅಕ್ಬರ್ ಪರವಾಗಿ ವರದಿ ಸಲ್ಲಿಸಲು ಪಿಐ ಗೋವಿಂದರಾಜು ಅವರು ₹5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟು, ₹4 ಲಕ್ಷಕ್ಕೆ ಒಪ್ಪಿಕೊಂಡಿದ್ದರು.

ವಾಟ್ಸ್‌ಆ್ಯಪ್ ಕರೆಯ ಮೂಲಕ ಗೋವಿಂದರಾಜು ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಅಕ್ಬರ್ ತಮ್ಮ ಪತ್ನಿಯ ಫೋನ್‌ನಲ್ಲಿ ಅದೆಲ್ಲವನ್ನೂ ಚಿತ್ರೀಕರಿಸಿಕೊಂಡಿದ್ದರು. ಈ ಸಾಕ್ಷ್ಯದೊಂದಿಗೆ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಶುಕ್ರವಾರ, ಜನವರಿ 30, 2026 | ₹ 7.00
prajavani.net | prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಡೊಳ್ಳು ಕುಣಿತ
ಅಂತರರಾಷ್ಟ್ರೀಯ ಲಿಂಗಾಯತ ಯೂತ್ ಫೋರಂ ಬೆಂಗಳೂರಿನಲ್ಲಿ ಆಯೋಜಿಸಿದ್ದ ವೀರಶೈವ ಲಿಂಗಾಯತ ಗ್ಲೋಬಲ್ ಬಿಜಿನೆಸ್ ಸಮಾವೇಶದಲ್ಲಿ ಭಾಗವಹಿಸಿದ್ದ ಡೊಳ್ಳು ಕುಣಿತ ಕಲಾವಿದ

ಕ್ಲರ್ಕ್‌ಗೆ ನಾಲ್ಕು ವಿಕೆಟ್
ವಡೋದರದಲ್ಲಿ ಗುರುವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯದಲ್ಲಿ ಯುಪಿ ವಾರಿಯರ್ಸ್ ಎದುರು ನಾಲ್ಕು ವಿಕೆಟ್ ಗಳಿಸಿದ ಆರ್‌ಸಿಬಿಯ ನದೀನ್ ಡಿ ಕ್ಲರ್ಕ್

‘ದೇಶವು ವಿಶ್ವಕ್ಕೆ ಭರವಸೆಯ ಕಿರಣ’

ಭಾರತ–ಐರೋಪ್ಯ ಒಕ್ಕೂಟದ ಒಪ್ಪಂದದ ಕುರಿತು ಪ್ರಧಾನಿ ಮೋದಿ ಮಾತು

ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಸಂಸತ್ತಿನ ಎದುರು ಮಾಧ್ಯಮ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ಕೇಂದ್ರ ಸಚಿವರಾದ ಕಿರಣ್ ರಿಜಿಜು, ಎಲ್.ಮುರುಗನ್, ಅರ್ಜುನ್ ರಾಮ್ ಮೇಘವಾಲ್ ಇದ್ದರು —ಪಿಟಿಐ ಚಿತ್ರ

ನವದೆಹಲಿ/ಕೋಲ್ಕತ್ತ (ಪಿಟಿಐ): ‘ಐರೋಪ್ಯ ಒಕ್ಕೂಟದೊಂದಿಗೆ ನಾವು ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದದಿಂದ (ಎಫ್‌ಟಿಎ) ಭಾರತವು ವಿಶ್ವಮಟ್ಟದಲ್ಲಿ ‘ಭರವಸೆಯ ಕಿರಣ’ವಾಗಿ ಪ್ರಕಾಶಿಸುವುದಕ್ಕೆ ಆರಂಭಿಸಿದೆ. ದೇಶದ ಉತ್ಪಾದಕರು ಈ ಅವಕಾಶವನ್ನು ಬಾಚಿಕೊಳ್ಳಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದರು.

ಬಜೆಟ್ ಅಧಿವೇಶನ ಆರಂಭಕ್ಕೂ ಮುನ್ನ ಸಂಸತ್ತಿನ ಎದುರು ಮಾಧ್ಯಮಗಳನ್ನು ಉದ್ದೇಶಿಸಿ ಅವರು ಮಾತನಾಡಿದರು. ‘ಮಹತ್ವಾಕಾಂಕ್ಷೆಯ ಭಾರತ’ವು ಈ ಅವಕಾಶವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಬೇಕು. ಸುಧಾರಣಾವಾದಿ ಎಕ್ಸ್‌ಪ್ರೆಸ್‌ನಲ್ಲಿ ಭಾರತವು ಅತಿವೇಗವಾಗಿ ಮುನ್ನುಗ್ಗುತ್ತಿದೆ. ಇದಕ್ಕೆ ಸಹಕರಿಸಿದ ಎಲ್ಲ ಸಂಸದರಿಗೂ ಧನ್ಯವಾದ’ ಎಂದರು.

‘ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಅನುಕೂಲಗಳು ತಲುಪುವಂತೆ ಮಾಡಿದ್ದೇವೆ ಎನ್ನುವುದನ್ನು ನಮ್ಮ ಸರ್ಕಾರದ ಕಡು ಟೀಕಾಕಾರರೂ ಒಪ್ಪಿಕೊಳ್ಳುತ್ತಾರೆ. ಇನ್ನಷ್ಟು ಆಧುನಿಕ ಸುಧಾರಣೆಗಳೊಂದಿಗೆ ನಮ್ಮ ಈ ಉದ್ದೇಶ ಸಾಧನೆಗೆ ಮುಂದುವರಿಯುತ್ತೇವೆ’ ಎಂದರು.

‘ಈ ಬಜೆಟ್ ಅಧಿವೇಶನವು 21ನೇ ಶತಮಾನದ ಮೊದಲ ತ್ರೈಮಾಸಿಕದ ಮುಕ್ತಾಯ ಮತ್ತು ಮುಂದಿನ ತ್ರೈಮಾಸಿಕದ ಆರಂಭದಲ್ಲಿ ನಡೆಯುತ್ತದೆ. ಆತ್ಮವಿಶ್ವಾಸ ತುಂಬಿರುವ ನಮ್ಮ ಭಾರತವು ಈ ವರ್ಷವನ್ನು ಬಹಳ ಸಕಾರಾತ್ಮಕ ವಿಚಾರಗಳೊಂದಿಗೆ ಆರಂಭಿಸಿದೆ. ವಿಶ್ವದ ಆಕರ್ಷಣೆಯ ಕೇಂದ್ರ ಬಿಂದುವಾಗಿದೆ’ ಎಂದು ಹೇಳಿದರು.

‘ಐರೋಪ್ಯ ಒಕ್ಕೂಟದೊಂದಿಗೆ ಮಾಡಿಕೊಂಡಿರುವ ಈ ಅತ್ಯಂತ ದೊಡ್ಡ ಒಪ್ಪಂದದಿಂದ ವಿಸ್ತಾರವಾದ ಮಾರುಕಟ್ಟೆ ತೆರೆದುಕೊಳ್ಳಲಿದೆ ಮತ್ತು ಭಾರತದ ವಸ್ತುಗಳು ಅತ್ಯಂತ ಕಡಿಮೆ ಬೆಲೆಗೆ ಗ್ರಾಹಕರನ್ನು ತಲುಪಲಿವೆ. ಈ ಒಪ್ಪಂದವನ್ನು ದೇಶದ ಯುವಕರಿಗಾಗಿ ಮತ್ತು ಆತ್ಮನಿರ್ಭರ ಭಾರತಕ್ಕಾಗಿ ಮಾಡಿಕೊಳ್ಳಲಾಗಿದೆ’ ಎಂದರು.

ಮೋದಿ ಹೇಳಿದ್ದು..

- ಉತ್ತಮ ಗುಣಮಟ್ಟದ ಉತ್ಪನ್ನಗಳು ಮಾರುಕಟ್ಟೆಯನ್ನು ಪ್ರವೇಶಿಸಿದರೆ ಅದು ಕೇವಲ ಲಾಭವನ್ನಷ್ಟೇ ತಂದುಕೊಡುವುದಿಲ್ಲ. ಐರೋಪ್ಯ ಒಕ್ಕೂಟದ 24 ದೇಶಗಳ ಜನರ ಹೃದಯವನ್ನೂ ಗೆಲ್ಲುತ್ತದೆ. ಇದು ದಶಕಗಳವರೆಗೆ ಉತ್ತಮ ಬಾಂಧವ್ಯವನ್ನು ಸೃಷ್ಟಿಸುತ್ತದೆ. ದೇಶದ ಬ್ರ್ಯಾಂಡ್‌ನೊಂದಿಗೆ ವಿದೇಶಗಳ ಮಾರುಕಟ್ಟೆಗೆ ಲಗ್ಗೆ ಇಡುವ ಕಂಪನಿಗಳ ಬ್ರ್ಯಾಂಡ್‌ಗಳು ಘನತೆಯನ್ನು ಪಡೆದುಕೊಳ್ಳಲಿವೆ
- ನಿರ್ಮಲಾ ಸೀತಾರಾಮನ್ ಅವರು ತಮ್ಮ 9ನೇ ಬಜೆಟ್ ಅನ್ನು ಭಾನುವಾರ ಮಂಡಿಸಲಿದ್ದಾರೆ. ಸತತವಾಗಿ 9 ಬಜೆಟ್ ಮಂಡಿಸುತ್ತಿರುವ ದೇಶದ ಪ್ರಥಮ ಹಣಕಾಸು ಸಚಿವೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದ್ದಾರೆ. ದೇಶದ ಮಟ್ಟಿಗೆ ಇದೊಂದು ಪ್ರಮುಖ ಹೆಜ್ಜೆ. ಪ್ರಜಾಪ್ರಭುತ್ವದಲ್ಲಿ ಇದು ಅದ್ಭುತ ಅಧ್ಯಾಯ

‘ನಾವು ಅಮೆರಿಕದ ಮೇಲೆ ಅವಲಂಬಿತರಾಗಿಲ್ಲ’

‘ಐರೋಪ್ಯ ಒಕ್ಕೂಟ ಮತ್ತು ಭಾರತದ ಮಧ್ಯೆ ನಡೆದಿರುವ ಒಪ್ಪಂದವು ಅಮೆರಿಕದ ಪ್ರಾಬಲ್ಯದ ಮಧ್ಯೆ ನಾವು ಮಾಡಿಕೊಂಡ ರಕ್ಷಣಾತ್ಮಕ ಕಾರ್ಯತಂತ್ರ. ಅಮೆರಿಕದವರು ತಿಳಿದುಕೊಂಡಷ್ಟು ನಾವು ಅವರ ಮೇಲೆ ಅವಲಂಬಿತರಾಗಿಲ್ಲ ಎನ್ನುವ ಸಂದೇಶವನ್ನು ಈ ಒಪ್ಪಂದವು ಅಮೆರಿಕಕ್ಕೆ ರವಾನಿಸಿದೆ’ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥ ಶಾಸ್ತ್ರಜ್ಞ ಅಭಿಜಿತ್ ಬ್ಯಾನರ್ಜಿ ಅಭಿಪ್ರಾಯಪಟ್ಟರು.

‘ಪಿಟಿಐ’ ಸುದ್ದಿಸಂಸ್ಥೆ ನಡೆಸಿದ ಸಂದರ್ಶನದಲ್ಲಿ ಅವರು ಮಾತನಾಡಿ, ‘ಅದೇನೇ ಇದ್ದರೂ, ಈ ಒಪ್ಪಂದದ ಕುರಿತು ಹೇಳಲಾಗುತ್ತಿರುವ ಎಲ್ಲ ಲಾಭಗಳು ನಮಗೆ ದಕ್ಕಬೇಕು ಎಂದಾದರೆ ನಾವು ನಮ್ಮ ದಕ್ಷತೆಯನ್ನು ಮತ್ತು ಸಾರಿಗೆ, ಪೂರೈಕೆ ವ್ಯವಸ್ಥೆಯನ್ನು ತೀವ್ರಗತಿಯಲ್ಲಿ ಉತ್ತಮಪಡಿಸಿಕೊಳ್ಳಬೇಕಾಗಿದೆ’ ಎಂದರು.

‘ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಯಾಕೆ ಭಾರತ ವಿರೋಧಿಯಾಗಿದ್ದಾರೆ ಎಂದು ನಮಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ನಮ್ಮ ಜೊತೆಯಲ್ಲಿ ವ್ಯಾಪಾರ ನಡೆಸಲು ಅವರೇನು ಆಸಕ್ತಿ ತೋರುತ್ತಿಲ್ಲ. ಪ್ರಧಾನಿ ಮೋದಿ ಅವರೊಂದಿಗೆ ಮಾತನಾಡಿದ್ದೇನೆ, ಒಪ್ಪಂದಕ್ಕೆ ಬರಲಾಗುವುದು ಎಂದು ಟ್ರಂಪ್ ಹೇಳುತ್ತಾರೆ. ಆಮೇಲೆ ಇದನ್ನು ನಿರಾಕರಿಸುತ್ತಾರೆ. ಅಮೆರಿಕದೊಂದಿಗಿನ ಸಮಸ್ಯೆ ಏನು ಎಂಬುದೇ ನಮಗೆ ಅರ್ಥವಾಗುತ್ತಿಲ್ಲ’ ಎಂದರು.

‘ಭಾರತವು ದೊಡ್ಡ ಮಾರುಕಟ್ಟೆ. ಐರೋಪ್ಯ ದೇಶಗಳ ಮಾರುಕಟ್ಟೆಯು ಐಷಾರಾಮಿ ವಸ್ತುಗಳು, ಯಂತ್ರಗಳ ಮಾರುಕಟ್ಟೆ. ಆದರೆ, ಅಮೆರಿಕದ ಮಾರುಕಟ್ಟೆಯು ಈ ಯಾವ ಮಾರುಕಟ್ಟೆಗೂ ಸಮವಲ್ಲ; ಅದೊಂದು ದೈತ್ಯ ಮಾರುಕಟ್ಟೆ. ಅದೇನೇ ಇದ್ದರೂ ಈ ಒಪ್ಪಂದದ ಯಶಸ್ಸು, ಭಾರತವು ಯಾವ ರೀತಿಯಲ್ಲಿ ಅನುಕೂಲ ಪಡೆದುಕೊಳ್ಳಲಿದೆ ಎಂಬುದರ ಮೇಲೆ ನಿಂತಿದೆ’ ಎಂದರು.

ತವರು ನೆಲ ಬಾರಾಮತಿಯಲ್ಲಿ ಅಜಿತ್ ಪವಾರ್ ಅಂತ್ಯಕ್ರಿಯೆ

‘ದಾದಾ’ಗೆ ಕಂಬನಿಯ ವಿದಾಯ

ವಿಮಾನ ಪತನದ ದುರಂತದಲ್ಲಿ ಮೃತಪಟ್ಟ ಮಹಾರಾಷ್ಟ್ರದ ಡಿಸಿಎಂ ಅಜಿತ್ ಪವಾರ್ ಅವರ ಪಾರ್ಥಿವ ಶರೀರವನ್ನು ಅಂತ್ಯಕ್ರಿಯೆ ನಡೆದ ಸ್ಥಳ ಬಾರಾಮತಿಯ ವಿದ್ಯಾ ಪ್ರತಿಷ್ಠಾನ ಮೈದಾನಕ್ಕೆ ಗುರುವಾರ ತರಲಾಯಿತು ಪಿಟಿಐ ಚಿತ್ರ

ಬಾರಾಮತಿ (ಪಿಟಿಐ): ಬುಧವಾರ ವಿಮಾನ ಪತನದ ದುರಂತದಲ್ಲಿ ಮೃತಪಟ್ಟ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ (66) ಅವರ ಅಂತ್ಯಕ್ರಿಯೆ ಗುರುವಾರ ಸಕಲ ಸರ್ಕಾರಿ ಗೌರವಗಳೊಂದಿಗೆ ಅವರ ತವರು ನೆಲ ಪುಣೆ ಜಿಲ್ಲೆಯ ಬಾರಾಮತಿಯಲ್ಲಿ ನಡೆಯಿತು. ಅಪಾರ ಸಂಖ್ಯೆಯ ಜನರು ಅಂತಿಮ ದರ್ಶನ ಪಡೆದು, ‘ಅಜಿತ್ ದಾದಾ’ಗೆ ಕಂಬನಿಯ ವಿದಾಯ ಕೋರಿದರು.

ಅಜಿತ್ ಪವಾರ್ ಅವರ ಪಾರ್ಥಿವ ಶರೀರವನ್ನು ಬುಧವಾರ ರಾತ್ರಿ ಬಾರಾಮತಿಯ ಪುಣ್ಯಶ್ಲೋಕ ಅಹಲ್ಯಾದೇವಿ ಆಸ್ಪತ್ರೆಯಲ್ಲಿ ಇರಿಸಲಾಗಿತ್ತು. ಗುರುವಾರ ಬೆಳಿಗ್ಗೆ ಅಲ್ಲಿಂದ ಸ್ವಗ್ರಾಮ ಕಾಟೇವಾಡಿಗೆ ತರಲಾಯಿತು. ಅಲ್ಲಿಂದ ಬಾರಾಮತಿಯ ವಿದ್ಯಾ ಪ್ರತಿಷ್ಠಾನ ಮೈದಾನಕ್ಕೆ ತಂದು ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು.

ವಿದ್ಯಾ ಪ್ರತಿಷ್ಠಾನ ಮೈದಾನದಲ್ಲಿ ಅಂತ್ಯಕ್ರಿಯೆಯ ವಿಧಿಗಳು ನಡೆದವು. ಅಜಿತ್ ಪವಾರ್ ಪುತ್ರರಾದ ಪಾರ್ಥ್ ಮತ್ತು ಜಯ್ ಪವಾರ್, ರಾಜ್ಯಸಭಾ ಸದಸ್ಯೆಯೂ ಆಗಿರುವ ಪತ್ನಿ ಸುನೇತ್ರಾ, ಅವರ ಕುಟುಂಬ ಸದಸ್ಯರು ಭಾಗವಹಿಸಿದ್ದರು. ಅಜಿತ್ ಅವರ ಸಹೋದರಿ, ಸಂಸದೆ ಸುಪ್ರಿಯಾ ಸುಳೆ (ಎನ್‌ಸಿಪಿ ಶರದ್ ಪವಾರ್ ಬಣ) ಸುನೇತ್ರಾ ಪವಾರ್ ಅವರ ಜತೆಗೇ ಇದ್ದು, ಅವರನ್ನು ಸಂತೈಸಿದರು. ‘ಅಜಿತ್ ದಾದಾ ಅಮರ್ ರಹೇ’ ಎಂಬ ಘೋಷಣೆ ಪ್ರತಿಧ್ವನಿಸಿತು.

ಕಾಟೇವಾಡಿಯಲ್ಲಿರುವ ಅಜಿತ್ ಪವಾರ್ ನಿವಾಸಕ್ಕೆ ಭೇಟಿ ನೀಡಿದ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ, ಎಂಎನ್‌ಎಸ್ ಮುಖ್ಯಸ್ಥ ರಾಜ್ ಠಾಕ್ರೆ ಅಂತಿಮ ನಮನ ಸಲ್ಲಿಸಿದರು. ಕೇಂದ್ರ ಸಚಿವರಾದ ಅಮಿತ್ ಶಾ, ನಿತಿನ್ ಗಡ್ಕರಿ, ಮುರುಳೀಧರ್ ಮೊಹೊಲ್, ಅಜಿತ್ ಪವಾರ್ ಅವರ ದೊಡ್ಡಪ್ಪ, ಕೇಂದ್ರದ ಮಾಜಿ ಸಚಿವ ಶರದ್ ಪವಾರ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತಿತರರು ಬಾರಾಮತಿಯಲ್ಲಿ ಅಂತಿಮ ದರ್ಶನ ಪಡೆದರು.

ಬೆಂಬಲ ಕೋರಿದ ನಾಯ್ಡು: ವಿಮಾನ ಅಪಘಾತಕ್ಕೆ ಸಂಬಂಧಿಸಿದ ತನಿಖೆಯನ್ನು ತ್ವರಿತಗೊಳಿಸಲು ಮಹಾರಾಷ್ಟ್ರ ಸರ್ಕಾರದ ಬೆಂಬಲವನ್ನು ಕೋರಿ ಕೇಂದ್ರ ವಿಮಾನಯಾನ ಸಚಿವ ಕೆ. ರಾಮ ಮೋಹನ್ ನಾಯ್ಡು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಿಗೆ ಪತ್ರ ಬರೆದಿದ್ದಾರೆ. ಪವಾರ್ ಅವರೊಂದಿಗೆ ವಿಮಾನ ದುರಂತದಲ್ಲಿ ಮೃತಪಟ್ಟ ಫ್ಲೈಟ್ ಅಟೆಂಡೆಂಟ್ ಪಿಂಕಿ ಮಾಲಿ ಅವರ ಅಂತ್ಯಕ್ರಿಯೆ ಮುಂಬೈನಲ್ಲಿ ಮತ್ತು ಕ್ಯಾಪ್ಟನ್ ಶಾಂಭವಿ ಪಾಠಕ್ ಅವರ ಅಂತ್ಯಕ್ರಿಯೆ ನವದೆಹಲಿಯಲ್ಲಿ ನಡೆಯಿತು.

ಕೊಡುಗೆ ನೀಡಿದ ಆಂಬುಲೆನ್ಸ್‌ನಲ್ಲೇ ಕೊನೆಯ ಪಯಣ

ಮುಂಬೈ (ಪಿಟಿಐ): ‘ಬಾರಾಮತಿಗೆ ಹೊಸ ಆಂಬುಲೆನ್ಸ್ ಸಿಗುವಂತೆ ಅಜಿತ್ ಪವಾರ್ ನೋಡಿಕೊಂಡರು. ಆದರೆ, ದುರದೃಷ್ಟವಶಾತ್ ಅವರ ಮೃತದೇಹವನ್ನೇ ಅದೇ ಆಂಬುಲೆನ್ಸ್‌ನಲ್ಲಿ ಸಾಗಿಸಬೇಕಾಗಿ ಬಂತು’ ಎಂದು ಬಾರಾಮತಿ ಪುರಸಭೆಗೆ ಸೇರಿದ ಆಂಬುಲೆನ್ಸ್‌ನ ಚಾಲಕ ನಜೀಂ ಕಾಜಿ ನೋವಿನಿಂದ ನುಡಿದರು.

‘ಪುರಸಭೆಗೆ ಸೇರಿದ ಆಂಬುಲೆನ್ಸ್ 10 ವರ್ಷಗಳಷ್ಟು ಹಳೆಯದಾಗಿತ್ತು. ಆರು ತಿಂಗಳ ಹಿಂದೆ ಈ ವಿಷಯ ಅಜಿತ್ ಪವಾರ್ ಅವರ ಗಮನಕ್ಕೆ ಬಂದಿತ್ತು. ತಕ್ಷಣವೇ ಅಧಿಕಾರಿಗಳ ಸಭೆ ಕರೆದಿದ್ದ ಅವರು ಹೊಸ ಆಂಬುಲೆನ್ಸ್‌ಗೆ ವ್ಯವಸ್ಥೆ ಮಾಡಿದ್ದರು. ಆದರೆ, ವಿಧಿಯಾಟ ಬೇರೆ ಇತ್ತು. ಇಂದು ಅವರ ಪಾರ್ಥಿವ ಶರೀರವನ್ನು ನಾನು ಇದೇ ವಾಹನದಲ್ಲಿ ಸಾಗಿಸಬೇಕಾಗಿ ಬಂದಿದೆ. ಎಂಥ ದೌರ್ಭಾಗ್ಯ’ ಎಂದು ನಜೀಂ ಭಾವುಕರಾದರು. ಆಂಬುಲೆನ್ಸ್ ಹಸ್ತಾಂತರಿಸುವ ಸಂದರ್ಭದಲ್ಲಿ ಅಜಿತ್ ಪವಾರ್ ಅವರು, ‘ನಿಮ್ಮ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಿ’ ಎಂದು ಪುಟ್ಟ ಸಲಹೆ ನೀಡಿದ್ದರು. ಅವರ ಈ ಮಾತನ್ನು ನಾನು ಎಂದಿಗೂ ಮರೆಯುವುದಿಲ್ಲ’ ಎಂದು ಹೇಳಿದರು.

ಸಂಪುಟದಲ್ಲಿ ಸ್ಥಾನ ನೀಡಲು ಆಗ್ರಹ

ಅಜಿತ್ ಪವಾರ್ ಅವರ ದುರ್ಮರಣದ ಬೆನ್ನಲ್ಲೇ, ಅವರ ಪತ್ನಿ, ರಾಜ್ಯಸಭಾ ಸದಸ್ಯೆ ಸುನೇತ್ರಾ ಪವಾರ್ ಅವರಿಗೆ ಮಹಾರಾಷ್ಟ್ರದ ಸಂಪುಟದಲ್ಲಿ ಸ್ಥಾನ ನೀಡುವಂತೆ ಎನ್‌ಸಿಪಿ ಮುಖಂಡರು ಒತ್ತಾಯಿಸಿದ್ದಾರೆ. ಇನ್ನೊಂದೆಡೆ ಎರಡು ಬಣಗಳ ವಿಲೀನ ಕುರಿತು ಮಾತುಕತೆಗೆ ವಿರೋಧ ಪಕ್ಷವಾದ ಎನ್‌ಸಿಪಿ (ಎಸ್‌ಪಿ) ಒಲವು ತೋರಿದೆ.

‘ವಿಲೀನಕ್ಕೆ ಸಂಬಂಧಿಸಿದಂತೆ ಪ್ರಯತ್ನಗಳನ್ನು ಮುಂದುವರಿಸಲು ಹಿಂಜರಿಯುವುದಿಲ್ಲ’ ಎಂದು ಎನ್‌ಸಿಪಿ (ಎಸ್‌ಪಿ) ಸ್ಪಷ್ಟಪಡಿಸಿದೆ.

‘ಬಿಜೆಪಿ ನೇತೃತ್ವದ ಆಡಳಿತಾರೂಢ ಮಹಾಯುತಿ ಮೈತ್ರಿಕೂಟದ ಭಾಗವಾಗಿರುವ ಎನ್‌ಸಿಪಿಯನ್ನು ಸುನೇತ್ರಾ ಪವಾರ್ ಮುನ್ನಡೆಸಬೇಕು ಎಂದು ಮುಖಂಡರು ಆಗ್ರಹಿಸಿದ್ದಾರೆ. ಮಹಾರಾಷ್ಟ್ರದ ಜನರ ಆಗ್ರಹವೂ ಇದೇ ಆಗಿದೆ’ ಎಂದು ಎನ್‌ಸಿಪಿ ಮುಖಂಡ, ಅಜಿತ್ ಪವಾರ್ ಅವರ ಆಪ್ತ, ಸಚಿವ ನರಹರಿ ಜೀರ್ವಾಲ್ ಹೇಳಿದ್ದಾರೆ.

ಸರ್ಕಾರಿ ವೈದ್ಯರು ಖಾಸಗಿ ಒಪಿಡಿಗೆ ಸೀಮಿತ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳ ವೈದ್ಯರು ಇನ್ನು ಮುಂದೆ ಖಾಸಗಿ ಆಸ್ಪತ್ರೆಗಳ ಹೊರರೋಗಿಗಳ (ಒಪಿಡಿ) ವಿಭಾಗದಲ್ಲಿ ಮಾತ್ರ ಕೆಲಸ ಮಾಡಬಹುದು ಎಂದು ಆರೋಗ್ಯ ಇಲಾಖೆ ನಿರ್ಬಂಧ ವಿಧಿಸಿದೆ.

ಈ ಸಂಬಂಧ ಪರಿಷ್ಕೃತ ಆದೇಶವನ್ನು ಇಲಾಖೆ ಹೊರಡಿಸಿದೆ.

ಸರ್ಕಾರಿ ಆದೇಶಗಳ ಪ್ರಕಾರ, ಸರ್ಕಾರಿ ವೈದ್ಯರು ನಿಗದಿತ ಅವಧಿ ಬಳಿಕ ಖಾಸಗಿ ವೈದ್ಯಕೀಯ ವ್ಯವಸ್ಥೆಯಡಿ ಕಾರ್ಯನಿರ್ವಹಿಸಲು ಅವಕಾಶವಿದ್ದು, ಈ ಕೆಲಸವು ಸರ್ಕಾರಿ ಆಸ್ಪತ್ರೆಯಲ್ಲಿನ ಕರ್ತವ್ಯಗಳಿಗೆ ಅಡ್ಡಿಯಾಗಬಾರದೆಂಬ ನಿಯಮವಿದೆ.

ಸರ್ಕಾರಿ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಒಳರೋಗಿಗಳ ಚಿಕಿತ್ಸೆಯಲ್ಲಿ ತೊಡಗುವುದರಿಂದ, ಸರ್ಕಾರಿ ಆಸ್ಪತ್ರೆಗಳಲ್ಲಿ ಅವರ ಕಾರ್ಯನಿರ್ವಹಣೆ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಯಿರುತ್ತದೆ. ಆದ್ದರಿಂದ, ಸರ್ಕಾರಿ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಒಳರೋಗಿಗಳಿಗೆ ಚಿಕಿತ್ಸೆ ನೀಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

ಸರ್ಕಾರಿ ವೈದ್ಯರು ಖಾಸಗಿ ಆಸ್ಪತ್ರೆಗಳ ಒಪಿಡಿ ವಿಭಾಗದಲ್ಲಿ ಮಾತ್ರ ಕಾರ್ಯನಿರ್ವಹಿಸಬಹುದಾಗಿದೆ. ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಕಾನೂನಿನಡಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುತ್ತದೆ ಎಂದು ಎಚ್ಚರಿಸಿದೆ.

ಖಾಸಗಿ ವೈದ್ಯಕೀಯ ವ್ಯವಸ್ಥೆಯಡಿ ಕಾರ್ಯನಿರ್ವಹಣೆ ಕಾರಣ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ಆರೈಕೆ ನಿರ್ಲಕ್ಷಿಸಿರುವುದು, ಇದರಿಂದ ರೋಗಿ ಮೃತಪಟ್ಟಿರುವ ಬಗ್ಗೆ ಲೋಕಾಯುಕ್ತರು ಈ ಹಿಂದೆ ಗಮನಸೆಳೆದಿದ್ದರು. ಆಡಳಿತ ಸುಧಾರಣಾ ಆಯೋಗವು ತನ್ನ ವರದಿಯಲ್ಲಿ ಸರ್ಕಾರಿ ವೈದ್ಯರ ಖಾಸಗಿ ಕಾರ್ಯನಿರ್ವಹಣೆ ನಿಯಂತ್ರಿಸಲು ಶಿಫಾರಸು ಮಾಡಿತ್ತು. ಕೇರಳದಲ್ಲಿ ಇದೇ ರೀತಿ ನಿರ್ಬಂಧ ಜಾರಿಯಲ್ಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಚಿಟಿಕೆ ಸುದ್ದಿ

ತುಂಗಭದ್ರಾ ಅಂತಿಮ ಹಂತಕ್ಕೆ 7 ಗೇಟ್‌ಗಳು

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ ಕ್ರೆಸ್ಟ್‌ಗೇಟ್ ಅಳವಡಿಕೆ ಕಾರ್ಯ ಕೊಂಚ ವೇಗ ಪಡೆದಿದೆ. ಏಳು ಗೇಟ್‌ಗಳ ಗರ್ಡರ್‌ಗಳನ್ನು ಒಟ್ಟೊಟ್ಟಿಗೆ ಅಳವಡಿಸುವ ಕೆಲಸ ನಡೆದಿದೆ. 20 ದಿನಗಳಲ್ಲಿ ಒಟ್ಟು ಏಳು ತೂಬುಗಳಲ್ಲಿ ಕ್ರೆಸ್ಟ್‌ಗೇಟ್ ಅಳವಡಿಕೆ ಕಾರ್ಯ ಅಂತಿಮ ಹಂತಕ್ಕೆ ಬಂದಿದೆ.

‘ಕ್ರೆಸ್ಟ್‌ಗೇಟ್‌ಗಳಲ್ಲಿ ಮೂರು ಗರ್ಡರ್‌ಗಳನ್ನು ಕೂರಿಸುವುದೇ ಪ್ರಮುಖ ಘಟ್ಟ. ಸ್ಲಿಮ್ ಗೇಟ್‌ಗಳನ್ನು ಕೂರಿಸಲು ಒಂದು ದಿನ ಸಾಕು. ಹೀಗಾಗಿ ನಾವೀಗ ಗೇಟ್ ಸಂಖ್ಯೆ 4, 11, 19, 20, 24, 27 ಮತ್ತು 28ರಲ್ಲಿ ಗರ್ಡರ್‌ಗಳನ್ನು ಅಳವಡಿಸುವ ಕೆಲಸ ಮಾಡಿದ್ದು, ಎಲ್ಲವೂ ಕೊನೆಯ ಹಂತಕ್ಕೆ ಬಂದಿದೆ’ ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

ಗುಜರಾತ್‌ಗೆ ಪಯಣ: ಗುಜರಾತ್‌ನ ಅಹಮದಾಬಾದ್‌ನಲ್ಲಿ ನಾಲ್ಕು ಗೇಟ್‌ಗಳು ಸಿದ್ಧವಾಗುತ್ತಿದ್ದು, ಕೆಲ ಅಗತ್ಯ ಮಾರ್ಗದರ್ಶನ ನೀಡಲು ಒಂದು ತಂಡ ಅಲ್ಲಿಗೆ ತೆರಳಿದೆ.

ಡ್ರಗ್ಸ್ ಪ್ರಕರಣ ಒಬ್ಬನ ಬಂಧನ

ಮೈಸೂರು: ಮಾದಕ ವಸ್ತು ಮಾರಾಟ ಆರೋಪ ಪ್ರಕರಣದಲ್ಲಿ ಎನ್‌ಸಿಬಿ (ನಾರ್ಕೊಟಿಕ್ ಕಂಟ್ರೋಲ್ ಬ್ಯೂರೊ) ತಂಡವು ತಾಲ್ಲೂಕಿನ ಆಲನಹಳ್ಳಿ ನಿವಾಸಿ ಗಣಪತ್ ಲಾಲ್ ಎಂಬವರನ್ನು ಗುರುವಾರ ಬಂಧಿಸಿದೆ.

ಆರೋಪಿಯು, ರಾಜಸ್ಥಾನದಲ್ಲಿ ಈಗಾಗಲೇ ಬಂಧನಕ್ಕೊಳಗಾಗಿರುವ ನಾಲ್ವರ ಪೈಕಿ ಮನೋಹರ್ ಬಿಷ್ಣೋಯಿ ಎಂಬಾತನ ಸಂಬಂಧಿಕನಾಗಿರುವುದರಿಂದ, ಅಲ್ಲಿಗೆ ಕರೆದೊಯ್ಯಲು ಅಧಿಕಾರಿಗಳು ಐದನೇ ಜೆಎಂಎಫ್‌ಸಿ ನ್ಯಾಯಾಲಯದಿಂದ ಟ್ರಾವೆಲ್ ವಾರಂಟ್ ಪಡೆದಿದ್ದಾರೆ.

ದೆಹಲಿ ಗಲಭೆ ಪ್ರಕರಣ: ಜಾಮೀನು ಅರ್ಜಿ ತಿರಸ್ಕಾರ

ನವದೆಹಲಿ (ಪಿಟಿಐ): ದೆಹಲಿ ಗಲಭೆಯ ಪಿತೂರಿ ಪ್ರಕರಣದ ಮೂವರು ಆರೋಪಿಗಳಾದ ಸಲೀಂ ಮಲಿಕ್, ಅಥರ್ ಖಾನ್ ಮತ್ತು ಆಮ್ ಆದ್ಮಿ ಪಕ್ಷದ ಮಾಜಿ ಕೌನ್ಸಿಲರ್ ತಾಹಿರ್ ಹುಸೇನ್ ಅವರ ಜಾಮೀನು ಅರ್ಜಿಗಳನ್ನು ದೆಹಲಿ ನ್ಯಾಯಾಲಯ ಗುರುವಾರ ತಿರಸ್ಕರಿಸಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಸಮೀರ್ ಬಾಜಪೇಯಿ ಅವರು ಆರೋಪಿಗಳ ಜಾಮೀನು ಅರ್ಜಿಗಳ ವಿಚಾರಣೆ ನಡೆಸಿ, ಜಾಮೀನು ನಿರಾಕರಿಸಿದರು.

ಕೇರಳ ಬಜೆಟ್: ಶಾಲಾ ಮಕ್ಕಳಿಗೆ ಅಪಘಾತ ವಿಮೆ

ತಿರುವನಂತಪುರ (ಪಿಟಿಐ): 1ರಿಂದ 12ನೇ ತರಗತಿವರೆಗಿನ ಶಾಲಾ ಮಕ್ಕಳಿಗಾಗಿ ಅಪಘಾತ ಮತ್ತು ಜೀವ ವಿಮಾ ಯೋಜನೆಯನ್ನು ಕೇರಳ ಸರ್ಕಾರ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಘೋಷಿಸಿದೆ.

ಹಣಕಾಸು ಸಚಿವ ಕೆ.ಎನ್ ಬಾಲಗೋಪಾಲ್ ಗುರುವಾರ 2026–27ನೇ ಸಾಲಿನ ಬಜೆಟ್ ಮಂಡಿಸಿದರು.

ಘನತ್ಯಾಜ್ಯ ವಿಲೇವಾರಿ ಸಿಬ್ಬಂದಿ, ಆಟೊರಿಕ್ಷಾ, ಟ್ಯಾಕ್ಸಿ ಚಾಲಕರು, ಸೇರಿದಂತೆ ಅಸಂಘಟಿತ ವಲಯದ ಕಾರ್ಮಿಕರು ಸಹ ಹೊಸ ಅಪಘಾತ ವಿಮಾ ಯೋಜನೆಯ ವ್ಯಾಪ್ತಿಗೆ ಬರಲಿದ್ದಾರೆ.

ವಾಂಗ್ಚುಕ್‌ಗೆ ತಪಾಸಣೆ ‘ಸುಪ್ರೀಂ’ ಆದೇಶ

ನವದೆಹಲಿ (ಪಿಟಿಐ): ಜೋಧಪುರದ ಕೇಂದ್ರ ಕಾರಾಗೃಹದಲ್ಲಿರುವ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರನ್ನು ತಜ್ಞ ವೈದ್ಯರಿಂದ ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವಂತೆ ಸುಪ್ರೀಂ ಕೋರ್ಟ್ ಗುರುವಾರ ಆದೇಶಿಸಿದೆ.

ಮಲಿನಗೊಂಡಿರುವ ನೀರು ಕುಡಿದು ಹೊಟ್ಟೆಯಲ್ಲಿ ಸಮಸ್ಯೆ ಕಾಣಿಸಿಕೊಂಡಿದೆ ಎಂದು ವಾಂಗ್ಚುಕ್ ಅವರು ದೂರು ನೀಡಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅರವಿಂದ ಕುಮಾರ್ ಹಾಗೂ ಪಿ.ಬಿ. ವರಾಳೆ ಅವರು, ವಾಂಗ್ಚುಕ್ ಅವರ ವೈದ್ಯಕೀಯ ತಪಾಸಣೆಯ ವರದಿಯನ್ನು, ಸೋಮವಾರ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಜೈಲು ಅಧಿಕಾರಿಗಳಿಗೆ ಸೂಚಿಸಿದರು.

ಸುದ್ದಿ 2 ನಿಮಿಷ

ಎಸ್‌ಐಆರ್ ಪ್ರಶ್ನಿಸಿ ಅರ್ಜಿ: ತೀರ್ಪು ಕಾಯ್ದಿರಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಬಿಹಾರದಲ್ಲಿ ನಡೆದ ಮತದಾರರ ಪಟ್ಟಿಯ ‘ವಿಶೇಷ ಸಮಗ್ರ ಪರಿಷ್ಕರಣೆ’ (ಎಸ್‌ಐಆರ್) ಪ್ರಕ್ರಿಯೆ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಪೂರ್ಣಗೊಳಿಸಿದ್ದು, ಈ ಸಂಬಂಧಿಸಿದ ತನ್ನ ತೀರ್ಪನ್ನು ಗುರುವಾರ ಕಾಯ್ದಿರಿಸಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಎನ್‌ಜಿಒ ಸೇರಿದಂತೆ ವಿವಿಧ ಸಂಸ್ಥೆಗಳು, ವ್ಯಕ್ತಿಗಳು ಎಸ್‌ಐಆರ್ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಹಾಗೂ ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠವು ಈ ಅರ್ಜಿಗಳ ವಿಚಾರಣೆ ನಡೆಸಿದೆ.

ಆಯೋಗದ ಪರ ವಕೀಲರಾದ ರಾಕೇಶ್ ದ್ವಿವೇದಿ, ಮಣಿಂದರ್ ಸಿಂಗ್ ಅವರ ವಾದ ಹಾಗೂ ಅರ್ಜಿದಾರರ ಪರ ವಕೀಲರಾದ ಕಪಿಲ್ ಸಿಬಲ್, ಅಭಿಷೇಕ್ ಸಿಂಘ್ವಿ, ಪ್ರಶಾಂತ್ ಭೂಷಣ್, ಗೋಪಾಲ್ ಶಂಕರ ನಾರಾಯಣನ್ ಅವರ ಪ್ರತಿವಾದವನ್ನು ಆಲಿಸಿದ ಬಳಿಕ ಪೀಠವು ತನ್ನ ತೀರ್ಪು ಕಾಯ್ದಿರಿಸಿತು.

ಖರ್ಗೆ, ರಾಹುಲ್ ಗಾಂಧಿ ಭೇಟಿಯಾದ ತರೂರ್

ನವದೆಹಲಿ (ಪಿಟಿಐ): ಕಾಂಗ್ರೆಸ್ ಹಿರಿಯ ನಾಯಕ ಶಶಿ ತರೂರ್ ಅವರು ಪಕ್ಷದ ಹೈಕಮಾಂಡ್‌ನೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದಾರೆ ಎಂಬ ಸುದ್ದಿಗಳು ಹರಿದಾಡುತ್ತಿರುವ ನಡುವೆಯೇ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಗುರುವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ತರೂರ್, ‘ಎಲ್ಲವೂ ಸರಿಯಾಗಿಯೇ ಇದೆ. ಪಕ್ಷದ ನಾಯಕತ್ವದೊಂದಿಗಿನ ನಂಟು ಹಿಂದಿನಂತೆಯೇ’ ಇದೆ ಎಂದು ತಿಳಿಸಿದರು. ಸಂಸತ್‌ನಲ್ಲಿರುವ ಖರ್ಗೆ ಅವರ ಕಚೇರಿಯಲ್ಲಿ ಮಾತುಕತೆ ನಡೆದಿದ್ದು, ಈ ವೇಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಕೂಡ ಉಪಸ್ಥಿತರಿದ್ದರು ಎಂದು ಮೂಲಗಳು ತಿಳಿಸಿವೆ.

‘ಪಕ್ಷದ ಇಬ್ಬರು ನಾಯಕರೊಂದಿಗೆ ಚರ್ಚೆ ನಡೆಸಿದ್ದೇನೆ. ಸಕಾರಾತ್ಮಕವಾದ ಚರ್ಚೆ ನಡೆದಿದೆ. ಎಲ್ಲವೂ ಸರಿಯಾಗಿ ಇದೆ. ಇದಕ್ಕಿಂತ ಹೆಚ್ಚು ಏನು ಹೇಳಲು ಸಾಧ್ಯ’ ಎಂದು ಪತ್ರಕರ್ತರನ್ನು ಪ್ರಶ್ನಿಸಿದರು.

ಕೇರಳ ಮುಖ್ಯಮಂತ್ರಿ ಅಭ್ಯರ್ಥಿ ಆಯ್ಕೆ ಬಗ್ಗೆ ಚರ್ಚೆ ನಡೆದಿದೆಯೇ ಎಂಬ ಪ್ರಶ್ನೆಗೆ, ‘ಮುಖ್ಯಮಂತ್ರಿ ಅಭ್ಯರ್ಥಿಯಾಗಲು ನನಗೆ ಆಸಕ್ತಿಯಿಲ್ಲ. ನಾನೀಗ ಸಂಸದನಾಗಿದ್ದೇನೆ. ಆ ಕೆಲಸವನ್ನು ಮಾಡುತ್ತೇನೆ’ ಎಂದರು.

ಇತ್ತೀಚೆಗೆ ಕೇರಳದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ರಾಹುಲ್ ಗಾಂಧಿ ಅವರು ತಮ್ಮನ್ನು ಸರಿಯಾಗಿ ಗುರುತಿಸದಿರುವುದು ಸೇರಿದಂತೆ ಹಲವು ವಿಚಾರಗಳಲ್ಲಿ ಪಕ್ಷವು ನಿರ್ಲಕ್ಷಿಸುತ್ತಿದೆ ಎಂಬ ಕಾರಣಕ್ಕೆ ತರೂರ್ ಅಸಮಾಧಾನಗೊಂಡಿದ್ದರು ಎಂದು ತರೂರ್ ಆಪ್ತ ಮೂಲಗಳು ತಿಳಿಸಿವೆ.

ಡಿಸೆಂಬರ್‌ನಲ್ಲಿ 6,890 ವಿಮಾನಗಳ ರದ್ದು

ವಿಮಾನಯಾನ ಕಂಪನಿ	ರದ್ದಾದ ವಿಮಾನಗಳು	ಪ್ರಯಾಣಿಕರ ಮೇಲೆ ಪರಿಣಾಮ
ಅಲಯನ್ಸ್ ಏರ್	63	2,463
ಏರ್ ಇಂಡಿಯಾ ಸಮೂಹ	924	43,278
ಆಕಾಶ ಏರ್	39	5,673
ಇಂಡಿಗೊ	5,689	9,02,384
ಸ್ಪೈಸ್‌ಜೆಟ್	79	11,929
ಫ್ಲೈ 91	8	343
ಇಂಡಿಯಾಒನ್ ಏರ್	71	408
ಸ್ಟಾರ್ ಏರ್	17	386

ಮೂಲ: ಲೋಕಸಭೆಯಲ್ಲಿ ಕೆ.ಸಿ. ವೇಣುಗೋಪಾಲ್ ಮತ್ತು ಆರ್. ಸುಧಾ ಅವರ ಪ್ರಶ್ನೆಗಳಿಗೆ ನಾಗರಿಕ ವಿಮಾನಯಾನ ಸಚಿವರ ಪ್ರತಿಕ್ರಿಯೆ

ಸುಖ ನಿದ್ರೆ...

ಪಿಟಿಐ ಚಿತ್ರ

ಉತ್ತರ ಪ್ರದೇಶದಲ್ಲಿ ಚಳಿ ಹೆಚ್ಚಾಗಿದ್ದು ವಾರಾಣಸಿಯ ಘಾಟ್‌ವೊಂದರಲ್ಲಿ ಮಕ್ಕಳೊಂದಿಗೆ ನಾಯಿಯೊಂದು ಹೊದಿಕೆಯಡಿ ಬೆಚ್ಚಗೆ ಮಲಗಿರುವುದು ಗುರುವಾರ ಕಂಡುಬಂತು

ಕಾಮೆಡ್–ಕೆ ಪರೀಕ್ಷೆ ಮೇ 9ಕ್ಕೆ

ಬೆಂಗಳೂರು: ಕಾಮೆಡ್–ಕೆ 2026–27ನೇ ಶೈಕ್ಷಣಿಕ ವರ್ಷದ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಮೇ 9ರಂದು ಪ್ರವೇಶ ಪರೀಕ್ಷೆ ನಡೆಸಲಿದೆ.

ದೇಶದ 200 ನಗರಗಳ 400ಕ್ಕೂ ಹೆಚ್ಚು ಕೇಂದ್ರಗಳಲ್ಲಿ ನಡೆಯುವ ಈ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ರಾಜ್ಯದ 150ಕ್ಕೂ ಹೆಚ್ಚು ಖಾಸಗಿ ಅನುದಾನರಹಿತ ಎಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶ ಪಡೆಯಬಹುದಾಗಿದೆ. ಅರ್ಜಿ ಸಲ್ಲಿಕೆ ಪ್ರಕ್ರಿಯೆ ಫೆ.3ರಂದು ಆರಂಭವಾಗಿ ಮಾರ್ಚ್ 16ರಂದು ಮುಕ್ತಾಯವಾಗಲಿದೆ. ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ www.comedk.org ಮತ್ತು www.unigauge.com ವೆಬ್‌ಸೈಟ್‌ಗಳಿಗೆ ಭೇಟಿ ನೀಡಬಹುದು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಕೌನ್ಸೆಲಿಂಗ್ ಆರಂಭಿಸುವುದನ್ನು ವಿಳಂಬ ಮಾಡಿದರೆ ಕರ್ನಾಟಕದ ಹೊರಗಿನ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ನಿಗದಿತ ವೇಳಾಪಟ್ಟಿಯಂತೆ ಕೌನ್ಸೆಲಿಂಗ್ ಪ್ರಕ್ರಿಯೆ ಮುಂದುವರಿಸಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

JNANA DEGUL
A Premiere Education Fair

ಪ್ಯಾಲೆಸ್ಟೀನ್ ಸಿನಿಮಾಗಳಿಗೆ ನಿರ್ಬಂಧ: ಪ್ರಕಾಶ್ ರಾಜ್ ಪ್ರತಿರೋಧ

ಚಿತ್ರೋತ್ಸವಕ್ಕೆ ಸಂಭ್ರಮದ ಚಾಲನೆ

ಪ್ರಜಾವಾಣಿ ವಾರ್ತೆ

ಚಿತ್ರೋತ್ಸವದ ಕೈಪಿಡಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆಗೊಳಿಸಿದರು

ಬೆಂಗಳೂರು: 17ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ಯಾಲೆಸ್ಟೀನ್ ಸಿನಿಮಾಗಳ ಪ್ರದರ್ಶನಕ್ಕೆ ಅವಕಾಶ ನೀಡದ ಕೇಂದ್ರ ಸರ್ಕಾರದ ತೀರ್ಮಾನಕ್ಕೆ ನಟ, ಚಿತ್ರೋತ್ಸವದ ರಾಯಭಾರಿ ಪ್ರಕಾಶ್ ರಾಜ್ ಪ್ರತಿರೋಧ ವ್ಯಕ್ತಪಡಿಸಿದರು.

ವಿಧಾನಸೌಧದ ಪೂರ್ವದ್ವಾರದ ಮುಂಭಾಗದಲ್ಲಿ ಗುರುವಾರ(ಜ.29) ನಡೆದ ಚಲನಚಿತ್ರೋತ್ಸವದ ಉದ್ಘಾಟನಾ ಕಾರ್ಯಕ್ರಮದ ವೇದಿಕೆಯಲ್ಲಿ ಪ್ಯಾಲೆಸ್ಟೀನ್‌ನ ‘ಯುದ್ಧಗಳು ಕೊನೆಗೊಳ್ಳುತ್ತವೆ, ನಾಯಕರು ಕೈಕುಲುಕಿ ತೆರಳುತ್ತಾರೆ ಆದರೆ ಆ ವೃದ್ಧೆ ತನ್ನ ಮಗನಿಗಾಗಿ ಕಾಯುತ್ತಿರುತ್ತಾಳೆ....’ ಎಂಬ ಪದ್ಯ ಓದಿ ಪ್ರತಿರೋಧಿಸಿದರು.

ಚಿತ್ರೋತ್ಸವಕ್ಕೆ ಆಯ್ಕೆಯಾದ ಐದು ಪ್ಯಾಲೆಸ್ಟೀನ್ ಸಿನಿಮಾಗಳ ಪೈಕಿ ‘ಆಲ್ ದಟ್ಸ್ ಲೆಫ್ಟ್ ಆಫ್ ಯೂ’, ‘ದಿ ವಾಯ್ಸ್ ಆಫ್ ಹಿಂದ್ ರಜಬ್’, ‘ಪುಟ್ ಯುವರ್ ಸೋಲ್ ಆನ್ ಯುವರ್ ಹ್ಯಾಂಡ್ ಆ್ಯಂಡ್ ವಾಕ್’ ಹಾಗೂ ‘ಯೆಸ್’ ಎಂಬ ನಾಲ್ಕು ಸಿನಿಮಾಗಳ ಪ್ರದರ್ಶನಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿಲ್ಲ.

ಈ ಬಗ್ಗೆ ಮಾತನಾಡಿದ ಪ್ರಕಾಶ್ ರಾಜ್, ‘ಚಿತ್ರೋತ್ಸವಗಳು ಮಾನವೀಯ ಬಾಂಧವ್ಯ ಬೆಳೆಯಲು ಕಾರಣವಾಗುತ್ತವೆ. ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ರಾಜಕೀಯ ಪ್ರವೇಶ ಮಾಡಿದೆ. ಈ ವರ್ಷ ಪ್ಯಾಲೆಸ್ಟೀನ್ ಸಿನಿಮಾಗಳ ಪ್ರದರ್ಶನಕ್ಕೆ ಕೇಂದ್ರ ಸರ್ಕಾರ ಅವಕಾಶ ನೀಡಿಲ್ಲ. ಇದರ ವಿರುದ್ಧ ಗಟ್ಟಿಯಾದ ನಿಲುವನ್ನು ಮುಖ್ಯಮಂತ್ರಿಯವರು ತೆಗೆದುಕೊಳ್ಳಬೇಕು’ ಎಂದರು.

‘ನಮ್ಮ ಮಣ್ಣಿನ ‘ಎದೆಯ ಹಣತೆ’ ಬೇರೆ ಭಾಷೆಗೆ ತರ್ಜುಮೆಯಾಗಿ ಬುಕರ್ ಪ್ರಶಸ್ತಿ ಬಂದಾಗ ಸಂಭ್ರಮಿಸುವ ನಾವು, ನಮ್ಮ ನೆಲಕ್ಕೆ ಇನ್ನೊಬ್ಬರ ಕಥೆಗಳನ್ನು ತರುವುದಕ್ಕೆ ಆಗುವುದಿಲ್ಲ ಎನ್ನುವ ನಿರ್ಬಂಧವನ್ನು ಒಪ್ಪಿಕೊಳ್ಳಲು ಹೇಗೆ ಸಾಧ್ಯ? ಕೇರಳದ ಚಿತ್ರೋತ್ಸವದಲ್ಲೂ ಹೀಗೆ ಮಾಡಿದಾಗ ಅಲ್ಲಿನ ಸರ್ಕಾರ ಪ್ರದರ್ಶನಕ್ಕೆ ಅನುವು ಮಾಡಿಕೊಟ್ಟಿತು. ನಿಮ್ಮ ರಾಜಕೀಯ ಹುನ್ನಾರ ನಡೆಯುವುದಿಲ್ಲ ಎಂದು ನಮ್ಮ ಸರ್ಕಾರ, ಚಲನಚಿತ್ರ ಅಕಾಡೆಮಿ ಪ್ರತಿಭಟಿಸಿ ತಿಳಿಸಬೇಕು’ ಎಂದರು ಪ್ರಕಾಶ್ ರಾಜ್.

ಶಾಸಕ ರಿಜ್ವಾನ್ ಅರ್ಷದ್ ಮಾತನಾಡಿ, ‘ಪ್ಯಾಲೆಸ್ಟೀನ್ ಸಿನಿಮಾಗಳನ್ನು ನಮ್ಮ ವೇದಿಕೆ ಮೇಲೆ ಪ್ರದರ್ಶನ ಮಾಡುತ್ತೇವೆ. ಅದು ಸಿದ್ದರಾಮಯ್ಯನವರ ಸರ್ಕಾರದಲ್ಲಿ ಆಗದೇ ಇದ್ದರೆ ಎಲ್ಲೂ ಆಗುವುದಿಲ್ಲ’ ಎಂದರು.

ನಟಿ ರುಕ್ಮಿಣಿ ವಸಂತ್, ಸಭಾಪತಿ ಬಸವರಾಜ ಹೊರಟ್ಟಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಬಿ.ಬಿ. ಕಾವೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ಮುರಳಿ ಪಿ.ಬಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು ಎಂ. ಇದ್ದರು.

ಭಾಗವಹಿಸುವಿಕೆ ಹೆಚ್ಚಳ: ಉದ್ಘಾಟನಾ ಕಾರ್ಯಕ್ರಮದಲ್ಲಿ ಈ ವರ್ಷ ಭಾಗವಹಿಸಿದ ಸಿನಿಮಾ ಕ್ಷೇತ್ರದ ಗಣ್ಯರ ಸಂಖ್ಯೆ ಹೆಚ್ಚಿತ್ತು.

> **ನಿರ್ಮಾಪಕರಿಗೆ ಸಹಾಯವಾಗುವಂತೆ ಚಿತ್ರೀಕರಣದ ಅನುಮತಿಗಳಿಗಾಗಿ ಏಕಗವಾಕ್ಷಿ ವ್ಯವಸ್ಥೆ ತರಬೇಕು**
> **ಸಾಧುಕೋಕಿಲ**
> ಚಲನಚಿತ್ರ ಅಕಾಡೆಮಿ ಅಧ್ಯಕ್ಷ

‘ಅಸಮಾನತೆ ತೊಲಗಲಿ’

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಸಿನಿಮಾಗಳ ಮೂಲಕ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಆಗಬೇಕು. ಸಮಾಜದಲ್ಲಿ ಅಸಮಾನತೆ, ಬಡತನ ಇದೆ. ಇವುಗಳನ್ನು ಹೋಗಲಾಡಿಸುವ ಕೆಲಸವನ್ನು ಸಿನಿಮಾಗಳು ಮಾಡಬೇಕು’ ಎಂದರು.

‘ಬೇರೆ ದೇಶಗಳ ಜನಜೀವನ, ರಾಜಕೀಯ, ಸಮಾಜ ಅರ್ಥ ಮಾಡಿಕೊಳ್ಳಲು ಇಂಥ ಅಂತರ ರಾಷ್ಟ್ರೀಯ ಚಿತ್ರೋತ್ಸವ ಮಾಡುತ್ತಿದ್ದೇವೆ. ಸಮಸಮಾಜ ಕಟ್ಟಲು ಇದರಿಂದ ಸಾಧ್ಯ’ ಎಂದರು. ‘ಶೋಷಿತರ, ಹಿಂದುಳಿದವರ, ರೈತರ ಸಮಸ್ಯೆಗಳಿಗೆ ಧ್ವನಿಯಾಗಿ ಪ್ರಕಾಶ್ ರಾಜ್ ಕೆಲಸ ಮಾಡುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಶ್ಲಾಘಿಸಿದರು. ಆದರೆ ಪ್ರಕಾಶ್ ರಾಜ್ ಅವರ ಆಗ್ರಹಕ್ಕೆ ವೇದಿಕೆಯಲ್ಲಿ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

f prajavani.net prajavani | ಶುಕ್ರವಾರ, ಜನವರಿ 30, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 30 | ಪುಟ 16 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಚಿಣ್ಣರ ಪ್ರತಿಭಟನೆ
ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಸದಸ್ಯರು ಬೆಂಗಳೂರಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಚಿಣ್ಣರು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 82,566 | ನಿಫ್ಟಿ 25,418 | $/₹ 91.99 | ಚಿನ್ನ (Std. 10g) ₹1,84,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹4,10,900 (ಬೆಂಗಳೂರು)



‘ಕೈ’ ಸರ್ಕಾರದಲ್ಲೂ ಕಮಿಷನ್ ಸದ್ದು

ಯಾವ ಇಲಾಖೆಯಲ್ಲಿ ಹೆಚ್ಚು ಬಾಕಿ? (₹ಕೋಟಿಗಳಲ್ಲಿ)

ಜಲಸಂಪನ್ಮೂಲ	ಲೋಕೋಪಯೋಗಿ	ಆರ್‌ಡಿಪಿಆರ್	ಸಣ್ಣ ನೀರಾವರಿ	ವಸತಿ	ಬಿಬಿಎಂಪಿ (ಜಿಬಿಎ)	ನಗರಾಭಿವೃದ್ಧಿ	ಕಾರ್ಮಿಕ
₹13,000	₹8,370.76	₹3,800	₹3,000	₹2,600	₹2,600	₹2,000	₹2,000

ರಾಹುಲ್, ಖರ್ಗೆಗೆ ಪತ್ರ ಬರೆಯಲು ಗುತ್ತಿಗೆದಾರರ ಸಂಘದ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ‘ಕಮಿಷನ್ ಭೂತ’ ಈಗಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೂ ಮುನ್ನೆಲೆಗೆ ಬಂದಿದೆ.

ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿದ್ದ ಕೆಂಪಣ್ಣ ಮಾಡಿದ್ದ ಆರೋಪ, ಅಂದು ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್‌ನ ಹೋರಾಟಕ್ಕೆ ಪ್ರಬಲ ಅಸ್ತ್ರವಾಗಿತ್ತು. ‘ಶೇ 40ರಷ್ಟು ಕಮಿಷನ್ ಸರ್ಕಾರ’ ಎಂದು ಆರೋಪಿಸಿದ್ದ ಕಾಂಗ್ರೆಸ್, ಸರ್ಕಾರದ ವಿರುದ್ಧ ಅಭಿಯಾನವನ್ನೇ ನಡೆಸಿತ್ತು.

ಈಗ ಮತ್ತೆ ದನಿ ಎತ್ತಿರುವ ಗುತ್ತಿಗೆದಾರರ ಸಂಘ, ‘ರಾಜ್ಯದ ಎಲ್ಲ ಇಲಾಖೆಗಳಲ್ಲೂ ಭ್ರಷ್ಟಾಚಾರ ಹೆಚ್ಚಾಗಿದೆ. ಹಣ ಬಿಡುಗಡೆಗೆ ಕಮಿಷನ್ ನೀಡಬೇಕು. ಇದರ ಪ್ರಮಾಣವೂ ಹಿಂದಿನ ಸರ್ಕಾರಕ್ಕಿಂತ ದುಪ್ಪಟ್ಟಾಗಿದೆ’ ಎಂದು ಆರೋಪಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಆರ್. ಮಂಜುನಾಥ್, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕೃತವಾಗಿ ಸಭೆ ಕರೆದರೆ ಇಲಾಖೆಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಮಾಹಿತಿಯನ್ನು ಎಲ್ಲ ದಾಖಲೆಗಳೊಂದಿಗೆ ಅವರಿಗೇ ನೀಡುತ್ತೇವೆ. ಅವರೇ ಸೂಕ್ತ ಕ್ರಮ ಕೈಗೊಳ್ಳಲಿ’ ಎಂದು ಒತ್ತಾಯಿಸಿದರು.

▶ 9

ನಗರಾಭಿವೃದ್ಧಿ, ವಸತಿಯೇ ಗುರಿ

‘ನಗರಾಭಿವೃದ್ಧಿ ಇಲಾಖೆಯಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ. ಮಧ್ಯವರ್ತಿಗಳು ಆರ್.ಟಿ. ನಗರ, ರಾಜಾಜಿನಗರದಲ್ಲಿ ಕಚೇರಿ ಮಾಡಿಕೊಂಡಿದ್ದು, ಇಲಾಖೆಯನ್ನು ನಿಯಂತ್ರಿಸುತ್ತಿದ್ದಾರೆ’ ಎಂದು ಮಂಜುನಾಥ್ ಆಪಾದಿಸಿದರು.

ಮಂಜುನಾಥ್

‘ಇಲಾಖೆಯ ಮುಖ್ಯ ಎಂಜಿನಿಯರ್‌ಗಳನ್ನು ಅಲ್ಲಿಗೆ ಕರೆಯಿಸಿ, ತಮಗೆ ಬೇಕಾದ ರೀತಿಯಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಸುತ್ತಿದ್ದಾರೆ. ಪ್ಯಾಕೇಜ್ ಟೆಂಡರ್ ಬೇಡ ಎಂದು ಮುಖ್ಯಮಂತ್ರಿಯವರು ಸೂಚಿಸಿದ್ದರೂ ಅದನ್ನೇ ನಿರ್ವಹಿಸಲಾಗುತ್ತಿದೆ. ಈ ಬಗ್ಗೆ ಸಚಿವ ಬೈರತಿ ಸುರೇಶ್ ಅವರಿಗೆ ಮೂರು ಬಾರಿ ಪತ್ರ ಬರೆದು, ಚರ್ಚಿಸುವಂತೆ ಕೋರಿದ್ದರೂ ಅವರು ಪ್ರತಿಕ್ರಿಯಿಸಿಲ್ಲ. ಅವರು ಸಭೆ ನಡೆಸಿದರೆ ಎಲ್ಲ ರೀತಿಯ ಭ್ರಷ್ಟಾಚಾರದ ಮಾಹಿತಿಯನ್ನು ಒದಗಿಸಲಾಗುತ್ತದೆ’ ಎಂದು ಮಂಜುನಾಥ್ ಹೇಳಿದರು.

‘ವಸತಿ ಇಲಾಖೆಯಲ್ಲಿ ಸಚಿವರ ಗಮನಕ್ಕೆ ಬಾರದೆ ಕೆಲವರು ಒಂದು ಕೂಟ ಮಾಡಿಕೊಂಡು, ಅವರಿಗಷ್ಟೇ ಟೆಂಡರ್ ಆಗುವ ರೀತಿಯಲ್ಲಿ ಮಾಡುತ್ತಿದ್ದಾರೆ. ಈ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಸಚಿವ ಜಮೀರ್ ಅಹಮದ್‌ಖಾನ್ ಅವರಿಗೆ ಕೋರಲಾಗಿದೆ. ಅವರಿಗೆ ಆರೋಗ್ಯ ಸಮಸ್ಯೆ ಇದ್ದು, ಒಂದೆರಡು ದಿನಗಳಲ್ಲಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದಾರೆ’ ಎಂದರು.

ಮಾರ್ಚ್ 5ರಿಂದ ಕಾಮಗಾರಿ ಸ್ಥಗಿತ

ರಾಜ್ಯ ಸರ್ಕಾರ ಮಾರ್ಚ್ 5ರೊಳಗೆ ಬಾಕಿ ಇರುವ ₹37 ಸಾವಿರ ಕೋಟಿ ಬಿಡುಗಡೆ ಮಾಡದಿದ್ದರೆ ರಾಜ್ಯದಾದ್ಯಂತ ಎಲ್ಲ ಕಾಮಗಾರಿಗಳನ್ನು ನಿಲ್ಲಿಸಿ, ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ಸಂಘದ ಅಧ್ಯಕ್ಷ ಆರ್. ಮಂಜುನಾಥ್ ತಿಳಿಸಿದರು. ‘ಬಿಲ್ ಪಾವತಿ ವಿಳಂಬವಾಗಿರುವುದರಿಂದ ಚಿಕ್ಕಬಳ್ಳಾಪುರದಲ್ಲಿ ಗುತ್ತಿಗೆದಾರರೊಬ್ಬರು ಸಾಲಬಾಧೆಯಿಂದ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ರಾಜ್ಯದಲ್ಲಿರುವ 1.50 ಲಕ್ಷ ಗುತ್ತಿಗೆದಾರರ ಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ’ ಎಂದರು.

‘2021-22, 2022-23, 2023-24ರಿಂದ ₹37 ಸಾವಿರ ಕೋಟಿಗೂ ಹೆಚ್ಚು ಹಣ ಬಾಕಿ ಉಳಿದಿದೆ. 2025ರ ಏಪ್ರಿಲ್ ನಲ್ಲಿ ಹಣ ಬಿಡುಗಡೆ ಮಾಡುವುದಾಗಿ ಸಿದ್ದರಾಮಯ್ಯ ನೀಡಿದ್ದ ಭರವಸೆ ಈಡೇರಿಲ್ಲ’ ಎಂದು ಹೇಳಿದರು.

ಶೇ 65 ಲಂಚದ ಸರ್ಕಾರ: ಸುನಿಲ್

‘ಅಬಕಾರಿ ಇಲಾಖೆ ಮಾತ್ರವಲ್ಲ, ಎಲ್ಲಾ ಇಲಾಖೆಗಳಲ್ಲೂ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ಇದು ಶೇ 65ರಷ್ಟು ಲಂಚ ಹೊಡೆಯುವ ಸರ್ಕಾರ’ ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಅವರು ವಿಧಾನಸಭೆಯಲ್ಲಿ ಆರೋಪಿಸಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡಿದ ಅವರು, ‘ಸದನದಲ್ಲಿ ಬೇರೆ ಯಾವುದೋ ವಿಷಯಕ್ಕೆ ನಿರ್ಣಯ ತೆಗೆದುಕೊಳ್ಳುವುದಲ್ಲ, ಶೇ 65ರ ಲಂಚದ ಸರ್ಕಾರ ತಮ್ಮದು ಎಂಬ ಒಂದು ನಿರ್ಣಯವನ್ನು ಸದನದಲ್ಲಿ ತೆಗೆದುಕೊಳ್ಳಲಿ’ ಎಂದರು.

▶ 9

ಗಾಳಿಯಲ್ಲಿ ಗುಂಡು ಬೇಡ: ಬೈರತಿ

‘ಗುತ್ತಿಗೆದಾರರು ತಮ್ಮ ಆರೋಪಗಳಿಗೆ ಸಾಕ್ಷ್ಯಾಧಾರ ನೀಡದೇ ಗಾಳಿಯಲ್ಲಿ ಗುಂಡು ಹಾರಿಸುವ ಕೆಲಸ ಮಾಡುತ್ತಿದ್ದಾರೆ. ಯಾವುದೇ ಕಾಮಗಾರಿಯ ಗುತ್ತಿಗೆ ನೀಡುವ ವಿಚಾರದಲ್ಲಿ ಸಚಿವರ ಹಸ್ತಕ್ಷೇಪ ಇರುವುದಿಲ್ಲ. ಅರ್ಹ ಗುತ್ತಿಗೆದಾರರನ್ನು ಅಧಿಕಾರಿಗಳ ತಂಡ ಅಂತಿಮಗೊಳಿಸುತ್ತದೆ. ಎಲ್ಲವೂ ಪಾರದರ್ಶಕವಾಗಿ ನಡೆಯುತ್ತದೆ’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಪ್ರತಿಕ್ರಿಯಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪದೇಪದೇ, ಸಚಿವರ ವಿರುದ್ಧ ವಿನಾಕಾರಣ ಆರೋಪ ಮಾಡುತ್ತಿದ್ದರೆ, ಇಲಾಖೆ ನಡೆಸುವುದಾದರೂ ಹೇಗೆ? ಸಾರ್ವಜನಿಕ ಜೀವನದಲ್ಲಿರುವವರ ತೇಜೋವಧೆ ಮಾಡುವುದು ಬೇಡ’ ಎಂದರು.

▶ 9

ನೃತ್ಯ ವೈಭವ...

ಪ್ರಜಾವಾಣಿ ಚಿತ್ರ: ಎಂ. ಎಸ್. ಮಂಜುನಾಥ್

ವಿಧಾನಸೌಧದ ಆವರಣದಲ್ಲಿ ಗುರುವಾರ ನಡೆದ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕಲಾವಿದರು ಆಕರ್ಷಕ ನೃತ್ಯ ಪ್ರದರ್ಶಿಸಿದರು

ಹೊಸ ನಿಯಮಗಳಿಗೆ ‘ಸುಪ್ರೀಂ’ ತಡೆ

ಕೇಂದ್ರ ಸರ್ಕಾರ, ಯುಜಿಸಿಗೆ ನೋಟಿಸ್ ನೀಡಿದ ನ್ಯಾಯಪೀಠ

ನವದೆಹಲಿ (ಪಿಟಿಐ): ಉನ್ನತ ಶಿಕ್ಷಣ ಸಂಸ್ಥೆಗಳ ಕ್ಯಾಂಪಸ್‌ಗಳಲ್ಲಿ ಜಾತಿ ತಾರತಮ್ಯ ತಡೆಗೆ ‘ಸಮಾನತಾ ಸಮಿತಿ’ಗಳನ್ನು ರಚಿಸಲು ನಿರ್ದೇಶಿಸಿ, ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಹೊಸ ನಿಯಮಗಳಿಗೆ ಸುಪ್ರೀಂ ಕೋರ್ಟ್ ಗುರುವಾರ ತಡೆ ನೀಡಿದೆ.

ಈ ನಿಯಮಗಳು ಮೇಲ್ನೋಟಕ್ಕೆ ಅಸ್ಪಷ್ಟವಾಗಿದ್ದು, ದುರುಪಯೋಗಕ್ಕೆ ಕಾರಣವಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ. ‘ಸಮಾಜದ ಮೇಲೆ ಅಪಾಯಕಾರಿ ಪರಿಣಾಮ ಬೀರುವ ಮತ್ತು ಸಮಾಜದಲ್ಲಿ ವಿಭಜನೆಗೆ ಕಾರಣವಾಗುವ ಸಾಧ್ಯತೆ ಇರುವುದರಿಂದ ಈ ವಿಷಯದಲ್ಲಿ ಮಧ್ಯಪ್ರವೇಶಿಸಬೇಕಾದ ಅಗತ್ಯವಿದೆ’ ಎಂದು ಸುಪ್ರೀಂ ಕೋರ್ಟ್ ಮೌಖಿಕವಾಗಿ ಅಭಿಪ್ರಾಯಪಟ್ಟಿದೆ.

▶ 9

‘ವಿಳಂಬವಾದರೂ ಸ್ವಾಗತಾರ್ಹ ಹೆಜ್ಜೆ’

ಚೆನ್ನೈ (ಪಿಟಿಐ): ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಆಳವಾಗಿ ಬೇರೂರಿರುವ ಜಾತಿ ತಾರತಮ್ಯ ತಡೆಗೆ ವಿಳಂಬವಾಗಿ ಆದರೂ ಯುಜಿಸಿ ಸ್ವಾಗತಾರ್ಹ ಹೆಜ್ಜೆಯಿಟ್ಟಿದೆ ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಗುರುವಾರ ಹೇಳಿದ್ದಾರೆ.

ಎಂ.ಕೆ.ಸ್ಟಾಲಿನ್

‘ಈ ನಿಯಮಗಳನ್ನು ಇನ್ನಷ್ಟು ಬಲಪಡಿಸಿ, ರಚನಾತ್ಮಕ ಅಂತರವನ್ನು ತಗ್ಗಿಸಲು ಪರಿಷ್ಕರಿಸಬೇಕು. ಅಲ್ಲದೆ ನಿಜವಾದ ಹೊಣೆಗಾರಿಕೆಯನ್ನು ನಿಗದಿಪಡಿಸಿ ಜಾರಿಗೊಳಿಸಬೇಕು’ ಎಂದು ಅವರು ‘ಎಕ್ಸ್’ನಲ್ಲಿ ಒತ್ತಾಯಿಸಿದ್ದಾರೆ.

▶ 9

ಭೂಸ್ವಾಧೀನಾಧಿಕಾರಿ ₹26 ಕೋಟಿ ಒಡೆಯ

ಆಸ್ತಿ ವಿವರ

- 14 ಎಕರೆ ಕೃಷಿ ಭೂಮಿ
- 8 ವಾಸದ ಮನೆಗಳು
- 4 ನಿವೇಶನ

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ (ಕೆಐಎಡಿಬಿ) ನಿಯೋಜನೆ ಮೇರೆಗೆ ವಿಶೇಷ ಭೂಸ್ವಾಧೀನ ಅಧಿಕಾರಿಯಾಗಿದ್ದ ಎನ್. ತೇಜಸ್ ಕುಮಾರ್ ಅವರ ಮನೆಯ ಮೇಲೆ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ₹26.65 ಕೋಟಿ ಮೊತ್ತದ ಆಸ್ತಿ ಪತ್ತೆ ಮಾಡಿದ್ದಾರೆ. ತೇಜಸ್ ಅವರು ಈಗ ಅರಣ್ಯ ಇಲಾಖೆಯ ಶಿವಮೊಗ್ಗ ವಿಭಾಗದ ಮ್ಯಾನೇಜರ್ ಹುದ್ದೆಗೆ ವರ್ಗಾವಣೆಯಾಗಿದ್ದು, ಇನ್ನಷ್ಟೇ ವರದಿ ಮಾಡಿಕೊಳ್ಳಬೇಕಿದೆ.

ತೇಜಸ್ ಅವರು ತಮ್ಮ ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಬಗ್ಗೆ ಬೆಂಗಳೂರು ನಗರ–1 ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಎಸ್‌ಪಿ ಶಿವಪ್ರಕಾಶ್ ದೇವರಾಜ್ ಅವರ ಮಾರ್ಗದರ್ಶನದಲ್ಲಿ ಲೋಕಾಯುಕ್ತ ಪೊಲೀಸ್ ಸಿಬ್ಬಂದಿ ಗುರುವಾರ ಐದು ಸ್ಥಳಗಳಲ್ಲಿ ದಾಳಿ ನಡೆಸಿದ್ದರು.

ಈ ವೇಳೆ 14 ಎಕರೆ ಕೃಷಿ ಜಮೀನು, 8 ಮನೆಗಳು, 4 ನಿವೇಶನಗಳು ಸೇರಿ ಒಟ್ಟು ₹25.63 ಕೋಟಿ ಮೌಲ್ಯದ ಸ್ಥಿರಾಸ್ತಿ ಹಾಗೂ ₹92 ಲಕ್ಷ ಮೌಲ್ಯದ ವಾಹನಗಳನ್ನು ಹೊಂದಿದ್ದಾರೆ. ಅಧಿಕಾರಿ ಮತ್ತು ಸಂಬಂಧಿಗಳ ಮನೆಯಲ್ಲಿ ಶೋಧದ ವೇಳೆ ಚಿನ್ನ ಮತ್ತು ಬೆಳ್ಳಿಯ ವಸ್ತುಗಳು ಪತ್ತೆಯಾಗಿಲ್ಲ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಜಾರ್ಜ್ ರಾಜೀನಾಮೆ ವದಂತಿ

ಯತೀಂದ್ರ ಹಸ್ತಕ್ಷೇಪ: ಬಿಜೆಪಿ ಪ್ರಸ್ತಾಪ—ಅಲ್ಲಗಳೆದ ಸಚಿವ

ಪ್ರಜಾವಾಣಿ ವಾರ್ತೆ

ಕೆ.ಜೆ.ಜಾರ್ಜ್

ಬೆಂಗಳೂರು: ಇಂಧನ ಸಚಿವ ಕೆ.ಜೆ. ಜಾರ್ಜ್ ರಾಜೀನಾಮೆ ನೀಡಿದ್ದಾರೆ ಎಂಬ ವಿಚಾರ ಗುರುವಾರ ಬೆಳಿಗ್ಗೆ ಸುದ್ದಿ ವಾಹಿನಿಗಳಲ್ಲಿ ಬಿತ್ತರವಾಗಿ, ವಿಧಾನ ಸಭೆಯಲ್ಲಿಯೂ ಪ್ರತಿಧ್ವನಿಸಿತು.

ಈ ವೇಳೆ ಸದನದಲ್ಲಿದ್ದ ಕೆ.ಜೆ. ಜಾರ್ಜ್, ‘ನಾನು ರಾಜೀನಾಮೆ ಕೊಟ್ಟಿಲ್ಲ. ಮುಖ್ಯಮಂತ್ರಿ ಬಗ್ಗೆ ನನಗೆ ಸಂಪೂರ್ಣ ನಂಬಿಕೆಯಿದೆ’ ಎಂದು ಸ್ಪಷ್ಟನೆಯನ್ನೂ ನೀಡಿದರು. ಸದನದ ಹೊರಗೆ ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಸುಳ್ಳು ಸುದ್ದಿ. ಜಾರ್ಜ್ ರಾಜೀನಾಮೆ ಕೊಟ್ಟಿಲ್ಲ’ ಎಂದರು.

ವಿಧಾನಸಭೆ ಕಲಾಪದ ಮಧ್ಯೆ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ವಿ. ಸುನಿಲ್ ಕುಮಾರ್, ‘ಇಂಧನ ಇಲಾಖೆಯಲ್ಲಿ ಮುಖ್ಯಮಂತ್ರಿ ಅವರ ಪುತ್ರ ಯತೀಂದ್ರ ಅವರ ಹಸ್ತಕ್ಷೇಪದಿಂದ ಬೇಸರಗೊಂಡು ಸಚಿವ ಕೆ.ಜೆ. ಜಾರ್ಜ್ ರಾಜೀನಾಮೆ ಕೊಟ್ಟಿದ್ದಾರೆಂದು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಸುದ್ದಿ ಬರುತ್ತಿದೆ. ಈ ಬಗ್ಗೆ ಸಚಿವರೇ ಸ್ಪಷ್ಟನೆ ನೀಡಬೇಕು’ ಎಂದು ಆಗ್ರಹಿಸಿದರು.

ಆಗ ಪ್ರತಿಕ್ರಿಯಿಸಿದ ಜಾರ್ಜ್, ‘ನಾನು ರಾಜೀನಾಮೆ ಕೊಡಲು ಮುಂದಾಗಿದ್ದೇನೆಂದು ಮಾಧ್ಯಮಗಳಲ್ಲಿ ಬರುತ್ತಿದೆ ಎಂದು ಹೇಳಿದ್ದಾರೆ. ನಾನು ಮಾಧ್ಯಮಗಳಿಗೆ ಹೇಳಿದ್ದೇನೆಯೇ’ ಎಂದು ಪ್ರಶ್ನಿಸಿದರು.

▶ 9

ಜಾರ್ಜ್ ಅಸಮಾಧಾನ?

ಇಂಧನ ಇಲಾಖೆಯಲ್ಲಿ ಅಧಿಕಾರಿಗಳ ವರ್ಗಾವಣೆ ವಿಚಾರವಾಗಿ ತಮ್ಮನ್ನು ವಿಶ್ವಾಸಕ್ಕೆ ಪಡೆಯದೆ ಕ್ರಮ ತೆಗೆದುಕೊಳ್ಳಲಾಗಿದೆ. ಯತೀಂದ್ರ ಸಿದ್ದರಾಮಯ್ಯ ಹಸ್ತಕ್ಷೇಪ ಮಾಡುತ್ತಿದ್ದರೆಂದು ಅಸಮಾಧಾನಗೊಂಡು ಮುಖ್ಯಮಂತ್ರಿಗೆ ರಾಜೀನಾಮೆ ಪತ್ರ ನೀಡಲು ಕೆ.ಜೆ. ಜಾರ್ಜ್ ಮುಂದಾಗಿದ್ದರು. ಆಗ ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಮಧ್ಯಪ್ರವೇಶಿಸಿ, ಜಾರ್ಜ್ ಅವರ ಮನವೊಲಿಸಿದರು ಎಂಬ ಚರ್ಚೆ ನಡೆದಿದೆ.

ಈ ವಿಚಾರವಾಗಿ ವಿಧಾನಸೌಧದಲ್ಲಿ ಪ್ರತಿಕ್ರಿಯಿಸಿದ ಪೊನ್ನಣ್ಣ, ‘ಆ ರೀತಿಯದ್ದು ಏನೂ ಆಗಿಲ್ಲ. ರಾಜೀನಾಮೆ ಪ್ರಶ್ನೆಯೇ ಇಲ್ಲ ಎಂದಮೇಲೆ ಸಂಧಾನ ಮಾಡುವ ಪ್ರಶ್ನೆ ಎಲ್ಲಿದೆ? ಮುಖ್ಯಮಂತ್ರಿ ಜೊತೆ ಜಾರ್ಜ್ ಅವರ ಸಂಬಂಧ ಚೆನ್ನಾಗಿದೆ. ಆ ಸಂಬಂಧ ಕೆಡಿಸಲು ವಿರೋಧ ಪಕ್ಷದವರು ಹೀಗೆ ಮಾಡಿರಲೂಬಹುದು’ ಎಂದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಪೊನ್ನಣ್ಣ, ‘ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ ಕೆಲವು ಸಭೆಗಳಿಗೆ ಹಾಜರಾಗಿಲ್ಲವೆಂಬ ಕಾರಣಕ್ಕೆ ನೋಟಿಸ್ ನೀಡಲು ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸೂಚಿಸಿದ್ದರು. ನೋಟಿಸ್‌ಗೆ ಅವರು ಉತ್ತರ ಕೊಟ್ಟಿದ್ದಾರೆ. ಅದು ಮುಗಿದ ಕಥೆ’ ಎಂದರು.

ಆರ್ಥಿಕ ಸಮೀಕ್ಷಾ ವರದಿ: ಅನಿಶ್ಚಿತತೆಗಳ ನಡುವೆಯೇ ಸ್ಥಿರ ಬೆಳವಣಿಗೆಯ ವಿಶ್ವಾಸ

ಮುಂದಿನ ವರ್ಷವೂ ವೇಗದ ಬೆಳವಣಿಗೆ

ನವದೆಹಲಿ (ಪಿಟಿಐ): ಏಪ್ರಿಲ್‌ನಿಂದ ಆರಂಭವಾಗಲಿರುವ ಹೊಸ ಆರ್ಥಿಕ ವರ್ಷದಲ್ಲಿ ಭಾರತದ ಅರ್ಥ ವ್ಯವಸ್ಥೆಯ ಬೆಳವಣಿಗೆ ದರವು ಶೇ 6.8ರಿಂದ ಶೇ 7.2ರ ಮಟ್ಟದಲ್ಲಿ ಇರಲಿದೆ ಎಂದು ಆರ್ಥಿಕ ಸಮೀಕ್ಷೆ ವರದಿ 2025–26 ಅಂದಾಜು ಮಾಡಿದೆ.

ವರದಿಯನ್ನು ಸಂಸತ್ತಿನಲ್ಲಿ ಗುರುವಾರ ಮಂಡಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ವ್ಯಾಪಾರ ವಹಿವಾಟುಗಳಿಗೆ ಹಲವು ಅಡ್ಡಿಗಳು ಎದುರಾಗಿದ್ದರೂ ಭಾರತವು ವಿಶ್ವದಲ್ಲಿ ಅತ್ಯಂತ ವೇಗದ ಬೆಳವಣಿಗೆ ಕಾಣುವ ಪ್ರಮುಖ ಅರ್ಥ ವ್ಯವಸ್ಥೆ ಎಂಬ ಹೆಗ್ಗಳಿಕೆಯನ್ನು ಉಳಿಸಿಕೊಳ್ಳಲಿದೆ ಎಂದು ವರದಿ ಹೇಳಿದೆ.

‘ಈಚಿನ ವರ್ಷಗಳಲ್ಲಿ ಜಾರಿಗೆ ತಂದ ಸುಧಾರಣೆಗಳ ಒಟ್ಟು ಪರಿಣಾಮವಾಗಿ ಮಧ್ಯಮಾವಧಿಯಲ್ಲಿ ಅರ್ಥ ವ್ಯವಸ್ಥೆಯ ಬೆಳವಣಿಗೆ ಸಾಧ್ಯತೆ ಶೇ 7ರ ಸನಿಹಕ್ಕೆ ಬಂದಿದೆ’ ಎಂದು ವರದಿಯು ವಿವರಿಸಿದೆ. ‘ಹೀಗಾಗಿ ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆಗಳು ಮನೆಮಾಡಿದ್ದರೂ, ಆರ್ಥಿಕ ಬೆಳವಣಿಗೆಯು ಸ್ಥಿರವಾಗಿ ಇರುವ ಅಂದಾಜು ಮಾಡಲಾಗಿದೆ’ ಎಂದು ಹೇಳಲಾಗಿದೆ.

ಅಮೆರಿಕ-ಭಾರತ ನಡುವಿನ ವ್ಯಾಪಾರ ಬಿಕ್ಕಟ್ಟು ಶಮನ ಆಗಿಲ್ಲದಿದ್ದರೂ ಜಿಡಿಪಿ ಬೆಳವಣಿಗೆ ವಿಚಾರದಲ್ಲಿ ಆಶಾದಾಯಕ ಚಿತ್ರಣವೊಂದನ್ನು ವರದಿಯು ನೀಡಿದೆ. ಭಾರತದ ಸರಕುಗಳ ಮೇಲೆ ಅಮೆರಿಕವು ಶೇ 50ರಷ್ಟು ಸುಂಕ ವಿಧಿಸಿದೆ.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ವಿವಿಧ ಸುಧಾರಣಾ ಕ್ರಮಗಳ ಮೂಲಕ ಆರ್ಥಿಕತೆಗೆ ಚುರುಕು ನೀಡಲು ಮುಂದಾಗಿದೆ. ಆದಾಯ ತೆರಿಗೆ ಮಿತಿಯನ್ನು ಹೆಚ್ಚಿಸಿದೆ, ಜಿಎಸ್‌ಟಿ ದರ ಇಳಿಕೆ ಮಾಡಿದೆ, ಐರೋಪ್ಯ ಒಕ್ಕೂಟದ ಜೊತೆ ಮಹತ್ವದ ವ್ಯಾಪಾರ ಒಪ್ಪಂದ ಪೂರ್ಣಗೊಳಿಸಿದೆ.

ಅಮೆರಿಕವು ಭಾರತದ ಮೇಲೆ ವಿಧಿಸಿರುವ ಭಾರಿ ಪ್ರಮಾಣದ ಸುಂಕವು ಜಾರಿಯಲ್ಲಿ ಇದ್ದರೂ, ಮುಂದಿನ ಆರ್ಥಿಕ ವರ್ಷದಲ್ಲಿ ಭಾರತದ ಬೆಳವಣಿಗೆ ದರವು ಶೇ 6.2ರಷ್ಟು ಇರಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜು ಮಾಡಿದೆ.

ಅಮೆರಿಕದ ಜೊತೆ ವ್ಯಾಪಾರ ಒಪ್ಪಂದ ಸಂಬಂಧವಾಗಿ ನಡೆಯುತ್ತಿರುವ ಮಾತುಕತೆಯು ಈ ವರ್ಷದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಕೇಂದ್ರದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಅವರು ಸಿದ್ಧಪಡಿಸಿರುವ ಈ ವರದಿಯು ಹೇಳಿದೆ.

ಸ್ವದೇಶಿ ಮಂತ್ರ ಜಪ

ಅಭಿವೃದ್ಧಿ ಹೊಂದಿದ ದೇಶಗಳು ತಂತ್ರಜ್ಞಾನವನ್ನು ನಿರಾಕರಿಸುತ್ತಿರುವ, ತಮ್ಮ ದೇಶದಿಂದ ಆಗುವ ರಫ್ತಿನ ಮೇಲೆ ನಿಯಂತ್ರಣ ವಿಧಿಸುತ್ತಿರುವ ಸಂದರ್ಭದಲ್ಲಿ ‘ಸ್ವದೇಶಿ ತತ್ತ್ವ’ವು ಅಗತ್ಯ ಎಂದು ಸಮೀಕ್ಷಾ ವರದಿ ಪ್ರತಿಪಾದಿಸಿದೆ. ಎಲ್ಲ ಆಮದುಗಳಿಗೆ ಪರ್ಯಾಯ ಸ್ವದೇಶಿ ಉತ್ಪನ್ನ ಕಂಡುಕೊಳ್ಳಲು ಸಾಧ್ಯವಿಲ್ಲ, ಹಾಗೆ ಮಾಡುವ ಅಗತ್ಯವೂ ಇಲ್ಲ. ಆದರೆ, ಜಾಗತಿಕ ಮಟ್ಟದ ವ್ಯಾಪಾರದಲ್ಲಿನ ಸಮಸ್ಯೆಗಳನ್ನು ಎದುರಿಸಲು ಸ್ವದೇಶಿ ಮಂತ್ರವು ಅನಿವಾರ್ಯ ಎಂದು ವರದಿ ಹೇಳಿದೆ.

ರೂಪಾಯಿಯಿಂದ ‘ಸರಿದೂಗಿಸುವ’ ಕೆಲಸ



ರೂಪಾಯಿಯ ಮೌಲ್ಯವು ಭಾರತದ ಅರ್ಥ ವ್ಯವಸ್ಥೆಯ ಮೂಲಭೂತ ಅಂಶಗಳು ಅತ್ಯುತ್ತಮವಾಗಿರುವುದನ್ನು ಪ್ರತಿಫಲಿಸುತ್ತಿಲ್ಲ. ಅಪಮೌಲ್ಯಗೊಂಡಿರುವ ಕರೆನ್ಸಿಯು ಅಮೆರಿಕದ ಸುಂಕ ಏರಿಕೆಯ ಪರಿಣಾಮವನ್ನು ಒಂದು ಹಂತದವರೆಗೆ ಸರಿದೂಗಿಸುವ ಕೆಲಸ ಮಾಡುತ್ತಿದೆ ಎಂದು ಸಮೀಕ್ಷೆಯ ವರದಿಯಲ್ಲಿ ವಿವರಿಸಲಾಗಿದೆ.

ಆರ್ಥಿಕ, ತಾಂತ್ರಿಕ ಸಾಮರ್ಥ್ಯ ಪರಿಗಣಿಸದೆ ಕಾಮಗಾರಿಯ ಹೊಣೆ: ಸಿಎಜಿ

‘ಎತ್ತಿನಹೊಳೆ: ಅನರ್ಹರಿಗೆ ಗುತ್ತಿಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ಮತ್ತು ತಾಂತ್ರಿಕ ಸಾಮರ್ಥ್ಯ ಇಲ್ಲದ ಏಳು ಗುತ್ತಿಗೆದಾರರಿಗೆ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಶೇ 67ರಷ್ಟು ಕಾಮಗಾರಿಗಳನ್ನು ನೀಡಿದ್ದರಿಂದಲೇ ಅನುಷ್ಠಾನ ವಿಳಂಬವಾಗಿದೆ ಎಂದು ಮಹಾಲೇಖಪಾಲರ ವರದಿ ಹೇಳಿದೆ.

ವಿಧಾನಸಭೆಯಲ್ಲಿ ಗುರುವಾರ ಮಂಡಿಸಲಾದ ‘ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದ ಮೇಲಿನ ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆ’ ವರದಿಯಲ್ಲಿ ಈ ಆಕ್ಷೇಪ ಎತ್ತಲಾಗಿದೆ.

₹14,805 ಕೋಟಿ ಮೊತ್ತದ 18 ಕಾಮಗಾರಿಗಳನ್ನು ಏಳು ಕಂಪನಿಗಳಿಗೆ, ಒಂದೇ ಕಂಪನಿಗೆ ₹5,216 ಕೋಟಿ ಮೊತ್ತದ 11 ಕಾಮಗಾರಿಗಳ ಗುತ್ತಿಗೆಯನ್ನು ನಿಯಮ ಉಲ್ಲಂಘಿಸಿ ನೀಡಲಾಗಿದೆ ಎಂದು ಸಿಎಜಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಯಾರಿಗೆಲ್ಲಾ ಗುತ್ತಿಗೆ...

ಗುತ್ತಿಗೆದಾರ ಕಂಪನಿ	ಕಾಮಗಾರಿಗಳ ಸಂಖ್ಯೆ	ಮೊತ್ತ (ಕೋಟಿಗಳಲ್ಲಿ)
ಡಿ.ವೈ.ಉಪ್ಪಾರ್ ಅಂಡ್ ಸನ್ಸ್	2	₹1,026.71
ಜಿ.ಶಂಕರ್	7	₹2,349.26
ಮೇಘಾ ಎಂಜಿನಿಯರಿಂಗ್ ಇನ್‌ಫ್ರಾಸ್ಟ್ರಕ್ಚರ್ ಲಿ.	3	₹3,004
ಶಂಕರ್ ನಾರಾಯಣ್ ಕನ್‌ಸ್ಟ್ರಕ್ಷನ್ ಲಿಮಿಟೆಡ್	11	₹5,216
ಜಿವಿಪಿಆರ್ ಎಂಜಿನಿಯರ್ಸ್ ಲಿಮಿಟೆಡ್	2	₹1,036
ಪಿಎಲ್‌ಆರ್ ಪ್ರಾಜೆಕ್ಟ್ಸ್	2	₹1,169
ಬಿಎಸ್‌ಆರ್‌ಐಐಎಲ್	2	₹1,004

ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 16, ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ 9 ಮತ್ತು ಹಿಂದಿನ ಬಿಜೆಪಿ ಸರ್ಕಾರದಲ್ಲಿ 4 ಕಾಮಗಾರಿಗಳ ಗುತ್ತಿಗೆ ನೀಡಲಾಗಿದೆ.

ಪ್ರಮಾಣಿತ ಟೆಂಡರ್ ದಾಖಲೆಗಳನ್ನು ಅಳವಡಿಸಿಕೊಳ್ಳದೆ ಕಾಮಗಾರಿಗಳ ಗುತ್ತಿಗೆಯನ್ನು ತರಾತುರಿಯಲ್ಲಿ ನೀಡಲಾಗಿದೆ. ಗುತ್ತಿಗೆ ನೀಡುವಾಗ ಗುತ್ತಿಗೆದಾರರ ಆರ್ಥಿಕ ಸಾಮರ್ಥ್ಯವನ್ನು ಪರಿಗಣಿಸಿಲ್ಲ. ಪರಿಣಾಮವಾಗಿ ಗುತ್ತಿಗೆದಾರರು ಹಣಕಾಸನ್ನು ಹೊಂದಿಸಿಕೊಳ್ಳಲಾಗದೆ ಕಾಮಗಾರಿಗಳನ್ನು ವಿಳಂಬ ಮಾಡಿದ್ದಾರೆ ಎಂದು ಸಿಎಜಿ ಹೇಳಿದೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ

ಡಿಪಿಆರ್ ಸಿದ್ಧಪಡಿಸುವುದರಿಂದ ಆರಂಭವಾಗಿ, ಕಾಮಗಾರಿ ಗುತ್ತಿಗೆ ನೀಡುವಲ್ಲಿಯೂ ಗುತ್ತಿಗೆದಾರರಿಗೆ ತಾಂತ್ರಿಕ ಪರಿಣತಿ ಇಲ್ಲದಿರುವುದನ್ನು ಮತ್ತು ಅನನುಭವವನ್ನು ಕಡೆಗಣಿಸಲಾಗಿದೆ. ಹೀಗಾಗಿ ಯೋಜನೆಯ ವಿನ್ಯಾಸವನ್ನು ಪದೇ ಪದೇ ಬದಲಿಸಬೇಕಾಯಿತು. ಜತೆಗೆ ಕೆಲವು ಕಾಮಗಾರಿಗಳು ಸಂಪೂರ್ಣ ವ್ಯರ್ಥವಾದವು ಎಂದು ವರದಿಯಲ್ಲಿ ವಿವರಿಸಿದೆ.

ಜೆಜೆಎಂ: 169 ಕಡೆ ಅಕ್ರಮ ಪತ್ತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಜಲ ಜೀವನ್ ಮಿಷನ್ ಯೋಜನೆಯಡಿ ಕರ್ನಾಟಕದಲ್ಲಿ 169 ಅಕ್ರಮಗಳು ನಡೆದಿರುವ ಬಗ್ಗೆ ವರದಿ ಬಂದಿದೆ’ ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ತಿಳಿಸಿದರು.

ಲೋಕಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಪ್ರಶ್ನೆಗೆ ಉತ್ತರಿಸಿದ ಅವರು, ‘ಈ ಮಿಷನ್ ಅಡಿಯಲ್ಲಿ ಕಾಮಗಾರಿ ನಡೆಸಲು ರಾಜ್ಯ ಸರ್ಕಾರಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತದೆ. ರಾಜ್ಯ ಸರ್ಕಾರಗಳು ಟೆಂಡರ್ ಕರೆದು ಯೋಜನಾ ವರದಿಗಳನ್ನು ಸಿದ್ಧಪಡಿಸುತ್ತವೆ. ಕಾಮಗಾರಿ ಪ್ರಗತಿಯ ವರದಿಯನ್ನು ಸಚಿವಾಲಯಕ್ಕೆ ಸಲ್ಲಿಸುತ್ತವೆ. ಅಕ್ರಮ ನಡೆದಲ್ಲಿ ರಾಜ್ಯ ಸರ್ಕಾರವೇ ಕ್ರಮ ಕೈಗೊಳ್ಳಬೇಕಿದೆ. ಕರ್ನಾಟಕದ ಪ್ರಕರಣಗಳ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿದೆ’ ಎಂದರು.

ಯೋಜನೆಯ ಅನುಷ್ಠಾನದಲ್ಲಿ ಅಕ್ರಮಗಳು ನಡೆದಿರುವ ಬಗ್ಗೆ ದೂರುಗಳು ದಾಖಲಾಗಿರುವುದರಿಂದ ದೇಶದಾದ್ಯಂತ 4,000ಕ್ಕೂ ಹೆಚ್ಚು ಜನರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದರು. ಕಳಪೆ ಗುಣಮಟ್ಟದ ಕೆಲಸ, ಆರ್ಥಿಕ ಅಕ್ರಮ ಮತ್ತು ಅಸಮರ್ಪಕ ನೀರು ಸರಬರಾಜು ಆಗಿರುವ ಬಗ್ಗೆ ದೂರುಗಳು ಬಂದಿದ್ದವು ಎಂದರು.

‘ಈ ಯೋಜನೆಯಡಿ ಕರ್ನಾಟಕಕ್ಕೆ ಇಲ್ಲಿಯವರೆಗೆ ₹28,623 ಕೋಟಿ ಹಂಚಿಕೆ ಮಾಡಲಾಗಿದೆ. ಇದರಲ್ಲಿ ₹11,760 ಕೋಟಿಯನ್ನು ರಾಜ್ಯಕ್ಕೆ ಬಿಡುಗಡೆ ಮಾಡಲಾಗಿದೆ. ರಾಜ್ಯ ಸರ್ಕಾರವು ₹11,097 ಕೋಟಿ ಬಳಸಿದೆ. ₹688 ಕೋಟಿಯನ್ನು ಇನ್ನಷ್ಟೇ ಬಳಸಬೇಕಿದೆ’ ಎಂದು ಅವರು ಮಾಹಿತಿ ನೀಡಿದರು.

ಗೋವಿಂದ ಕಾರಜೋಳ, ‘ಚಿತ್ರದುರ್ಗ ಜಿಲ್ಲೆಯಲ್ಲಿನ ಅಕ್ರಮಗಳ ಕುರಿತು ಕರ್ನಾಟಕ ಸರ್ಕಾರವು ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ನನ್ನ ಸಂಸದೀಯ ಕ್ಷೇತ್ರದ ಅನೇಕ ಗ್ರಾಮಗಳಲ್ಲಿ ನಾನು ವೈಯಕ್ತಿಕವಾಗಿ ತಪಾಸಣೆ ನಡೆಸಿದ್ದು, ಶೇ 82.25 ಮನೆಗಳಲ್ಲಿ ನಲ್ಲಿ ಸಂಪರ್ಕಗಳನ್ನು ಸರಿಯಾಗಿ ಒದಗಿಸಲಾಗಿಲ್ಲ’ ಎಂದು ದೂರಿದರು.

‘ಚಿತ್ರದುರ್ಗ ಜಿಲ್ಲೆಯಲ್ಲಿ ಸಂಪೂರ್ಣ ಪರಿಶೀಲನೆ ನಡೆಸಲು ಮತ್ತು ಕ್ಷೇತ್ರದ ಎಲ್ಲ ಮನೆಗಳಿಗೆ ಸುರಕ್ಷಿತ ಮತ್ತು ಗುಣಮಟ್ಟದ ಕುಡಿಯುವ ನೀರಿನ ಪೂರೈಕೆ ಖಚಿತಪಡಿಸಿಕೊಳ್ಳಲು ತಾಂತ್ರಿಕ ತಜ್ಞರ ತಂಡ ರಚಿಸಬೇಕು’ ಎಂದು ಅವರು ಆಗ್ರಹಿಸಿದರು.

ಅಂಕಿ ಅಂಶಗಳು

- **1.01 ಕೋಟಿ** ರಾಜ್ಯದಲ್ಲಿ ಒಟ್ಟು ಮನೆಗಳು
- **87 ಲಕ್ಷ** ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ
- **86.56%** ರಾಜ್ಯದಲ್ಲಿ ಜೆಜೆಎಂ ಪ್ರಗತಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

ಥಾಮಸ್ ಕುಕ್‌ನಿಂದ 'ಟ್ರಾವೆಲ್ ಮೇಳ'

ಬೆಂಗಳೂರು: ಥಾಮಸ್ ಕುಕ್ ಇಂಡಿಯಾ ಲಿಮಿಟೆಡ್ ಆಯೋಜಿಸುವ 'ಟ್ರಾವೆಲ್ ಮೇಳ'ವು ನಗರದಲ್ಲಿ ಶನಿವಾರ ಮತ್ತು ಭಾನುವಾರ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ನಡೆಯಲಿದೆ.

ರಾಜಾಜಿನಗರದ ಶೆರಾಟನ್ ಗ್ರ್ಯಾಂಡ್ ಹೋಟೆಲ್ ಹಾಗೂ ವಿಟ್ಠಲ ಮಲ್ಯ ಆಸ್ಪತ್ರೆಯ ಎದುರಿನ ಐಬಿಸ್ ಸೆಂಟ್ರಲ್ ಹೋಟೆಲ್‌ನಲ್ಲಿ ಈ ಮೇಳ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕೈಲಾಸ-ಮಾನಸ ಸರೋವರ ಯಾತ್ರೆ, ಚಾರ್ ಧಾಮ್ ಯಾತ್ರೆ, ಕಾಶಿ-ಅಯೋಧ್ಯೆ ಯಾತ್ರೆ ಸೇರಿದಂತೆ ಹಲವು ಯಾತ್ರೆಗಳ ಬಗ್ಗೆ ಮಾಹಿತಿ ಒದಗಿಸಲಾಗುತ್ತದೆ. ಯೂರೋಪ್, ಅಮೆರಿಕ, ದಕ್ಷಿಣ ಅಮೆರಿಕ, ಕೆನಡಾ, ದುಬೈ, ಥಾಯ್ಲೆಂಡ್, ಸಿಂಗಪುರ, ಬಾಲಿ, ಆಸ್ಟ್ರೇಲಿಯಾ ಸೇರಿದಂತೆ ವಿವಿಧ ದೇಶಗಳ ಪ್ರವಾಸದ ಬಗ್ಗೆ ಮಾಹಿತಿ ಇರಲಿದೆ.

ಕಾರ್ಯಕ್ರಮದ ವೇಳೆ ಪ್ರವಾಸ ತಜ್ಞರಿಂದ ಮಾರ್ಗದರ್ಶನ, ವಿಶೇಷ ಕೊಡುಗೆಗಳ ಮಾಹಿತಿ ಸಿಗಲಿದೆ. ಹೆಚ್ಚಿನ ಮಾಹಿತಿಗೆ ಅಶೋಕ ಸೋಮಯಾಜಿ (99640 27269), ಪಾಂಡುರಂಗ (96209 99066) ಅವರನ್ನು ಸಂಪರ್ಕಿಸಬಹುದು.

PLAYSIMPLE

ಪ್ಲೇಸಿಂಪಲ್ ಗೇಮ್ಸ್ ಪ್ರೈವೇಟ್ ಲಿಮಿಟೆಡ್

ಕಾರ್ಪೊರೇಟ್ ಐಡೆಂಟಿಟಿ ನಂಬರ್ (ಸಿಐಎನ್): U72900KA2014PTC077406
ನೋಂದಾಯಿತ ಕಛೇರಿ: ಆಂಜನೇಯ ಟೆಕ್ನೊ ಪಾರ್ಕ್ ನಂ. 147, ಕೋಡಿಹಳ್ಳಿ,
ಎಚ್‌ಎಎಲ್ ಓಲ್ಡ್ ಏರ್‌ಪೋರ್ಟ್ ರೋಡ್, ಬೆಂಗಳೂರು – 560 008, ಕರ್ನಾಟಕ, ಭಾರತ.
ದೂರವಾಣಿ ಸಂಖ್ಯೆ: 080 40923927
ಇಮೇಲ್: hello@playsimple.in । ವೆಬ್‌ಸೈಟ್: https://playsimple.in/

ಶೇರುದಾರರಿಗೆ ಸಾಮಾನ್ಯ ಸೂಚನೆ
(ಕಂಪನಿ ಕಾಯ್ದೆ, 2013 ರ ಸೆಕ್ಷನ್ 201 ರ ನಿಬಂಧನೆಗಳಿಗೆ ಅನುಸಾರವಾಗಿ)

ಈ ಮೂಲಕ ನೀಡುತ್ತಿರುವ ಸೂಚನೆ ಎಂದರೆ, ಶ್ರೀಯುತ ಶ್ರೀ ಯೋವ್ ಎಕರ್ (DIN: 11411545) ಇವರನ್ನು ಡಿಸೆಂಬರ್ 31, 2025 ರಿಂದ ಐದು (5) ವರ್ಷಗಳ ಅವಧಿಗೆ ಕಂಪನಿಯ ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಎಂದು ನೇಮಕ ಮಾಡುವ ಬಗ್ಗೆ ಕಂಪನಿಯ ನಿರ್ದೇಶಕರ ಮಂಡಳಿ ಹಾಗೂ ಸದಸ್ಯರು ಡಿಸೆಂಬರ್ 8, 2025 ರಂದು ನಡೆದ ಸಭೆಗಳಲ್ಲಿ ಅನುಮೋದಿಸಿರುತ್ತಾರೆ. ಇದಕ್ಕೆ ಕಂಪನಿಯು, ಕಂಪನಿಗಳ ಕಾಯಿದೆ (ಕಾಯಿದೆ) ಸೆಕ್ಷನ್ 196 ನ್ನು ಸದರಿ ಕಾಯಿದೆಯ ಶೆಡ್ಯೂಲ್ V ರ ಭಾಗ–1 ಜೊತೆ ಓದಿಕೊಂಡಂತೆ, ಮತ್ತು ಸದರಿ ಕಾಯಿದೆಯಲ್ಲಿನ ಅನ್ವಯವಾಗುವ ಇತರ ನಿಬಂಧನೆಗಳು ಮತ್ತು ಅದರ ಅಡಿಯಲ್ಲಿ ಮಾಡಿರುವ ನಿಯಮಗಳ ಅಡಿಯಲ್ಲಿ, ಕೇಂದ್ರ ಸರ್ಕಾರದ (ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ) ಅನುಮತಿಯನ್ನು ಕೋರುತ್ತ ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 196 ರ ಪ್ರಕಾರ ಅರ್ಜಿಯನ್ನು ಸಲ್ಲಿಸಲು ಉದ್ದೇಶಿಸಿದೆ.

ನಿರ್ದೇಶಕರ ಮಂಡಳಿಯ ಆದೇಶದಂತೆ
ಪ್ಲೇಸಿಂಪಲ್ ಗೇಮ್ಸ್ ಪ್ರೈವೇಟ್ ಲಿಮಿಟೆಡ್‌ಗಾಗಿ
ಸಹಿ/–
ಮಿಲಿಂದ್ ದಿಗಂಬರ್ ಕುಲಾಬ್ಕರ್
ಡೈರೆಕ್ಟರ್
ಡಿಐಎನ್: 08644643

ಸ್ಥಳ: ಬೆಂಗಳೂರು
ದಿನಾಂಕ: 29–01–2026

ಪುರಸಭಾ ಕಾರ್ಯಾಲಯ ಚಂದಾಪುರ

ಸ್ವಚ್ಛ ಭಾರತ

ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–560099
ಫೋನ್: 080–27832411, E-Mail: itstaff_ulb_chandapura@yahoo.com

ಸಂ:ಚಂ.ಪು/ಟೆ.ಪ್ರ/18/2025–26 ದಿನಾಂಕ:29.01.2026

ಟೆಂಡರ್ ಪ್ರಕಟಣೆ

ಚಂದಾಪುರ ಪುರಸಭೆ ವ್ಯಾಪ್ತಿಯಲ್ಲಿ ವಾರ್ಡ್ ನಂ. 01 ರಿಂದ 12 ವರೆಗೆ ಉತ್ಪತ್ತಿಯಾಗುತ್ತಿರುವ ಹಸಿಕಸ, ಒಣಕಸ ಮತ್ತು ನಿಸತ್ವ ತ್ಯಾಜ್ಯವನ್ನು ವಿಲೇವಾರಿ ಮಾಡುವ ಸಂಬಂಧ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕಕ್ಕೆ ಸಾಗಿಸಲು ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಈಗಾಗಲೇ ಕೆಲಸ ನಿರ್ವಹಿಸುತ್ತಿರುವ ನೊಂದಾಯಿತ ಏಜೆನ್ಸಿ/ ಗುತ್ತಿಗೆದಾರರು, ತಮ್ಮ ಕನಿಷ್ಠ ದರಪಟ್ಟಿಯನ್ನು ಈ ಕಛೇರಿಗೆ **ದಿನಾಂಕ : 12–02–2026 ರಂದು ಸಮಯ ಸಂಜೆ 04:30 ಗಂಟೆಯೊಳಗೆ** ಮುದ್ದಾಂ/ಟಪಾಲಿನಲ್ಲಿ ಸಲ್ಲಿಸತಕ್ಕದ್ದು, ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ನಿಗಧಿತ ದಿನಾಂಕದ ಒಳಗೆ ಸಲ್ಲಿಸಬೇಕು, ಅವಧಿ ಮುಗಿದ ನಂತರ ಬರುವ ದರಪಟ್ಟಿಗಳನ್ನು ಮಾನ್ಯತೆ ನೀಡಲಾಗುವುದಿಲ್ಲ. ಹೆಚ್ಚಿನ ಮಾಹಿತಿ/ವಿವರಕ್ಕಾಗಿ ಆರೋಗ್ಯ ಶಾಖೆಯನ್ನು (e-mail:Ka.chandapura.tmc@gmail.com) ಸಂಪರ್ಕಿಸತಕ್ಕದ್ದು.

ಸಹಿ/–
ಮುಖ್ಯಾಧಿಕಾರಿ
ಪುರಸಭೆ, ಚಂದಾಪುರ

ವಾಸಾಸಂಇ/ವಾಪ್ರ/ಜಿಎ/5274/2025–26

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ,
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ನಂ. 55, 4ನೇ ಮಹಡಿ, ರಿಸಲ್ದಾರ್ ಬೀದಿ, ಶೇಷಾದ್ರಿಪುರಂ, ಬೆಂಗಳೂರು – 560020.
ದೂರವಾಣಿ: 080–23567718 ಇ–ಮೇಲ್: knbnr1@gmail.com

ಸಂಖ್ಯೆ: ಕಾ.ಇಂ/ಯೋ.ವಿ/ಬೆಂ.ಗ್ರಾ/ತಾಂತ್ರಿಕ/2025–26 ದಿನಾಂಕ: 28–01–2026

ಸೇವಾ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ, **ಕಾರ್ಯಪಾಲಕ ಇಂಜಿನಿಯರ್ ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ** ಕಛೇರಿಯಿಂದ ಈ ಕೆಳಕಂಡ ಸೇವೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದ್ವಿ–ಲಕೋಟೆಯಲ್ಲಿ **ಮಾಸಿಕ ಬಾಡಿಗೆ ದರದ ಆಧಾರದ ಮೇಲೆ ವಾಹನಗಳ ಪೂರೈಕೆ** ಟೆಂಡರ್‌ನ್ನು ಕರೆದಿದ್ದು, ಟೆಂಡರ್ ವೇಳಾಪಟ್ಟಿಯ ವಿವರಗಳು ಈ ಕೆಳಕಂಡಂತಿವೆ.

ವಾಹನದ ವಿಧ	ಮಾಸಿಕ ದರ (ಸ.ಆ.ಸಂ: ಸಿಆಸುಇ 30 ಶಿವಾನಿ 2019 ಬೆಂಗಳೂರು, ದಿ: 22.08.2023)	ಅಗತ್ಯವಿರುವ ಅಂದಾಜು ವಾಹನಗಳ ಸಂಖ್ಯೆ	ವಾಹನದ ಮಾದರಿ	ಇ.ಎಮ್.ಡಿ ಮೊತ್ತ
ಅ) ಹವಾನಿಯಂತ್ರಿತ ವಾಹನ ಮಾಸಿಕ 2500 ಕಿ.ಮೀ ಅಥವಾ 300 ಗಂಟೆಗಳು. (ಸ್ವಿಫ್ಟ್‌ಡಿಸೈರ್/ಇಟಿಯೋಸ್/ಬೊಲೆರೊ (ಡಿಸೇಲ್/ಪೆಟ್ರೋಲ್/ಸಿಎನ್‌ಜಿ/ವಿದ್ಯುತ್)	ರೂ. 40,000/- + Taxes	01	2020 ರ ನಂತರ	ಪ್ರತಿ ವಾಹನಕ್ಕೆ ರೂ.5,000/– (ಐದು ಸಾವಿರ ರೂಪಾಯಿಗಳು ಮಾತ್ರ)
ಆ) 2500 ಕಿ.ಮೀ ನಂತರ ಪ್ರತಿ ಕಿ.ಮೀ ಗೆ	ರೂ.12/- + Taxes			
ಇ) 300 ಗಂಟೆಗಳ ನಂತರ ಪ್ರತಿ ಗಂಟೆಗೆ	ರೂ.150/- + Taxes			

ಟೆಂಡರ್ ಪ್ರಕ್ರಿಯೆಯ ವಿವರಗಳು ಕೆಳಕಂಡಂತಿವೆ

1	ಟೆಂಡರ್ ಪ್ರಕಟಣೆ ದಿನಾಂಕ	28.01.2026
2	ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಲಭ್ಯವಾಗುವ ದಿನಾಂಕ	28.01.2026
3	ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ	11.02.2026, 16.00 ಗಂಟೆವರೆಗೆ
4	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	12.02.2026, 16.30 ಗಂಟೆಗೆ
5	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ	18.02.2026, 10.30 ಗಂಟೆಗೆ ಅಥವಾ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ

ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: https://kppp.karnataka.gov.in ಗೆ ಭೇಟಿ ನೀಡಿ.
ಸಹಿ/– ಕಾರ್ಯಪಾಲಕ ಇಂಜಿನಿಯರ್ (ಪ್ರಭಾರ),
ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು.

ವಾಸಾಸಂಇ/ವಾ.ಪ್ರ/5266/ ಅಡ್ವಟೋರ್/2025–26

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ
ದೇವನಹಳ್ಳಿ, ಕರ್ನಾಟಕ–562164, ದೂ: 080–29916308

ಇ–ಟೆಂ.ಪ್ರ.ಸಂ.: ಹೆಚ್‌ಎಸ್‌ಎಫ್‌ಸಿ/ಸಿಎಂಜಿ/2(10)/ಎಂಇಸಿಹೆಚ್/165/2025–26 ದಿ: 29.01.2026

ಸಂಕ್ಷಿಪ್ತ ಇ–ಟೆಂಡರ್ ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗೆ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ದೇವನಹಳ್ಳಿಯಲ್ಲಿರುವ ಇಂಟೆಗ್ರೇಷನ್ ಮತ್ತು ಚೆಕ್‌ಔಟ್ ಫೆಸಿಲಿಟಿ (ಐಸಿಎಫ್), ಎಚ್‌ಎಸ್‌ಎಫ್‌ಸಿ ಇಲ್ಲಿಗೆ ಇಒಟಿ ಕ್ರೇನ್‌ಗಳ ವಿನ್ಯಾಸ, ಸರಬರಾಜು, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾಚರಣೆಗೊಳಿಸುವಿಕೆ.
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ. 394.22 ಲಕ್ಷಗಳು.
ಪೂರ್ಣಗೊಳಿಸುವ ಕಾಲಾವಧಿ (ಕೆಲಸದ ಆದೇಶ ಪತ್ರ ನೀಡಿದ ದಿನಾಂಕದಿಂದ 15ನೇ ದಿನದಿಂದ ಪರಿಗಣಿಸಲಾಗುತ್ತದೆ).	(10) ಹತ್ತು ತಿಂಗಳು.
ಟೆಂಡರ್ ದಸ್ತಾವೇಜಿಗೆ ಕೋರಿಕೆ ಸಲ್ಲಿಸುವ ಅವಧಿ	30.01.2026, 11:00 ಗಂಟೆಯಿಂದ 22.02.2026, 23:30 ಗಂಟೆವರೆಗೆ.
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	30.01.2026, 11:10 ಗಂಟೆಯಿಂದ 22.02.2026, 23:59 ಗಂಟೆವರೆಗೆ.
ಬಿಡ್ ಸ್ಪಷ್ಟೀಕರಣಕ್ಕೆ ಅವಧಿ	30.01.2026, 11:30 ಗಂಟೆಯಿಂದ 23.02.2026, 10:30 ಗಂಟೆವರೆಗೆ.
ಬಿಡ್ ಸ್ಪಷ್ಟೀಕರಣಕ್ಕೆ ಪ್ರತಿಕ್ರಿಯೆ ನೀಡಲು ಕೊನೆಯ ದಿನಾಂಕ	24.02.2026, 17:00 ಗಂಟೆವರೆಗೆ.
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	25.02.2026, 10:30 ಗಂಟೆವರೆಗೆ.
ಟೆಂಡರ್‌ಗಳನ್ನು ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	25.02.2026, 11:00 ಗಂಟೆಗೆ
ಇಎಂಡಿ	ರೂ. 7,88,440/–

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಟೆಂಡರ್ ಆಹ್ವಾನದ ವಿವರವಾದ ದ್ವಿಭಾಷೆ (ಹಿಂದಿ/ಇಂಗ್ಲಿಷ್) ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www. isro.gov.in ರಲ್ಲಿ ಪರಿವೀಕ್ಷಿಸಬಹುದು. ಹೆಚ್ಚಿನ ವಿವರಗಳಿಗೆ ಮತ್ತು ಟೆಂಡರ್ ದಸ್ತಾವೇಜುಗಳ ಖರೀದಿಗೆ www.tenderwizard.com/ISRO ಗೆ ಭೇಟಿ ನೀಡುವುದು.

ಸಹಿ/– ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

'2033ರವರೆಗೆ 2ನೇ ವಿಮಾನ ನಿಲ್ದಾಣ ಇಲ್ಲ'

ಸಂಸದ ಪಿ.ಸಿ.ಮೋಹನ್ ಪ್ರಶ್ನೆಗೆ ಲೋಕಸಭೆಯಲ್ಲಿ ಕೇಂದ್ರದ ಉತ್ತರ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 25 ವರ್ಷ ತುಂಬುವವರೆಗೆ (2033ರ ವರೆಗೆ) ಬೆಂಗಳೂರಿನಲ್ಲಿ ಹೊಸ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಅವಕಾಶ ಇಲ್ಲ' ಎಂದು ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ಮುರಳೀಧರ ಮೊಹೊಲ್ ಸ್ಪಷ್ಟಪಡಿಸಿದರು.

ಲೋಕಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಅವರು, 'ಕೆಂಪೇಗೌಡ ವಿಮಾನ ನಿಲ್ದಾಣದ 150 ಕಿ.ಮೀ. ವೈಮಾನಿಕ ವ್ಯಾಪ್ತಿಯಲ್ಲಿ ಮೈಸೂರು ಹಾಗೂ ಹಾಸನ ವಿಮಾನ ನಿಲ್ದಾಣ ಹೊರತುಪಡಿಸಿ ಬೇರೆ ವಿಮಾನ ನಿಲ್ದಾಣಗಳ ನಿರ್ಮಾಣಕ್ಕೆ ಅನುಮತಿ ಇಲ್ಲ ಎಂದು ಈ ಹಿಂದೆಯೇ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದರು.

'ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ನೀತಿ 2008ರ ಪ್ರಕಾರ, ಅಸ್ತಿತ್ವದಲ್ಲಿರುವ ನಾಗರಿಕ ವಿಮಾನ ನಿಲ್ದಾಣದಿಂದ 150 ಕಿಲೋಮೀಟರ್‌ಗಳ ವೈಮಾನಿಕ ಅಂತರದೊಳಗೆ ಸಾಮಾನ್ಯವಾಗಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣ ಅಭಿವೃದ್ಧಿಗೆ ಅನುಮತಿ ನೀಡುವುದಿಲ್ಲ. ಆದಾಗ್ಯೂ, ಅಸ್ತಿತ್ವದಲ್ಲಿರುವ ವಿಮಾನ ನಿಲ್ದಾಣಗಳ ಮೇಲೆ ಅದರ ಪರಿಣಾಮ ಪರಿಶೀಲಿಸಿದ ನಂತರ, ಪ್ರಕರಣದಿಂದ ಪ್ರಕರಣಕ್ಕೆ ಅನುಗುಣವಾಗಿ ಅನುಮತಿಸಲು ಅವಕಾಶವಿದೆ' ಎಂದರು.

'ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧೀನದ ವಿಮಾನ ನಿಲ್ದಾಣಗಳ ವ್ಯಾಪ್ತಿಯಲ್ಲಿ ಹೊಸ ವಿಮಾನ ನಿಲ್ದಾಣಕ್ಕೆ ಅನುವು ಮಾಡಿಕೊಟ್ಟರೆ ಪ್ರಾಧಿಕಾರಕ್ಕೆ ಕೇಂದ್ರ/ ರಾಜ್ಯ ಸರ್ಕಾರ ಅಥವಾ ವಿಮಾನ ನಿಲ್ದಾಣ ಅಭಿವೃದ್ಧಿಪಡಿಸುವವರು ಪರಿಹಾರ ನೀಡಬೇಕು ಎಂಬ ನಿಯಮ ಇದೆ. ಆದರೆ, ಅಸ್ತಿತ್ವದಲ್ಲಿರುವ ವಿಮಾನ ನಿಲ್ದಾಣದ ಪ್ರಯಾಣಿಕರ ದಟ್ಟಣೆ ಗರಿಷ್ಠ ಮಟ್ಟ ತಲುಪಿದ್ದರೆ ಮಾತ್ರ ಈ ನಿಯಮ ಅನ್ವಯವಾಗುತ್ತದೆ. ಪರಿಹಾರಕ್ಕೆ ಪರ್ಯಾಯವಾಗಿ, ಹೊಸ ವಿಮಾನ ನಿಲ್ದಾಣದಲ್ಲಿ ಶೇ 26ರಿಂದ ಶೇ 49ರ ವರೆಗೆ ಪಾಲು ನೀಡಲು ಅವಕಾಶ ಇದೆ' ಎಂದು ಅವರು ಮಾಹಿತಿ ನೀಡಿದರು.

ಕೆಐಎಎಲ್‌ನಲ್ಲಿ ಎಂಆರ್‌ಒ ಘಟಕ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಏರ್ ಇಂಡಿಯಾ ಹಾಗೂ ಇಂಡಿಗೊ ಕಂಪನಿಗಳು ₹1460 ಕೋಟಿ ಹಾಗೂ ₹1100 ಕೋಟಿ ವೆಚ್ಚದಲ್ಲಿ ಎಂಆರ್‌ಒ (ಎಂಜಿನ್‌ಗಳ ನಿರ್ವಹಣೆ ಹಾಗೂ ದುರಸ್ತಿ) ಘಟಕ ಸ್ಥಾಪಿಸುತ್ತಿವೆ ಎಂದು ಸಚಿವರು ತಿಳಿಸಿದರು.

ಕರ್ನಾಟಕ – ಗೋವಾ ಎನ್‌ಸಿಸಿ ನಿರ್ದೇಶನಾಲಯಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಶಿಬಿರದಲ್ಲಿ (ಆರ್‌ಡಿಸಿ -2026) ಕರ್ನಾಟಕ- ಗೋವಾ ಎನ್‌ಸಿಸಿ ನಿರ್ದೇಶನಾಲಯವು ಸತತ 2ನೇ ಬಾರಿಗೆ ಚಾಂಪಿಯನ್ ಆಗಿ ಹೊರಹೊಮ್ಮಿದ್ದು, ಪ್ರಧಾನಮಂತ್ರಿ ಬ್ಯಾನರ್ ಮತ್ತು ಟ್ರೋಫಿ ಪಡೆದಿದೆ.

ಸ್ಪರ್ಧೆಯಲ್ಲಿ ದೇಶದ 17 ನಿರ್ದೇಶನಾಲಯಗಳು ಭಾಗವಹಿಸಿದ್ದವು. ಅತ್ಯುತ್ತಮ ಪಥಸಂಚಲನ, ಫೈರಿಂಗ್ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಅಸಾಧಾರಣ ಪ್ರದರ್ಶನ ನೀಡಿ ಪ್ರಶಸ್ತಿಗೆ ಭಾಜನವಾಯಿತು. ವರ್ಷವಿಡೀ ಎನ್‌ಸಿಸಿ ಚಟುವಟಿಕೆಗಳಲ್ಲಿ ಬಹುವಿಧದ ಕಾರ್ಯಕ್ಷಮತೆಯನ್ನು ಪ್ರದರ್ಶಿಸುವ ನಿರ್ದೇಶನಾಲಯಕ್ಕೆ ರಕ್ಷಣಾ ಸಚಿವಾಲಯದಿಂದ ಪ್ರಧಾನಮಂತ್ರಿಗಳ ಬ್ಯಾನರ್‌ಮತ್ತುಟ್ರೋಫಿನೀಡಲಾಗುತ್ತದೆ.

ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯವು ಅಂತರ ನಿರ್ದೇಶನಾಲಯ ಶೂಟಿಂಗ್ ಚಾಂಪಿಯನ್ ಶಿಪ್, ವಾಯುಪಡೆ ಸೈನಿಕ ಶಿಬಿರ, ನೌಕಾಪಡೆ ಸೈನಿಕ ಶಿಬಿರ, ಐಡಿಯಾ ಮತ್ತು ಇನೋವೇಷನ್ ಸ್ಪರ್ಧೆ ಮತ್ತು ಆರ್‌ಡಿಸಿ -2026 ಸೇರಿದಂತೆ ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿ ಸತತವಾಗಿ ಮೊದಲ ಸ್ಥಾನ ಗಳಿಸುತ್ತಾ ಬಂದಿದೆ.

ನವದೆಹಲಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಪರೇಡ್ ಮೈದಾನದಲ್ಲಿ ಬುಧವಾರ ನಡೆದ ಸಮಾರೋಪ ಸಮಾರಂಭದಲ್ಲಿ ಪ್ರಧಾನಮಂತ್ರಿಗಳ ಬ್ಯಾನರ್ ಪ್ರಶಸ್ತಿಯನ್ನು ಕರ್ನಾಟಕ ಮತ್ತು ಗೋವಾ ಎನ್‌ಸಿಸಿ ನಿರ್ದೇಶನಾಲಯದ ಉಪ ಮಹಾನಿರ್ದೇಶಕ ಏರ್ ಕಮಾಂಡರ್ ಎಸ್.ಬಿ. ಅರುಣ್ ಕುಮಾರ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಪ್ರದಾನ ಮಾಡಿದರು.

ಪ್ರಧಾನಮಂತ್ರಿಗಳ ಬ್ಯಾನರ್ ಪ್ರಶಸ್ತಿಯನ್ನು ಕರ್ನಾಟಕ ಮತ್ತು ಗೋವಾ ಎನ್‌ಸಿಸಿ ನಿರ್ದೇಶನಾಲಯದ ಉಪ ಮಹಾನಿರ್ದೇಶಕ ಏರ್ ಕಮಾಂಡರ್ ಎಸ್.ಬಿ. ಅರುಣ್ ಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಂದ ಸ್ವೀಕರಿಸಿದರು

'ಜಯನಗರ: ಮರು ಮತ ಎಣಿಕೆ ವಿಶ್ವಾಸ'

ಪ್ರಜಾವಾಣಿ ವಾರ್ತೆ

ಆನೇಕಲ್: ಜಯನಗರ ವಿಧಾನಸಭೆ ಚುನಾವಣೆಯಲ್ಲಿನ ಷಡ್ಯಂತ್ರದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಲಾಗಿತ್ತು. ಪ್ರಕರಣದ ವಿಚಾರಣೆಗೆ ತಡೆಕೋರಿ ಪ್ರತಿಸ್ಪರ್ಧಿಗಳು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ನ್ಯಾಯಾಲಯದ ತೀರ್ಪಿನಿಂದಾಗಿ ಮರು ಎಣಿಕೆ ನಡೆಯುವ ವಿಶ್ವಾಸವಿದೆ ಎಂದು ಜಯನಗರ ವಿಧಾನಸಭಾ ಕ್ಷೇತ್ರದ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ ಅವರು ಗುರುವಾರ ಹೇಳಿದರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562101
ದೂರವಾಣಿ ಸಂಖ್ಯೆ: ಕಛೇರಿ: 08156–295427,
ಫ್ಯಾಕ್ಸ್: 08156–295427 ಇಮೇಲ್-eemidcbpura@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 24/2025–26, ದಿನಾಂಕ: 29/01/2026

ಸಂಖ್ಯೆ: ಕಾಸಬ/ಸ.ನೀ ಮತ್ತು ಅ.ಅ.ವಿ/ಚಿ.ಪುರ/ತಾಂಶಾ/ತಾಂಸ/ಟೆಂಡರ್ ಪ್ರಕಟಣೆ/176/2025–26 ದಿ:29.01.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಕೆಡಬ್ಲ್ಯೂ– 1 ಮತ್ತು 2 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 4702 ವಿಶೇಷ ಘಟಕ ಯೋಜನೆ ಮತ್ತು 4702 ಗಿರಿಜನ ಉಪ ಯೋಜನೆ ಅಡಿಯಲ್ಲಿ ಟೆಂಡರ್ ಕರೆಯಲಾಗಿದೆ. ಪ್ರತೀ ಕಾಮಗಾರಿಗೆ ನಿಗಧಿ ಅಂದಾಜು ಮೊತ್ತ ರೂ. 7.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp. karnataka.gov.in ನಲ್ಲಿ ದಿನಾಂಕ: 29/01/2026ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ (Upload) ದಿನಾಂಕ: 06/02/2026 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09/02/2026 ರ ಬೆಳಿಗ್ಗೆ 11:00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ:ಬಿಡಿಎ/ಕಾಅ/ಮಾರುಕಟ್ಟೆಗಳು/ಟೆಂಡರ್/ಟಿ–687/2025–26 ದಿನಾಂಕ:29.01.2026

ಟೆಂಡರ್‌ಗಳಿಗೆ ಆಹ್ವಾನ (ಐಎಫ್‌ಟಿ)
(ಜಿಓಕೆ ಕೆಪಿಪಿಪಿ ಪ್ಲಾಟ್‌ಫಾರಂ https://kppp.karnataka.gov.in ಮೂಲಕ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪಿಪಿಪಿ (ಡಿಬಿಎಫ್‌ಒಟಿ) ಮಾದರಿಯಡಿಯಲ್ಲಿ **ರಿಯಾಯಿತಿ ನಿಯಮಗಳ ಮೇಲೆ ಬೆಂಗಳೂರಿನ ಮಲ್ಲೇಶ್ವರಂ, ಸಂಪಿಗೆ ರಸ್ತೆಯಲ್ಲಿರುವ ಮಲ್ಲೇಶ್ವರಂ ಮಾರುಕಟ್ಟೆ ಸಂಕೀರ್ಣದಲ್ಲಿ ವಾಣಿಜ್ಯ ಸೌಲಭ್ಯದ ನಿರ್ವಹಣೆಗಾಗಿ ಟೆಂಡರ್ ಆಹ್ವಾನಿಸಿದೆ.** (ಇಂಡೆಂಟ್ ಸಂಖ್ಯೆ: ಬಿಡಿಎ/ 2025–26/ಎಸ್‌ಇ0092).

ಟೆಂಡರ್ ವೇಳಾಪಟ್ಟಿ ಈ ಕೆಳಕಂಡಂತಿದೆ: (1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜು ಲಭ್ಯವಿರುವ **ದಿನಾಂಕ: 29.01.2026.** (2) ಟೆಂಡರ್ ಪ್ರೀ–ಬಿಡ್ ವಿಚಾರಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು **ಸಮಯ: 02.02.2026, ಮಧ್ಯಾಹ್ನ 3.00 ಗಂಟೆ.** (3) ಟೆಂಡರ್ ಪ್ರೀ–ಬಿಡ್ ಸಭೆ ದಿನಾಂಕ ಮತ್ತು **ಸಮಯ: 03.02.2026, ಮಧ್ಯಾಹ್ನ 3.00 ಗಂಟೆ.** (4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **02.03.2026, ಸಂಜೆ 4.00 ಗಂಟೆ.** (5) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **03.03.2026, ಸಂಜೆ 4.30 ಗಂಟೆಯ ನಂತರ.**

ಆಸಕ್ತಿಯುಳ್ಳ ಬಿಡ್ಡುದಾರರು ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ರಲ್ಲಿ ಪರಿವೀಕ್ಷಿಸಬಹುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ದಯವಿಟ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾರುಕಟ್ಟೆ ವಿಭಾಗವನ್ನು ಸಂಪರ್ಕಿಸುವುದು.

ಸೂಚನೆ: ಟೆಂಡರ್ ದಸ್ತಾವೇಜನ್ನು ಯಾವುದೇ ಕಾರಣದಿಂದಾಗಿ ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವಲ್ಲಿ ವಿಳಂಬವಾದರೆ, ಪರಿಷ್ಕೃತ/ಮಾರ್ಪಡಿಸಿದ ಟೆಂಡರ್ ವೇಳಾಪಟ್ಟಿಯನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಾರುಕಟ್ಟೆ ವಿಭಾಗ, ಬಿಡಿಎ, ಬೆಂಗಳೂರು.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ
ದೇವನಹಳ್ಳಿ, ಕರ್ನಾಟಕ–562164, ದೂ: 080–29916308

ಇ–ಟೆಂ.ಪ್ರ.ಸಂ.: ಹೆಚ್‌ಎಸ್‌ಎಫ್‌ಸಿ/ಸಿಎಂಜಿ/2(10)/ಎಂಇಸಿಹೆಚ್/166/2025–26 ದಿ: 29.01.2026

ಸಂಕ್ಷಿಪ್ತ ಇ–ಟೆಂಡರ್ ಆಹ್ವಾನ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗೆ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ದೇವನಹಳ್ಳಿಯಲ್ಲಿರುವ ಇಂಟೆಗ್ರೇಷನ್ ಮತ್ತು ಚೆಕ್‌ಔಟ್ ಫೆಸಿಲಿಟಿ (ಐಸಿಎಫ್), ಎಚ್‌ಎಸ್‌ಎಫ್‌ಸಿ ಇಲ್ಲಿಗೆ ಮೋಟಾರೀಕೃತ ಸ್ಟೀಲ್ ಸ್ಲೈಡಿಂಗ್ ಬಾಗಿಲುಗಳ ವಿನ್ಯಾಸ, ಸರಬರಾಜು,ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾಚರಣೆಗೊಳಿಸುವಿಕೆ.
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ. 228.83 ಲಕ್ಷಗಳು.
ಪೂರ್ಣಗೊಳಿಸುವ ಕಾಲಾವಧಿ (ಕೆಲಸದ ಆದೇಶ ಪತ್ರ ನೀಡಿದ ದಿನಾಂಕದಿಂದ 15ನೇ ದಿನದಿಂದ ಪರಿಗಣಿಸಲಾಗುತ್ತದೆ).	(10) ಹತ್ತು ತಿಂಗಳು.
ಟೆಂಡರ್ ದಸ್ತಾವೇಜಿಗೆ ಕೋರಿಕೆ ಸಲ್ಲಿಸುವ ಅವಧಿ	30.01.2026, 11:00 ಗಂಟೆಯಿಂದ 22.02.2026, 23:30 ಗಂಟೆವರೆಗೆ.
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	30.01.2026, 11:10 ಗಂಟೆಯಿಂದ 22.02.2026, 23:59 ಗಂಟೆವರೆಗೆ.
ಬಿಡ್ ಸ್ಪಷ್ಟೀಕರಣಕ್ಕೆ ಅವಧಿ	30.01.2026, 11:30 ಗಂಟೆಯಿಂದ 23.02.2026, 10:30 ಗಂಟೆವರೆಗೆ.
ಬಿಡ್ ಸ್ಪಷ್ಟೀಕರಣಕ್ಕೆ ಪ್ರತಿಕ್ರಿಯೆ ನೀಡಲು ಕೊನೆಯ ದಿನಾಂಕ	24.02.2026, 17:00 ಗಂಟೆವರೆಗೆ.
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	25.02.2026, 10:30 ಗಂಟೆವರೆಗೆ.
ಟೆಂಡರ್‌ಗಳನ್ನು ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	25.02.2026, 11:00 ಗಂಟೆಗೆ
ಇಎಂಡಿ	ರೂ. 4,57,660/-

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಟೆಂಡರ್ ಆಹ್ವಾನದ ವಿವರವಾದ ದ್ವಿಭಾಷೆ (ಹಿಂದಿ/ಇಂಗ್ಲಿಷ್) ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www. isro.gov.in ರಲ್ಲಿ ಪರಿವೀಕ್ಷಿಸಬಹುದು. ಹೆಚ್ಚಿನ ವಿವರಗಳಿಗೆ ಮತ್ತು ಟೆಂಡರ್ ದಸ್ತಾವೇಜುಗಳ ಖರೀದಿಗೆ www.tenderwizard.com/ISRO ಗೆ ಭೇಟಿ ನೀಡುವುದು.

ಸಹಿ/– ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

PUBLIC NOTICE

The general public are hereby informed that my client has entered into an agreement for purchase of the Immovable Property described in the Schedule hereunder from its owners **MR. SAIF UR REHMAN,** aged about 33 years, Son of Mr. H.S. Abdul Hafeez Sayeed, **MRS. B. N. HASEENA,** aged about 64 years, Wife of Mr. H.S. Abdul Hafeez Sayeed, **MR. HABEEB UR REHMAN,** aged about 43 years, Son of Mr. H.S. Abdul Hafeez Sayeed and **MR. H.S. ABDUL HAFEEZ SAYEED,** aged about 70 years, Son of Late Mr. H.S. Shaik Habeeb, all are residing at Al-Habeeb, Shankar Mutt Road, K.R. Puram, Hassan-573205. Any person/s having any claim/rights/ interest over the Schedule Property or any objections for said sale of the property, may file their objections in writing, along with supporting documents viz. Agreements, JDA, GPA, MOU & other contract agreements, addressed to the undersigned **within 7 days** from the date of publication of this Notice, failing which, it shall be construed that there are no claims of any sort over the said property and my client shall be advised to proceed with the purchase.

SCHEDULE PROPERTY

ALL THAT Piece & Parcel of Property bearing **E Khata No.1924763538, Property No. 417/1 & 2, (BDA Site No.417), BBMP PID No.68-6-417/1 & 2,** the layout formed by the BDA, situated at **Koramangala Extension, 4th Block, 100 Feet Road,** Bengaluru-560095, presently comes under the jurisdiction of BBMP, now Greater Bangalore Pradikara Ward No.151-Koramangala, measuring **East to West 120 Feet** and **North to South 80 Feet,** totally measuring an extent of 9600 square feet, and bounded on the

East by : Vacant Property,
West by : 100 Feet Road,
North by : Site No.418,
South by : Site No.416.

Mr. K.B. Thippe Swamy, Advocate,
#22, LS-25, 1st Floor, SSB Mattada Complex, Tank Bund Road, Blr-560009.
Ph: 98867 52289;
e-mail : kbtswamy1996@gmail.com

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು, ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ **"ಷೆಡ್ಯೂಲ್ ಪ್ರಾಪರ್ಟಿ"** ಎನ್ನಲಾಗುವ ಸ್ಥಿರಾಸ್ತಿಯನ್ನು, ಸ್ವತ್ತಿನ ಪ್ರಸಕ್ತ ಮಾಲೀಕರಾಗಿರುವ **ಶ್ರೀ. ನಾರಾಯಣ ರೆಡ್ಡಿ,** ವಯಸ್ಸು ಸುಮಾರು 57 ವರ್ಷ, ಬಿನ್ ಲೇಟ್ ಮುನಯ್ಯ (ಮುನಿಯಪ್ಪ / ಮುನಿರೆಡ್ಡಿ), ವಿಳಾಸ ನಂ. 62, ಕೊಮ್ಮಸಂದ್ರ, ಬೆಂಗಳೂರು – 562 125 ಮತ್ತು **ಶ್ರೀಮತಿ. ಪ್ರಫುಲ್ಲಾ ಕೆ ಎನ್,** ವಯಸ್ಸು ಸುಮಾರು 26 ವರ್ಷ, ಬಿನ್ ಶ್ರೀ. ನಾರಾಯಣ ರೆಡ್ಡಿ, ವಿಳಾಸ ನಂ. 45, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್, ಲಕ್ಷ್ಮಿನಾರಾಯಣಪುರ, ಹುಸ್ಕೂರ್, ಬೆಂಗಳೂರು – 560 099 (ಇಲ್ಲಿ ಇನ್ನುಮುಂದೆ **"ಮಾಲೀಕರು"** ಎನ್ನಲಾಗುತ್ತದೆ) ಇವರಿಂದ ಖರೀದಿಸಲು ಉದ್ದೇಶಿಸಿದ್ದು, ಸದರಿ ಮಾಲೀಕರು, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ತಾವೇ ಸಂಪೂರ್ಣ ಮತ್ತು ಏಕಮಾತ್ರ ಮಾಲೀಕರಾಗಿದ್ದೇವೆ ಹಾಗೂ ಸ್ವತ್ತಿನ ಮೇಲೆ ಅನಿರ್ಭಂದಿತ ಹಸ್ತಕ್ಷೇಪರಹಿತ ಹಕ್ಕು ಬಾಧ್ಯತೆಗಳನ್ನು ಹೊಂದಿರುತ್ತೇವೆ, ಎಂದು ನಮ್ಮ ಕಕ್ಷಿದಾರರ ಎದುರು ಪ್ರತಿಪಾದಿಸಿರುತ್ತಾರೆ.

ಆದ್ದರಿಂದ, ಈ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ, ಯಾವುದೇ ಸರ್ಕಾರಿ ಸಂಸ್ಥೆ, ಶಾಸನಬದ್ಧ ಪ್ರಾಧಿಕಾರ, ಅಭಿವೃದ್ಧಿ ಅಂಗಗಳು ಸೇರಿದಂತೆ, ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿ, ಸಂಘ, ಸಂಸ್ಥೆಗಳು (ಸಾಂಸ್ಥಿಕ ಅಥವಾ ಸಾಂಸ್ಥಿಕವಲ್ಲದ):

(I) ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಯು ವಲಯ/ಭೂಬಳಕೆ ಬದಲಾವಣೆ, ರಸ್ತೆ ವಿಸ್ತರಣೆ ಮತ್ತು/ಅಥವಾ ಭೂಸ್ವಾಧೀನ ಕುರಿತಂತೆ ಯಾವುದೇ ಕ್ಲೇಮ್‌ಗಳನ್ನು, ಅಧಿಸೂಚನೆಗಳನ್ನು, ಅಥವಾ ನಡಾವಳಿಗಳನ್ನು ಹೊರಡಿಸಿದ್ದಲ್ಲಿ ಅಥವಾ ಯಾವುದೇ ಕ್ಲೇಮ್‌ಗಳನ್ನು, ಅಧಿಸೂಚನೆಗಳನ್ನು, ಅಥವಾ ನಡಾವಳಿಗಳನ್ನು ಹೊರಡಿಸುವ ಪ್ರಸ್ತಾವಣೆಯನ್ನು ಹೊಂದಿದ್ದಲ್ಲಿ; ಮತ್ತು/ಅಥವಾ

(ii) ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿ ಮೇಲೆ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಬಾಕಿ ವ್ಯಾಜ್ಯ, ಟೆನನ್ಸಿ, ಅಡಮಾನ, ಚಾರ್ಜ್, ಲೀನ್ ಅಥವಾ ಡಿಮಾಂಡ್ ಅಥವಾ ಇನ್ನ್ಯಾವುದೇ ಸ್ವರೂಪದ ಯಾವುದೇ ಇನ್ನಿತರ ಹಿತಾಸಕ್ತಿ ಹೊಂದಿದ್ದಲ್ಲಿ;

ಅಂತಹವರು, ಸದರಿ ಪ್ರಕಣೆಯ ದಿನಾಂಕದಿಂದ **15 (ಹದಿನೈದು)** ದಿನಗಳೊಳಗೆ, ಅಂತಹ ತಮ್ಮ ಕ್ಲೇಮ್, ಅಧಿಸೂಚನೆ ಅಥವಾ ನಡಾವಳಿಯ ವಿವರಗಳನ್ನು, ಎಲ್ಲಾ ಅಗತ್ಯ ದಾಖಲಾತಿಗಳ ಸಮೇತ, ಕೆಳಕಂಡ ಸಹಿದಾರರ ಗಮನಕ್ಕೆ ಸಲ್ಲಿಸುವುದು, ಇದಕ್ಕೆ ತಪ್ಪಿದಲ್ಲಿ, ನಮ್ಮ ಕಕ್ಷಿದಾರರು ಉದ್ದೇಶಿಸಿರುವ ತಮ್ಮ ವ್ಯವಹಾರ ಒಪ್ಪಂದವನ್ನು ಮಾಡಿಕೊಂಡು, ವಹಿವಾಟು ಪೂರ್ಣಗೊಳಿಸಿ ಷೆಡ್ಯೂಲ್ ಪ್ರಾಪರ್ಟಿಯನ್ನು ತಮ್ಮ ಸ್ವಾಧೀನಕ್ಕೆ ಪಡೆದುಕೊಳ್ಳಲು ಸಂಪೂರ್ಣ ಸ್ವತಂತ್ರರಾಗುತ್ತಾರೆ. ಮೇಲೆ ತಿಳಿಸಲಾಗಿರುವ ನಿರ್ದಿಷ್ಟ ಅವಧಿಯು ಪೂರ್ಣಗೊಂಡ ಬಳಿಕ ಸಂದಾಯವಾಗುವ ಯಾವುದೇ ಆಕ್ಷೇಪಣೆಗಳನ್ನಾಗಲಿ ಮತ್ತು/ಅಥವಾ ಕ್ಲೇಮ್‌ಗಳನ್ನಾಗಲಿ ಪರಿಗಣಿಸಲಾಗುವುದಿಲ್ಲ ಮತ್ತು ಅವುಗಳು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂದಗಳನ್ನು ರೂಪಿಸಲಾರವು.

ಷೆಡ್ಯೂಲ್ ಪ್ರಾಪರ್ಟಿ

ಕೊಮ್ಮಸಂದ್ರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ವಿಳಾಸದ ಸರ್ವೆ ನಂ. 157/5 ರಲ್ಲಿ ಸ್ಥಿತಗೊಂಡಿರುವ, ಸುಮಾರು 27 ಗುಂಟಾ ವಿಸ್ತೀರ್ಣವುಳ್ಳ ಕೃಷಿ ಭೂಮಿಯ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:

ಪೂರ್ವಕ್ಕೆ : ಹೆಡ್ ಸ್ಟಾರ್ಟ್ ಎಜುಕೇಶನಲ್ ಟ್ರಸ್ಟ್‌ನ ಜಮೀನು;
ಪಶ್ಚಿಮಕ್ಕೆ : ಗೋಪಾಲರೆಡ್ಡಿಯವರ ಜಮೀನು;
ಉತ್ತರಕ್ಕೆ: : ಹೆಡ್ ಸ್ಟಾರ್ಟ್ ಎಜುಕೇಶನಲ್ ಟ್ರಸ್ಟ್‌ನ ಜಮೀನು; ಮತ್ತು
ದಕ್ಷಿಣಕ್ಕೆ : ಹೆಡ್ ಸ್ಟಾರ್ಟ್ ಎಜುಕೇಶನಲ್ ಟ್ರಸ್ಟ್‌ನ ಜಮೀನು.

ದಿನಾಂಕ: 30.01.2026
ಸ್ಥಳ: ಬೆಂಗಳೂರು

ಮಹೇಶ್ ಮದನ್ ಭಟ್, ವಕೀಲರು
ಎಂಎಂಬಿ ಲೀಗಲ್
634, 2ನೇ ಮಹಡಿ, 5ನೇ ಅಡ್ಡರಸ್ತೆ
4ನೇ ಬ್ಲಾಕ್, ಕೋರಮಂಗಲ
ಬೆಂಗಳೂರು – 560 034.
ಫೋನ್: 91–80–4128 4444 / 4128 5555.
ಇ–ಮೇಲ್: mahesh@mmblegal.in

ರೈತರಿಗೆ ಆರೋಗ್ಯ ವೆಚ್ಚದ ಚೆಕ್ ವಿತರಣೆ

ಯಲಹಂಕ ಕ್ಷೇತ್ರದ ರಾಜಾನುಕುಂಟೆಯ ಹಾಲು ಒಕ್ಕೂಟದ ಶಿಬಿರ ಕಚೇರಿಯಲ್ಲಿ ಬುಧವಾರ ಅನಾರೋಗ್ಯಕ್ಕೆ ತುತ್ತಾದ 35 ಹಾಲು ಉತ್ಪಾದಕ ರೈತರಿಗೆ ಪರಿಹಾರದ ಚೆಕ್‌ಗಳನ್ನು ವಿತರಿಸಲಾಯಿತು

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜಾನುಕುಂಟೆಯಲ್ಲಿರುವ ಬೆಂಗಳೂರು ಹಾಲು ಒಕ್ಕೂಟದ ಶಿಬಿರ ಕಚೇರಿಯಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅನಾರೋಗ್ಯಕ್ಕೆ ತುತ್ತಾದ 35 ಹಾಲು ಉತ್ಪಾದಕ ರೈತರಿಗೆ ಪರಿಹಾರದ ಚೆಕ್‌ಗಳನ್ನು ವಿತರಿಸಲಾಯಿತು.

ಬೆಂಗಳೂರು ಹಾಲು ಒಕ್ಕೂಟದ ವತಿಯಿಂದ ಆರೋಗ್ಯ ವೆಚ್ಚದ ₹25 ಸಾವಿರ ಚೆಕ್‌ಗಳನ್ನು ಒಕ್ಕೂಟದ ನಿರ್ದೇಶಕ ಸತೀಶ್ ಕಡತನಮಲೆ ಅವರು ವಿತರಿಸಿದರು.

ಬಳಿಕ ಮಾತನಾಡಿದ ಅವರು, 'ಹಾಲು ಉತ್ಪಾದಕ ರೈತರು ತಮ್ಮ ಮತ್ತು ರಾಸುಗಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಹಾಲು ಉತ್ಪಾದಕರು ಮತ್ತು ರಾಸುಗಳ ಉತ್ತಮ ಆರೋಗ್ಯಕ್ಕೆ ಅಗತ್ಯ ಸಹಕಾರ, ನೆರವು ನೀಡಲು ಪ್ರಾಮಾಣಿಕವಾಗಿ ಶ್ರಮಿಸಲಾಗುವುದು' ಎಂದು ಭರವಸೆ ನೀಡಿದರು.

ಇದೇ ವೇಳೆ ರಾಜಾನುಕುಂಟೆ ಶಿಬಿರ ಕಚೇರಿಯ ವ್ಯವಸ್ಥಾಪಕ ಪ್ರಸನ್ನ ಸೇರಿದಂತೆ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಹಾಲು ಉತ್ಪಾದಕ ರೈತರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಚನ್ನಪಟ್ಟಣ ಯೋಜನಾ ಪ್ರಾಧಿಕಾರ
ನಂ. 2850. ಮೊದಲನೇ ಮಹಡಿ, ಚರ್ಚ್ ಸ್ಟ್ರೀಟ್, ರಾಜಾಕೆಂಪೇಗೌಡ ಬಡಾವಣೆ, ಚನ್ನಪಟ್ಟಣ–562160

ಸಂಖ್ಯೆ: ಚಯೋಪ್ರಾ/ಭೂಉಬ/04/2025–26 ದಿನಾಂಕ: 27.01.2026

ಸಾರ್ವಜನಿಕ ಪ್ರಕಟಣೆ

ಚನ್ನಪಟ್ಟಣ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಧ್ಯಂತರ ಮಹಾಯೋಜನೆಗೆ ಸರ್ಕಾರದ ಆದೇಶ ದಿನಾಂಕ: 24.10.2013 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ, ಅರ್ಜಿದಾರರು ಈ ಕೆಳಕಂಡ ಜಮೀನಿನ ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರೂ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಚನ್ನಪಟ್ಟಣ ಯೋಜನಾ ಪ್ರಾಧಿಕಾರ ಚನ್ನಪಟ್ಟಣ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಪಾಪಣ್ಣ ಬಿನ್ ಲೇ॥ ತಿಮ್ಮೇಗೌಡ	ಚನ್ನಪಟ್ಟಣ	ವಿರೂಪಾಕ್ಷಿಪುರ	ಇಗ್ಗಲೂರು	239/3	0–13	ವ್ಯವಸಾಯ	ವಾಣಿಜ್ಯ (ಶೈಕ್ಷಣಿಕ)
					ಒಟ್ಟು	0–13		

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ಶೈಕ್ಷಣಿಕ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಅನುಕೂಲವಾಗುತ್ತದೆ ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ. ಶೈಕ್ಷಣಿಕ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುತ್ತದೆ ಎಂಬುದಾಗಿ ಸಾರ್ವಜನಿಕ ಹಿತಾಸಕ್ತಿ ವ್ಯಕ್ತಪಡಿಸಿ ಸದರಿ ಪ್ರದೇಶವನ್ನು **'ವ್ಯವಸಾಯ ವಲಯದಿಂದ ಶೈಕ್ಷಣಿಕ ವಲಯ'**ಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛೆಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು
ಚನ್ನಪಟ್ಟಣ ಯೋಜನಾ ಪ್ರಾಧಿಕಾರ, ಚನ್ನಪಟ್ಟಣ.

DIPR/BSD/599/SA/2025-26

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಲ್.ಆರ್.ಡಿ.ಇ ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560052,
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ: STRRPA/TP/CLU/148/2025-26 ದಿನಾಂಕ: 28.01.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ"** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	2	3	4	5	6	7	8	9
1	ಶ್ರೀ ಸಿ. ಚೇತನ್ ಕುಮಾರ್ ಬಿನ್ ಚನ್ನಪ್ಪ ಮತ್ತು ಶ್ರೀ ಚಂದ್ರಶೇಕರ್.ಕೆ ಬಿನ್ ಕೃಷ್ಣಪ್ಪ ಹೆಗಡೆ., ಜುಟ್ಟನಹಳ್ಳಿ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು.	ದೇವನಹಳ್ಳಿ	ಕಸಬಾ	ಲಕ್ಷ್ಮೀಪುರ	44/3	02–15½	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ವಸತಿ ಉದ್ದೇಶಕ್ಕೆ ಅಭಿವೃದ್ಧಿ ಪಡಿಸುವುದರಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು ಉದ್ಯಾನವನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ. ಕಾನೂನು ಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ. ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ'** ವಲಯದಿಂದ **'ವಸತಿ'** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛೆಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR)
ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/5280/ಶಿರಡಿ ಸಾಯಿ/2025–26

ಚಿಟಿಕೆ ಸುದ್ದಿ

ಗಾಂಧಿ ಕೃತಿ ಶತಮಾನೋತ್ಸವ ಇಂದು

ಬೆಂಗಳೂರು: ಜನಮುಖಿ ಶೋಷಿತರ ಪರವಾದ ವೇದಿಕೆಯು ಇದೇ 30ರಂದು ಬೆಳಿಗ್ಗೆ 10.30ಕ್ಕೆ ಸರ್ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಮಹಾತ್ಮ ಗಾಂಧೀಜಿ ಅವರ 'ನನ್ನ ಸತ್ಯಾನ್ವೇಷಣೆ' ಕೃತಿಯ ಶತಮಾನೋತ್ಸವ ಹಾಗೂ ಹುತಾತ್ಮ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಅಧ್ಯಕ್ಷ ಕೆ. ನಾರಾಯಣ ಸ್ವಾಮಿ, 'ಸಾಮಾಜಿಕ ಜಾಲತಾಣದಲ್ಲಿ ಗಾಂಧೀಜಿ ಅವರ ಬಗ್ಗೆ ನಕಾರಾತ್ಮಕ ಅಂಶಗಳನ್ನು ಹರಡಲಾಗುತ್ತಿದೆ. ಅವರ ಬಗ್ಗೆ ಉಂಟು ಮಾಡುತ್ತಿರುವ ವಿರೋಧ ಭಾವನೆ ಹೋಗಲಾಡಿಸಿ, ಯುವಜನರಲ್ಲಿ ಗಾಂಧಿಪ್ರಜ್ಞೆ ಜಾಗೃತಗೊಳಿಸುವುದು ಕಾರ್ಯಕ್ರಮದ ಉದ್ದೇಶ' ಎಂದು ತಿಳಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಸಚಿವರಾದ ಎಚ್‌.ಸಿ. ಮಹದೇವಪ್ಪ, ಸಂತೋಷ್ ಲಾಡ್, ಮುಖ್ಯ ಸಚೇತಕ ಸಲೀಂ ಅಹ್ಮದ್, ಮಾಜಿ ಶಾಸಕ ಜಾನ್ ರಿಚರ್ಡ್ ಲೋಬೋ ಭಾಗವಹಿಸಲಿದ್ದಾರೆ. ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದರು.

ವೇದಿಕೆಯ ಪ್ರಧಾನ ಕಾರ್ಯದರ್ಶಿ ಎಂ. ರಘುನಂದನ, ಖಜಾಂಚಿ ಪಿ.ಬಿ. ಜಯಕೃಷ್ಣ ಉಪಸ್ಥಿತರಿದ್ದರು.

ಫೆ.1ಕ್ಕೆ ಬ್ಯಾರಿ ಕೂಟ

ಬೆಂಗಳೂರು: ನಗರದಲ್ಲಿರುವ ಬ್ಯಾರಿ ಸಮುದಾಯದವರನ್ನು ಒಂದೆಡೆ ಸೇರಿಸುವ ಉದ್ದೇಶದಿಂದ ಬ್ಯಾರಿಸ್ ಸೆಂಟ್ರಲ್ ಕಮಿಟಿ ಫೆ.1ರಂದು ಬೆಳಿಗ್ಗೆ 10 ಗಂಟೆಗೆ ಅರಮನೆ ಮೈದಾನದ ಶೃಂಗಾರ್ ಪ್ಯಾಲೇಸ್‌ನಲ್ಲಿ 'ಬ್ಯಾರಿ ಕೂಟ' ಹಮ್ಮಿಕೊಂಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಶಬೀರ್ ಬ್ರಿಗೇಡ್, 'ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುತ್ತಿರುವ ಸಮುದಾಯದ ಬಡ ವಿದ್ಯಾರ್ಥಿಗಳಿಗೆ ಒಟ್ಟು ₹ 10 ಲಕ್ಷ ವಿದ್ಯಾರ್ಥಿ ವೇತನವನ್ನು ಕಾರ್ಯಕ್ರಮದಲ್ಲಿ ವಿತರಿಸಲಾಗುತ್ತದೆ. ಆಂಬುಲೆನ್ಸ್‌ಗೆ ಕೂಡ ಚಾಲನೆ ನೀಡಲಾಗುತ್ತದೆ. ಸಮುದಾಯದ ಮಕ್ಕಳು, ಮಹಿಳೆಯರು ಹಾಗೂ ಯುವಜನರಿಗೆ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

'ಬ್ಯಾರಿ ಕವಿಗೋಷ್ಠಿ, ಬ್ಯಾರಿ ಸಂಸ್ಕೃತಿ ಪ್ರತಿಬಿಂಬಿಸುವ 'ಒಪ್ಪನೆ ಪಾಟ್', ಬ್ಯಾರಿ ಕಲೆ ಬಿಂಬಿಸುವ ಎಕ್ಸ್‌ಪೋ, ಕರಾವಳಿಯ ತಿಂಡಿ–ತಿನಿಸುಗಳ ಆಹಾರ ಮೇಳ, ಉದ್ಯಮ ಸಮಾವೇಶ ಸೇರಿದಂತೆ ಸಮುದಾಯದವರಿಗೆ ವಿವಿಧ ಚಟುವಟಿಕೆಗಳು ಇರಲಿವೆ' ಎಂದರು.

ಸಮಿತಿಯ ಪ್ರಧಾನ ಕಾರ್ಯದರ್ಶಿ ನಾಸಿರ್ ಕೆಂಪಿ, ಉಪಾಧ್ಯಕ್ಷ ಗಫೂರ್, ಕೋಶಾಧಿಕಾರಿ ರಿಫಾಯಿ, ಸಂಘಟನಾ ಕಾರ್ಯದರ್ಶಿ ಅಥಾವುಲ್ಲ ಪೂಂಜಾಲಕಟ್ಟೆ ಮತ್ತಿತರರು ಉಪಸ್ಥಿತರಿದ್ದರು.

ಮತದಾರರ ಅಹವಾಲಿಗೆ 'ಬುಕ್ ಎ ಕಾಲ್'

ಬೆಂಗಳೂರು: ಮತದಾರರು ತಮ್ಮ ವ್ಯಾಪ್ತಿಯ ಮತಗಟ್ಟೆ ಅಧಿಕಾರಿಗಳಿಂದ ಮತದಾರರ ಪಟ್ಟಿ ಬಗೆಗಿನ ಅಹವಾಲುಗಳಿಗೆ ಉತ್ತರ ಪಡೆಯಲು 'ಬುಕ್ ಎ ಕಾಲ್' ಪರಿಚಯಿಸಲಾಗಿದೆ.

ಕೇಂದ್ರ ಚುನಾವಣಾ ಆಯೋಗದ ಅಂತರ್ಜಾಲದಲ್ಲಿ (eci.in) ವೋಟರ್ ಸರ್ವಿಸ್ ಪೋರ್ಟಲ್‌ನಲ್ಲಿ 'ಬುಕ್ ಎ ಕಾಲ್ ಟು ಬಿಎಲ್‌ಒ' ನಲ್ಲಿ 'ಕಾಲ್ ರಿಕ್ವೆಸ್ಟ್ ಟು ಬಿಎಲ್‌ಒ' ಮೇಲೆ ಕ್ಲಿಕ್ ಮಾಡಿದರೆ ಮತದಾರರಿಗೆ 'ರೆಫರೆನ್ಸ್ ಐಡಿ' ಬರುತ್ತದೆ. ಇದರ ಆಧಾರದ ಮೇಲೆ ಮತಗಟ್ಟೆ ಅಧಿಕಾರಿಗಳು ನಮೂದಾಗಿರುವ ತಮ್ಮ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ಅಹವಾಲುಗಳನ್ನು ಪರಿಹರಿಸಲಿದ್ದಾರೆ. ಈ ಸೌಲಭ್ಯವನ್ನು ವಿಶೇಷ ಸಮಗ್ರ ಪರಿಷ್ಕರಣೆ-2025 ಚಾಲ್ತಿಯಲ್ಲಿದ್ದು, ಇದರ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಬೆಂಗಳೂರು ಉತ್ತರ ನಗರ ಪಾಲಿಕೆ ಪ್ರಕಟಣೆ ತಿಳಿಸಿದೆ.

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಕಾರಣ ಕೆಂಗೇರಿ ವಿಭಾಗದ ಸೋಮನಹಳ್ಳಿ ಉಪಕೇಂದ್ರ ವ್ಯಾಪ್ತಿಯಲ್ಲಿ ಜನವರಿ 30ರಂದು ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ. ಬೋಳಾರೆ, ವೇದವಿಜ್ಞಾನ, ಕಗ್ಗಲಿಪುರ, ಅವಸರಾಳ, ಕಂಕಾರ್ಡ್, ಸೋಮನಹಳ್ಳಿ, ಹಾರೋಹಳ್ಳಿ, ಶಾಂತಿ ಧಾಮ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

'ಕೋಗಿಲು: ಪ್ರಕ್ರಿಯೆ ಪಾಲಿಸಬೇಕಿತ್ತು'

ಮನೆಗಳ ತೆರವು ಪ್ರಕರಣ: ಹೈಕೋರ್ಟ್ ಮೌಖಿಕ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಲಹಂಕ ವ್ಯಾಪ್ತಿಯ ಕೋಗಿಲು ಲೇ ಔಟ್ ವ್ಯಾಪ್ತಿಯ ಫಕೀರ್ ಹಾಗೂ ವಸೀಂ ಕಾಲೋನಿಯಲ್ಲಿ ಜನರು ಅಕ್ರಮವಾಗಿ ಮನೆ ನಿರ್ಮಿಸಿಕೊಂಡಿದ್ದರೂ ಅವುಗಳನ್ನು ತೆರವುಗೊಳಿಸುವಾಗ ರಾಜ್ಯ ಸರ್ಕಾರ ಪೂರ್ವಭಾವಿ ಸಮೀಕ್ಷೆ ನಡೆಸಿ, ಪ್ರಕ್ರಿಯೆ ಪಾಲಿಸಬೇಕಿತ್ತು' ಎಂದು ಹೈಕೋರ್ಟ್ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

'ತೆರವು ಕಾರ್ಯಾಚರಣೆಯನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು, ಸಂತ್ರಸ್ತರಿಗೆ ಪುನರ್ವಸತಿ ಹಾಗೂ ಪರಿಹಾರ ನೀಡಲು ನಿರ್ದೇಶಿಸಬೇಕು' ಎಂದು ಕೋರಿ ಈ ಪ್ರದೇಶದಲ್ಲಿ ವಾಸವಿದ್ದ ಝೈಬಾ ತಬಸ್ಸುಮ್, ರೆಹಾನ ಮತ್ತು ಅರೀಫಾ ಬೇಗಂ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'2018ರಲ್ಲಿ ಅಲ್ಲಿನ 40ಕ್ಕೂ ಹೆಚ್ಚು ನಿವಾಸಿಗಳಿಗೆ ಜಾಗವನ್ನು ತಾತ್ಕಾಲಿಕ ಹಂಚಿಕೆ ಮಾಡಿರುವ ಸಂಬಂಧ ಪತ್ರ ನೀಡಲಾಗಿದೆ ಎಂದು ಅರ್ಜಿದಾರರು ಹೇಳಿದ್ದಾರೆ. ಇದಕ್ಕೆ ರಾಜ್ಯ ಸರ್ಕಾರ ಉತ್ತರಿಸಬೇಕು' ಎಂದು ನಿರ್ದೇಶಿಸಿ, ವಿಚಾರಣೆಯನ್ನು ಫೆಬ್ರುವರಿ 4ಕ್ಕೆ ಮುಂದೂಡಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ತೆರವು ಮಾಡುವುದಕ್ಕೆ 15 ದಿನ ಮುಂಚಿತವಾಗಿ ನೋಟಿಸ್ ನೀಡಬೇಕು ಎಂಬ ನಿಯಮ ಇದೆ. ಆದರೆ, ಅದನ್ನು ಪಾಲನೆ ಮಾಡಿಲ್ಲ' ಎಂದು ದೂರಿದರು.

ಇದಕ್ಕೆ ಪ್ರತಿಯಾಗಿ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಆಕ್ಷೇಪಿತ ಸ್ಥಳವನ್ನು ಕಲ್ಲು ಕ್ವಾರಿಗೆ ನೀಡಲಾಗಿತ್ತು. ಪರವಾನಗಿ ಮುಗಿದ ಮೇಲೆ ಬಿಬಿಎಂಪಿ ಘನತ್ಯಾಜ್ಯ ವಿಲೇವಾರಿಗಾಗಿ 14.03 ಎಕರೆ ಹಂಚಿಕೆ ಮಾಡಲಾಗಿತ್ತು. 2013, 2014ರ ನಂತರದ ವರ್ಷಗಳಲ್ಲಿ ಈ ಪ್ರದೇಶದಲ್ಲಿ ಎಷ್ಟೆಷ್ಟು ಮನೆಗಳು ಅಲ್ಲಿ ಅಕ್ರಮವಾಗಿ ತಲೆ ಎತ್ತಿದ್ದವು ಎಂಬುದರ ಉಪಗ್ರಹ ಚಿತ್ರಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಲಾಗಿದೆ' ಎಂದು ವಿವರಿಸಿದರು.

'ಸಿವಿಲ್ ದಾವೆ ಹೂಡಿ ಪರಿಹಾರ ಪಡೆಯಿರಿ'

ಬೆಂಗಳೂರು: 'ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ (ಕೆಎಫ್‌ಸಿಸಿ) ನಡೆಯುವ ಚುನಾವಣೆಯಲ್ಲಿ ಭಾಗವಹಿಸುವ ಮತದಾರರ ಅಂತಿಮ ಪಟ್ಟಿ ಪ್ರಕಟಿಸುವಲ್ಲಿ ಬೈ–ಲಾ ನಿಯಮಗಳನ್ನು ಅನುಸರಿಸಿಲ್ಲ ಎಂಬ ತಕರಾರಿಗೆ ಸಂಬಂಧಿಸಿದಂತೆ ಸಕ್ಷಮ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಿ ಪರಿಹಾರ ಪಡೆಯಿರಿ' ಎಂದು ಹೈಕೋರ್ಟ್ ಅರ್ಜಿದಾರರಿಗೆ ನಿರ್ದೇಶಿಸಿದೆ.

ಚುನಾವಣೆ ರದ್ದುಪಡಿಸುವಂತೆ ಕೋರಿ ಅಭ್ಯರ್ಥಿಯೂ ಆದ ಎನ್ಆರ್ ಕೆ.ವಿಶ್ವನಾಥ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ನ್ಯಾಯಾಲಯದ ನಿರ್ದೇಶನದ ಅನುಸಾರ ಚುನಾವಣಾಧಿಕಾರಿ ಮೆಮೊ ಸಲ್ಲಿಸಿದ್ದಾರೆ. ಅದರಲ್ಲಿ ಮತದಾರರ ಅಂತಿಮ ಪಟ್ಟಿಯನ್ನು ಚುನಾವಣಾ ವೇಳಾಪಟ್ಟಿ ಪ್ರಕಟಿಸುವುದಕ್ಕೂ ಹಿಂದೆಯೇ ಪ್ರಕಟಿಸಲಾಗಿದೆ ಎಂದು ತಿಳಿಸಲಾಗಿದೆ. ಚುನಾವಣಾಧಿಕಾರಿ 2025ರ ಡಿಸೆಂಬರ್ 17 ಮತ್ತು 19ರಂದು ಮತದಾರರ ಪಟ್ಟಿ ಪ್ರಕಟಿಸಲಾಗಿದೆ ಎಂದು ಹೇಳಿದ್ದಾರೆ. ಅರ್ಜಿದಾರರು ಜನವರಿ 14ರಂದು ಮತದಾರರ ಪಟ್ಟಿ ಪ್ರಕಟಿಸಿದ್ದಾರೆ ಎಂದು ಪ್ರತಿಪಾದಿಸಿದ್ದಾರೆ. ಆದಾಗ್ಯೂ, ಮತದಾರರ ಪಟ್ಟಿ ಪ್ರಕಟಣೆಗೆ ಸಂಬಂಧಿಸಿದಂತೆ ಅರ್ಜಿದಾರರು ಮತ್ತು ಚುನಾವಣಾಧಿಕಾರಿ ಮಧ್ಯದ ತಕರಾರನ್ನು, ಅರ್ಜಿದಾರರು ಸಿವಿಲ್ ದಾವೆ ಹೂಡಿ ಪರಿಹಾರ ಪಡೆಯಬಹುದು' ಎಂದು ತಿಳಿಸಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

ಕೋರಿಕೆ ಏನಿತ್ತು?: 'ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ 2025–26ನೇ ಸಾಲಿನ ಪದಾಧಿಕಾರಿಗಳ ಚುನಾವಣೆಗೆ ಪ್ರಕಟಿಸಿರುವ ವೇಳಾಪಟ್ಟಿಯನ್ನು ರದ್ದುಗೊಳಿಸಬೇಕು. ಹೊಸ ವೇಳಾಪಟ್ಟಿಯನ್ನು ಪ್ರಕಟಿಸುವ ಮೊದಲು ಎಲ್ಲ ಅರ್ಹ ಸದಸ್ಯರ ಛಾಯಾಚಿತ್ರಗಳನ್ನು ಮತ್ತು ನಿಖರವಾದ ಚಂದಾದಾರಿಕೆಯ ಡೇಟಾ ಹೊಂದಿದ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ಕೆಎಫ್‌ಸಿಸಿಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಟೇಶಿ ವೆಂಕಟೇಶ್‌ಗೆ ನೋಟಿಸ್: ಚಿತ್ರ ನಿರ್ದೇಶಕ ಮತ್ತು ನಿರ್ಮಾಪಕ ಟೇಶಿ ವೆಂಕಟೇಶ್ ಸದಸ್ಯತ್ವ ರದ್ದುಪಡಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ತಳ್ಳಿ ಹಾಕುವಂತೆ ಕೋರಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಸಲ್ಲಿಸಿದ್ದ ಮೇಲ್ಮನವಿಯಲ್ಲಿ ಪ್ರತಿವಾದಿ ಟೇಶಿ ವೆಂಕಟೇಶ್ ಅವರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಗೌರವ ಕಾರ್ಯದರ್ಶಿ ಡಿ.ಕೆ.ರಾಮಕೃಷ್ಣ ಸಲ್ಲಿಸಿದ್ದ ರಿಟ್ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಮೇಲ್ಮನವಿದಾರರ ಪರ ಪದಾಂಕಿತ ಹಿರಿಯ ವಕೀಲ ವಿ.ಲಕ್ಷ್ಮಿನಾರಾಯಣ ಅವರ ವಾದ ಆಲಿಸಿದ ನ್ಯಾಯಪೀಠ ಟೇಶಿ ವೆಂಕಟೇಶ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಮಾರ್ಚ್ 3ಕ್ಕೆ ಮುಂದೂಡಿತು.

ಸಂಚಾರಕ್ಕೆ ಅಡಚಣೆ

ಪ್ರಜಾವಾಣಿ ಚಿತ್ರ

ಹಳೆ ಮದ್ರಾಸ್ ರಸ್ತೆಯ ಎನ್‌ಜಿಇಎಫ್ ವೃತ್ತದಲ್ಲಿ ಇರುವ ಬಸ್ ನಿಲ್ದಾಣದ ಬಳಿ ನಾಲ್ಕೈದು ತಿಂಗಳಿಂದ ಕಟ್ಟಡ ತ್ಯಾಜ್ಯವು ರಸ್ತೆಯಲ್ಲಿಯೇ ಇರುವುದರಿಂದ ಸಂಚಾರಕ್ಕೆ ತೊಂದರೆಯಾಗಿದೆ

ಕೇಂದ್ರಿಯ ಹಿಂದಿ ಸಂಸ್ಥೆ, ಆಗ್ರಾ
(ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ)
ಹಿಂದಿ ಸಂಸ್ಥೆ ಮಾರ್ಗ, ಆಗ್ರಾ –282005
(ಕೇಂದ್ರಗಳು: ದೆಹಲಿ, ಹೈದರಾಬಾದ್, ಗುವಾಹತಿ, ಶಿಲ್ಲಾಂಗ್, ಮೈಸೂರು, ದಿಮಾಪುರ, ಭುವನೇಶ್ವರ, ಅಹ್ಮದಾಬಾದ್)
ಪ್ರವೇಶ ಪ್ರಕಟಣೆ : 2026–28
ಹಿಂದಿಯೇತರ ರಾಜ್ಯಗಳಿಗೆ ಮಾತ್ರ
ಎನ್‌ಸಿಟಿಇ ಅಂಗೀಕೃತ ಎರಡು ವರ್ಷಗಳ ಹಿಂದಿ ಶಿಕ್ಷಣ ನಿಶಾಂತ್ (ಎಂ.ಇಡಿ. ತತ್ಸಮಾನ), ಹಿಂದಿ ಶಿಕ್ಷಣ ಪಾರಂಗತ (ಬಿ.ಇಡಿ. ತತ್ಸಮಾನ) ಮತ್ತು ಹಿಂದಿ ಶಿಕ್ಷಣ ಪ್ರವೀಣ (ಡಿ.ಇಎಲ್.ಇಡಿ. ತತ್ಸಮಾನ) ಕೋರ್ಸ್‌ಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂಸ್ಥೆಯ www.hindisansthan.in ವೆಬ್‌ಸೈಟ್‌ನಲ್ಲಿ ಪ್ರವೇಶ ಪರೀಕ್ಷೆ, ವಿದ್ಯಾರ್ಹತೆ, ಶುಲ್ಕ ಮುಂತಾದ ವಿವರಗಳು ಲಭ್ಯವಿರುತ್ತವೆ. ಆನ್‌ಲೈನ್ ಅರ್ಜಿ ಸಲ್ಲಿಕೆಯ ಆರಂಭಿಕ ದಿನಾಂಕ 01.02.2026 ಮತ್ತು ಕೊನೆಯ ದಿನಾಂಕ 15.03.2026. ರಿಜಿಸ್ಟ್ರಾರ್, ಕೇಂದ್ರಿಯ ಹಿಂದಿ ಸಂಸ್ಥೆ, ಹಿಂದಿ ಸಂಸ್ಥೆ ಮಾರ್ಗ, ಆಗ್ರಾ–282005 (ಉ.ಪ್ರ.) ಇವರಿಗೆ, ಅಗತ್ಯ ದಾಖಲಾತಿಗಳ ಸಮೇತ ಕರಡು ಅರ್ಜಿ ನಮೂನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ 31.03.2026.
ರಿಜಿಸ್ಟ್ರಾರ್

ಪ್ರತ್ಯೇಕ ಒಳಮೀಸಲಾತಿ ಕಲ್ಪಿಸಿ ಚರ್ಮಕಾರ ಮಹಾಸಭಾ ಆಗ್ರಹ

ಬೆಂಗಳೂರು: 'ಉತ್ತರ ಕರ್ನಾಟಕ ಭಾಗದ 12 ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಸಮಗಾರ–ಚಮ್ಮಾರ ಜಾತಿಗಳಿಗೆ ಪ್ರತ್ಯೇಕ ಒಳಮೀಸಲಾತಿ ಕಲ್ಪಿಸಿ, ಸರ್ಕಾರಿ ಸೌಲಭ್ಯ ಒದಗಿಸಬೇಕು' ಎಂದು ಅಖಿಲ ಕರ್ನಾಟಕ ಚರ್ಮಕಾರ ಮಹಾಸಭಾ ಆಗ್ರಹಿಸಿದೆ.

ಸರ್ಕಾರಿ ಸೌಲಭ್ಯ ಒದಗಿಸಿ

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಭೀಮರಾವ ಪವಾರ, 'ಸಮುದಾಯದವರು 10 ಲಕ್ಷ ಜನರಿದ್ದಾರೆ. ಒಳಮೀಸಲಾತಿ ವೇಳೆ ಸಮುದಾಯವನ್ನು ಪ್ರತ್ಯೇಕವಾಗಿ ಪರಿಗಣಿಸದ ಪರಿಣಾಮ ಅನ್ಯಾಯವಾಗಿದೆ. ಶೇ 6ರ ಒಳಮೀಸಲಾತಿಯಲ್ಲಿ ಚರ್ಮಕಾರರ ಪಾಲು ಎಷ್ಟು ಎನ್ನುವುದು ಪ್ರಶ್ನೆಯಾಗಿಯೇ ಉಳಿದಿದೆ. ಆದ್ದರಿಂದ ಒಳಮೀಸಲಾತಿಯ ಪಾಲನ್ನು ನಿಗದಿಪಡಿಸಿ ಸೂಕ್ತ ಆದೇಶ ಹೊರಡಿಸಬೇಕು' ಎಂದು ಒತ್ತಾಯಿಸಿದರು.

'ಶಿವಶರಣ ಹರಳಯ್ಯ ಅವರ ಹೆಸರಿನಲ್ಲಿ ಅನ್ಯ ಜಾತಿಯವರು ಸಮುದಾಯದ ಸೌಲಭ್ಯ ಪಡೆಯುತ್ತಿದ್ದಾರೆ. ಅವರ ಹೆಸರಿನಲ್ಲಿ ಮಂಜೂರಾಗುವ ಎಲ್ಲ ಸೌಲಭ್ಯಗಳು ಚಮ್ಮಾರ ಸಮುದಾಯಕ್ಕೆ ತಲುಪುವಂತೆ ಎಚ್ಚರವಹಿಸಬೇಕು' ಎಂದರು.

ಸಂಸ್ಥೆಯ ಗೌರವಾಧ್ಯಕ್ಷ ಮೋಹನ ಉಳ್ಳಿಕಾಶಿ, ಉಪಾಧ್ಯಕ್ಷ ಮಹದೇವ ಪೋಳ ಮತ್ತು ಪ್ರಧಾನ ಕಾರ್ಯದರ್ಶಿ ಮನೋಹರ ಮಂದೋಲಿ ಉಪಸ್ಥಿತರಿದ್ದರು.

ಯತ್ನಾಳಗೆ ಕೋರ್ಟ್ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸಕ್ಕರೆ ಸಚಿವ ಶಿವಾನಂದ ಪಾಟೀಲ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡದಂತೆ ಬಿಜೆಪಿಯ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ನ್ಯಾಯಾಲಯ ನಿರ್ದೇಶಿಸಿದೆ.

'ನನ್ನ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡದಂತೆ ಯತ್ನಾಳ ಅವರಿಗೆ ಶಾಶ್ವತ ನಿರ್ಬಂಧ ಹೇರಬೇಕು' ಎಂದು ಕೋರಿ ಶಿವಾನಂದ ಪಾಟೀಲ ಸಲ್ಲಿಸಿರುವ ಅಸಲು ದಾವೆಯನ್ನು ನಗರದ 27ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಗುರುವಾರ ವಿಚಾರಣೆ ನಡೆಸಿತು.

ದಾವೆದಾರ ಶಿವಾನಂದ ಪಾಟೀಲ ಅವರ ವಿರುದ್ಧ ಯಾವುದೇ ಅವಹೇಳನ ಕಾರಿ ಹೇಳಿಕೆ ನೀಡದಂತೆ ಮಧ್ಯಂತರ ತಡೆಯಾಜ್ಞೆ ನೀಡಿ ಆದೇಶಿಸಿದ ನ್ಯಾಯಾಲಯ ಪ್ರತಿವಾದಿ ಬಸನಗೌಡ ಪಾಟೀಲ ಯತ್ನಾಳ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಮಾರ್ಚ್ 18ಕ್ಕೆ ಮುಂದೂಡಲಾಗಿದೆ.

ಪ್ರಾರ್ಥನೆ: 'ಯತ್ನಾಳ ಅವರು ಹಲವು ಟಿ.ವಿ ಸಂದರ್ಶನಗಳಲ್ಲಿ ನನ್ನ ವಿರುದ್ಧ ಸುಳ್ಳು, ಆಧಾರರಹಿತ, ಅವಹೇಳನಕಾರಿ ಹಾಗೂ ಮಾನಹಾನಿಕರ ಹೇಳಿಕೆಗಳನ್ನು ನೀಡುತ್ತಾ ಬಂದಿದ್ದಾರೆ. ಈ ಮೂಲಕ ನನ್ನ ಗೌರವ, ಘನತೆ ಮತ್ತು ಖ್ಯಾತಿಗೆ ಧಕ್ಕೆ ಉಂಟು ಮಾಡಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ, ಯತ್ನಾಳ ಅವರು ನನ್ನ ವಿರುದ್ಧ ಯಾವುದೇ ಅವಹೇಳನಕಾರಿ ಹೇಳಿಕೆ ನೀಡದಂತೆ ನಿರ್ಬಂಧ ವಿಧಿಸಬೇಕು' ಎಂದು ಶಿವಾನಂದ ಪಾಟೀಲ ದಾವೆಯಲ್ಲಿ ಪ್ರಾರ್ಥಿಸಿದ್ದಾರೆ.

ಬೈರತಿ ಜಾಮೀನು ಅರ್ಜಿ: ಕಾಯ್ದಿರಿಸಿದ ಆದೇಶ

ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣ ದಲ್ಲಿ ಐದನೇ ಆರೋಪಿಯಾಗಿರುವ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಕೋರಿಕೆ ಅರ್ಜಿ ವಿಚಾರಣೆ ಪೂರ್ಣಗೊಳಿಸಿದ ಹೈಕೋರ್ಟ್ ಆದೇಶ ಕಾಯ್ದಿರಿಸಿದೆ.

ಈ ಸಂಬಂಧ ಬಸವರಾಜ ಅವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪೂರ್ಣಗೊಳಿಸಿತು.

ವಿಚಾರಣೆ ವೇಳೆ ನ್ಯಾಯಪೀಠದ ನಿರ್ದೇಶನದ ಅನುಸಾರ ರಾಜ್ಯದ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರು, ಸಿಐಡಿ ತನಿಖೆಯ ಸಂಪೂರ್ಣ ದಾಖಲೆಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ಆದೇಶ ಕಾಯ್ದಿರಿಸಿತು.

ಶಿವರಾತ್ರಿ: ವಿಜಯಪುರಕ್ಕೆ ವಿಶೇಷ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವರಾತ್ರಿ ಹಬ್ಬದ ಪ್ರಯುಕ್ತ ಎಸ್‌ಎಂವಿಟಿ ಬೆಂಗಳೂರು ಮತ್ತು ವಿಜಯಪುರ ನಡುವೆ ವಿಶೇಷ ರೈಲು ಸಂಚರಿಸಲಿದೆ.

ರೈಲು ಎಸ್‌ಎಂವಿಟಿಯಿಂದ ಫೆ.13ರಂದು ರಾತ್ರಿ 7.15ಕ್ಕೆ ಹೊರಡಲಿದ್ದು, ಮರುದಿನ ಬೆಳಿಗ್ಗೆ 7.15ಕ್ಕೆ ವಿಜಯಪುರ ತಲುಪಲಿದೆ. ಫೆ.16ರಂದು ಸಂಜೆ 5.30ಕ್ಕೆ ವಿಜಯಪುರದಿಂದ ಹೊರಡಲಿದ್ದು, ಮರುದಿನ ಬೆಳಿಗ್ಗೆ 6.30ಕ್ಕೆ ಎಸ್‌ಎಂವಿಟಿ ತಲುಪಲಿದೆ.

ಚಿಕ್ಕಬಾಣಾವರ, ತುಮಕೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹರಿಹರ, ಎಸ್.ಎಂ.ಎಂ. ಹಾವೇರಿ, ಬಾದಾಮಿ, ಬಾಗಲಕೋಟೆ ಮತ್ತು ಆಲಮಟ್ಟಿ ನಿಲ್ದಾಣಗಳಲ್ಲಿ ನಿಲುಗಡೆ ಇರುತ್ತದೆ. ಈ ರೈಲು 22 ಬೋಗಿಗಳನ್ನು ಒಳಗೊಂಡಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ನಟ ಮಯೂರ್ ವಿರುದ್ಧ ಎಫ್‌ಐಆರ್

ಮದ್ಯ ಸೇವಿಸಿ ಕಾರು ಚಾಲನೆ

• ಸಿಗ್ನಲ್‌ನಲ್ಲಿ ಸರಣಿ ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಸೇವಿಸಿ ಕಾರು ಚಾಲನೆ ಮಾಡಿ ಸರಣಿ ಅಪಘಾತ ನಡೆಸಿದ ನಟ ಮಯೂರ್ ಪಟೇಲ್ ಅವರ ವಿರುದ್ಧ ಹಲಸೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಗುರುವಾರ ಎಫ್‌ಐಆರ್ ದಾಖಲಾಗಿದೆ.

ಬುಧವಾರ ರಾತ್ರಿ 10 ಗಂಟೆಯ ಸುಮಾರಿಗೆ ಕಮಾಂಡೊ ಆಸ್ಪತ್ರೆ ಬಳಿಯ ಸಿಗ್ನಲ್‌ನಲ್ಲಿ ಅಪಘಾತ ನಡೆದಿದೆ. ಮಯೂರ್ ಪಟೇಲ್ ಅವರ ಕಾರನ್ನು ಜಪ್ತಿ ಮಾಡಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಮಯೂರ್ ಪಟೇಲ್

ಅಡ್ಡಾದಿಡ್ಡಿಯಾಗಿ ಕಾರು ಚಾಲನೆ ಮಾಡಿಕೊಂಡು ಬಂದು ರಸ್ತೆಯ ಸಿಗ್ನಲ್‌ನಲ್ಲಿ ನಿಂತಿದ್ದ ಕಾರುಗಳಿಗೆ ಮಯೂರ್ ಪಟೇಲ್ ಅವರಿದ್ದ ಫಾರ್ಚ್ಯೂನರ್ ಕಾರು ಡಿಕ್ಕಿಯಾಗಿತ್ತು. ಈ ವೇಳೆ ಕಾರುಗಳ ನಡುವೆ ಸರಣಿ ಅಪಘಾತವಾಗಿದೆ. ಅಭಿಷೇಕ್, ಶ್ರೀನಿವಾಸ್ ಅವರಿಗೆ ಸೇರಿದ ಎರಡು ಕಾರು ಹಾಗೂ ಮತ್ತೊಂದು ಸರ್ಕಾರಿ ಕಾರಿಗೆ ಹಾನಿಯಾಗಿದೆ ಎಂದು ಪೊಲೀಸರು ಹೇಳಿದರು.

ಮಯೂರ್ ಪಟೇಲ್ ತಾವೇ ಕಾರು ಚಲಾಯಿಸುತ್ತಿದ್ದರು. ಅತಿವೇಗದ ಚಾಲನೆಯಿಂದ ಅಪಘಾತ ಎಸಗಿದ್ದಾರೆ. ಮದ್ಯ ಸೇವಿಸಿರುವುದು ತಪಾಸಣೆ ವೇಳೆ ದೃಢಪಟ್ಟಿದೆ. ಅಲ್ಲದೇ ಕಾರಿನ ವಿಮೆ ಅವಧಿ ಸಹ ಮುಕ್ತಾಯ ಆಗಿರುವುದು ಕಂಡುಬಂದಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಘಟನೆಯ ಸಂಬಂಧ ಕಾರು ಚಾಲಕ ಶ್ರೀನಿವಾಸ್ ಅವರು ದೂರು ನೀಡಿದ್ದಾರೆ. ಹಲಸೂರು ಸಂಚಾರ ಠಾಣೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅಪಘಾತದ ನಂತರ ಕಾರಿನಿಂದ ಕೆಳಗಿಳಿದ ಮಯೂರ್ ಪಟೇಲ್ ಅವರು 'ಏನೇ ಇದ್ದರೂ ನಾನು ಸೆಟ್ಲ್ ಮಾಡಿಕೊಡುತ್ತೇನೆ. ಬೆಳಿಗ್ಗೆ ಎಲ್ಲವೂ ಸರಿ ಮಾಡುತ್ತೇನೆ' ಎಂದು ಹೇಳಿರುವುದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊದಲ್ಲಿ ದಾಖಲಾಗಿದೆ.

ಅಪರಾಧ ಸುದ್ದಿ

ಅಳಲು ತೋಡಿಕೊಂಡ ಕಾರು ಚಾಲಕ

'ಕಾರು ಖರೀದಿಸಿ ಒಂದು ವಾರವಷ್ಟೇ ಆಗಿತ್ತು. ಪತ್ನಿಯ ಚಿನ್ನಾಭರಣ ಅಡವಿಟ್ಟು ಕಾರು ಖರೀದಿಸಿದ್ದೆ. ಕಂಪನಿ ಉದ್ಯೋಗಿಗಳನ್ನು ಪಿಕ್‌ಅಪ್ ಹಾಗೂ ಡ್ರಾಪ್ ಮಾಡುವ ಕೆಲಸ ಮಾಡುತ್ತಿದ್ದೇನೆ. ಪ್ರತಿ ತಿಂಗಳ ಐದರಂದು ಇಎಂಐ ಪಾವತಿಸಬೇಕು. ಸರಣಿ ಅಪಘಾತದ ವೇಳೆ ನನ್ನ ಕಾರು ಜಖಂಗೊಂಡಿದೆ. ಮಯೂರ್ ಅವರ ಕಾರಿನ ವಿಮೆ ಅವಧಿ ಮುಕ್ತಾಯವಾಗಿದೆ. ಈಗ ಏನು ಮಾಡುವುದು' ಎಂದು ಶ್ರೀನಿವಾಸ್ ಅವರು ಅಳಲು ತೋಡಿಕೊಂಡಿದ್ದಾರೆ.

ಆರೋಪಿಗಳು ನೇಪಾಳದಲ್ಲಿ ಅಡಗಿರುವ ಶಂಕೆ

ಬೆಂಗಳೂರು: ಕೆಂಪಾಪುರ ರಸ್ತೆಯ ಯಮಲೂರಿನ ಬಿಲ್ಡರ್ ಎಂ.ಆರ್.ಶಿವಕುಮಾರ್ ಅವರ ಮನೆಯಲ್ಲಿ ₹18 ಕೋಟಿ ಮೌಲ್ಯದ ಚಿನ್ನ ಹಾಗೂ ವಜ್ರದ ಆಭರಣ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾರತ್‌ಹಳ್ಳಿ ಠಾಣೆ ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಶಂಕಿತ ವ್ಯಕ್ತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಲಾಕರ್‌ನಲ್ಲಿದ್ದ ₹17.73 ಕೋಟಿ ಮೌಲ್ಯದ 11.5 ಕೆ.ಜಿ ಚಿನ್ನ ಹಾಗೂ ವಜ್ರದ ಆಭರಣ, ₹14.60 ಲಕ್ಷ ಮೌಲ್ಯದ 5 ಕೆ.ಜಿ ಬೆಳ್ಳಿಯ ಸಾಮಗ್ರಿ, ₹11.50 ಲಕ್ಷ ನಗದು ಕಳ್ಳತನ ಮಾಡಿಕೊಂಡು ಮನೆಯಲ್ಲಿ ಕೆಲಸಕ್ಕಿದ್ದ ದಿನೇಶ್ (32) ಹಾಗೂ ಕಮಲಾ (25) ಪರಾರಿಯಾಗಿದ್ದಾರೆ. ಇಬ್ಬರೂ ನೇಪಾಳಕ್ಕೆ ತೆರಳಿ ತಲೆಮರೆಸಿಕೊಂಡಿರುವ ಶಂಕೆಯಿದೆ. ಅವರ ಪತ್ತೆಗೆ ವಿಶೇಷ ಪೊಲೀಸ್ ತಂಡಗಳು ತನಿಖೆ ಚುರುಕುಗೊಳಿಸಿವೆ ಎಂದು ಪೊಲೀಸರು ಹೇಳಿದರು.

ನೇಪಾಳದ ಮಾಯಾ ಹಾಗೂ ವಿಕಾಸ್ ದಂಪತಿ ಬಿಲ್ಡರ್ ಮನೆಯಲ್ಲಿ ಏಳು ತಿಂಗಳಿಂದ ಕೆಲಸ ಮಾಡುತ್ತಿದ್ದರು. ಊರಿಗೆ ಹೋಗುವುದಾಗಿ ಹೇಳಿ ಕೆಲವು ದಿನಗಳ ಹಿಂದೆ ಕೆಲಸ ಬಿಟ್ಟಿದ್ದರು. ಅದಾದ ಮೇಲೆ ಅವರೇ ನೇಪಾಳದ ದಿನೇಶ್ ಹಾಗೂ ಕಮಲಾ ಅವರನ್ನು ಬಿಲ್ಡರ್ ಮನೆಯಲ್ಲಿ ಕೆಲಸಕ್ಕೆ ಸೇರಿಸಿದ್ದರು. ಮಾಯಾ ಮತ್ತು ವಿಕಾಸ್ ದಂಪತಿ ಸಂಚು ರೂಪಿಸಿರುವ ಶಂಕೆ ಇದೆ. ದಿನೇಶ್ ಮತ್ತು ಕಮಲಾ ಅವರನ್ನು ಬಳಸಿಕೊಂಡು ಕೃತ್ಯ ಎಸಗಿರುವ ಸಾಧ್ಯತೆ ಇದೆ ಎಂದು ಪೊಲೀಸರು ಹೇಳಿದರು.

ಸಾಮರ್ ಸ್ಕೂಲ್ ಆಡಳಿತಾಧಿಕಾರಿ ವಿರುದ್ಧ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲೆಯ ಹೆಸರು ಬದಲಾವಣೆ ಸಂದರ್ಭದಲ್ಲಿ ಬೇರೆ ಹೆಸರುಗಳಲ್ಲಿ ದಾಖಲೆ ಸಲ್ಲಿಸಿ, ನೋಂದಣಿ ಮತ್ತು ಮಾನ್ಯತೆ ನವೀಕರಣ ಮಾಡಿರುವ ಥಣಿಸಂದ್ರದ ಸಾಮರ್ ಇಂಟರ್ ನ್ಯಾಷನಲ್ ಇಸ್ಲಾಮಿಕ್ ಸ್ಕೂಲ್ ಮುಖ್ಯ ಆಡಳಿತಾಧಿಕಾರಿ ಖಾಲಿದ್ ಮುಷರಫ್ ವಿರುದ್ಧ ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಶಿಕ್ಷಣ ಇಲಾಖೆಯ ಅಧಿಕಾರಿ ಸಿ.ಎನ್.ಗೋವಿಂದಪ್ಪ ಅವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'ಶಾಲೆಯ ಆಡಳಿತ ಮಂಡಳಿಯು ಸುಳ್ಳು ದಾಖಲೆ ಸಲ್ಲಿಸಿ ನೋಂದಣಿ ಮತ್ತು ಮಾನ್ಯತೆ ನವೀಕರಣವನ್ನು ಪಡೆದಿದೆ. ಶಾಲಾ ಶುಲ್ಕವನ್ನು ಸ್ವೀಕರಿಸಿ ವಿವಿಧ ಹೆಸರುಗಳಲ್ಲಿ ರಸೀದಿ ನೀಡಿರುವುದು ದಾಖಲೆಗಳಿಂದ ಸ್ಪಷ್ಟವಾಗಿದೆ. ಅಲ್ಲದೇ ಅನುಮತಿ ಪಡೆದಿರುವ ಹೆಸರಿನಲ್ಲಿ ಶುಲ್ಕ ಪಡೆದು, ರಸೀದಿ ನೀಡದೆ ಪೋಷಕರಿಗೆ ಮೋಸ ಮಾಡಲಾಗಿದೆ' ಎಂದು ದೂರುದಾರರು ಆರೋಪಿಸಿದ್ದಾರೆ.

'ಸಾಮರ್ ಇಂಟರ್ ನ್ಯಾಷನಲ್ ಇಸ್ಲಾಮಿಕ್ ಸ್ಕೂಲ್ ಎಂದು ಹೆಸರು ಬದಲಾವಣೆ ಮಾಡಿಕೊಂಡಿದ್ದರೂ 'ಸಾಮರ್ ಇಂಟರ್ ನ್ಯಾಷನಲ್ ಸ್ಕೂಲ್' ಎಂದು ನಾಮಫಲಕ ಅಳವಡಿಸಿ ಪೋಷಕರನ್ನು ಗೊಂದಲಕ್ಕೆ ದೂಡಿರುವ ಕಾರಣ ಮುಖ್ಯ ಆಡಳಿತಾಧಿಕಾರಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಮಾನ್ಯತೆ ಹಿಂಪಡೆದು ನೋಂದಣಿ ರದ್ದುಪಡಿಸಿರುವುದರಿಂದ ಶಾಲೆಯನ್ನು ಮುಚ್ಚಿಸಿ ವಿದ್ಯಾರ್ಥಿಗಳಿಗೆ ಇತರೆ ಶಾಲೆಗಳಿಗೆ ದಾಖಲಿಸಬೇಕಾದ ಪ್ರಕ್ರಿಯೆ ಕೈಗೊಳ್ಳಬೇಕಾಗಿದೆ. ಹಾಗಾಗಿ ಸೂಕ್ತ ಬಂದೋಬಸ್ತ್ ಒದಗಿಸಬೇಕು' ಎಂದು ಮನವಿ ಮಾಡಿದ್ದಾರೆ.

ಮೊಬೈಲ್‌ಗೆ ಬಂದಿದ್ದ ಸಂಚಾರ ನಿಯಮ ಉಲ್ಲಂಘನೆ ಸಂದೇಶ

₹2.32 ಲಕ್ಷ ಕಳೆದುಕೊಂಡ ಟೆಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಂಡ ಪಾವತಿಸಲು ಹೋಗಿ ಟೆಕಿಯೊಬ್ಬರು ₹2.32 ಲಕ್ಷ ಕಳೆದುಕೊಂಡಿದ್ದು, ಈ ಸಂಬಂಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

57 ವರ್ಷದ ವ್ಯಕ್ತಿಯು ನೀಡಿದ ದೂರಿನ ಮೇಲೆ ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ವೈಟ್‌ಫೀಲ್ಡ್‌ನಲ್ಲಿ ನೆಲಸಿರುವ ಟೆಕಿಯ ವಾಟ್ಸ್‌ಆ್ಯಪ್‌ಗೆ ಜ.26ರಂದು 'ನಿಮ್ಮ ₹500 ಟ್ರಾಫಿಕ್ ಚಲನ್ ಬಾಕಿ ಇದೆ' ಎಂದು ಹೇಳುವ ಸಂದೇಶವೊಂದು ಬಂದಿತ್ತು. ಆ ಸಂದೇಶದ ಜತೆಗೆ ಹಣ ಪಾವತಿಗೆ ಲಿಂಕ್ ಕೂಡ ಇತ್ತು. ದೂರುದಾರರು ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ, ₹500 ದಂಡ ಪಾವತಿ ವಿವರ ಕೇಳುವ ವೆಬ್‌ಸೈಟ್ ತೆರೆದುಕೊಂಡಿತ್ತು. ಅವರು ತಮ್ಮ ಕ್ರೆಡಿಟ್ ಕಾರ್ಡ್ ಮಾಹಿತಿ ನಮೂದಿಸಿದ್ದರು. ತಕ್ಷಣವೇ ಅವರ ಖಾತೆಯಿಂದ ₹2.32 ಲಕ್ಷ ಡೆಬಿಟ್ ಆಗಿತ್ತು ಎಂದು ಮೂಲಗಳು ಹೇಳಿವೆ.

'ಸಂಚಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ನಾವು ಯಾವುದೇ ಲಿಂಕ್ ಕಳುಹಿಸುವುದಿಲ್ಲ. ಪೊಲೀಸ್ ಇಲಾಖೆಯ ಅಧಿಕೃತ ವೆಬ್‌ಸೈಟ್‌ಗೆ ಹೋಗಿ ದಂಡ ಪಾವತಿ ಮಾಡಬೇಕು' ಎಂದು ಸಂಚಾರ ಪೊಲೀಸರು ಮನವಿ ಮಾಡಿದ್ದಾರೆ.

ಅಪರಿಚಿತ ಸಂಖ್ಯೆಯಿಂದ ಬರುವ ಲಿಂಕ್‌ಗಳು, ದಂಡ ಅಥವಾ ಬಹುಮಾನ ಎಂಬ ಸಂದೇಶಗಳನ್ನು ಎಂದಿಗೂ ನಂಬಬಾರದು. ಯಾವುದೇ ಸಂದರ್ಭದಲ್ಲೂ ಲಿಂಕ್ ಕ್ಲಿಕ್ ಮಾಡಿ ಬ್ಯಾಂಕ್ ಅಥವಾ ಕಾರ್ಡ್ ವಿವರಗಳನ್ನು ನಮೂದಿಸಬಾರದು ಎಂದು ಸಂಚಾರ ಪೊಲೀಸರು ಮನವಿ ಮಾಡಿದ್ದಾರೆ.

ಮುಖ್ಯಾಂಶಗಳು

- ವೈಟ್‌ಫೀಲ್ಡ್ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ
- ಟೆಕಿಯ ವಾಟ್ಸ್‌ಆ್ಯಪ್‌ಗೆ ಬಂದಿದ್ದ ₹500 ಬಾಕಿ ಇರುವ ಚಲನ್

ಸುದ್ದಿ 2 ನಿಮಿಷ

'ಜನವಸತಿ ಪ್ರದೇಶದಲ್ಲಿ ಬಾರ್ ದೂರು ಕೊಟ್ಟರೆ ಎಫ್‌ಐಆರ್'

ಬೆಂಗಳೂರು: ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ 138 ಬಾರ್‌ಗಳು ಇದ್ದು, ಇವುಗಳಲ್ಲಿ ಹೆಚ್ಚಿನವು ಜನವಸತಿ ಪ್ರದೇಶಗಳಲ್ಲಿವೆ. ಈ ಬಗ್ಗೆ ದೂರು ಕೊಡಲು ಹೋಗುವ ಮಹಿಳೆಯರ ವಿರುದ್ಧವೇ ಎಫ್‌ಐಆರ್ ದಾಖಲಿಸಲಾಗುತ್ತಿದೆ ಎಂದು ಬಿಜೆಪಿಯ ಮುನಿರತ್ನ ದೂರಿದರು.

ವಿಧಾನಸಭೆಯಲ್ಲಿ ಮಾತನಾಡಿದ ಅವರು, 'ಈ ಬಾರ್‌ಗಳಿಗೆ ಹೇಗೆ ಅನುಮತಿ ನೀಡಲಾಗಿದೆ ಎಂದು ಆರ್‌ಟಿಐ ಅಡಿ 10 ಇಲಾಖೆಗಳಿಗೆ 1,380 ಅರ್ಜಿಗಳನ್ನು ಸಲ್ಲಿಸಿದ್ದರೂ ಈವರೆಗೆ ಉತ್ತರ ಸಿಕ್ಕಿಲ್ಲ' ಎಂದರು.

'ನನ್ನ ಮೇಲೆ ಮೊಟ್ಟೆ ಎಸೆಯುವ, ಮಸಿ ಬಳಿಯುವ ಮತ್ತು ಹಲ್ಲೆ ನಡೆಸುವ ಪ್ರಯತ್ನ ಮಾಡುತ್ತಿದ್ದಾರೆ. ನನಗೆ ರಕ್ಷಣೆ ನೀಡಬೇಕು. ನನಗೆ ಕೊಲೆ ಬೆದರಿಕೆ ಇರುವುದರಿಂದ ಗನ್ ಮ್ಯಾನ್ ಕೊಡಿ ಎಂದು ಸರ್ಕಾರಕ್ಕೆ ಕೇಳಿದ್ದೆ, ಗನ್ ಮ್ಯಾನ್ ಕೊಟ್ಟಿರಲಿಲ್ಲ. ನೀವು (ಮುಖ್ಯಮಂತ್ರಿ) ನನ್ನ ಕ್ಷೇತ್ರಕ್ಕೆ ಬಂದಾಗ ಮನವಿ ಮಾಡಿದ್ದೆ. ಮಾರನೇ ದಿನವೇ ಗನ್ ಮ್ಯಾನ್ ಕೊಟ್ಟಿದ್ದಾರೆ. ಅದಕ್ಕಾಗಿ ನಿಮಗೆ ಧನ್ಯವಾದ. ಆರ್.ಆರ್.ನಗರದಲ್ಲಿ ನನ್ನ ವಿರುದ್ಧ ಏನು ಬೇಕಾದರೂ ಆಗಬಹುದು' ಎಂದು ಹೇಳಿದರು.

'ಆ ಕ್ಷೇತ್ರಕ್ಕೆ ಒಳ್ಳೆಯ ಅಧಿಕಾರಿಗಳು ಬರುವ ಸ್ಥಿತಿ ಇಲ್ಲ. ಉಪಮುಖ್ಯಮಂತ್ರಿ ಕಡೆಯವರ ಬೆದರಿಕೆಯಿಂದಾಗಿ ಯಾರೂ ಬರಲು ಒಪ್ಪುತ್ತಿಲ್ಲ. ನನ್ನ ಮೇಲೆ ಸುಳ್ಳು ಕೇಸ್‌ಗಳು, ಅತ್ಯಾಚಾರ ಕೇಸ್‌ಗಳನ್ನು ಹಾಕುತ್ತೇವೆ ಎನ್ನುವವರು ಮಾತ್ರ ಬರುತ್ತಾರೆ. ಮುಂದೆ ಹಣೆ ಬರಹ ಇದ್ದಂತೆ ಆಗುತ್ತದೆ. ಯಾರೂ ಯಾರ ವಿರುದ್ಧವೂ ತೊಂದರೆ ಕೊಟ್ಟು, ಹಿಂಸೆ ಕೊಟ್ಟು ಆನಂದಪಡಬಾರದು' ಎಂದರು.



'ಕ್ಷೇತ್ರದಲ್ಲಿ ನನ್ನ ಕಾರಿಗೆ ಕಲ್ಲು ಹೊಡೆದವರ ವಿರುದ್ಧ ಪೊಲೀಸರಿಗೆ ದೂರು ಕೊಟ್ಟರೂ ಪ್ರಕರಣ ದಾಖಲಿಸುತ್ತಿಲ್ಲ. ಆದ್ದರಿಂದ ನನಗೆ ಸಭಾಧ್ಯಕ್ಷರೇ ರಕ್ಷಣೆ ಒದಗಿಸಬೇಕು' ಎಂದು ಮುನಿರತ್ನ ಅವರು ಒತ್ತಾಯಿಸಿದರು.

ಲಿಫ್ಟ್ ಕುಸಿದು ಇಬ್ಬರ ಸಾವು

ಬೆಂಗಳೂರು: ವರ್ತೂರು ಪೊಲೀಸ್ ಠಾಣಾ ವ್ಯಾಪ್ತಿಯ ಬೆಳಗೆರೆ ರಸ್ತೆಯಲ್ಲಿ ಎಸ್‌ಎಸ್‌ವಿಆರ್ ಕನ್‌ಸ್ಟ್ರಕ್ಷನ್ ನಿರ್ಮಿಸುತ್ತಿರುವ ಅಪಾರ್ಟ್‌ಮೆಂಟ್ ಕಾಮಗಾರಿ ಸ್ಥಳದಲ್ಲಿ ಸರಕು ಸಾಗಣೆಯ ಲಿಫ್ಟ್ ಕುಸಿದು ಬಿದ್ದು ಪರಿಣಾಮ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ.

ಲಿಫ್ಟ್ ಆಪರೇಟರ್ ಬಿಹಾರದ ಸತ್ಯಕುಮಾರ್ ಹಾಗೂ ಲಿಫ್ಟ್ ಮೆಕಾನಿಕ್ ಮಡಿಕೇರಿಯ ಮುತ್ತಪ್ಪ ಮೃತ ಕಾರ್ಮಿಕರು.

ಬುಧವಾರ ಸಂಜೆ ಕೆಲಸ ಮಾಡುತ್ತಿದ್ದ ವೇಳೆ ಲಿಫ್ಟ್ ಕುಸಿದು ಬಿದ್ದ ಪರಿಣಾಮ ಇಬ್ಬರು ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಸತ್ಯಕುಮಾರ್ ಅವರ ಪತ್ನಿ ದೂರು ನೀಡಿದ್ದಾರೆ. ಗುತ್ತಿಗೆದಾರ ಸುಧೀರ್ ಹಾಗೂ ಎಂಜಿನಿಯರ್ ವಿರುದ್ಧ ನಿರ್ಲಕ್ಷ್ಯ ಆರೋಪದ ಅಡಿ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 106(1) ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಶುಕ್ರವಾರ ಬೆಳಿಗ್ಗೆ ವೈದೇಹಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗುವುದು ಎಂದು ಪೊಲೀಸರು ಹೇಳಿದರು.

ಗೇಟ್ ಬಿದ್ದು ಸೆಕ್ಯೂರಿಟಿ ಗಾರ್ಡ್ ಸಾವು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬೋನ್‌ಮಿಲ್‌ನಲ್ಲಿರುವ ಸ್ಮಾರ್ಟ್ ಪಾಯಿಂಟ್ ಕಟ್ಟಡದ ಸೆಕ್ಯೂರಿಟಿ ಗಾರ್ಡ್ ಸ್ವಾಮಿ (53) ಮೇಲೆ ಗೇಟ್ ಬಿದ್ದ ಕಾರಣ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಬೋನ್ ಮಿಲ್‌ನಲ್ಲಿರುವ ಸ್ಮಾರ್ಟ್ ಪಾಯಿಂಟ್ ಕಟ್ಟಡದಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಸ್ವಾಮಿ ಕೆಲಸ ಮಾಡುತ್ತಿದ್ದರು. ಬೃಹತ್ ಗೇಟ್ ತೆಗೆಯುವ ಹಾಗೂ ಹಾಕುವ ಕೆಲಸಕ್ಕೆ ಅವರನ್ನು ನಿಯೋಜಿಸಲಾಗಿತ್ತು.

ಸ್ವಾಮಿ

ಬುಧವಾರ ರಾತ್ರಿ ಗೇಟ್ ತೆಗೆಯುವ ಸಂದರ್ಭದಲ್ಲಿ ಅವರ ಮೇಲೆಯೇ ಗೇಟ್ ಬಿದ್ದು ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಮಾಲೀಕನ ನಿರ್ಲಕ್ಷ್ಯವೇ ಘಟನೆಗೆ ಕಾರಣವಾಗಿದೆ ಎಂದು ಸ್ವಾಮಿ ಅವರ ಕುಟುಂಬಸ್ಥರು ಆರೋಪಿಸಿದ್ದಾರೆ. ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆಗೆ ನುಗ್ಗಿ ಕಳವು ಆರೋಪಿ ಸೆರೆ

ಬೆಂಗಳೂರು: ಮನೆಗೆ ನುಗ್ಗಿ ಚಿನ್ನದ ಆಭರಣ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಮಮೂರ್ತಿ ನಗರದ ಚೆಲುವಯ್ಯ ರಸ್ತೆಯ ಏಳನೇ ಕ್ರಾಸ್ ನಿವಾಸಿ ನಾಗರಾಜ್ (35) ಬಂಧಿತ. ಮಂಡ್ಯ ಜಿಲ್ಲೆಯ ಹೊಸಹಳ್ಳಿ ಗ್ರಾಮದ ನಾಗರಾಜ್, ನಗರದಲ್ಲಿ ಬಾಡಿಗೆ ಮನೆ ಪಡೆದು ನೆಲಸಿದ್ದ. ಮನೆಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ. ಬಂಧಿತ ಆರೋಪಿಯಿಂದ ₹20 ಲಕ್ಷ ಮೌಲ್ಯದ 153 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

ನಾಗರಾಜ್

ಠಾಣಾ ವ್ಯಾಪ್ತಿಯ ಲಿಟಲ್ ಆಸ್ಪತ್ರೆ ರಸ್ತೆಯ ಬಳಿ ವಾಸವಿದ್ದ ವ್ಯಕ್ತಿಯೊಬ್ಬರು ನೀಡಿದ ದೂರಿನ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ಡಿ.31ರಂದು ದೂರುದಾರರು ಮನೆಗೆ ಬೀಗ ಹಾಕಿಕೊಂಡು ಚರ್ಚ್‌ಗೆ ತೆರಳಿದ್ದರು. ಮನೆಗೆ ನುಗ್ಗಿದ್ದ ಆರೋಪಿ, ಕಬೋರ್ಡ್‌ನಲ್ಲಿದ್ದ ಚಿನ್ನದ ಆಭರಣ ಕದ್ದು ಪರಾರಿ ಆಗಿದ್ದ. ಕದ್ದ ಚಿನ್ನದ ಪೈಕಿ 30 ಗ್ರಾಂ ಅನ್ನು ಹೊಸಕೆರೆಹಳ್ಳಿಯ ಆಭರಣ ಅಂಗಡಿಗೆ ಮಾರಾಟ ಮಾಡಿ, ಉಳಿದ ಚಿನ್ನವನ್ನು ಚೆಲುವಯ್ಯ ರಸ್ತೆಯ ಬಾಡಿಗೆ ಮನೆಯಲ್ಲಿ ಇಟ್ಟಿದ್ದ. ಚಿನ್ನವನ್ನು ಜಪ್ತಿ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಸಿದ್ದರಾಮಯ್ಯ ಅವರು ಎಚ್. ವಿ. ಅನಂತ ಸುಬ್ಬರಾವ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ಕುಟುಂಬದ ಸದಸ್ಯರು, ಕಮ್ಯುನಿಸ್ಟ್ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ,ರಾಮಲಿಂಗಾರೆಡ್ಡಿ ಸೇರಿ ಹಲವರಿಂದ ದರ್ಶನ

ಅನಂತ ಸುಬ್ಬರಾವ್ ದೇಹ ದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಧವಾರ ನಿಧನರಾದ ಕಾರ್ಮಿಕ ಮುಖಂಡ ಎಚ್.ವಿ. ಅನಂತ ಸುಬ್ಬರಾವ್ ಅವರ ದೇಹ ಮತ್ತು ಅಂಗಾಂಗಗಳನ್ನು ದಾನ ಮಾಡಲಾಯಿತು.

ಕಣ್ಣು ಮತ್ತು ಮಿದುಳು ದಾನವು ತಡವಾದರೆ ಉಪಯೋಗಕ್ಕೆ ಬರುವುದಿಲ್ಲ ಎಂಬ ಕಾರಣಕ್ಕೆ ಬುಧವಾರ ರಾತ್ರಿಯೇ ಕಣ್ಣುಗಳನ್ನು ಲಯನ್ಸ್ ಕಣ್ಣಿನ ಆಸ್ಪತ್ರೆಗೆ, ಮಿದುಳನ್ನು ನಿಮ್ಹಾನ್ಸ್‌ಗೆ ನೀಡಲಾಯಿತು. ಬಳಿಕ ವೈದ್ಯರು ದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಿದರು.

ಗುರುವಾರ ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವೈಯಾಲಿ ಕಾವಲ್‌ನ ಸಿಪಿಐ ಕಚೇರಿ 'ಘಾಟೆ ಭವನ'ದಲ್ಲಿ ಅಂತಿಮ ದರ್ಶನಕ್ಕೆ ಇಟ್ಟು, ಬಳಿಕ ದೇಹ ವನ್ನು ನಿಮ್ಹಾನ್ಸ್‌ಗೆ ಹಸ್ತಾಂತರಿಸಲಾಯಿತು.

ಅಂತಿಮ ದರ್ಶನ: ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕಾರ್ಮಿಕ ಸಚಿವ ಸಂತೋಷ್ ಲಾಡ್, ಶಾಸಕರಾದ ಪ್ರಿಯಕೃಷ್ಣ, ಎನ್.ಎಚ್. ಕೋನರೆಡ್ಡಿ, ಸಾಹಿತಿ ಬರಗೂರು ರಾಮಚಂದ್ರಪ್ಪ, ವಕೀಲ ಚಂದ್ರಮೌಳಿ, ಸಾರಿಗೆ ನಿಗಮಗಳ ಅಧಿಕಾರಿ, ನೌಕರರು, ಕಮ್ಯುನಿಸ್ಟ್ ಪಕ್ಷದ ಮುಖಂಡರು ದರ್ಶನ ಪಡೆದರು.

'ಕಾರ್ಮಿಕರ ಹೋರಾಟದಲ್ಲಿ ತಮ್ಮ ಜೀವಿತದ ಕೊನೆ ಕ್ಷಣದವರೆಗೂ ಸಕ್ರಿಯರಾಗಿದ್ದ ಅನಂತ ಸುಬ್ಬಾರಾವ್ ಬದ್ಧತೆಯ ಕಮ್ಯುನಿಸ್ಟ್ ನಾಯಕರಾಗಿದ್ದರು. ನಾನು ಸಾರಿಗೆ ಸಚಿವನಾಗಿದ್ದ ಕಾಲದಿಂದಲೂ ಅವರೊಂದಿಗೆ ಉತ್ತಮ ಸಂಬಂಧ ಇಟ್ಟುಕೊಂಡಿದ್ದೆ. ಕಾರ್ಮಿಕರ ಧ್ವನಿಯಾಗಿ ಹಲವು ಹೋರಾಟಗಳಲ್ಲಿ ಸಕ್ರಿಯರಾಗಿದ್ದರು. ಕೆಎಸ್‌ಆರ್‌ಟಿಸಿ ನೌಕರರ ಪ್ರತಿನಿಧಿಯಾಗಿ ತಿಂಗಳ ಹಿಂದೆಯಷ್ಟೇ ಭೇಟಿ ಮಾಡಿದ್ದರು. ಬದ್ಧತೆಯ, ಜಾತ್ಯತೀತ ನಾಯಕರಾಗಿದ್ದ ಅವರ ಸಾವಿನಿಂದ ರಾಜ್ಯಕ್ಕೆ ನಷ್ಟವುಂಟಾಗಿದೆ' ಎಂದು ಸಿದ್ದರಾಮಯ್ಯ ನುಡಿನಮನ ಸಲ್ಲಿಸಿದರು.

ಜಾಗತಿಕ ಉದ್ಯಮ ಸಮಾವೇಶದಲ್ಲಿ ಸಚಿವ ಎಂ.ಬಿ.ಪಾಟೀಲ

'ವೀರಶೈವ ಲಿಂಗಾಯತರು ಉದ್ಯಮಕ್ಕೆ ಬರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೀರಶೈವ ಲಿಂಗಾಯತ ಸಮುದಾಯದ ಯುವಕರು ಕೇವಲ ಕೃಷಿಗೆ ಸೀಮಿತರಾಗದೇ, ಉದ್ಯಮ ವಲಯದಲ್ಲೂ ತೊಡಗಿಸಿಕೊಳ್ಳಬೇಕು' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಸಲಹೆ ನೀಡಿದರು.

ಅಂತರರಾಷ್ಟ್ರೀಯ ಲಿಂಗಾಯತ ಯೂತ್ ಫೋರಂ ನಗರದ ಅರಮನೆ ಮೈದಾನದಲ್ಲಿ ಏರ್ಪಡಿಸಿರುವ ವೀರಶೈವ ಲಿಂಗಾಯತ ಜಾಗತಿಕ ಉದ್ಯಮ ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಶಿರಸಂಗಿ ಲಿಂಗರಾಜ ದೇಸಾಯಿ, ವಾರದ ಮಲ್ಲಪ್ಪ, ಬಿ.ವಿ.ಭೂಮರೆಡ್ಡಿ ಸೇರಿದಂತೆ ಸಾಹಸಿ ಉದ್ಯಮಿಗಳ ದೀರ್ಘ ಇತಿಹಾಸವನ್ನು ವೀರಶೈವ ಲಿಂಗಾಯತ ಸಮುದಾಯ ಹೊಂದಿದೆ. ಗುಬ್ಬಿ ತೋಟದಪ್ಪ, ಸರ್ ಪುಟ್ಟಣ್ಣ ಚೆಟ್ಟಿ ಮೊದಲಾದವರು ಬಹಳ ಹಿಂದೆಯೇ ಉದ್ಯಮಶೀಲರಾಗಿ ಸಾಧನೆಗಳನ್ನು ಮಾಡಿ, ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಇದರಿಂದಲೇ ಸಮುದಾಯವು ವ್ಯಾಪಾರ ವಹಿವಾಟು ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಯಶಸ್ಸು ಕಾಣುವುದು ಸಾಧ್ಯವಾಗಿದೆ' ಎಂದರು.

'ಈ ರೀತಿಯ ಸಮಾವೇಶಗಳನ್ನು ಸರ್ಕಾರವೂ ಪ್ರೋತ್ಸಾಹಿಸಲಿದೆ. ಇದರಿಂದ ಅಸ್ಮಿತೆ, ನೆಟ್‌ವರ್ಕಿಂಗ್ ಮತ್ತು ಹೂಡಿಕೆಗೆ ಇರುವ ಅವಕಾಶಗಳ ಮಾಹಿತಿ ಸಿಗಲಿದೆ' ಎಂದು ಹೇಳಿದರು.

ಅರಣ್ಯ ಸಚಿವ ಸಚಿವ ಈಶ್ವರ ಖಂಡ್ರೆ ಮಾತನಾಡಿ, 'ಸಮಾವೇಶದಲ್ಲಿ 40 ಕೈಗಾರಿಕಾ ಮಳಿಗೆಗಳಿದ್ದು, ಉದಯೋನ್ಮುಖ ಉದ್ಯಮಿಗಳಿಗೆ ಉತ್ತಮ ವೇದಿಕೆ ಕಲ್ಪಿಸಿದೆ' ಎಂದರು.

ಕಾರ್ಯಕ್ರಮದಲ್ಲಿ ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶಾಸಕ ಗಣೇಶ ಹುಕ್ಕೇರಿ, ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್, ಮಾಜಿ ಸದಸ್ಯ ರುದ್ರೇಗೌಡ, ಬಾಗಲಕೋಟೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ್, ಫೋರಂನ ಬೆಂಗಳೂರು ಘಟಕದ ಅಧ್ಯಕ್ಷ ಸಂತೋಷ್ ಕೆಂಚಾಂಬ ಉಪಸ್ಥಿತರಿದ್ದರು.

ಅರಮನೆ ಮೈದಾನದಲ್ಲಿ ಗುರುವಾರ ಆರಂಭವಾದ ವೀರಶೈವ ಲಿಂಗಾಯತ ಸಮಾವೇಶ ವೇಳೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಎಂ.ಬಿ.ಪಾಟೀಲ, ಈಶ್ವರ ಖಂಡ್ರೆ, ತುಮಕೂರು ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಹಾಜರಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

BEFORE THE HON'BLE XXIV ADDL. CITY CIVIL & SESSIONS JUDGE AT BANGALORE, (CCH-6)
P & SC NO. 585/2025
BETWEEN:
NIMAI ARVIND NAGARKAR, S/o Late Arvind Shantram Nagarkar, Aged about 55 years, residing at No.53, 18th Cross Road, Malleshwaram, Bangalore -560 055. ...PETITIONER
AND: -NIL- ...RESPONDENT
PUBLIC NOTICE
Whereas the above named filed this petition under Sec.372 of the Indian Succession Act for the grant of Succession Certificate in favour of the Petitioner, in respect of schedule below. The below mentioned schedule has held by Late Sri. Arvind Shantaram Nagarkar, father of Petitioner herein who expired on 27.10.2019.
Interest parties are hereby called upon to appear before this court in person or by pleader duly instructed on 26.02.2026 at 11 am. Inform to show cause against the Petitioners failing wherein the appearance will be heard and declared as Ex-parte
SCHEDULE
All the proceeds of PPF deposit in A/c No. 10323708831 at State Bank of India, Kumara Park Branch, Bengaluru., Deposited/ credited by late Sri. Arvind Shantaram Nagarkar Rs.11,32,874/- (Indian Rupees Eleven Lakh Thirty Two Thousand Eight Hundred and Seventy Four only) as on date along with up to date accrued interest and all proceeds at the said account.
Given under my hand & seal of the court this 27th day of January 2026. By Order of the Court
Sd/- Senior Sheristedar
City Civil Court, Bengaluru
Address for Service:
Reshma Pai / Mahesh. M, Advocates,
Sunshine Silicon City Apartment, Victoria view Layout, Borewell Road, White field, Bangalore-560 066.

REAL ESTATE SELLING

Flat

Banashankari

KATRIGUPPE GANAPATHI HANUMANTHA RESIDENCY 3 BHK FLATS FOR SALE Rs. 8999/ SFT Contact: 94482-58218/ 96065-03064

Industrial & Factory

Tumkur Road

SALE 25 to 30 Acres Warehouse Converted Land. Also 10/ 12 acres Industrial Land. 9141326819

Sites

Multiple Locations

BDA SITES AVAILABLE 50x80, 40x60, 30x40, 30x20 in Vishweshwaraiah Layout and Kempegowda Layout. 9900999919.

REAL ESTATE BUYING

General

General

WE_DO FUNDING & Solutions/ Settlements for disputed properties under Bank,High Court, Civil/DC/AC/ Tribunal/ Tahsildar Courts pending cases. Contact Verna Developers, Barton Centre, MG_Road,Blr. 9620253180.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

JOB OPPORTUNITIES

Marketing & Sales

WANTED SALES Managers, Sales Executives, Delivery Boys, Telecallers. Attractive salary + Incentives Call: 8867627879

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CONNECT

BUSINESS

Business Offers

Finance

MSME LOAN Available for Any Start-Ups Companies And Existing Running Companies Hotels,Shops Establishments Etc. Contact- 7204995189.

PERSONAL

Change of Name

I,DR.PUSHPALATHA L, aged about 45 years,D/o. MG Lakshmi Narasimhaiah, R/a. No.4021,6th Cross, Near Uco Bank KR Road Branch,7th Block, Jayanagar, Bengaluru-560011. Have Changed my Name DR.PUSHPALATHA L to DR.ANAGHA GOWDA vide affidavit Dated:27.01.2026 before Notary Ravi Kumar.V, Bangalore.

CHANGE OF NAME
I, Raghavendra Mysore Jayaprakash Narayan, residing Deepsville, 4th Main, 1st Cross, Sharadhadevi Nagar, Tumakuru Dist-572103, have changed my name to M J RAGHAVENDRA LAD vide affidavit dated 29-01-2026 before notary B.V. Nagabhushana, Bengaluru.

I, SWATHI ROHITH SHETTY D/o KARUNAKAR SHETTY K have changed my name to SWATHI K SHETTY vide affidavit dated: 29/1/2026 Before Notary Before Notary Shreeshail B.Gobbani Bangalore

I, SOWMYA P DESHPANDE DOB:21.06.1995 W/o.Srinath Waiker R/a#B009, Devagiri Emeralds,4th Main Road,Opposite Happy Valley School, Happy Valley Layout Uttarahalli, Bengaluru 560061,Have Changed my Name to SOWMYA S WAIKER vide affidavit Dated:29.1.2026 before Notary B.GopalaKrishna Bengaluru.

CHANGE OF NAME
I, ANITHA BALAKRISHNAN, residing at # 131-G, 4th Cross, 2nd Main, S.T. Bed, Koramangala, Bengaluru - 560034, have changed my name to ANITHA C vide affidavit dated 29-01-2026 before notary B.M. Chandrashekar, Henceforth I shall be called as ANITHA C only

I, DASARATHA .M. R/a, #.1375, Sri Kodilingeshwara Nilaya, Behind Begur Government High School, Nanjundaiah layout, Devarachikkanahalli Road, Begur, Bangalore -560068, Have Changed My Name From DASARATHA. M To DASHARATHA .M vide affidavit dated 28/01/2026 before notary K.V. Mani, Bangalore.

TOURS & TRAVEL

Travel

AYODHYA, PRAYAG, Kashi, Gaya 6days by flight and Bus from 08.03.2026, 21.03.2026 29.03.2026, 05.04.2026 Kolkata, Puri, Konark, Bhuvaneswar 7 days from 28.03.2026, 09.04.2026 Udaipur, Mountabu, Jaisalmer, Pushkar, Jaipur– 10days Run of Kutch, Diu, Gir Safari Somanath, Dwarka, Ahmedabad 10days from: 23.03.2026, 29.03.2026, 12.04.2026 Contact: 26508925, 9980993631 Srichaitanya Travels, Bangalore.18

ಚಿಟಿಕೆ ಸುದ್ದಿ

ರಾಮಚಂದ್ರಗೌಡ ಅಧಿಕಾರ ಸ್ವೀಕಾರ


ರಾಮಚಂದ್ರ ಗೌಡ

ಬೆಂಗಳೂರು: ಕೆ.ಆರ್. ಪುರದಲ್ಲಿ ಇರುವ ಗಾರ್ಡನ್ ಸಿಟಿ ವಿಶ್ವವಿದ್ಯಾಲಯದ ಕುಲಪತಿಯಾಗಿ ಎಂ. ರಾಮಚಂದ್ರಗೌಡ ಅವರು ಮಂಗಳವಾರ ಅಧಿಕಾರ ವಹಿಸಿಕೊಂಡರು.

ಅವರು ಈ ಹಿಂದೆ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಸಚಿವರಾಗಿ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕುಲಪತಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ವಿಚಾರಸಂಕಿರಣ ಇಂದಿನಿಂದ

ಬೆಂಗಳೂರು: ಸೇವಾ ಇನ್ ಆ್ಯಕ್ಷನ್ ಸಂಸ್ಥೆಯು ಜ. 30 ಹಾಗೂ 31ರಂದು ‘ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿಗಾಗಿ ನೀತಿ ಬಳಕೆ–ಅಂಗವಿಕಲ ವ್ಯಕ್ತಿಗಳ ಹಕ್ಕುಗಳ (ಆರ್‌ಪಿಡಬ್ಲ್ಯುಡಿ) ಅಧಿನಿಯಮ, 2016ರ ದಶಕ’ ಎಂಬ ಎರಡು ದಿನಗಳ ರಾಷ್ಟ್ರೀಯ ವಿಚಾರಸಂಕಿರಣ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನಲ್ಲಿ ನಡೆಯಲಿದೆ.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ನಿರ್ದೇಶಕಿ ಮಂಜುಳಾ ನಂಜುಂಡಯ್ಯ, ‘ಶಿಕ್ಷಣ, ಕೌಶಲ ಅಭಿವೃದ್ಧಿ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಆರ್‌ಪಿಡಬ್ಲ್ಯುಡಿ ಅಧಿನಿಯಮದ ಪರಿಣಾಮಕಾರಿ ಜಾರಿಗೆ ಬಲಪಡಿಸಲು ಈ ವಿಚಾರಸಂಕಿರಣ ಹಮ್ಮಿಕೊಳ್ಳಲಾಗಿದೆ’ ಎಂದು ತಿಳಿಸಿದರು.

ಕೇಂದ್ರ ಸಚಿವ ವೀರೇಂದ್ರ ಕುಮಾರ್, ಸಿಸಿಪಿಡಿ ಆಯುಕ್ತ ಗೋವಿಂದರಾಜು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆರ್ಥಿಕ ಸಲಹೆಗಾರ್ತಿ ಎ. ಶ್ರೀಜಾ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕ ಅಶೋಕ್ ಡಿ.ಆರ್., ಅಂಗವಿಕಲರ ಹಕ್ಕುಗಳ ಅಧಿನಿಯಮದ ರಾಜ್ಯ ಆಯುಕ್ತ ದಾಸ್ ಸೂರ್ಯವಂಶಿ ಭಾಗವಹಿಸಲಿದ್ದಾರೆ’ ಎಂದರು.

ವಾಣಿವಿಲಾಸ ಆಸ್ಪತ್ರೆ: ಸ್ತ್ರೀರೋಗ ತಜ್ಞರ ನೇಮಕ

ಬೆಂಗಳೂರು: ಇಲ್ಲಿನ ವಾಣಿವಿಲಾಸ ಆಸ್ಪತ್ರೆಗೆ ಆರು ಮಂದಿ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರನ್ನು ನೇಮಿಸಿಕೊಳ್ಳಲು ಅನುಮೋದನೆ ನೀಡಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಈ ಹಿಂದೆ ವಾಣಿವಿಲಾಸ ಆಸ್ಪತ್ರೆಯಿಂದ ನಾಲ್ವರು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರನ್ನು ಘೋಷಾ ಆಸ್ಪತ್ರೆಗೆ ನಿಯೋಜಿಸಲಾಗಿತ್ತು. ಇದರಿಂದಾಗಿ ವಾಣಿವಿಲಾಸ ಆಸ್ಪತ್ರೆಗೆ ವೈದ್ಯರ ಕೊರತೆ ಎದುರಾಗಿತ್ತು. ಆದ್ದರಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಗುತ್ತಿಗೆ ಆಧಾರದಲ್ಲಿ ವೈದ್ಯರನ್ನು ನೇಮಕ ಮಾಡಿಕೊಳ್ಳಲು ಸೂಚಿಸಲಾಗಿದೆ.

ವಾಣಿವಿಲಾಸ ಆಸ್ಪತ್ರೆಗೆ ಪ್ರತಿನಿತ್ಯ ಸುಮಾರು 400 ಹೊರರೋಗಿಗಳು ಭೇಟಿ ನೀಡುತ್ತಾರೆ. ಸರಾಸರಿ 120 ಒಳರೋಗಿಗಳು ಚಿಕಿತ್ಸೆ ಪಡೆಯುತ್ತಾರೆ. ಶಿಫಾರಸು ಆಧಾರದಲ್ಲಿ ಹೆಚ್ಚಿನವರು ಬರುತ್ತಾರೆ.

ಕರ್ನಾಟಕ ದಲಿತ ಹಿಂದುಳಿದ ಅಲ್ಪಸಂಖ್ಯಾತರ ಸಮಿತಿ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಲಿಂಗತ್ವ ಅಲ್ಪಸಂಖ್ಯಾತರು ಪ್ರತಿಭಟನೆ ನಡೆಸಿದರು (ಎಡಚಿತ್ರ), ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರ

ನಿವೇಶನ, ಪಡಿತರ ಚೀಟಿ ಒದಗಿಸಲು ಒತ್ತಾಯ

ಸ್ವಾತಂತ್ರ್ಯ ಉದ್ಯಾನದಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನ, ಪಡಿತರ ಚೀಟಿ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಹಿಂದುಳಿದ ಅಲ್ಪಸಂಖ್ಯಾತರ ಸಮಿತಿ ನೇತೃತ್ವದಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಗುರುವಾರ ಪ್ರತಿಭಟನೆ ನಡೆಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ನೂರಾರು ಲಿಂಗತ್ವ ಅಲ್ಪಸಂಖ್ಯಾತರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಆಗ್ರಹಿಸಿದರು.

ಜಾನಪದ ಕಲಾವಿದೆ ಮಂಜಮ್ಮ ಜೋಗತಿ ಮಾತನಾಡಿ, ‘ಲಿಂಗತ್ವ ಅಲ್ಪಸಂಖ್ಯಾತರು ಶೋಷಣೆಗೆ ಒಳಗಾಗಿ ನಿತ್ಯ ನರಕದ ಬದುಕು ಅನುಭವಿಸುತ್ತಿದ್ದಾರೆ. ಅಧಿಕಾರಕ್ಕೆ ಬಂದ ಸರ್ಕಾರಗಳು ಸರಿಯಾದ ಮೂಲ ಸೌಕರ್ಯ ಕಲ್ಪಿಸಿಕೊಡುತ್ತಿಲ್ಲ. ಸಮಾಜ ಹಾಗೂ ಕುಟುಂಬದಿಂದ ಸಾವಿರಾರು ಮಂದಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ. ಅವರ ಬದುಕಿಗೆ ಆಧಾರವಾಗಿ ಪಡಿತರ ಚೀಟಿ, ಆಧಾರ್‌ಕಾರ್ಡ್, ನಿವೇಶನ ಸೇರಿ ಯಾವುದೇ ನಾಗರಿಕ ಸೌಲಭ್ಯಗಳು ದೊರಕಿಲ್ಲ. ಘನತೆಯ ಬದುಕು ನಡೆಸಲು ಸರ್ಕಾರ ಉಚಿತ ನಿವೇಶನ ನೀಡಬೇಕು, ಆಯಕಟ್ಟಿನ ಪ್ರದೇಶಗಳಲ್ಲಿ ಪ್ರತ್ಯೇಕ ಶೌಚಾಲಯ ನಿರ್ಮಿಸಿಕೊಡಬೇಕು. ಸರ್ಕಾರಿ ಹಾಗೂ ಅರೆ ಸರ್ಕಾರಿ ಇಲಾಖೆಗಳಲ್ಲಿ ಉದ್ಯೋಗ ಅವಕಾಶ ಕಲ್ಪಿಸಬೇಕು’ ಎಂದು ಮನವಿ ಮಾಡಿದರು.

‘ಲಿಂಗತ್ವ ಅಲ್ಪಸಂಖ್ಯಾತರ ಕುರಿತ ಕಥೆಯನ್ನು ಹೊಂದಿರುವ ‘ಶಿವಲೀಲಾ’ ಸಿನಿಮಾಗೆ ಚಿತ್ರಮಂದಿರಗಳನ್ನು ನೀಡದೆ ಅನ್ಯಾಯ ಮಾಡಲಾಗುತ್ತಿದೆ. ನೈಜ ಕಥೆಯನ್ನು ಆಧರಿಸಿದ ಈ ಚಿತ್ರದ ವೀಕ್ಷಣೆಗೆ ಎಲ್ಲ ಚಿತ್ರಮಂದಿರಗಳಲ್ಲಿ ಅವಕಾಶ ನೀಡಬೇಕು ಹಾಗೂ ಎಲ್ಲಾ ಶಾಲಾ-ಕಾಲೇಜು ವಿದ್ಯಾರ್ಥಿಗಳು ವೀಕ್ಷಣೆ ಮಾಡುವ ನಿಟ್ಟಿನಲ್ಲಿ ಸರ್ಕಾರದಿಂದ ಸುತ್ತೋಲೆ ಹೊರಡಿಸಬೇಕು’ ಎಂದು ಕೋರಿದರು.

ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಹಾಗೂ ಮಾಜಿ ಶಾಸಕ ವೈ.ಸಂಪಂಗಿ ಮಾತನಾಡಿ, ‘ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಅಸಮಾನತೆ ನಿವಾರಣೆಯಾಗಿಲ್ಲ. ಲಿಂಗತ್ವ ಅಲ್ಪಸಂಖ್ಯಾತರ ಬದುಕು ದುಸ್ತರವಾಗಿದೆ. ಎಲ್ಲರನ್ನೂ ಸಮಾನವಾಗಿ ಕಾಣುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ಮೂಲಸೌಕರ್ಯದ ಜೊತೆಗೆ ಇತರೆ ಸೌಲಭ್ಯಗಳಿಗೆ ಬಜೆಟ್‌ನಲ್ಲಿ ವಿಶೇಷ ಅನುದಾನ ಮೀಸಲಿಡಬೇಕು’ ಎಂದು ಆಗ್ರಹಿಸಿದರು.

‘ಲಿಂಗತ್ವ ಅಲ್ಪಸಂಖ್ಯಾತರನ್ನು ಲೈಂಗಿಕತೆ, ಭಿಕ್ಷಾಟನೆಗೆ ಸೀಮಿತಗೊಳಿಸಿ ಸಮಾಜ ಇಂದಿಗೂ ಅಸಮಾನತೆಯಿಂದ ಕಾಣುತ್ತಿದೆ. ಅನುಕಂಪದ ಬದಲಾಗಿ ಎಲ್ಲ ವಲಯಗಳಲ್ಲಿ ಉದ್ಯೋಗ ಅವಕಾಶ ಕಲ್ಪಿಸಿ, ಕೌಶಲ ತರಬೇತಿ ನೀಡಬೇಕು’ ಎಂದು ಪ್ರತಿಭಟನಕಾರರು ಮನವಿ ಮಾಡಿದರು.

ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ. ಶಾಸಕರಾದ ಜನಾರ್ದನ ರೆಡ್ಡಿ, ಅರವಿಂದ ಬೆಲ್ಲದ, ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಪ್ರತಿಭಟನೆಯಲ್ಲಿ ಭಾಗವಹಿಸಿ, ಬೆಂಬಲ ಸೂಚಿಸಿದರು. ಬೇಡಿಕೆಗಳ ಬಗ್ಗೆ ಅಧಿವೇಶನದಲ್ಲಿ ಪ್ರಸ್ತಾಪಿಸಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಸಮಿತಿ ಮುಖಂಡರಾದ ಅಶ್ವಿನಿ ಸಂಪಂಗಿ, ವೈ.ರಾಮಕ್ಕ, ಮಹಿಳಾ ಘಟಕದ ಲಕ್ಷ್ಮಮ್ಮ, ಶಿವಕುಮಾರ್ ಮತ್ತಿತರರು ಇದ್ದರು.

‘ಮನೆ ನಿರ್ಮಾಣಕ್ಕೆ ₹10 ಲಕ್ಷ ನೀಡಿ’

ರಾಜ್ಯದ ರೈತ ಕುಟುಂಬಗಳು, ಕೂಲಿ ಕಾರ್ಮಿಕರು, ಅಂಗವಿಕಲರು ಸೇರಿ 1008 ಜೋಡಿಗಳಿಗೆ ವಿವಾಹ ಮಾಡಿಸಲಾಗಿದೆ. ಈ ಕುಟುಂಬಗಳು ಮನೆ ನಿರ್ಮಿಸಿಕೊಳ್ಳಲು ತಲಾ ₹10 ಲಕ್ಷ ಅನುದಾನ ಮಂಜೂರು ಮಾಡಬೇಕು ಎಂದು ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಸಂಸ್ಥಾಪಕ ಅಧ್ಯಕ್ಷ ಬಿ.ಟಿ. ಚಂದ್ರಶೇಖರ ಭೋವಿ ಆಗ್ರಹಿಸಿದರು. ಸ್ವಾತಂತ್ರ್ಯದ ಉದ್ಯಾನದಲ್ಲಿ ನಡೆದ ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ಅವರು, ‘ರಾಜ್ಯದ 224 ವಿಧಾನಸಭಾ ಕ್ಷೇತ್ರದಲ್ಲಿ ಅಣೆಕಟ್ಟುಗಳನ್ನು ನಿರ್ಮಿಸಿ, ವರ್ಷಕ್ಕೆ ಮೂರು ಬೆಳೆ ಬೆಳೆಯಲು ಅವಕಾಶ ಮಾಡಿಕೊಡಬೇಕು. 24 ತಾಸು ಉಚಿತವಾಗಿ ವಿದ್ಯುತ್ ಪೂರೈಸಬೇಕು ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಖರೀದಿ ಕೇಂದ್ರ ತೆರೆದು, ರೈತರು ಬೆಳೆದ ಬೆಳೆಗಳನ್ನು ಖರೀದಿಸಬೇಕು’ ಎಂದು ಒತ್ತಾಯಿಸಿದರು.

ಖಾಸಗಿ ಟ್ಯಾಕ್ಸಿ ಚಾಲಕರಿಗೆ ಪ್ರತ್ಯೇಕ ಮೊಬೈಲ್ ಆ್ಯಪ್

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಜಾರಿಗೊಂಡಿರುವ ಹೊಸ ಪಾರ್ಕಿಂಗ್ ನಿಯಮಗಳಿಂದ ತೊಂದರೆ ಅನುಭವಿಸುತ್ತಿರುವ ಖಾಸಗಿ ಟ್ಯಾಕ್ಸಿ ಚಾಲಕರ ಸಮಸ್ಯೆ ಕುರಿತು ಖಾಸಗಿ ಟ್ಯಾಕ್ಸಿ ಚಾಲಕರ ಒಕ್ಕೂಟದ ಪದಾಧಿಕಾರಿಗಳು ಸಂಸದ ಡಾ. ಕೆ. ಸುಧಾಕರ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ಭೇಟಿಯ ವೇಳೆ ಮಾತನಾಡಿದ ಡಾ. ಸುಧಾಕರ್, ಹೊಸ ಪಾರ್ಕಿಂಗ್ ನಿಯಮಗಳಿಂದ ಖಾಸಗಿ ಟ್ಯಾಕ್ಸಿ ಚಾಲಕರಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಖಾಸಗಿ ಟ್ಯಾಕ್ಸಿ ಚಾಲಕರಿಗೆ ಪ್ರತ್ಯೇಕ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸುವುದು ಹಾಗೂ ಅಗತ್ಯ ಸ್ಥಳಾವಕಾಶ ಒದಗಿಸುವುದಾಗಿ ವಿಮಾನ ನಿಲ್ದಾಣದ ಆಡಳಿತ ವರ್ಗ ತೀರ್ಮಾನಿಸಿದೆ ಎಂದು ತಿಳಿಸಿದರು.

ಖಾಸಗಿ ಟ್ಯಾಕ್ಸಿ ಚಾಲಕರ ಸಮಸ್ಯೆ ಹಿನ್ನೆಲೆಯಲ್ಲಿ ಎರಡು ವಾರಗಳ ಹಿಂದೆ ವಿಮಾನ ನಿಲ್ದಾಣದ ಆಡಳಿತ, ಜಿಲ್ಲಾಡಳಿತ, ಪೊಲೀಸ್ ಹಾಗೂ ಸಾರಿಗೆ ಇಲಾಖೆ ಅಧಿಕಾರಿಗಳನ್ನು ಒಳಗೊಂಡ ಸಂಧಾನ ಸಭೆ ನಡೆಸಲಾಗಿತ್ತು. ಸಭೆಯಲ್ಲಿ ಚಾಲಕರ ಸಮಸ್ಯೆಗಳನ್ನು ವಿಸ್ತೃತವಾಗಿ ಚರ್ಚಿಸಿ ಪರಿಹಾರ ಕ್ರಮಗಳ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು ಎಂದು ಹೇಳಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರನ್ನು ಖುದ್ದಾಗಿ ಭೇಟಿಯಾಗಿ ಈ ಸಮಸ್ಯೆಯನ್ನು ಅವರ ಗಮನಕ್ಕೂ ತರಲಾಗಿದೆ. ನಂತರ ಸಚಿವರು ಸಹ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾಹಿತಿ ಪಡೆದಿದ್ದಾರೆ ಎಂದರು.

ಖಾಸಗಿ ಟ್ಯಾಕ್ಸಿ ಚಾಲಕರ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯುವವರೆಗೂ ತಮ್ಮ ಬೆಂಬಲ ಮುಂದುವರಿಯಲಿದೆ ಎಂದು ತಿಳಿಸಿದರು.

ಅರಮನೆ ಮೈದಾನದಲ್ಲಿ ರಾಷ್ಟ್ರಮಟ್ಟದ ವಿವೇಕ ದೀಪ್ತಿ ಸಮಾವೇಶ: ಆಕರ್ಷಕ ದಕ್ಷಿಣಾಸ್ಯ ದರ್ಶಿನಿ

ವಿಜ್ಞಾನಕ್ಕೆ ವೇದಾಂತ ಸ್ಪರ್ಶ ನೀಡುವ ವಸ್ತು ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳು ಮೂಲ ವಿಜ್ಞಾನ ಹಾಗೂ ಆಧುನಿಕ ತಂತ್ರಜ್ಞಾನದ ಪ್ರಯೋಗಗಳ ವಿವರಣೆ ನೀಡುತ್ತಾರೆ. ಧಾರ್ಮಿಕ ವಿವೇಕ ಸಾರುವ ಸ್ತೋತ್ರಗಳನ್ನು ವಿಜ್ಞಾನದ ಹಿನ್ನೆಲೆಯಲ್ಲಿ ತಿಳಿಸಿಕೊಡುತ್ತಾರೆ.

ಇದು ಭಾರತದ ಜ್ಞಾನ ಪರಂಪರೆಯಡಿ ಅನುಭವಾತ್ಮಕ ಕಲಿಕೆ, ವೈಜ್ಞಾನಿಕ ಅನ್ವೇಷಣೆ ಹಾಗೂ ಸಮೂಹ ಚಿಂತನೆಗೆ ಒತ್ತು ನೀಡುವ ‘ದಕ್ಷಿಣಾಸ್ಯ ದರ್ಶಿನಿ’ ಎನ್ನುವ ವಿಶಿಷ್ಟ ವಸ್ತು ಪ್ರದರ್ಶನದ ನೋಟ.

ಶಂಕರಾಚಾರ್ಯರು ರಚಿಸಿದ ದಕ್ಷಿಣಾಮೂರ್ತಿ ಅಷ್ಟಕದ ತತ್ವಗಳನ್ನು ಆಧರಿಸಿ ಕೆ.ಆರ್. ನಗರದ ಯಡತೊರೆ ಯೋಗಾನಂದ ಸರಸ್ವತಿ ಮಠದ ವೇದಾಂತ ಭಾರತಿ, ಪರಂ ಫೌಂಡೇಷನ್ ಅರಮನೆ ಮೈದಾನದಲ್ಲಿ ಆಯೋಜಿಸಿರುವ ರಾಷ್ಟ್ರಮಟ್ಟದ ನಾಲ್ಕು ದಿನಗಳ ವಿವೇಕ ದೀಪ್ತಿ ಸಮಾವೇಶದಲ್ಲಿ ವಸ್ತು ಪ್ರದರ್ಶನ ಆಕರ್ಷಿಸುತ್ತಿದೆ.

ನೋಡಿದಷ್ಟೂ ಮುಗಿಯದ ಅನಂತ ಬಾವಿ, ರೋಬೋಟ್ ಜತೆಗೆ ದೆವ್ವದ ಕೈಗಳು, ಪಂಚಭೂತ ಯಂತ್ರ, ಭಾರತೀಯ ಜ್ಞಾನ ವ್ಯವಸ್ಥೆಯ ಮಾದರಿಗಳು, ರಸಾಯನ ವಿಜ್ಞಾನದ ಪ್ರಯೋಗ, ಯೋಗ, ನರ ವಿಜ್ಞಾನ ಚಟುವಟಿಕೆ, ಮ್ಯಾಜಿಕ್ ಶೋ ವೀಕ್ಷಣೆಗೂ ಇಲ್ಲಿ ಅವಕಾಶವಿದೆ.

ನಗರದ 50ಕ್ಕೂ ಅಧಿಕ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ವಿಜ್ಞಾನವನ್ನು ಸ್ತೋತ್ರದ ತಾತ್ಪರ್ಯದೊಂದಿಗೆ ನೋಡುವ ಪ್ರಯತ್ನ ಮಾಡಿದ್ದಾರೆ. ಪ್ರಯೋಗದ ವಿವರಣೆ ನೀಡುತ್ತಲೇ ವೀಕ್ಷಕರ ಅನುಮಾನಗಳಿಗೂ ವಿದ್ಯಾರ್ಥಿಗಳು ಉತ್ತರ ನೀಡುತ್ತಾರೆ. ಇತ್ತೀಚಿನ ರೋಬೋಟಿಕ್ ತಂತ್ರಜ್ಞಾನ, ಚಿಪ್‌ಗಳ ಬಳಕೆ, ರಾಮನ್ ಪರಿಣಾಮ, ತತ್ವ ಆಧಾರಿತ ಎಐ ಹಾಗೂ ಚಾಟ್‌ಬಾಟ್, ಬುದ್ಧಿವಂತ ವ್ಯವಸ್ಥೆ ಸಹಿತ ಹಲವು ವಿಜ್ಞಾನದ ಪ್ರಯೋಗಗಳನ್ನು 10 ಸ್ತೋತ್ರಗಳ ಮೂಲಕ ತಿಳಿಸುತ್ತಾರೆ.

ಮಿರಾಸ್ಕೋಪ್ ಎನ್ನುವ ದರ್ಪಣ ಪ್ರಯೋಗ, ಮೈಂಡ್ ವೀಪಿಂಗ್ ಎನ್ವಿರಾನ್‌ಮೆಂಟ್ ಎಂಬ ದೇಹ, ಹಸ್ತ, ಮನಸುಗಳ ನಡುವಿನ ನಂಟು, ನೀರಿನ ಆವಿ, ಬಿಸಿನೀರಿನಲ್ಲಿ ತಂತಿಯ ಸ್ವರೂಪ ಬದಲಾಗುವ ಹಿಂದಿನ ಸತ್ಯವನ್ನು ಪ್ರಯೋಗ ಹಾಗೂ ಸ್ತೋತ್ರದೊಂದಿಗೆ ವಿವರಿಸುತ್ತಾರೆ.

‘ವಿಜ್ಞಾನದ ಪ್ರಯೋಗಗಳನ್ನು ಶಾಲಾ ದಿನಗಳಿಂದಲೇ ಮಾಡುತ್ತಾ ಅದನ್ನು ವೈಜ್ಞಾನಿಕವಾಗಿ ನೋಡಲು ಪ್ರಯತ್ನಿಸುತ್ತಿದ್ದೇವೆ. ಶಂಕರರ ಸ್ತೋತ್ರಗಳು ಹೇಗೆ ಶಕ್ತಿ ತುಂಬಬಲ್ಲವು ಎಂಬುದನ್ನು ಇಲ್ಲಿನ ಪ್ರಯೋಗಗಳ ಮೂಲಕ ಅರಿತಿದ್ದೇವೆ’ ಎಂದು ಉಲ್ಲಾಳು ವಿದ್ಯಾನಿಕೇತನ ವಿದ್ಯಾರ್ಥಿನಿಯರಾದ ಪೂರ್ವ, ಸಮನ, ಸಾಯಿಸ್ಮೃತಿ ಅಭಿಪ್ರಾಯ ಹಂಚಿಕೊಂಡರು.

‘ಅಷ್ಟಕದ ತತ್ತ್ವೋಪದೇಶಗಳನ್ನು ವಿದ್ಯಾರ್ಥಿಗಳ ವೈಜ್ಞಾನಿಕ ಪ್ರಯೋಗ, ಅನುಭವಾತ್ಮಕ ಕಲಿಕಾ ಮಾದರಿ ಮೂಲಕ ವಿವರಿಸುವ ಪ್ರದರ್ಶನ ಮೊದಲ ಬಾರಿಗೆ ಆಯೋಜನೆಗೊಂಡಿದೆ. ಗಂಭೀರ ತತ್ತ್ವಚಿಂತನೆಗಳನ್ನು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಾಮಾನ್ಯ ಜನರಿಗೆ ಸುಲಭವಾಗಿ ಗ್ರಹಿಸಲೆಂದು ಪ್ರದರ್ಶನ ವಿನ್ಯಾಸಗೊಳಿಸಲಾಗಿದೆ’ ಎಂದು ಪರಂ ಫೌಂಡೇಷನ್‌ನ ಮುಖ್ಯಸ್ಥ ಶ್ರೀನಿವಾಸ ಗುಪ್ತ ತಿಳಿಸಿದರು.

ನಗರದ ಅರಮನೆ ಮೈದಾನದಲ್ಲಿ ವೇದಾಂತ ಭಾರತಿ ಆಯೋಜಿಸಿರುವ ವಿವೇಕದೀಪ್ತಿ ಹಾಗೂ ದಕ್ಷಿಣಾಸ್ಯದರ್ಶಿನಿ ಪ್ರದರ್ಶನದಲ್ಲಿ ವೇದಾಂತ ಭಾರತಿ ಟ್ರಸ್ಟಿ ಲಕ್ಷ್ಮೀಶ, ಇಸ್ರೊ ಮಾಜಿ ಅಧ್ಯಕ್ಷ ಎಸ್.ಸೋಮನಾಥ್, ಲೇಖಕ ವಿಕ್ರಮ್ ಸಂಪತ್, ಬ್ರಹ್ಮಾನಂದಭಾರತಿ ಸ್ವಾಮೀಜಿ, ಶಂಕರಭಾರತಿ ಸ್ವಾಮೀಜಿ ಅವರು ಅನಂತ ಬಾವಿ ವೀಕ್ಷಿಸಿದರು — ಪ್ರಜಾವಾಣಿ ಚಿತ್ರ

ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ವಿವರಣೆ ನೀಡಿದರು

ಸತ್ಯಾನ್ವೇಷಣೆಯೇ ಧರ್ಮ, ವಿಜ್ಞಾನದ ಆಶಯ: ಎಸ್. ಸೋಮನಾಥ್

‘ಮಾನವನ ಶ್ರೇಷ್ಠತೆಗಾಗಿ ಶ್ರಮಿಸುವ ಧಾರ್ಮಿಕ ವಲಯ, ಭೌಗೋಳಿಕ ಜಗತ್ತಿನ ಕೌತುಕಗಳನ್ನು ಅನ್ವೇಷಿಸುವ ವಿಜ್ಞಾನ ವಲಯದ ಉದ್ದೇಶ ಸತ್ಯಾನ್ವೇಷಣೆಯೇ ಆಗಿದ್ದು, ವಿಜ್ಞಾನ ನಮ್ಮ ಬದುಕನ್ನು ಇನ್ನಷ್ಟು ಉತ್ತಮಗೊಳಿಸಲಿ’ ಎಂದು ಇಸ್ರೊ ಮಾಜಿ ಅಧ್ಯಕ್ಷ ಎಸ್.ಸೋಮನಾಥ್ ತಿಳಿಸಿದ್ದಾರೆ.

ರಾಷ್ಟ್ರಮಟ್ಟದ ವಿವೇಕ ದೀಪ್ತಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ‘ಸಾವಿರಾರು ವರ್ಷಗಳಿಂದ ವಿಜ್ಞಾನ ನಮ್ಮ ಬದುಕನ್ನು ಸುಧಾರಿಸುತ್ತಲೇ ಬರುತ್ತಿದೆ. ಮೂಲ ವಿಜ್ಞಾನದ ಜತೆಗೆ ಅತ್ಯಾಧುನಿಕ ತಂತ್ರಜ್ಞಾನ ಜನರ ಜೀವನವನ್ನು ಇನ್ನಷ್ಟು ಉತ್ತಮಗೊಳಿಸುವಂತಾಗಬೇಕು’ ಎಂದು ಹೇಳಿದರು.

‘ಕಣಗಳು, ಭೂಮಂಡಲದ ಕುರಿತು ಹಲವು ದೇಶಗಳ ವಿಜ್ಞಾನಿಗಳು ಸಂಶೋಧನೆ ನಡೆಸಿದರು. ಈಗಲೂ ಜಲಜನಕ ಅಣುಬಾಂಬ್‌ನ ಸಂಶೋಧನೆಗಳು ನಡೆದಿವೆ. ವಿಜ್ಞಾನದ ಹಿಂದೆ ಧಾರ್ಮಿಕ ಚಿಂತನೆಗಳ ಅಡಿಪಾಯವೂ ಇದೆ. ಋಷಿಮುನಿಗಳು ತಪಸ್ಸಿನ ಮೂಲಕ ಸಾಧನೆ ಮಾಡಿದರೆ, ವಿಜ್ಞಾನಿಗಳು ಸಂಶೋಧನೆಯನ್ನು ಏಕಾಗ್ರತೆಯಿಂದ ಕೈಗೊಳ್ಳುತ್ತಾರೆ. ಭಾರತದ ಪರಂಪರೆ, ಆಗಿನ ಚಿಂತನೆಗಳಲ್ಲಿರುವ ವೈಜ್ಞಾನಿಕ ಮನೋಭಾವದೊಂದಿಗೆ ವಿಜ್ಞಾನವನ್ನು ಬೆಳೆಸಬೇಕು’ ಎಂದು ಸಲಹೆ ನೀಡಿದರು.

ಯಡತೊರೆ ಮಠದ ಶಂಕರ ಭಾರತಿ ಸ್ವಾಮೀಜಿ, ಬ್ರಹ್ಮಾನಂದ ಭಾರತಿ ಸ್ವಾಮೀಜಿ, ಇತಿಹಾಸಕಾರ ವಿಕ್ರಮ್ ಸಂಪತ್, ಟ್ರಸ್ಟಿ ನಾಗಾನಂದ, ವಕೀಲ ಅಶೋಕ ಹಾರನಹಳ್ಳಿ ಉಪಸ್ಥಿತರಿದ್ದರು. ವಿಜ್ಞಾನ ಧರ್ಮ ಕುರಿತಂತೆ ವೇದಾಂತ ಭಾರತಿ ಮತ್ತು ಪರಂ ಫೌಂಡೇಷನ್ ನಡುವೆ ಒಡಂಬಡಿಕೆ ನಡೆಯಿತು.

ನಗರದಲ್ಲಿ ಇಂದು

ಆ್ಯಂಟಿಮೈಕ್ರೋಬಿಯಲ್ ಪ್ರತಿರೋಧದ ಬಗ್ಗೆ ರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಟಿ.ಎಸ್. ಬಾಲಗಣೇಶ್, ಎಚ್.ಬಿ. ವೀಣಾ ಕುಮಾರಿ, ಅಮಿತ್ ಸಿಂಗ್, ದೀಪಾಂಕರ್ ನಂದಿ, ಶ್ರುತಿ ಎಸ್. ವೆಂಬರ್, ಆಯೋಜನೆ: ಸನ್ ಫಾರ್ಮಾ ಸೈನ್ಸ್ ಫೌಂಡೇಷನ್, ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 9

ರಾಷ್ಟ್ರೀಯ ವಿಚಾರಸಂಕಿರಣ: ವಿಷಯ: ‘ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿಗಾಗಿ ನೀತಿ ಬಳಕೆ–ಅಂಗವಿಕಲ ವ್ಯಕ್ತಿಗಳ ಹಕ್ಕುಗಳ (ಆರ್‌ಪಿಡಬ್ಲ್ಯುಡಿ) ಅಧಿನಿಯಮ, 2016ರ ದಶಕ’, ಅತಿಥಿಗಳು: ವೀರೇಂದ್ರ ಕುಮಾರ್, ಎ. ಶ್ರೀಜಾ, ಅಶೋಕ್ ಡಿ.ಆರ್., ದಾಸ್ ಸೂರ್ಯವಂಶಿ, ಆಯೋಜನೆ: ಸೇವಾ ಇನ್ ಆ್ಯಕ್ಷನ್, ಸ್ಥಳ: ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು, ಸರ್ಜಾಪುರ, ಬೆಳಿಗ್ಗೆ 10.30

‘ದಿ ಜ್ಯುವೆಲರಿ ಶೊ’ ಆಭರಣಗಳ ಪ್ರದರ್ಶನ ಮತ್ತು ಮಾರಾಟ ಉತ್ಸವಕ್ಕೆ ಚಾಲನೆ: ಅಮೃತ ಪ್ರೇಮ್, ಆಯೋಜನೆ: ಗೋಲ್ಡನ್ ಕ್ರೀಪರ್, ಸ್ಥಳ: ಶೆರಟಾನ್ ಗ್ರ್ಯಾಂಡ್, ರಾಜಾಜಿನಗರ, ಮಧ್ಯಾಹ್ನ 12.30

‘ಕವಿದಿನ’ ಪುಸ್ತಕ ಬಿಡುಗಡೆ ಸಮಾರಂಭ: ‘ಹೊನ್ನ ಹರವು’, ‘ಸುಳಿದ ಬೆಳಕಿನ ಮಿಂಚು’ ಹಾಗೂ ‘ಡಾ.ಅ.ನ.ಕೃ. ಸ್ಮಾರಕ’ ಪುಸ್ತಕ ಬಿಡುಗಡೆ: ಶ್ಯಾಮಸುಂದರ ಬಿದರಕುಂದಿ, ಕೃತಿ ಪರಿಚಯ: ರಘುನಾಥ ಚ.ಹ., ಅಧ್ಯಕ್ಷತೆ: ವರ್ಗಿಸ್ ಕೆ.ಜೆ., ಉಪಸ್ಥಿತಿ: ಎಸ್.ಆರ್. ವಿಜಯಶಂಕರ, ಜಿ. ಗಂಗರಾಜು, ಆಯೋಜನೆ ಹಾಗೂ ಸ್ಥಳ: ಕ್ರೈಸ್ಟ್ ವಿಶ್ವವಿದ್ಯಾಲಯ, ಸೆಂಟ್ರಲ್ ಕ್ಯಾಂಪಸ್, ಹೊಸೂರು ರಸ್ತೆ, ಸಂಜೆ 4

‘ಸಂಕ್ರಮಣ’ ನೃತ್ಯೋತ್ಸವ: ಉಪಸ್ಥಿತಿ: ಬಲವಂತರಾವ್ ಪಾಟೀಲ, ‘ಕಲಾ ವೈಭವ’ ನಿರ್ದೇಶನ: ಮಂಜುಳಾ ಪರಮೇಶ್, ಸಹ ನಿರ್ದೇಶನ: ಶಾಲಿನಿ ಪರಮೇಶ್, ಮಾಲಿನಿ ಪರಮೇಶ್, ಆಯೋಜನೆ: ಸಪ್ತಸ್ವರ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ಶಿವಕುಮಾರ ಸ್ವಾಮೀಜಿ ಅವರ 7ನೇ ವರ್ಷದ ಪುಣ್ಯಸ್ಮರಣೆ: ಸಾನ್ನಿಧ್ಯ: ವೀರಭದ್ರ ಚೆನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಎನ್. ದೇವದಾಸ್, ಉದ್ಘಾಟನೆ: ಈಶ್ವರ್ ಖಂಡ್ರೆ, ಅತಿಥಿಗಳು: ರವಿ ವಿ. ಹೊಸಮನಿ, ಎಸ್. ಸುಜಾತಾ, ನುಡಿ ನಮನ: ಟಿ.ರಾಜಾರಾಮ್, ಉಪಸ್ಥಿತಿ: ಕೆ.ಅರವಿಂದ ಕಾಮತ್, ವಿವೇಕ್ ಸುಬ್ಬಾರೆಡ್ಡಿ, ಷಡಾಕ್ಷರಿ ಸಿ.ಎನ್., ಆಯೋಜನೆ: ವಕೀಲ ಭಕ್ತ ವೃಂದ, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಸಂಜೆ 5.30

ಶಿವಕುಮಾರ ಸ್ವಾಮೀಜಿ

ಚೀ.ಜ.ರಾಜೀವ ಅವರ ‘ಪ್ರಿಯ ಗಾಂಧಿ...’ ಪುಸ್ತಕ ಬಿಡುಗಡೆ: ಆರ್. ಸುನಂದಮ್ಮ, ಅತಿಥಿ: ಆರ್. ಪೂರ್ಣಿಮಾ, ಅಧ್ಯಕ್ಷತೆ: ಸುದರ್ಶನ ಚನ್ನಂಗಿಹಳ್ಳಿ, ಆಯೋಜನೆ: ಬಹುರೂಪಿ, ಸ್ಥಳ: ಹೊಸತು ಅಂಗಳ, ನವಕರ್ನಾಟಕ ಪಬ್ಲಿಕೇಷನ್ಸ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಸಂಜೆ 5.30

ಸರ್ವೋದಯ ದಿನಾಚರಣೆ: ಚಿತ್ರ ನಮನ: ಬಿ.ಜಿ. ಗುಜ್ಜಾರಪ್ಪ, ನುಡಿ ನಮನ: ಎಚ್.ಎನ್. ನಾಗಮೋಹನ ದಾಸ್, ಪಿ.ಜಿ.ಆರ್. ಸಿಂಧ್ಯ, ಪ್ರಸನ್ನ, ಕೊಂಡಜ್ಜಿ ಮೋಹನ್, ರಶ್ಮಿ, ಬಿ.ಕೆ.ಸುಮತಿ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕಸ್ತೂರಿ ಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್ ಆವರಣ, ಅರಮನೆ ರಸ್ತೆ, ಬೆಳಿಗ್ಗೆ 10.30

ಮಹಾತ್ಮ ಗಾಂಧೀಜಿಯವರ 78ನೇ ಹುತಾತ್ಮ ದಿನದ ವಾರ್ಷಿಕೋತ್ಸವ: ಸಂಗೀತ ನಮನ: ಕೆ.ಎಸ್. ವೈಶಾಲಿ, ಅತಿಥಿ: ಜೀವನ್ ಕುಮಾರ್, ಉಪಸ್ಥಿತಿ: ಬಿ. ರಮೇಶ್, ಆಯೋಜನೆ: ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಳಿಗ್ಗೆ 10.30

ಸರ್ವೋದಯ ದಿನಾಚರಣೆ: ಉದ್ಘಾಟನೆ: ಎಚ್.ಕೆ. ಪಾಟೀಲ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಉಪನ್ಯಾಸ: ಎಚ್.ಕೆ. ವಿವೇಕಾನಂದ, ಅತಿಥಿಗಳು: ಶರಣಪ್ಪ ಸಲಾದಪುರ, ಜಗದೀಶ್, ಎಂ.ಜಿ. ಹೆಗಡೆ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿನಗರ, ಬೆಳಿಗ್ಗೆ 11 (ಬೆಳಿಗ್ಗೆ 9ಕ್ಕೆ ಆನಂದರಾವ್ ವೃತ್ತದಿಂದ ಗಾಂಧಿ ಭವನದ ವರೆಗೆ ಸದ್ಭಾವನಾ ಪಾದಯಾತ್ರೆ)



ಹುತಾತ್ಮ ದಿನಾಚರಣೆ: ಅತಿಥಿ: ಅಪ್ಪಗೆರೆ ತಿಮ್ಮರಾಜು, ಉಪಸ್ಥಿತಿ: ಡಿ.ಎಂ. ಗೋಪಾಲಕೃಷ್ಣ, ಆಯೋಜನೆ: ಸಾಕ್ಷಾತ್ಕಾರ ಚಾರಿಟಬಲ್ ಸೊಸೈಟಿ, ಸ್ಥಳ: ಮಹಾತ್ಮ ಗಾಂಧಿ ಉದ್ಯಾನವನ, ನಾಗರಬಾವಿ, ಬೆಳಿಗ್ಗೆ 11

ಸೌಹಾರ್ದ ಸಂಕಲ್ಪ ದಿನದ ಅಂಗವಾಗಿ ಗಾಂಧಿ ಕುರಿತ ಮಕ್ಕಳ ಚಿತ್ರಕಲಾ ಸ್ಪರ್ಧೆ: ಉದ್ಘಾಟನೆ: ಎನ್. ನಮ್ರತ, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಕರ್ನಾಟಕ ಲಲಿತಕಲಾ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಮಧ್ಯಾಹ್ನ 12

‘ಮಹಾತ್ಮ ಹುತಾತ್ಮ’ ಸೌಹಾರ್ದ ಸಂಕಲ್ಪ ದಿನ: ಆಶಯ ನುಡಿ: ಬರಗೂರು ರಾಮಚಂದ್ರಪ್ಪ, ಅತಿಥಿಗಳು: ಎಚ್.ಎನ್. ನಾಗಮೋಹನ ದಾಸ್, ಮೂಡ್ನಾಕೂಡು ಚಿನ್ನಸ್ವಾಮಿ, ಕೆ.ಆರ್. ಸಂಧ್ಯಾ ರೆಡ್ಡಿ, ಮಾವಳ್ಳಿ ಶಂಕರ್, ಬಿ.ಕೆ. ಶಿವರಾಮ್, ಆರ್. ಮೋಹನರಾಜು, ಚಿತ್ರಕಲಾ ಸ್ಪರ್ಧೆ ಬಹುಮಾನ ವಿತರಣೆ: ಎನ್. ನಮ್ರತಾ, ಸೌಹಾರ್ದ ಸಂಕಲ್ಪ: ಎನ್. ಆರ್. ವಿಶುಕುಮಾರ್, ಅಧ್ಯಕ್ಷತೆ: ಕೆ. ಮರುಳಸಿದ್ದಪ್ಪ, ಆಯೋಜನೆ: ಸೌಹಾರ್ದ ಕರ್ನಾಟಕ, ಸ್ಥಳ: ಸಂಸ ಬಯಲು ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 4.30



ಭರತನಾಟ್ಯ ಪ್ರದರ್ಶನ: ಸುನಿಧಿ ಹೆಗಡೆ, ಅತಿಥಿಗಳು: ರಂಗಶ್ರೀ ಶ್ರೀನಿವಾಸ್, ಸತೀಶ್ ಸೂರಿ, ಆರ್. ವಿ. ರಾಘವೇಂದ್ರ, ಆಯೋಜನೆ: ಕಲಾದಿಶಾ, ಸ್ಥಳ: ಬಿ.ಪಿ. ವಾಡಿಯಾ ಹಾಲ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 6

‘ನೃತ್ಯ ನೀರಾಜನ’ ಕಿರಿಯರ ನೃತ್ಯೋತ್ಸವ: ಭರತನಾಟ್ಯ ಪ್ರದರ್ಶನ: ಎಸ್.ಎಚ್. ಭೂಮಿಕಾ, ಎ. ಹನ್ಸಿಕಾ, ಪಿ. ಪ್ರಿಯದರ್ಶಿನಿ, ಆರ್. ಶ್ರದ್ಧಾ, ಅತಿಥಿಗಳು: ಗಾಯತ್ರಿ ಮಯ್ಯ, ವಾಣಿ ಸತೀಶ್, ಸತೀಶ್ ಬಾಬು, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5.30

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ ‘ಜೈಮಿನಿ ಭಾರತ’ ಉಪನ್ಯಾಸ ಮಾಲಿಕೆ: ಅತಿಥಿ: ಬಂಗಾರೇಶ, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

61ನೇ ನಾದಜ್ಯೋತಿ ಸಂಗೀತ ಸಂಭ್ರಮ: ಗಾಯನ: ಜಿ.ಕೆ. ಮನೋಹರ್, ಪಿಟೀಲು: ಕೇಶವ ಮೋಹನ್ ಕುಮಾರ್, ಮೃದಂಗ: ಅನಿರುಧ್ ಎಸ್. ಭಟ್, ಖಂಜಿರ; ಭಾರ್ಗವ ಹಾಲಂಬಿ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6



‘ಜವ–ಒಂದು ಅಮರ ಪ್ರೇಮಕತೆ’ ನಾಟಕ ಪ್ರದರ್ಶನ: ಸಂಕೇತ್ ನಾಟಕ, ಸ್ಥಳ: ರಂಗಶಂಕರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಚಿತ್ರೋತ್ಸವ: ಟೆಂಟ್‌ನಲ್ಲಿ ಇಂದು ‘ಬಂಗಾರದ ಮನುಷ್ಯ’ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 17ನೇ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಗುರುವಾರ(ಜ.29) ಚಾಲನೆ ಸಿಕ್ಕಿದ್ದು, ಇಂದಿನಿಂದ(ಜ.30) ಸಿನಿಮಾಗಳ ಪ್ರದರ್ಶನ ನಡೆಯಲಿದೆ.

ನೆದರ್ಲೆಂಡ್ಸ್‌ನ ‘ಪೋರ್ಟ್ ಬ್ಯಾಗೇಜ್’ ಪ್ರದರ್ಶನದ ಮೂಲಕ ಚಿತ್ರೋತ್ಸವ ಆರಂಭವಾಗಿದ್ದು, ಇದರ ಮರುಪ್ರದರ್ಶನ ಲುಲು ಮಾಲ್‌ನ ಸಿನಿಪೊಲಿಸ್‌ನ ಐದನೇ ಪರದೆಯಲ್ಲಿ ಜ.30ರ ಮಧ್ಯಾಹ್ನ 3.10ಕ್ಕೆ ನಡೆಯಲಿದೆ. ರಾಜಾಜಿನಗರದ ಲುಲು ಮಾಲ್‌ನ 11 ಪರದೆಗಳಲ್ಲಿ ಬೆಳಗ್ಗೆ 10ರಿಂದ, ಚಾಮರಾಜಪೇಟೆಯ ಕಲಾವಿದರ ಸಂಘ, ಸುಚಿತ್ರ ಫಿಲ್ಮ್ ಸೊಸೈಟಿಯಲ್ಲಿ ಬೆಳಿಗ್ಗೆ 11ರಿಂದ ಸಿನಿಮಾಗಳ ಪ್ರದರ್ಶನ ನಡೆಯಲಿದೆ.

ಲುಲು ಮಾಲ್‌ನ ಮುಖ್ಯ ದ್ವಾರದ ಬಳಿಯ ಬಯಲಿನಲ್ಲಿ ಟೆಂಟ್ ಸಿನಿಮಾ ಮಾದರಿಯಲ್ಲಿ ರಾತ್ರಿ 7ಕ್ಕೆ ರಾಜ್‌ಕುಮಾರ್ ಅವರು ಅಭಿನಯಿಸಿದ ‘ಬಂಗಾರದ ಮನುಷ್ಯ’ ಚಿತ್ರವು ಪ್ರದರ್ಶನವಾಗಲಿದೆ. 4ಕೆ(ಉತ್ಕೃಷ್ಟ ಗುಣಮಟ್ಟದ)ಯಲ್ಲಿರುವ ‘ಭಕ್ತ ಕನಕ ದಾಸ’, ‘ಉಯ್ಯಾಲೆ’, ‘ಸಂಧ್ಯಾರಾಗ’, ‘ಶಂಕರ್‌ಗುರು’ ಹಾಗೂ ‘ಜೀವನಚೈತ್ರ’ ಸಿನಿಮಾಗಳು ಚಿತ್ರೋತ್ಸವದಲ್ಲಿ ಪ್ರದರ್ಶನವಾಗಲಿದೆ. ಒಟ್ಟಾರೆ, ಸಿನಿಪೊಲಿಸ್ ಮಲ್ಟಿಪ್ಲೆಕ್ಸ್‌ನಲ್ಲಿ ಮೊದಲ ದಿನವೇ 40ಕ್ಕೂ ಹೆಚ್ಚು ಚಿತ್ರಗಳು ಪ್ರದರ್ಶನವಾಗಲಿವೆ. ಹೆಚ್ಚಿನ ಮಾಹಿತಿಗಾಗಿ https://www.biffes.org/ಗೆ ಭೇಟಿ ನೀಡಿ.

PARAS

FARNAZ

‘ಪ್ರೇಮಿ’ ಹಾಡು ಬಿಡುಗಡೆ

ಎಸ್.ಪ್ರದೀಪ್ ವರ್ಮ ನಿರ್ದೇಶಿಸುತ್ತಿರುವ ‘ಪ್ರೇಮಿ’ ಚಿತ್ರದ ‘ಬಾರೋ ಬಾರೋ ಎಣ್ಣೆ ಹೊಡೆಯೋಣ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸಾಹಿತಿ ವಿ. ನಾಗೇಂದ್ರ ಪ್ರಸಾದ್ ಹಾಡು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ಈ ಹಾಡನ್ನು ನಿರ್ದೇಶಕರೇ ಬರೆದು, ಸಂಗೀತ ಸಂಯೋಜಿಸಿ, ಹಾಡಿದ್ದಾರೆ. ‘ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದೆ. ದಾವಣಗೆರೆ, ದೇವರ ಬೆಳಕೆರೆ, ಗೋಕರ್ಣ, ಕನಕಪುರ, ಚಿಕ್ಕಮಗಳೂರು ಹಾಗೂ ಬೆಂಗಳೂರಿನಲ್ಲಿ ಚಿತ್ರೀಕರಣ ಮಾಡಿದ್ದೇವೆ. ಟಿ.ಎಸ್.ಅಕ್ಕಮಹಾದೇವಿ ಕಥೆ ಬರೆದಿದ್ದಾರೆ’ ಎಂದರು ನಿರ್ದೇಶಕ.

ಗೌತಮ್ ಮಟ್ಟಿ ಛಾಯಾಚಿತ್ರಗ್ರಹಣ, ಸಂಜೀವ್ ರೆಡ್ಡಿ ಸಂಕಲನ ಈ ಚಿತ್ರಕ್ಕಿದೆ. ಅದ್ವಿಕ್ ಚಿತ್ರದ ನಾಯಕ. ಸಾತ್ವಿಕ, ಶೋಭಿತ, ಎಚ್.ಜಿ. ವೀರೇಶ್, ದ್ವಿತ ಕೆ ಗೌಡ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

‘ಮನಸ್ಸಿಗೆ ಖುಷಿ ನೀಡುವ ಪಾತ್ರಗಳಿಷ್ಟ’

ಪೃಥ್ವಿ ಅಂಬರ್, ಧನ್ಯಾ ರಾಮ್‌ಕುಮಾರ್ ಜೋಡಿಯಾಗಿ ನಟಿಸಿರುವ ‘ಚೌಕಿದಾರ್’ ಚಿತ್ರ ಇಂದು (ಜ.30) ತೆರೆ ಕಾಣುತ್ತಿದೆ. ಚಿತ್ರದಲ್ಲಿನ ತಮ್ಮ ಪಾತ್ರ ಹಾಗೂ ಸಿನಿಪಯಣ ಕುರಿತು ಧನ್ಯಾ ಮಾತನಾಡಿದ್ದಾರೆ.

- **ಇದೊಂದು ಮಹಿಳಾ ಪ್ರಧಾನ ಕಥೆಯೇ?**

ಇಲ್ಲ, ಒಟ್ಟಾರೆ ಕೌಟುಂಬಿಕ, ಮನರಂಜನೆ ಹೊಂದಿರುವ ಕಥೆ. ಪ್ರೀತಿ ಸೇರಿದಂತೆ ಹಲವು ಅಂಶಗಳಿವೆ. ಇಲ್ಲಿ ‘ಚೌಕಿದಾರ್’ ಎಂದರೆ ರಕ್ಷಕ. ದೇವರು ಎಂಬ ಅರ್ಥದಲ್ಲಿ ಬಳಸಲಾಗಿದೆ. ಈ ಸಿನಿಮಾದಲ್ಲಿ ಸಾಯಿಕುಮಾರ್ ಚೌಕಿದಾರ್ ಆಗಿ ನಿಂತಿರುತ್ತಾರೆ. ಅವರು ಕುಟುಂಬದ ರಕ್ಷಕನಾಗಿರುತ್ತಾರೆ.

- **ನಿಮ್ಮ ಸಿನಿಪಯಣ ಹೇಗಿದೆ?**

ಇದು ನನ್ನ ಆರನೇ ಸಿನಿಮಾ. ಒಳ್ಳೊಳ್ಳೆ ಪಾತ್ರಗಳು ಸಿಗುತ್ತಿವೆ. ಆ ಖುಷಿಯಿದೆ. ಇನ್ನೂ ಸ್ವಲ್ಪ ವಿಭಿನ್ನವಾದ ಪಾತ್ರಗಳನ್ನು ಎದುರು ನೋಡುತ್ತಿರುವೆ. ಕಮರ್ಷಿಯಲ್ ಸಿನಿಮಾಗಳಲ್ಲಿ ನಟಿಸುವ ಇರಾದೆಯಿದೆ. ನಿರ್ದೇಶಕರು ನನ್ನತ್ತಲೂ ತಿರುಗಿ ನೋಡಲಿ ಎಂದು ಕಾಯುತ್ತಿರುವೆ.

- **ನೀವು ಅಂದುಕೊಂಡ ಮಟ್ಟಿಗೆ ಯಶಸ್ಸು ಸಿಕ್ಕಿಲ್ಲವೇ?**

ಒಂದಷ್ಟು ಸಿನಿಮಾಗಳು ಚೆನ್ನಾಗಿ ಓಡಿವೆ. ಎಲ್ಲಿಗೇ ಹೋದರೂ ನನ್ನನ್ನು ಗುರುತಿಸುವವರು ಇದ್ದೇ ಇರುತ್ತಾರೆ. ನನಗೆ ಯಶಸ್ಸು ಅಂತಿಮ ಗುರಿಯಲ್ಲ. ನನಗೆ ತೃಪ್ತಿ ಸಿಗಬೇಕು. ಮನಸ್ಸಿಗೆ ಖುಷಿ ನೀಡುವ ಪಾತ್ರಗಳನ್ನು ಮಾಡುತ್ತೇನೆ.

- **ಮುಂದಿನ ಯೋಚನೆ, ಯೋಜನೆಗಳು...**

ತಕ್ಷಣಕ್ಕೆ ಯಾವುದೂ ಮನಸಿನಲ್ಲಿ ಇಲ್ಲ. ಈ ಸಿನಿಮಾ ಬಿಡುಗಡೆಯ ನಂತರ ನೋಡಬೇಕು. ಮತ್ತೊಂದು ಸಿನಿಮಾ ಮಾತುಕತೆಯಲ್ಲಿದೆ. ಶೀಘ್ರದಲ್ಲಿಯೇ ಅಧಿಕೃತವಾಗಿ ಘೋಷಣೆಯಾಗಲಿದೆ. ಆ ಬಳಿಕ ಮಾತನಾಡುವೆ.

- **ಇಲ್ಲಿ ನಿಮಗೆ ಸವಾಲು ಎನ್ನಿಸುತ್ತಿರುವ ಸಂಗತಿಗಳು...**

ಸವಾಲು ಎನ್ನುವಂಥದ್ದೇನಿಲ್ಲ. ಆದರೆ ಇಲ್ಲಿ ಕೆಲವು ಸಿನಿಮಾವನ್ನು ಜನ ನೋಡುತ್ತಾರೆ. ಇನ್ನು ಕೆಲವನ್ನು ನೋಡುವುದಿಲ್ಲ. ಪ್ರತಿ ಶುಕ್ರವಾರ ಒಂದು ಸಿನಿಮಾ ನೋಡುವ ಸಂಸ್ಕೃತಿ ನಮ್ಮಲ್ಲಿ ಬೆಳೆಯಬೇಕು. ವಾರಕ್ಕೊಮ್ಮೆ ಔಟಿಂಗ್‌ನಂತೆ ಸಿನಿಮಾ ನೋಡುವ ಹವ್ಯಾಸ ಬೆಳೆದರೆ ಚಿತ್ರೋದ್ಯಮ ಬೆಳೆಯುತ್ತದೆ. ಒಳ್ಳೆಯ ಸಿನಿಮಾಗಳನ್ನು ಜನ ಚಿತ್ರಮಂದಿರಗಳಿಗಿಂತ ಹೆಚ್ಚಾಗಿ ಒಟಿಟಿಯಲ್ಲಿ ನೋಡುತ್ತಾರೆ. ಅಂಥ ಸಿನಿಮಾಗಳನ್ನು ಚಿತ್ರಮಂದಿರಗಳಲ್ಲಿಯೇ ನೋಡಿದರೆ ನಿರ್ಮಾಪಕರು ಬದುಕುತ್ತಾರೆ.

ಧನ್ಯಾ ರಾಮ್‌ಕುಮಾರ್

ಒಂಬತ್ತು ಸಿನಿಮಾಗಳು ತೆರೆಗೆ

‘ಚೌಕಿದಾರ್’ ಸೇರಿದಂತೆ ಒಂಬತ್ತು ಸಿನಿಮಾಗಳು ಈ ವಾರ ತೆರೆ ಕಾಣುತ್ತಿವೆ.

ರಕ್ತ ಕಾಶ್ಮೀರ: ಎಸ್.ವಿ.ರಾಜೇಂದ್ರಸಿಂಗ್ ಬಾಬು ನಿರ್ದೇಶನದ ಚಿತ್ರವಿದು. ಉಪೇಂದ್ರ ಹಾಗೂ ರಮ್ಯಾ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ.

ಚಿತ್ರದ ಹಾಡೊಂದರಲ್ಲಿ ವಿಷ್ಣುವರ್ಧನ್, ಅಂಬರೀಶ್, ಶ್ರೀನಾಥ್, ಶಿವರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಸೇರಿದಂತೆ ಕನ್ನಡದ ದಿಗ್ಗಜ ನಾಯಕರು ಬರುತ್ತಾರೆ. ಈ ಹಾಡನ್ನು ಹಲವು ವರ್ಷಗಳ ಹಿಂದೆ ಚಿತ್ರೀಕರಿಸಲಾಗಿತ್ತು. ಗುರುಕಿರಣ್ ಸಂಗೀತ ನಿರ್ದೇಶನವಿದೆ. ಮುಖೇಶ್ ರಿಶಿ, ದೊಡ್ಡಣ್ಣ, ಓಂಪ್ರಕಾಶ್ ರಾವ್, ಅನಿಲ, ಕುರಿ ಪ್ರತಾಪ್ ಮುಂತಾದವರಿದ್ದಾರೆ.

ಅಮೃತ ಅಂಜನ್: ಈ ಹಿಂದೆ ‘ಅಮೃತಾಂಜನ್’ ಎಂಬ ಕಿರುಚಿತ್ರ ಮಾಡಿ ಗಮನ ಸೆಳೆದಿದ್ದ ತಂಡದಿಂದ ಸಿದ್ಧಗೊಂಡ ಚಿತ್ರವಿದು. ಜ್ಯೋತಿ ರಾವ್ ಮೋಹಿತ್ ಆ್ಯಕ್ಷನ್–ಕಟ್ ಹೇಳಿದ್ದಾರೆ.

ಸುಧಾಕರ್ ಗೌಡ, ಗೌರವ ಶೆಟ್ಟಿ, ಪಾಯಲ್ ಚಂಗಪ್ಪ ಮುಖ್ಯಭೂಮಿಕೆಯಲ್ಲಿದ್ದಾರೆ. ನವೀನ್ ಡಿ ಪಡೀಲ್ ತಂದೆಯಾಗಿ ಹಾಗೂ ಮಧುಮತಿ ತಾಯಿಯಾಗಿ ಕಾಣಿಸಿಕೊಂಡಿದ್ದಾರೆ. ಕಾರ್ತಿಕ್ ರೂವಾರಿ, ಶ್ರೀ ಭವ್ಯ, ಪಲ್ಲವಿ ಪರ್ವ ಸೇರಿದಂತೆ ಹಲವಾರು ಕಲಾವಿದರು ಚಿತ್ರದಲ್ಲಿದ್ದಾರೆ. ಲೋಕೇಶ್ ನಾಗಪ್ಪ ಬಂಡವಾಳ ಹೂಡಿರುವ ಚಿತ್ರಕ್ಕೆ ಸುಮಂತ್ ಆಚಾರ್ಯ ಛಾಯಾಚಿತ್ರಗ್ರಹಣ, ಕಿರಣ್ ಕುಮಾರ್ ಸಂಕಲನ ಹಾಗೂ ರೋಹಿತ್ ಸೋವರ್ ಹಿನ್ನೆಲೆ ಸಂಗೀತವಿದೆ.

ಹೌದ್ದೋ ಹುಲಿಯ : ಉತ್ತರ ಕರ್ನಾಟಕ ಭಾಷೆಯ ಸೊಗಡಿರುವ ಹಾಸ್ಯಮಯ ಸಿನಿಮಾವಿದು. ಚಿತ್ರಮಂದಿರಗಳ ಜತೆಗೆ ಟಾಕೀಸ್ ಆ್ಯಪ್ ಒಟಿಟಿಯಲ್ಲಿಯೂ ಬಿಡುಗಡೆಗೊಳ್ಳುತ್ತಿರುವುದು ವಿಶೇಷ. ಈ ಹಿಂದೆ ‘ದಸ್ಕತ್’ ಎಂಬ ತುಳು ಸಿನಿಮಾ ನಿರ್ದೇಶಿಸಿದ ಅನೀಶ್ ಪೂಜಾರಿ ವೇಣೂರು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕೆ.ರತ್ನಾಕರ ಕಾಮತ್ ಮತ್ತು ಗಣೇಶ್ ಆರ್. ಕಾಮತ್ ಬಂಡವಾಳ ಹೂಡಿದ್ದಾರೆ.

‘ಕಾಮಿಡಿ ಕಿಲಾಡಿ’ ಖ್ಯಾತಿಯ ಗೋವಿಂದೇಗೌಡ (ಜಿ.ಜಿ) ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದು, ಸಂತೋಷ್ ಗುಂಪಲಾಜೆ ಮತ್ತು ದೀಕ್ಷಿತ್ ಧರ್ಮಸ್ಥಳ ಛಾಯಾಚಿತ್ರಗ್ರಹಣ, ಕಿಶೋರ್ ಶೆಟ್ಟಿ, ಸಮರ್ಥನ್ ರಾವ್ ಸಂಗೀತವಿದೆ.

ವೈಜನಾಥ್ ಬಿರಾದಾರ್, ಮಿಮಿಕ್ರಿ ಗೋಪಿ, ಪ್ರಿಯಾ ಸವದಿ, ಸೂರಜ್, ಮಲ್ಯ ಬಾಗಲಕೋಟೆ, ಸಂತೋಷ್ ರೋಣ ಮುಂತಾದವರು ಚಿತ್ರದಲ್ಲಿದ್ದಾರೆ.

ಮಾವುತ: ಲಕ್ಷ್ಮೀಪತಿ ಬಾಲಾಜಿ ನಿರ್ಮಿಸಿ, ನಾಯಕನಾಗಿ ನಟಿಸಿರುವ ಚಿತ್ರ. ರವಿಶಂಕರ್ ನಾಗ್ ನಿರ್ದೇಶನವಿದೆ.

‘ಕಾಡಿನ ಕಥೆ. ಕಾಡಿನಲ್ಲಿ ನಡೆಯುವ ಕೆಲವು ಅಕ್ರಮಗಳನ್ನು ಕಂಡು ಹಿಡಿದು ಕಾಡನ್ನು ಉಳಿಸಿಕೊಳ್ಳುವ ಮಾವುತ ಹಾಗೂ ಆನೆಯ ಕಥೆಯಿದೆ. ಸಾಗರ್ ಎಂಬ ಆನೆ ಕೂಡ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದೆ’ ಎಂದಿದೆ ಚಿತ್ರತಂಡ.

ಮಹಾಲಕ್ಷ್ಮಿ, ದಿವ್ಯಶ್ರೀ ಚಿತ್ರದ ನಾಯಕಿಯರು. ಥ್ರಿಲ್ಲರ್ ಮಂಜು, ಪದ್ಮಾ ವಾಸಂತಿ, ಬಲ ರಾಜವಾಡಿ ಮುಂತಾದವರು ನಟಿಸಿದ್ದಾರೆ. ವಿನು ಮನಸು ಸಂಗೀತ, ಲಯ ಕೋಕಿಲ, ಕೈಲಾಶ್ ಕುಟ್ಟಪ್ಪ ಹಿನ್ನೆಲೆ ಸಂಗೀತ, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣ, ವೆಂಕಿ ಯುಡಿವಿ ಸಂಕಲನವಿದೆ.

ವಿಕಲ್ಪ: ಬಹುತೇಕ ಹೊಸಬರಿಂದಲೇ ಕೂಡಿರುವ ಚಿತ್ರವಿದು. ಸೈಕಾಲಜಿಕಲ್, ಥ್ರಿಲ್ಲರ್ ಕಥಾಹಂದರದ ಚಿತ್ರಕ್ಕೆ ಪೃಥ್ವಿರಾಜ್ ಪಾಟೀಲ್ ಆ್ಯಕ್ಷನ್ ಕಟ್ ಹೇಳುವುದರ ಜತೆಗೆ ನಾಯಕನಾಗಿ ನಟಿಸಿದ್ದಾರೆ.

ಪೋಸ್ಟ್ ಟ್ರಾಮಾಟಿಕ್ ಸ್ಟ್ರೆಸ್ ಡಿಸಾರ್ಡರ್(ಪಿಟಿಎಸ್‌ಡಿ) ಎಂಬ ಮಾನಸಿಕ ರೋಗದ ಎಳೆಯನ್ನು ಆಧರಿಸಿದ ಕಥೆ ಎಂದು ಚಿತ್ರತಂಡ ಹೇಳಿದೆ. ಇಂದಿರಾ ಶಿವಸ್ವಾಮಿ ಬಂಡವಾಳ ಹೂಡಿದ್ದಾರೆ. ನಾಗಶ್ರೀ ಹೆಬ್ಬಾರ್, ಹರಿಣಿ ಶ್ರೀಕಾಂತ್, ಸಂಧ್ಯಾ ವಿನಾಯಕ್, ಗಣಪತಿ ವಡ್ಡಿನಗದ್ದೆ ಮುಂತಾದವರು ಚಿತ್ರದಲ್ಲಿದ್ದಾರೆ. ಚಿತ್ರಕ್ಕೆ ಸಂವತ್ಸರ ಸಂಗೀತ, ಅಭಿರಾಮ್ ಗೌಡ ಛಾಯಾಚಿತ್ರಗ್ರಹಣ, ಸುರೇಶ್ ಆರ್ಮುಗಂ ಸಂಕಲನವಿದೆ.

ಶ್ರೀಜಗನ್ನಾಥದಾಸರು–ಭಾಗ 2 : ಮಧುಸೂದನ್ ಹವಾಲ್ದಾರ್ ನಿರ್ಮಾಣ ಹಾಗೂ ನಿರ್ದೇಶನದ ಈ ಚಿತ್ರ ಜಗನ್ನಾಥದಾಸರ ಕುರಿತಾದ ಕಥೆ ಹೊಂದಿದೆ.

ಶರತ್ ಜೋಶಿ, ವಿಷ್ಣುತೀರ್ಥ ಜೋಶಿ, ನಿಶ್ಚಿತ ಶೆಟ್ಟಿ, ಪುಷ್ಕರ್ ದೇಶಪಾಂಡೆ, ಸಚಿನ್ ಪುರೋಹಿತ್, ವಸಂತ್, ಗುರುರಾಜ, ನಾರಾಯಣ ಕುಲಕರ್ಣಿ ಮುಂತಾದವರು ಚಿತ್ರದಲ್ಲಿದ್ದಾರೆ.

ಇವುಗಳಲ್ಲದೆ ಹೊಸಬರ ‘ಬಾಸ್’ ಎಂಬ ಚಿತ್ರ ಕೂಡ ಈ ವಾರ ತೆರೆ ಕಾಣುತ್ತಿದೆ.

ಸೀಟ್ ಎಡ್ಜ್: ಯುವನಟ ಸಿದ್ದು ಮೂಲಿಮನಿ ನಾಯಕನಾಗಿ ನಟಿಸಿರುವ ಚಿತ್ರವಿದು. ಡಾರ್ಕ್ ಕಾಮಿಡಿಯ ಜೊತೆಗೆ ಹಾರರ್-ಥ್ರಿಲ್ಲರ್ ಶೈಲಿ ಹೊಂದಿರುವ ಚಿತ್ರಕ್ಕೆ ಚೇತನ್ ಶೆಟ್ಟಿ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ರವೀಕ್ಷಾ ಶೆಟ್ಟಿ ನಾಯಕಿ.

ರಘು ರಾಮನಕೊಪ್ಪ, ಗಿರೀಶ್ ಶಿವಣ್ಣ, ಮಿಮಿಕ್ರಿ ಗೋಪಿ, ಲಕ್ಷ್ಮಿ ಸಿದ್ದಯ್ಯ, ಕಿರಣ್, ಪುನೀತ್ ಬಾಬು, ತೇಜು ಪೊನ್ನಪ್ಪ, ಮನಮೋಹನ್ ರೈ ಮೊದಲಾದವರು ಚಿತ್ರದ ಇತರ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಎನ್.ಆರ್. ಸಿನಿಮಾ ಪ್ರೊಡಕ್ಷನ್ಸ್ ಬ್ಯಾನರಿನಲ್ಲಿ ಗಿರಿಧರ ಟಿ.ವಸಂತಪುರ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಮಹಾಲಕ್ಷ್ಮಿ



ವಯೋಮಿತಿ 5 ವರ್ಷ ಸಡಿಲಿಸಿ ಆದೇಶ

ಬೆಂಗಳೂರು: ಸರ್ಕಾರಿ ಹುದ್ದೆಗಳಿಗೆ ನೇರ ನೇಮಕಾತಿಗೆ ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಒಂದು ಬಾರಿಯ ಕ್ರಮವಾಗಿ ಐದು ವರ್ಷ ಸಡಿಲಿಸಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

2027ರ ಡಿ. 31ರವರೆಗೆ ಹೊರಡಿಸುವ ಎಲ್ಲ ಅಧಿಸೂಚನೆಗಳಲ್ಲಿ ಅರ್ಜಿ ಸಲ್ಲಿಸುವ ಎಲ್ಲ ಪ್ರವರ್ಗಗಳ ಅಭ್ಯರ್ಥಿಗಳಿಗೆ ಆಯಾ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ ಈ ಸಡಿಲಿಕೆ ಸಿಗಲಿದೆ.

2025ರ ಸೆ. 29ರಂದು ಹೊರಡಿಸಿದ್ದ ಆದೇಶದಲ್ಲಿ ಗ್ರೂಪ್ 'ಬಿ' ಮತ್ತು ಗ್ರೂಪ್ 'ಸಿ' ವೃಂದದ ಹುದ್ದೆಗಳ ನೇರ ನೇಮಕಾತಿ ಗಳಿಗೆ 2027ರ ಡಿ. 31ರವರೆಗೆ ಅರ್ಜಿ ಆಹ್ವಾನಿಸಿ ಹೊರಡಿಸುವ ಎಲ್ಲ ನೇರ ನೇಮಕಾತಿ ಅಧಿಸೂಚನೆಗಳಿಗೆ ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯಲ್ಲಿ ಮೂರು ವರ್ಷ ಸಡಿಲಿಸಿ ಸರ್ಕಾರ ಆದೇಶ ಹೊರಡಿಸಿತ್ತು. ಉದ್ಯೋಗ ಆಕಾಂಕ್ಷಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳ ಮನವಿ ಪರಿಗಣಿಸಿ ಐದು ವರ್ಷಗಳ ಸಡಿಲಿಕೆ ನೀಡುವಂತೆ ಕೋರಿದ್ದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರ ಕಚೇರಿ –3, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು –560052.

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಪಿಆರ್/757/2025–26 ದಿನಾಂಕ : 29.01.2026

ಆಸಕ್ತಿ ಅಭಿವ್ಯಕ್ತಿಪಡಿಸಲು ಆಹ್ವಾನ (ಜಿಟಿಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಲಸದ ಹೆಸರು	ಎಸ್‌ಡಬ್ಲ್ಯೂಎಂ 2.0 ಅಡಿಯಲ್ಲಿ ಸಂಸ್ಥೆಗಳ ಸಾಮರ್ಥ್ಯವನ್ನು ಬಲಪಡಿಸಲು, ಕೌಶಲ್ಯಗಳನ್ನು ಹೆಚ್ಚಿಸಲು ಹಾಗೂ ಉತ್ತಮ ಕಾರ್ಯಪದ್ಧತಿಗಳನ್ನು ಉತ್ತೇಜಿಸಲು ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ ಕಾರ್ಯಕ್ರಮಗಳನ್ನು ನಡೆಸುವುದು.

(1) ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ಲಿಮಿಟೆಡ್ ಸಂಸ್ಥೆಯು, ಗೃಹ ಮತ್ತು ನಗರ ವ್ಯವಹಾರಗಳ ಸಚಿವಾಲಯ (MOHUA)ದಿಂದ ಮಾನ್ಯತೆ ಪಡೆದ ಸ್ವಚ್ಛತಾ ಜ್ಞಾನ ಪಾಲುದಾರರು ಅಥವಾ ಇತರೆ ಅರ್ಹ ಬಿಡ್‌ದಾರರಿಂದ ಆಸಕ್ತಿ ವ್ಯಕ್ತಪಡಿಸುವ ಆಹ್ವಾನ (EOI) ಅನ್ನು ಆಹ್ವಾನಿಸುತ್ತದೆ. 2. ಈ EOI ಅನ್ನು ಅಂದಾಜುಗಳನ್ನು ತಯಾರಿಸುವ ಸಲುವಾಗಿ ಮಾರುಕಟ್ಟೆ ದರಗಳನ್ನು ಪಡೆಯಲು ಮಾತ್ರ ಆಹ್ವಾನಿಸಲಾಗಿದೆ. 3. ಈ EOI ಯ ವಿವರಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಪೋರ್ಟಲ್ **https://kppp.karnataka.gov.in** ನಲ್ಲಿ **30.01.2026** ರಿಂದ ಡೌನ್‌ಲೋಡ್ ಮಾಡಬಹುದು. **4.** ಪ್ರತಿಕ್ರಿಯೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **07.02.2026 ಮಧ್ಯಾಹ್ನ 4.00 ಗಂಟೆಯವರೆಗೆ,** ಕೆಪಿಪಿಪಿ ಪೋರ್ಟಲ್ ಮೂಲಕ. **5.** ಪ್ರತಿಕ್ರಿಯೆಗಳನ್ನು ತೆರೆಯುವ ದಿನಾಂಕ: **08.02.2026 ಮಧ್ಯಾಹ್ನ 4.30 ಗಂಟೆಯ** ನಂತರ, ಕೆಪಿಪಿಪಿ ಪೋರ್ಟಲ್ ಮೂಲಕ. **6.** ಸ್ವೀಕರಿಸಲಾದ ಯಾವುದೇ ಅಥವಾ ಎಲ್ಲಾ ಪ್ರತಿಕ್ರಿಯೆಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಉಪ ಮಹಾಪ್ರಬಂಧಕ–3, ಬಿಎಸ್‌ಡಬ್ಲ್ಯೂಎಂಎಲ್ ಅವರು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ಪ್ರ/5283/ಶಿವ ಸಾಯಿ/2025–26

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿಭಾಗ, ರಾಯಚೂರು

ಕಛೇರಿ ವಿಳಾಸ: # 1–11–50/ಎ/ 14 & 15, ಸಿದ್ಧಾರ್ಥ ಕಾಲೋನಿ, ಲಯನ್ಸ್ ಕ್ಲಬ್ ಹಾಲ್ ಹಿಂದುಗಡೆ, ರಾಯಚೂರು–584101.
ಇ–ಮೇಲ್: eekwbraichur@gmail.com

ಸಂಖ್ಯೆ : ಕಜಮ/ಕಾಪಅ/ರಾವಿ/ತಾಶಾ/ಸ.ಅ/ಸಿರವಾರ/ಓ.ಹೆಚ್.ಟಿ/2025–26/1344 ದಿನಾಂಕ:28.01.2026

ಮರು ಟೆಂಡರ್ ಅಧಿಸೂಚನೆ (2ನೇ–ಕರೆ)

ಬಿಡ್ ದಾಖಲೆಯಲ್ಲಿ ವಿವರಿಸಲಾದ ಅರ್ಹತಾ ಅವಶ್ಯಕತೆಗಳನ್ನು ಪೂರೈಸುವ ಗುತ್ತಿಗೆದಾರರು/ಫರ್ಮ್‌ ರವರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://kppp.karnataka.gov.in) ಕೆಳಕಂಡ ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ.

ಸೂಚನೆ:– ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.
1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಇಂಡೆಂಟ್ ನಂ.:KUWSDB/2025-26/WS/WORK_INDENT475/CALL-2 2) ಟೆಂಡರ್‌ಗಿಟ್ಟ ಮೊತ್ತ ರೂ. (ಜಿಎಸ್‌ಟಿ ಹೊರತುಪಡಿಸಿ): 70,56,337–00. **3) ಇಎಂಡಿ ಮೊತ್ತ ರೂ.:** 1,41,000–00. **4) ಟೆಂಡರ್ ಅವಧಿ:** 12ತಿಂಗಳು
ವೇಳಾಪಟ್ಟಿ:– 1. ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ: 28–01–2026 ಮತ್ತು ಸಮಯ: 11.00 ಘಂಟೆಯ ನಂತರ. 2. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 08–02–2026 ಮತ್ತು ಸಮಯ 17:30 ಘಂಟೆಯವರೆಗೆ. 3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10–02–2026 ಮತ್ತು ಸಮಯ 11.00 ಘಂಟೆಯ ನಂತರ. 4. ಆರ್ಥಿಕ ಬಿಡ್ ತೆರೆಯುವ ದಿನಾಂಕ ಯಶಸ್ವಿ ಟೆಂಡರ್‌ದಾರರಿಗೆ ತಿಳಿಸಲಾಗುವುದು.
ಸಂಪರ್ಕಿಸಬೇಕಾದ ಅಧಿಕಾರಿ: ಕಾರ್ಯಪಾಲಕ ಅಭಿಯಂತರರು. ದೂರವಾಣಿ॥ 08532 200051

ಸಹಿ/– ಕಾರ್ಯಪಾಲಕ ಅಭಿಯಂತರರು.
ಕನನೀಸ ಮತ್ತು ಒಚ ಮಂಡಳಿ, ವಿಭಾಗ, ರಾಯಚೂರು.

DIP/RCR/684/KSMCA/687/2025-26

ಕರ್ನಾಟಕ ಸರ್ಕಾರ (ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರವರ ಕಚೇರಿ, ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ, ಜಿ. ಕಲಬುರಗಿ

ಸಂ.ಕಾನಿಇಂ/ಲೋಇ/ಸೇವಿ/ತಾಶಾ–1/2025–26/2895 ದಿನಾಂಕ : 27.01.2026

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

1) ಕಾಮಗಾರಿ ವಿವರ : 1. ಕಾಳಗಿ ತಾಲೂಕಿನ 01 ಕಾಮಗಾರಿ ಇಂಡೆಂಟ್ ಸಂ : 32445, 2) ಲೆಕ್ಕ ಶೀರ್ಷಿಕೆ : 2025–26ನೇ ಸಾಲಿನ ಮುಖ್ಯಮಂತ್ರಿ ಮೂಲ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಯೋಜನೆಯಡಿಯಲ್ಲಿನ ಕಾಮಗಾರಿ, 3) ಟೆಂಡರಗಿಟ್ಟ ಮೊತ್ತ : **ಕನಿಷ್ಠ ರೂ. 400.00 ಲಕ್ಷಗಳು ಮತ್ತು ಗರಿಷ್ಠ ರೂ. 400.00 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ : 1ನೇ ದರ್ಜೆ ಮತ್ತು ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ : **09.02.2026 ಬೆಳಿಗ್ಗೆ 11.30** ಗಂಟೆಯ ವರೆಗೆ, 6) ಟೆಂಡರ್ ಸ್ವೀಕರಣೆ ಪಡೆಯುವ ದಿನಾಂಕ: **10.02.2026 ಸಾಯಂಕಾಲ 17.30 ಗಂಟೆವರೆಗೆ,** 7) ಟೆಂಡರ್ ಅರ್ಜಿ ಬೆಲೆ ಮತ್ತು ಇಎಂಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ ಸಲ್ಲಿಸುವ ಅಂತಿಮ ದಿನಾಂಕ : **11.02.2026 ರ ಸಾಯಂಕಾಲ 16.00 ಗಂಟೆವರೆಗೆ,** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **12.02.2026 ರ ಸಾಯಂಕಾಲ 16.30 ಗಂಟೆವರೆಗೆ** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : **16.02.2026 ರ ಸಾಯಂಕಾಲ 16.30 ಗಂಟೆವರೆಗೆ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರ್ಜಾಲ ತಾಣದ ವಿಳಾಸ : www.kppp.karnataka.gov.in 13) ಬದಲಾವಣೆಗಳಿಗಾಗಿ ಸಂಪರ್ಕಿಸುವ ಬಗ್ಗೆ : ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.
ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ, ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ

ವಾ.ಸಾ.ಸಂ.ಇ.ಕಲಬುರಗಿ/1029/ದೇಶಪಾಂಡೆ ಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ/2025–26/1739 ದಿನಾಂಕ:27.01.202

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW-1, 2 & 3 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: Shahapur Tq. 1) RDPR/2025-26/BD/WORK_ INDENT23217 2) RDPR/2025-26/BD/WORK_INDENT23216 3) RDPR/2025-26/BD/WORK_INDENT23207 4) RDPR/2025-26/RD/WORK_INDENT23213 5) 5RDPR/2025-26/RD/WORK_INDENT23212 6) RDPR/2025-26/RD/WORK_INDENT23209 7) RDPR/2025-26/RD/WORK_INDENT23221 8) RDPR/2025-26/BD/WORK_INDENT23214 Shorapur Tq. 9) RDPR/2025-26/BD/WORK_INDENT23596 10) RDPR/2025-26/BD/WORK_INDENT23514 11) RDPR/2025-26/BD/WORK_INDENT23516 12) RDPR/2025-26/BD/WORK_INDENT23590 13) RDPR/2025-26/RD/WORK_INDENT23528 14) RDPR/2025-26/RD/WORK_INDENT23529 15) RDPR/2025-26/RD/WORK_INDENT23523 16) RDPR/2025-26/RD/WORK_INDENT23517 17) RDPR/2025-26/RD/WORK_INDENT23521 18) RDPR/2025-26/RD/WORK_INDENT235251 **2) ಲೆಕ್ಕ ಶೀರ್ಷಿಕೆ:** 2025–26ನೇ ಕೆ.ಕೆ.ಆರ್.ಡಿ.ಬಿ. ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ 17.00 ಮತ್ತು ಗರಿಷ್ಠ ರೂ. 100.00 ಲಕ್ಷ **4) ಗುತ್ತಿಗೆದಾರರ ದರ್ಜೆ** : 4ನೇ ದರ್ಜೆ ಮತ್ತು 3ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:**29.01.2026 ರಿಂದ 06.02.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 06.02.2026 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ (ಕೆ.ಡಬ್ಲ್ಯೂ– 3):** 09.02.2026 ಬೆಳ್ಳಿಗೆ 11:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ (ಕೆ.ಡಬ್ಲ್ಯೂ–1 & 2):** 09.02.2026 ಬೆಳ್ಳಿಗೆ 11:00 ನಂತರ **10) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ (ಕೆ.ಡಬ್ಲ್ಯೂ– 3):** 13.02.2026 ಬೆಳ್ಳಿಗೆ 11:00 ನಂತರ **11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. **12) ಅಂತರಜಾಲ ತಾಣದ ವಿಳಾಸ:** https://kppp.karnataka.gov.in
ಸೂಚನೆ :– ಟೆಂಡರರಿಗೆ ಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,
ಯಾದಗಿರ.

ವಾ.ಸಾ.ಸಂ.ಇ/ಯಾದಗಿರ/493/ಕೆ.ಎಸ್.ಎಂ.ಸಿ.&ಎ/2025–26

ಮುದ್ರಣ, ಲೇಖನ ಸಾಮಾಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ

8ನೇ ಮೈಲಿ, ಮೈಸೂರು ರಸ್ತೆ, ಆರ್.ವಿ. ಕಾಲೇಜ್ ಅಂಚೆ, ಬೆಂಗಳೂರು–560059.

ಸಂಖ್ಯೆ: ಡಿಪಿಎಸ್/ಖರೀದಿ/ಟಿಡಿಆರ್‌/1/2025–26/ಚಿನ್ನ/ಪಿಎಂ ದಿನಾಂಕ: 27.01.2026

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಪ್ರಿಂಟಿಂಗ್ ಮತ್ತು ಬೈಂಡಿಂಗ್ ಸಾಮಗ್ರಿಗಳ ಸಂಗ್ರಹಣೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ.96.73 ಲಕ್ಷಗಳು** ಹಾಗೂ ಇ.ಎಂ.ಡಿಯು **ರೂ.4.84 ಲಕ್ಷಗಳಾಗಿರುತ್ತದೆ.** ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ: 16.02.2026, 17.30 ಗಂಟೆಯಾಗಿರುತ್ತದೆ.** ಮಾಹಿತಿಯನ್ನು **https://kppp.karnataka.gov.in**ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ನಿರ್ದೇಶಕರು

ವಾಸಾಸಂಇ/ವಾ.ಪ್ರ/ಎಎ/5270/2025–26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕೃಭಾಜನಿನಿ,
ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ ದೂರವಾಣಿ: 08426–281027.
ಇ–ಮೇಲ್: dam_division@rediffmail.com
ಸಂ:ಕೃಭಾಜನಿನಿ/ಆಅಘ/ಜಿ/ಟೆಂಡರ್/2025–26/2799
ದಿನಾಂಕ:27.01.2026

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ–586201 ತಾ: ನಿಡಗುಂದಿ ಜಿ: ವಿಜಯಪುರ. ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳ Item Rate & Percentage basis from the eligible contractors for the work indents of **Two Cover** – work indents of – (1) I.No. 2685 – 1972.06 Lakhs (Others) ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.

1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: **29.01.2026 ರಿಂದ 16.02.2026** ಸಾಯಂಕಾಲ 5.00 ಘಂಟೆಯವರೆಗೆ

2. ಪೂರ್ವಭಾವಿ ಸಭೆ ಇ.ಸಂ. I.No.2685-1972.06 Lakhs (Others) : 09.02.2026 ಮುಂಜಾನೆ 11.00 ಘಂಟೆಗೆ

3. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ (Two Cover): 18.02.2026 ಮುಂಜಾನೆ 11.00 ಘಂಟೆಗೆ.**

4. ಆರ್ಥಿಕ ಬಿಡ್ ತೆರೆಯುವ **ದಿನಾಂಕ (Two Cover): 21.02.2026 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. https://kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ.

ವಾಸಾಸಂಇ/ವಿಜಯಪುರ/641/ಕೆಎಸ್‌ಎಂಸಿಎ/2025–26

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ

ಸಂಖ್ಯೆ:ವಿ.ತಾ.ವಿ./ಬೆ/ಸ್ಥಾ.ಅ./2025–26/ಐ.ಎಫ್.ಟಿ. ನಂ.127/5666 ದಿನಾಂಕ: 27–01–2026

ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ. ರ ಪ್ರಕಾರ ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು: **ವಿತಾವಿಯ ಪ್ರಾದೇಶಿಕ ಕೇಂದ್ರ ಕಲಬುರಗಿಯಲ್ಲಿರುವ ಅತಿಥಿ ಗೃಹ ಕಟ್ಟಡದ ನವೀಕರಣ ಮತ್ತು ಇತರೆ ಸಣ್ಣ ಕೆಲಸಗಳನ್ನು ನಿರ್ವಹಿಸುವ ಕಾಮಗಾರಿ ಮೊತ್ತ ರೂ. 80,50,457/– (ತೆರಿಗೆ ರಹಿತ).**
ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **27–01–2026** ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ವಾಸಾಸಂಇ/ಬೆಳಗಾವಿ/1716/ಅಡ್ವರ್ಟೋ/2025–26

ಕರ್ನಾಟಕ ಸರ್ಕಾರ

1ನೇ ಕರ್ನಾಟಕ ಬಾಲಕಿಯರ ಬೆಟಾಲಿಯನ್ ಎನ್‌ಸಿಸಿ (ನ್ಯಾಷನಲ್ ಕೆಡೆಟ್ ಕಾರ್ಪ್ಸ್)

ಮೈಸೂರು ರಸ್ತೆ, ಸೆಟಲೈಟ್ ಬಸ್ ನಿಲ್ದಾಣ, ಬೆಂಗಳೂರು–560026.

No: 602/Accts/RDC/2026 Dated: 23/01/2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ದಿನಾಂಕ 04ನೇ ಫೆಬ್ರವರಿ 2026 ರಂದು ಮಾನ್ಯ ಡೆಪ್ಯುಟಿ ಡೈರೆಕ್ಟರ್ ಜನರಲ್ ಎನ್‌ಸಿಸಿ ಎನ್‌ಸಿಸಿ (ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯ), ಇವರ ಅಧ್ಯಕ್ಷತೆಯಲ್ಲಿ) ಇತ್ತೀಚೆಗೆ ನವದೆಹಲಿಯಲ್ಲಿ ನಡೆದ 'ರಿಪಬ್ಲಿಕ್ ಡೇ ಕ್ಯಾಂಪ್' ನಲ್ಲಿ ಪ್ರಧಾನ ಮಂತ್ರಿಯವರ ಬ್ಯಾನರ್ ವಿಜೇತರಾದ ಕೆಡೆಟ್‌ಗಳಿಗೆ ಅಭಿನಂದನಾ ಸಮಾರಂಭವನ್ನು **ಜ್ಯೋತಿ ನಿವಾಸ ಕಾಲೇಜು, ಕೋರಮಂಗಲ, ಬೆಂಗಳೂರು** ಇಲ್ಲಿನ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಎನ್‌ಸಿಸಿ ಕೆಡೆಟ್‌ಗಳು, ಪೋಷಕರು, ಅತಿಥಿಗಳು ಹಾಗೂ ಸಿಬ್ಬಂದಿಗಳಿಗೆ (750 ಮಂದಿ) ಭೋಜನವನ್ನು ಒದಗಿಸಲು ಮುಚ್ಚಿದ ಲಕೋಟೆಗಳಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. Dinner Menu ವಿವರಗಳನ್ನು 30.01.2026 ರಿಂದ 02.02.2026 ರವರೆಗೆ ಸಮಯ ಬೆಳಗ್ಗೆ 12.00 ರಿಂದ ಸಂಜೆ 17.00 ರವರೆಗೆ ಕಮಾಂಡಿಂಗ್ ಆಫೀಸರ್, 1ನೇ ಕರ್ನಾಟಕ ಬಾಲಕಿಯರ ಬೆಟಾಲಿಯನ್ ಎನ್‌ಸಿಸಿ, ಮೈಸೂರು ರಸ್ತೆ ಸೆಟಲೈಟ್ ಬಸ್ ನಿಲ್ದಾಣ, ಬೆಂಗಳೂರು–560026, (ಮೊ.9622526622) ಇವರಿಂದ ಪಡೆಯಬಹುದು.

(ಎ) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **02.02.2026** ರ ಮಧ್ಯಾಹ್ನ 12.00 ಗಂಟೆಯವರೆಗೆ.
(ಬಿ) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **03.02.206** ರ ಮಧ್ಯಾಹ್ನ 13.00 ಗಂಟೆಗೆ.

ಸಹಿ/–
ಕಮಾಂಡಿಂಗ್ ಆಫೀಸರ್
1ನೇ ಕರ್ನಾಟಕ ಬಾಲಕಿಯರ ಬೆಟಾಲಿಯನ್ ಎನ್‌ಸಿಸಿ ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/5279/ಆಕಾರ್/2025–26

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಬಳ್ಳಾರಿ. ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ಲೆ.ಶೀ /ಟೆಂಡರು /2025–26/1828
ದಿನಾಂಕ 28–01–2026

ಅಲ್ಪಾವಧಿ ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2024–25 ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮ 5054 ಯೋಜನೆ ಮತ್ತು 2024–25 ನೇ ಸಾಲಿನ ಶಾಸಕರು ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಒಟ್ಟು 02 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.
ಕಾಮಗಾರಿಗಳ ಇಂಡೆಂಟ್ ಸಂಖ್ಯೆ–
1.RDPR/2025-26/RD/WORK_INDENT18246/CALL-3
2.RDPR/2025-26/BD/WORK_INDENT21392/call-2
ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 28–01–2026** ರಿಂದ **ದಿನಾಂಕ 04–02–2026** ರಂದು **ಸಂಜೆ 4.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 04–02–2026** ರ **16.30** ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ಆನ್ ಲೈನ್‌ನಲ್ಲಿ **ದಿನಾಂಕ: 05–02–2026 ರಂದು 17.30** ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/942/ಕೆಎಸ್‌ಎಂಸಿಎ/2025–26

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)

KSIIDC
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
"ಖನಿಜ ಭವನ", 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01.
ದೂರವಾಣಿ: 080 22258131-33, 22254330,
ವೆಬ್‌ಸೈಟ್: https://ksiidc.karnataka.gov.in ಇ–ಮೇಲ್: eswara.ksiidc@gmail.com

ಕೆಎಸ್‌ಐಐಡಿಸಿಗಾಗಿ ವಿಷನ್ ಡಾಕ್ಯೂಮೆಂಟ್ ತಯಾರಿಸಲು ವೃತ್ತಿಪರ ಸಲಹಾ ಸಂಸ್ಥೆಯ ಆಯ್ಕೆ ಪ್ರಸ್ತಾವನೆಗೆ ಕೋರಿಕೆ (RFP)

(ಕೆಪಿಪಿ ಪೋರ್ಟಲ್ (https://kppp.karnataka.gov.in) ಮೂಲಕ ಮಾತ್ರ)

ಕೆಎಸ್‌ಐಐಡಿಸಿ ಯು, ಆರ್‌ಎಫ್‌ಪಿ ದಾಖಲೆಯ ಉಲ್ಲೇಖ ನಿಯಮಗಳಿಗೆ ಅನುಸಾರವಾಗಿ ಕೆಎಸ್‌ಐಐಡಿಸಿಗಾಗಿ ವಿಷನ್ ಡಾಕ್ಯೂಮೆಂಟ್ ತಯಾರಿಸಲು ಸುಸ್ಥಾಪಿತ, ಹೆಸರಾಂತ ವೃತ್ತಿಪರ ಸಲಹಾ ಸಂಸ್ಥೆಯನ್ನು ಆಯ್ಕೆಮಾಡಲು ಉದ್ದೇಶಿಸಿದೆ. ಸಲಹಾ ಸಂಸ್ಥೆಯು ನಿಯಮಿತ ಕಾರ್ಯವನ್ನು ಪೂರ್ಣಗೊಳಿಸಲು ಡೊಮೇನ್ ಪರಿಣಿತಿ ಮತ್ತು ಕ್ರಿಯಾತ್ಮಕ ಸಾಮರ್ಥ್ಯ ಹಾಗೂ ನುರಿತ ಮಾನವ ಸಂಪನ್ಮೂಲವನ್ನು ಹೊಂದಿರಬೇಕು. ಆರ್‌ಎಫ್‌ಪಿ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **(https://kppp.karnataka.gov.in)** ಮೂಲಕ ಪಡೆಯಬಹುದು. ಆಸಕ್ತ ಸಲಹೆಗಾರರು **30.01.2026** ರಿಂದ ಇ–ಸಂಗ್ರಹಣೆ ವೇದಿಕೆಯ ಮೂಲಕ ಸೇವೆಗಳನ್ನು ಒದಗಿಲು ಅಗತ್ಯವಿರುವ ಇಎಂಡಿ **(ರೂ. 1,00,000/–)** ಜೊತೆಗೆ ತಮ್ಮ ಪ್ರಸ್ತಾವನೆಗಳನ್ನು ಸಲ್ಲಿಸಬಹುದು.
ಪ್ರಮುಖ ದಿನಾಂಕಗಳು: ಬಿಡ್ ಪೂರ್ವ ಸಭೆ : **04.02.2026.** ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **13.02.2026.**
ಕೆಎಸ್‌ಐಐಡಿಸಿ ಯು ಆರ್‌ಎಫ್‌ಪಿಗಳಲ್ಲಿನ ನಿಯಮಗಳನ್ನು ಬದಲಾಯಿಸುವ ಹಾಗೂ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣವನ್ನೂ ನೀಡದೆ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ.
ಯಾವುದೇ ವಿಚಾರಣೆ/ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಿ: ಉಪ ಪ್ರಧಾನ ವ್ಯವಸ್ಥಾಪಕರು– (ಸಿ&ಆ), ಇ–ಮೇಲ್: info@ksiidc.com, murthy.ksiidc@gmail.com

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ, ಕೆಎಸ್‌ಐಐಡಿಸಿ

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು ಕಚೇರಿ, ಬಿಟಿಎಂ ಬಡಾವಣೆ ವಿಭಾಗ, ಜಿ.ಬಿ.ಎ. ಸಂಕೀರ್ಣ, 2ನೇ ಮಹಡಿ, ಲಷ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು–560 030.

ಸಂಖ್ಯೆ: ಕಾಪಾಅ/ಬಿಟಿಎಂ/ಕೆಪಿಪಿಪಿ/12/2025–26 ದಿನಾಂಕ:29–01–2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿಲಕೋಟೆ ಪದ್ಧತಿ) 1ನೇ ಕರೆ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಬಡಾವಣೆ ವಿಭಾಗ, ಬೆಂ.ದ.ನ.ಪಾ. ಇವರು ಆಯುಕ್ತರು, ಬೆಂ ದ ನ ಪಾಲಿಕೆ ಇವರ ಪರವಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಅಥವಾ ತತ್ಸಮಾನವಾಗಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ಬಿ ಟಿ ಎಂ ಬಡಾವಣೆಯಿಂದ ಹೊಸೂರು ರಸ್ತೆಯವರೆಗೆ ಮಡಿವಾಳ ಕೆರೆ ಏರಿ ರಸ್ತೆ ಜೊತೆಯಾಗಿ ಯೋಜನೆ 20ಎಮ್ ಕಾರಿಡಾರ್ ಕಾಮಗಾರಿಗಾಗಿ ಅಪ್ ಸ್ಟ್ರೀಮ್ ಕಡೆ ಮತ್ತು ಔಟ್ಲೆಟ್ ಸಂಖ್ಯೆ: 2ರಲ್ಲಿ ಸೇತುವೆಯನ್ನು ನಿರ್ಮಾಣ ಮಾಡುವುದು **ಕಾಮಗಾರಿಯ ಅಂದಾಜು ಮೊತ್ತ: ₹.500.00 ಲಕ್ಷಗಳು, ಇಎಂಡಿ ಮೊತ್ತ: ₹.7,50,000/– ₹.1.00 ಲಕ್ಷ ಕೆಪಿಪಿ ಪೋರ್ಟಲ್ ಮೂಲಕ ಪಾವತಿಸುವುದು ಮತ್ತು ಉಳಿಕೆ ಮೊತ್ತ ₹.6,50,000/– ಗಳನ್ನು ಬ್ಯಾಂಕ್ ಗ್ಯಾರಂಟಿ ಮೂಲಕ ಪಾವತಿಸುವುದು)**

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **12–02–2026**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಆರ್‌ಎಫ್‌ಪಿ ದಾಖಲೆಗಳು ದಿನಾಂಕ: **02–02–2026**ರ ನಂತರ ದೊರೆಯುತ್ತದೆ. (3) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ವಲಯ–2, ಬೆಂಗಳೂರು ದಕ್ಷಿಣ ನಗರ ಪಾಲಿಕೆ, ಬೇಗೂರು ಮುಖ್ಯ ರಸ್ತೆ, ಬೊಮ್ಮನಹಳ್ಳಿ ವಲಯ ಕಚೇರಿ ಬೆಂಗಳೂರು–68 ಇಲ್ಲಿ ದಿನಾಂಕ: **06–02–2026** ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (4) ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **12–02–2026**ರ ಸಂಜೆ **4:00** ಗಂಟೆಯವರೆಗೆ. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **13–02–2026**ರ ಸಂಜೆ **4:30** ಗಂಟೆಯ ನಂತರ ತೆರೆಯಲಾಗುವುದು. (6) ಆರ್ಥಿಕ ಪ್ರಸ್ತಾವನೆಗಳನ್ನು ತಾಂತ್ರಿಕ ಪ್ರಸ್ತಾವನೆಗಳಿಗೆ ಕೆಪಿಪಿಪಿ ಪೋರ್ಟಲ್ ಮೂಲಕ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಬಡಾವಣೆ ವಿಭಾಗ
ಬೆಂಗಳೂರು ದಕ್ಷಿಣ ನಗರ ಪಾಲಿಕೆ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,

ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ, ನೆಲಮಹಡಿ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001 ದೂರವಾಣಿ ಸಂಖ್ಯೆ: 080–22866066, 080–22866046
ಇ–ಮೇಲ್ ವಿಳಾಸ: dirdwdscka@gmail.com, dir-dwdsc-ka@nic.in

No: DEDSC/2025-26/IND0124 Dated: 27-01-2026

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮುಖಾಂತರ)

2025–26ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಹಾಗೂ ನಂತರದ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್‌ಗಳನ್ನು ಖರೀದಿಸಿ ವಿತರಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬಿಡ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 10–02–2026 ಮತ್ತು ಸಮಯ ಮಧ್ಯಾಹ್ನ 05:00 ಗಂಟೆಯ ವರೆಗೆ, ದಿನಾಂಕ:11–02–2026 ಸಂಜೆ 5:30 ಗಂಟೆಗೆ ತಾಂತ್ರಿಕ ಬಿಡ್ ಮತ್ತು ದಿನಾಂಕ:13–02–2026 ಮಧ್ಯಾಹ್ನ 04:30 ಗಂಟೆಗೆ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಯಾವುದೇ ಕಾರಣ ನೀಡದೇ ಎಲ್ಲಾ ಆಫರ್ಸ್/ಬಿಡ್‌ಗಳನ್ನು ಸ್ವೀಕರಿಸುವ, ತಿರಸ್ಕರಿಸುವ, ಮಾರ್ಪಡಿಸುವ ಮತ್ತು ಮರುಟೆಂಡರ್ ಆಹ್ವಾನಿಸುವ ಹಕ್ಕನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ. ಟೆಂಡರ್ ವಿವರಗಳನ್ನು www.kppp.karnataka.gov.in ಜಾಲ ತಾಣದಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿ.ವಿ.ಗೋಪುರ, ಡಾ॥ ಬಿ.ಅರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇವರನ್ನು ದೂರವಾಣಿ ಸಂಖ್ಯೆ:080–22866066, 22860907 ಹಾಗೂ ಇಲಾಖೆಯ ಜಾಲತಾಣ www.dwdsc.karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.

DIPR/CP/5272/Zen/2025-26

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಮಂಡ್ಯ (ರೇಷ್ಮೆ ಇಲಾಖೆ)

ರೇಷ್ಮೆ ಉಪನಿರ್ದೇಶಕರ ಕಚೇರಿ, ಜಿಲ್ಲಾ ಪಂಚಾಯತ್, ಮಂಡ್ಯ
ಸಂ:ತಾಂ2:ರೇಉನಿ:ಜಿಪಂ:ಇ–ಟೆಂ:ಪ್ರ:ಸೋಂನಿ:01:2025–26
ದಿನಾಂಕ:23.01.2026

ಸಂಕ್ಷಿಪ್ತ ಅಲ್ಪಾವಧಿ ಇ–ಟೆಂಡರ್ ಕರೆ–2 ಪ್ರಕಟಣೆ (ದ್ವಿಲಕೋಟೆ)

ಈ ಮೂಲಕ ಸಾರ್ವಜನಿಕರಿಗೆ ಮತ್ತು ರೇಷ್ಮೆ ಸಂಶೋಧನಾ ಸಂಸ್ಥೆಗಳಿಂದ ಅಧಿಕೃತ ಪೇಟೆಂಟ್ ಶಿಫಾರಸ್ಸು ಧೃಡೀಕರಣ ಮತ್ತು ವಾಣಿಜ್ಯ ಉತ್ಪಾದನೆಗೆ ರಹದಾರಿ ಪಡೆದಿರುವ ಅರ್ಹ ಉತ್ಪಾದಕರಿಂದ 2025–26ನೇ ಸಾಲಿಗೆ ಕ್ಷೇತ್ರ ಮಟ್ಟದಲ್ಲಿ ರೇಷ್ಮೆ ಬೆಳೆಗಳನ್ನು ರೋಗಗಳಿಂದ ಸಂರಕ್ಷಿಸಲು ಹಾಗೂ ಉತ್ತಮ ಗುಣಮಟ್ಟದ ರೇಷ್ಮೆ ಗೂಡು ಉತ್ಪಾದನೆಗೆ ಹಾಗೂ ಹಿಪ್ಪುನೇರಳೆ ಸೊಪ್ಪಿನ ಇಳುವರಿ ಹೆಚ್ಚಿಸಲು ಅವಶ್ಯವಿರುವ ಸಸ್ಯ ಸಂವರ್ಧಕಗಳು, ಹುಳಿಸಾಕಾಣಿಕೆ ಮನೆಗೆ ಸಾಮಾನ್ಯ ಮತ್ತು ಹಾಸಿಗೆ ಸೋಂಕು ನಿವಾರಕಗಳು ಈ ಕಚೇರಿ ವ್ಯಾಪ್ತಿಗೆ ಒಳಪಡುವ 07 ತಾಲ್ಲೂಕುಗಳಿಗೆ ಸರಬರಾಜು ಮಾಡಲು ಪಾರದರ್ಶಕ ನಿಯಮಗಳಿಗನುಸಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ ಅನುಸಾರ ಸರ್ಕಾರದ E-Procurement ವೆಬ್‌ಸೈಟ್ http://kppp.karnataka.gov.in ರಲ್ಲಿ ಈ ಕೆಳಗಿನ ಅನುಸೂಚಿಯ ಪ್ರಕಾರ ಸರಬರಾಜಿಗೆ ಇ–ಟೆಂಡರ್ ಅನ್ನು ಕರೆಯಲಾಗಿದೆ. ಹಾಗೆಯೇ ಟೆಂಡರ್‌ಗಳಲ್ಲಿ ಭಾಗವಹಿಸುವ ಮುನ್ನ ಇದೇ ಪ್ರಕಟಣೆಯಲ್ಲಿರುವ ಷರತ್ತುಗಳು ಅನ್ವಯವಾಗುತ್ತವೆ. ಕರೆ–2 ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ.
(1) Tender Reference No and date : NO. SD/2025-26/IND0167 Date: 23-01-2026. (2) Date of uploading of Tender : Dt. 23.01.2026. (3) Last Date and Time for Submission of Tender : 02.02.2026 at 5.30 PM.(4) Date & Time of opening of Technical bid : 04.02.2026 at 11.30 AM (5) Tentative Date & Time of opening of Commercial bid : Dt. 06.02.2026 at 11.30 AM. (6) EMD Amount : As mentioned in the TENDER. (7) Venue of pre-bid meeting, opening of tender & address for communication : Deputy Director of Sericulture Zilla Panchayath, Mandya, Old M C Road, Acetate Town, Mandya-571404 Phone: 9845279986, e-mail: ddserimandya@yahoo.co.in

ಸಹಿ/–ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಮಂಡ್ಯ

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/738/2025–26

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ–1,2:ಟೆಂಡರ್–57:2025–26 ದಿನಾಂಕ: 28.01.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ವಿಭಾಗ ಚಿತ್ರದುರ್ಗ ವಿಭಾಗ ವ್ಯಾಪ್ತಿಯಲ್ಲಿನ ಚಿತ್ರದುರ್ಗ, ಚಳ್ಳಕೆರೆ ಮತ್ತು ಹೊಸದುರ್ಗ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ, ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕ ಶೀರ್ಷಿಕೆ: 4059–80–051–0–60–132 ಮುಖ್ಯಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ ಅಡಿ 12 ಕಾಮಗಾರಿಗಳಿಗೆ ಕನಿಷ್ಠ ಅಂದಾಜು ಮೊತ್ತ ರೂ. 250.00 ಲಕ್ಷ ಮತ್ತು ಗರಿಷ್ಟ ಅಂದಾಜು ಮೊತ್ತ 1000.00 ಲಕ್ಷ ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ದತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಗಳಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 13.02.2026 ಸಂಜೆ 4.00 ಗಂಟೆಯವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ: 16.02.2026 ಬೆಳಿಗ್ಗೆ 11.00 ಗಂಟೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ ಸಂಖ್ಯೆ: 08194–222446) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

DIPR/CTA/KSMCA/633/2025-26

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)–2/2025–26/9271–83 ದಿನಾಂಕ: 29.01.2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್ ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ ಮತ್ತು ಕಾಮಗಾರಿಗಳ ವಿವರ
ಕೆಪಿಟಿಸಿಎಲ್/2025–26/ಎಸ್‌ಎಸ್/ವರ್ಕ್_ಇಂಡೆಂಟ್3254
ಈ ಕೆಳಗಿನ ವಿದ್ಯುತ್ ಉಪಕೇಂದ್ರಗಳನ್ನು ಸಂಬಂಧಿತ ಪ್ರಸರಣ ಮಾರ್ಗಗಳ ನಿರ್ಮಾಣದೊಂದಿಗೆ (ಹಂತ–1), ಮಾರ್ಗದ ಗೋಪುರಗಳು ಮತ್ತು ಸ್ಟೇಷನ್ ಸ್ಟ್ರಕ್ಚರ್‌ಗಳ ವಿನ್ಯಾಸವನ್ನೊಳಗೊಂಡಂತೆ ಸ್ಥಾಪಿಸುವುದು: ಅ) **ಪಿಎಂ ಮಿತ್ರ ಟೆಕ್ಸ್‌ಟೈಲ್ ಪಾರ್ಕ್ ಕಲಬುರಗಿ**ಯಲ್ಲಿ 2x200ಎಂ.ವಿ.ಎ, 220/132ಕೆ.ವಿ ಮತ್ತು 1x20ಎಂ.ವಿ.ಎ, 132/11ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸಂಬಂಧಿತ 1.985ಕಿ.ಮೀ ಉದ್ದದ ಪ್ರಸರಣ ಮಾರ್ಗದ ನಿರ್ಮಾಣದೊಂದಿಗೆ ಸ್ಥಾಪಿಸುವುದು ಮತ್ತು ಫಿರೋಜಾಬಾದ್ (ಕಲಬುರಗಿ) ಉಪ ಕೇಂದ್ರದಲ್ಲಿ 2ಸಂಖ್ಯೆ ಟರ್ಮಿನಲ್ ಬೇಗಳನ್ನು ನಿರ್ಮಿಸುವುದು. ಆ) **ಕಲಬುರಗಿ ತಾಲ್ಲೂಕು ಮತ್ತು ಜಿಲ್ಲೆ, ನಡಿಸಿನ್ನೂರು ಗ್ರಾಮ (ಉಪಕೇಂದ್ರ–1) ಪಿಎಂ ಮಿತ್ರ ಟೆಕ್ಸ್‌ಟೈಲ್ ಪಾರ್ಕ್**‌ನಲ್ಲಿ 2x20ಎಂ.ವಿ.ಎ, 132/33ಕೆ.ವಿ ಮತ್ತು 2x20ಎಂ.ವಿ.ಎ, 132/11ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸಂಬಂಧಿತ 1.811ಕಿ.ಮೀ ಉದ್ದದ ಪ್ರಸರಣ ಮಾರ್ಗದ ನಿರ್ಮಾಣದೊಂದಿಗೆ ಸ್ಥಾಪಿಸುವುದು. ಇ) **ಕಲಬುರಗಿ ತಾಲ್ಲೂಕು ಮತ್ತು ಜಿಲ್ಲೆ, ಕೀರಣಗಿ ಗ್ರಾಮ (ಉಪಕೇಂದ್ರ–2) ಪಿಎಂ ಮಿತ್ರ ಟೆಕ್ಸ್‌ಟೈಲ್ ಪಾರ್ಕ್**‌ನಲ್ಲಿ 2x20ಎಂ.ವಿ.ಎ, 132/33ಕೆ.ವಿ ಮತ್ತು 2x20ಎಂ.ವಿ.ಎ, 132/11ಕೆ.ವಿ ವಿದ್ಯುತ್ ಉಪಕೇಂದ್ರವನ್ನು ಸಂಬಂಧಿತ 1.114ಕಿ.ಮೀ ಉದ್ದದ ಪ್ರಸರಣ ಮಾರ್ಗದ ನಿರ್ಮಾಣದೊಂದಿಗೆ ಸ್ಥಾಪಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ: 02.02.2026** ರಂದು **ಅಪರಾಹ್ನ 15:00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಮೇಲೆ ತಿಳಿಸಿರುವ ಕಾಮಗಾರಿಗೆ ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು **ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್),
ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, ಇಂಧನ ಭವನ,
9ನೇ ಮಹಡಿ, ಬೆಂಗಳೂರು–560009

ಪ್ರಜಾವಾಣಿ ಶುಕ್ರವಾರ • ಜನವರಿ 30, 2026
ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸಾರ್ವಜನಿಕ ವ್ಯವಹಾರಗಳ ಮೇಲೆ ಖಾಸಗಿ ಹಿತಾಸಕ್ತಿಗಳು ಬೀರುವ ಪ್ರಭಾವದಷ್ಟು ಅಪಾಯಕಾರಿಯಾದುದು ಬೇರೆ ಯಾವುದೂ ಇಲ್ಲ.
–ರೂಸೊ

ಸಂಪಾದಕೀಯ

ಅಬಕಾರಿ ಇಲಾಖೆ: ಭ್ರಷ್ಟಾಚಾರ ಉಪೇಕ್ಷೆ ಸಲ್ಲ, ತನಿಖೆ ನಡೆಯಲಿ

ರಾಜ್ಯದ ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪಗಳನ್ನು ರಾಜ್ಯ ಸರ್ಕಾರ ನಿರಾಕರಿಸಿರುವುದು ಒಪ್ಪುವಂಥದ್ದೂ ಅಲ್ಲ, ಸರ್ಕಾರದ ವಿವರಣೆಯು ಸಮರ್ಪಕವಾಗಿಯೂ ಇಲ್ಲ. ಲೋಕಾಯುಕ್ತ ದಾಳಿಯ ಸಂದರ್ಭದಲ್ಲಿ ಬಯಲಾಗುತ್ತಿರುವ ಸಂಗತಿಗಳು ವರ್ತಕರ ಸಂಘಟನೆಗಳು ಹಾಗೂ ವಿರೋಧ ಪಕ್ಷಗಳು ಮಾಡುತ್ತಿರುವ ಆರೋಪಕ್ಕೆ ಪುಷ್ಟಿ ನೀಡುವಂತಿವೆ. ಈ ಆರೋಪಗಳೆಲ್ಲ ರಾಜಕೀಯಪ್ರೇರಿತ ಎಂದು ಹೇಳುವುದು ಸರಿಯಲ್ಲ. ಮದ್ಯ ಮಾರಾಟ ಸನ್ನದು ಪಡೆಯಲು ಹಾಗೂ ಅಂಗಡಿ ನಡೆಸಲು ₹6,000 ಕೋಟಿ ಲಂಚ ನೀಡಲಾಗಿದೆ ಎಂದು ಕರ್ನಾಟಕ ರಾಜ್ಯ ಮದ್ಯ ಮಾರಾಟಗಾರರ ಸಂಘ ಆರೋಪಿಸಿದೆ. ಮದ್ಯದ ಬಳಕೆಯ ಮೇಲೆ ಮಿತಿ ಹೇರುವ ಉದ್ದೇಶದಿಂದ ಹೊಸದಾಗಿ ಮದ್ಯದ ಅಂಗಡಿಗಳಿಗೆ ಮತ್ತು ಬಾರ್ ಆ್ಯಂಡ್ ರೆಸ್ಟಾರೆಂಟ್‌ಗಳ ಆರಂಭಕ್ಕೆ ಪರವಾನಗಿ (ಸಿಎಲ್‌-9) ನೀಡುವುದನ್ನು ತಡೆಹಿಡಿದ 33 ವರ್ಷಗಳಷ್ಟು ಹಳೆಯದಾದ ತೀರ್ಮಾನವು ಈ ಪರಿಸ್ಥಿತಿಗೆ ಮೂಲ ಕಾರಣ. ಹೊಸ ಪರವಾನಗಿ ನೀಡುವುದಕ್ಕೆ ಆಗ ಜಾರಿಗೊಳಿಸಿದ ನಿರ್ಬಂಧವು ಈಗ ಅರ್ಥ ಕಳೆದುಕೊಂಡಿದೆ. 33 ವರ್ಷಗಳಲ್ಲಿ ಕರ್ನಾಟಕದ ಜನಸಂಖ್ಯೆ ಹೆಚ್ಚಾಗಿದೆ, ನಗರ ಪ್ರದೇಶಗಳ ವ್ಯಾಪ್ತಿ ಹೆಚ್ಚಾಗಿದೆ ಮತ್ತು ಇಲ್ಲಿನ ಆತಿಥ್ಯ ಉದ್ಯಮವು ವ್ಯಾಪಕ ಬೆಳವಣಿಗೆ ಕಂಡಿದೆ. ಆದರೆ, ಪರವಾನಗಿ ನೀಡುವ ವ್ಯವಸ್ಥೆಯು ಗತಿಸಿಹೋದ ಕಾಲಘಟ್ಟದಲ್ಲಿಯೇ ನಿಂತುಬಿಟ್ಟಿದೆ. ಕೃತಕವಾದ ಕೊರತೆಯು ಪರವಾನಗಿಗಳನ್ನು ಮಾರಾಟ ಮಾಡಬಹುದಾದ ಸರಕನ್ನಾಗಿಸಿದೆ. ಪರವಾನಗಿ ಮಾರಾಟ, ಖರೀದಿಗಾಗಿ ಒಂದು ಕಾಳಸಂತೆ ಸೃಷ್ಟಿಯಾಗಿದೆ. ಪರಿಣಾಮವಾಗಿ ರಾಜ್ಯ ಸರ್ಕಾರಕ್ಕೆ ವರಮಾನ ನಷ್ಟ ಆಗುತ್ತಿದೆ. ಈ ಪರಿಸ್ಥಿತಿಯು ವ್ಯಾಪಾರ ವಹಿವಾಟಿನ ಮೇಲೆಯೂ ದುಷ್ಪರಿಣಾಮ ಬೀರಿದೆ. ಹೊಸದಾಗಿ ಸಿಎಲ್‌-9 ಪರವಾನಗಿ ಸಿಗುತ್ತಿಲ್ಲವಾದ ಕಾರಣದಿಂದಾಗಿ ಉದ್ಯಮಿಗಳು ಅನಿವಾರ್ಯವಾಗಿ ಸಿಎಲ್‌-7 ಪರವಾನಗಿಗೆ ಅರ್ಜಿ ಸಲ್ಲಿಸುತ್ತಿದ್ದಾರೆ. ಈ ಪ್ರಕ್ರಿಯೆಯಲ್ಲಿ ಪ್ರತಿ ಹಂತದಲ್ಲಿಯೂ ದೊಡ್ಡ ಮೊತ್ತದ ಲಂಚ ನೀಡಬೇಕಾಗುತ್ತದೆ ಎಂಬ ಆರೋಪ ಇದೆ.

ಪರವಾನಗಿ ನೀಡುವ ವ್ಯವಸ್ಥೆಯಲ್ಲಿನ ಲೋಪಗಳು ಅಬಕಾರಿ ಇಲಾಖೆಯಲ್ಲಿ ವ್ಯಾಪಕ ಭ್ರಷ್ಟಾಚಾರಕ್ಕೆ ಕಾರಣವಾಗಿವೆ. ಇದರಿಂದ, ಸರ್ಕಾರದ ಬೊಕ್ಕಸಕ್ಕೆ ದೊಡ್ಡ ಪ್ರಮಾಣದಲ್ಲಿ ನಷ್ಟವಾಗುತ್ತಿದೆ.

ಹಿರಿಯ ಅಬಕಾರಿ ಅಧಿಕಾರಿಯೊಬ್ಬರು ಸಿಎಲ್‌-7 ಪರವಾನಗಿ ನೀಡಲು ಲಂಚ ಪಡೆಯುತ್ತಿದ್ದ ಆರೋಪದ ಅಡಿಯಲ್ಲಿ ಈಚೆಗೆ ಬಂಧನಕ್ಕೆ ಒಳಗಾಗಿರುವುದು ವ್ಯವಸ್ಥೆಯಲ್ಲಿನ ಕೊಳಕಿಗೆ ಉದಾಹರಣೆಯಂತಿದೆ. ಇಷ್ಟೇ ಸಮಸ್ಯಾತ್ಮಕವಾಗಿ ಇರುವುದು ವರ್ಗಾವಣೆ ದಂಧೆ. ಇಲ್ಲಿ ಆಕರ್ಷಕ ಹುದ್ದೆಗಳನ್ನು ಖರೀದಿಸುವ, ಮಾರಾಟ ಮಾಡುವ ಕೆಲಸ ನಡೆಯುತ್ತದೆ ಎಂಬ ಆರೋಪ ಇದೆ. ಇಂತಹ ಹುದ್ದೆಗಳಿಗೆ ಬರಲು 'ಪಾವತಿ' ಮಾಡಿದ ಅಧಿಕಾರಿಗಳಿಗೆ, ತಮ್ಮ 'ಪಾವತಿ'ಯನ್ನು ಮರಳಿ ಪಡೆಯುವ ಉದ್ದೇಶದಿಂದ ವರ್ತಕರನ್ನು ಬೆದರಿಸಲು ಹಾಗೂ ಅವರಿಂದ ಲಂಚ ಕೀಳಲು ಅಬಕಾರಿ ಕಾಯ್ದೆಯ ಅಂಶಗಳನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುತ್ತದೆ ಎಂಬ ಆರೋಪ ಇದೆ. ಇದರ ಜೊತೆಯಲ್ಲೇ ಮದ್ಯದ ಮೇಲಿನ ಅಬಕಾರಿ ಸುಂಕವನ್ನು ಪದೇ ಪದೇ, ಅವೈಜ್ಞಾನಿಕವಾಗಿ ಹೆಚ್ಚು ಮಾಡಲಾಗುತ್ತಿದೆ. ಅಬಕಾರಿ ಇಲಾಖೆಯು 2024–25ನೆಯ ಸಾಲಿಗೆ ತನಗೆ ನೀಡಲಾಗಿದ್ದ ವರಮಾನ ಸಂಗ್ರಹ ಗುರಿ ಸಾಧಿಸುವಲ್ಲಿ ವಿಫಲವಾಗಿದೆ, ₹3,000 ಕೋಟಿಯಷ್ಟು ಕಡಿಮೆ ವರಮಾನ ಸಂಗ್ರಹಿಸಿದೆ. ರಾಜ್ಯದಲ್ಲಿ ಬಿಯರ್ ಮಾರಾಟವು ಸುಮಾರು ಶೇ 20ರಷ್ಟು ಕಡಿಮೆ ಆಗಿದೆ, ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿರುವ ಜಿಲ್ಲೆಗಳ ಮದ್ಯದ ಅಂಗಡಿಗಳು ಕಡಿಮೆ ವಹಿವಾಟು ಕಂಡಿವೆ. ಆಂಧ್ರಪ್ರದೇಶದಲ್ಲಿ ಜಾರಿಯಲ್ಲಿ ಇರುವ ಹೆಚ್ಚು ಪಾರದರ್ಶಕವಾದ ನೀತಿಯ ಕಾರಣದಿಂದಾಗಿ ಕಡಿಮೆ ಬೆಲೆಗೆ ಮದ್ಯ ಸಿಗುವಂತೆ ಆಗಿದೆ. ಕರ್ನಾಟಕದಲ್ಲಿ ಜಾರಿಯಲ್ಲಿರುವ ಹಳೆಯ ಕಾಲದ ಸಿಬ್ಬಂದಿ ನಿಯೋಜನೆ ವ್ಯವಸ್ಥೆ ಹಾಗೂ ಖಾಲಿ ಹುದ್ದೆಗಳು ಹೆಚ್ಚಾಗಿರುವುದು ಆಧುನಿಕ ಕಾಲದ, ಸಂಕೀರ್ಣ ಮಾರುಕಟ್ಟೆಯನ್ನು ನಿಭಾಯಿಸಲು ಇಲಾಖೆಗೆ ಸಾಧ್ಯವಾಗದಂತೆ ಮಾಡಿವೆ.

ಇಂತಹ ಸಂದರ್ಭದಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಆರೋಪಗಳ ನಿರಾಕರಣೆಯು ಸರಿಯಲ್ಲ. ವಾಸ್ತವ ಏನು ಎಂಬುದನ್ನು ತಿಳಿದುಕೊಳ್ಳಲು ಹಾಗೂ ವಿಶ್ವಾಸವನ್ನು ಮರುಸ್ಥಾಪಿಸಲು ಲೋಕಾಯುಕ್ತ ತನಿಖೆ ಅಗತ್ಯ. ಇದೇ ಸಂದರ್ಭದಲ್ಲಿ ಉತ್ತರದಾಯಿತ್ವ ಹಾಗೂ ರಾಚನಿಕ ಸುಧಾರಣೆಗಳು ಅಗತ್ಯ. ಹೊಸ ಪರವಾನಗಿ ನೀಡುವುದಕ್ಕೆ ಇರುವ ನಿರ್ಬಂಧವನ್ನು ಹೋಗಲಾಡಿಸಿ, ಜನಸಂಖ್ಯೆಗೆ ಅನುಗುಣವಾಗಿ ಪಾರದರ್ಶಕವಾಗಿ ಪರವಾನಗಿ ನೀಡುವ ವ್ಯವಸ್ಥೆಯೊಂದು ಬರಬೇಕು. ಅಧಿಕಾರಿಗಳ ವಿವೇಚನಾ ಅಧಿಕಾರಕ್ಕೆ ಕಡಿವಾಣ ಹಾಕಬೇಕು. ಹೊರರಾಜ್ಯಗಳಲ್ಲಿ ಇರುವ ಮಾದರಿಯಲ್ಲೇ ಸುಂಕವನ್ನು ತರ್ಕಬದ್ಧ ಆಗಿಸಬೇಕು. ಅಧಿಕಾರಿಗಳ ವರ್ಗಾವಣೆಯನ್ನು ರಾಜಕೀಯದ ಪ್ರಭಾವದಿಂದ ರಕ್ಷಿಸಬೇಕು. ಅಬಕಾರಿ ಇಲಾಖೆ ಇರುವುದು ಬಹಳ ಸಂಕೀರ್ಣವಾದ ಉತ್ಪನ್ನವೊಂದರ ಮೇಲೆ ಕಾನೂನಿನ ನಿಯಂತ್ರಣ ಇರಿಸಲು ಹಾಗೂ ಸರ್ಕಾರದ ವರಮಾನವನ್ನು ರಕ್ಷಿಸಲು. ಆದರೆ, ಇಂದು ಇದು ಕೆಲವು ವರ್ಗದವರು ಹೇಗಾದರೂ ಮಾಡಿ ತಮ್ಮ ಸಂಪತ್ತು ಹೆಚ್ಚಿಸಿಕೊಳ್ಳುವ ಕೆಲಸಕ್ಕೆ ನೆರವಾಗುವ ವ್ಯವಸ್ಥೆಯಂತೆ ಆಗಿಬಿಡುವ ಅಪಾಯ ಎದುರಿಸುತ್ತಿದೆ. ಎಚ್ಚರಿಕೆಯ ಕರೆಗಂಟೆಯನ್ನು ಮರೆಮಾಚುವುದರಿಂದ ಸಮಸ್ಯೆ ಪರಿಹಾರ ಆಗುವುದಿಲ್ಲ. ಅದರಿಂದ ಸಾರ್ವಜನಿಕರ ವಿಶ್ವಾಸಕ್ಕೆ ಕುಂದುಬರುತ್ತದೆ, ಸರ್ಕಾರದ ವರಮಾನ ತಗ್ಗುತ್ತದೆ.

ಚಾಟಿ



ನೈಜ ಖಾದಿ ಬೆಂಬಲಿಸಲಿ

ಸರ್ಕಾರಕ್ಕೆ ನಿಜಕ್ಕೂ ಖಾದಿಯನ್ನು ಪ್ರೋತ್ಸಾಹಿಸಬೇಕು ಎಂದಿದ್ದರೆ ರಾಜ್ಯದಲ್ಲಿ ಈಗಿರುವ ಖಾದಿ ಕೇಂದ್ರಗಳತ್ತ ಗಮನ ಹರಿಸಲಿ. ಅವುಗಳನ್ನು ಪುನಶ್ಚೇತನಗೊಳಿಸಲಿ. ಖಾದಿ ಧರಿಸುವವರಿಗೆ ಅಪ್ಪಟ ಖಾದಿ ನೀಡಿದರೆ ಅದೇ ದೊಡ್ಡ ಮಾರುಕಟ್ಟೆ.

ಕೆ. ವೆಂಕಟರಾಜು, ರಂಗಕರ್ಮಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

'ವಿಬಿ-ಜಿ ರಾಮ್ ಜಿ' ಬಗ್ಗೆ ಭ್ರಷ್ಟ ಕಾಂಗ್ರೆಸ್ ಸರ್ಕಾರ ಸುಳ್ಳು ಮಾಹಿತಿಯ ಜಾಹೀರಾತಿನ ಮೂಲಕ ಜನರ ದಾರಿ ತಪ್ಪಿಸುತ್ತಿದೆ. ಸರ್ಕಾರಿ ಖಜಾನೆಯನ್ನು ತಮ್ಮ ರಾಜಕೀಯ ಅಜೆಂಡಾಕ್ಕೆ ಬಳಸುವುದು ಅನೈತಿಕ ಹಾಗೂ ಜನವಿರೋಧಿ ಧೋರಣೆ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಮಂಗಳವಾರ, 30-1-2001

• ಬೆಂಗಳೂರು ಸೇರಿ ರಾಜ್ಯದ ಕೆಲವೆಡೆ ಭೂಕಂಪನ

ಬೆಂಗಳೂರು, ಜ. 29– ಗುಜರಾತ್ ಭೂಕಂಪ ಜನರ ಮನದಲ್ಲಿ ಇನ್ನೂ ಭಯವನ್ನು ಉಳಿಸಿರುವಂತೆಯೇ ಇಂದು ಬೆಳಗ್ಗೆ 8.08 ಗಂಟೆಗೆ ಬೆಂಗಳೂರು, ಕನಕಪುರ, ಮೈಸೂರು, ತುಮಕೂರು ಜಿಲ್ಲೆ ಮತ್ತು ರಾಜ್ಯದ ಇತರ ಕೆಲವು ದಕ್ಷಿಣ ಭಾಗಗಳಲ್ಲಿ ಲಘು ಭೂಕಂಪನ ಸಂಭವಿಸಿ ಜನರು ಭಯಭೀತರಾಗುವಂತೆ ಮಾಡಿತು.

ಈ ಭೂಕಂಪನದಿಂದ ಪ್ರಾಣ ಅಥವಾ ಹೆಚ್ಚಿನ ಪ್ರಮಾಣದ ಆಸ್ತಿಪಾಸ್ತಿ ಹಾನಿ ಸಂಭವಿಸಿಲ್ಲ. ರಿಕ್ಟರ್ ಮಾಪಕದಲ್ಲಿ ಈ ಕಂಪನ 4.3ರಷ್ಟು ದಾಖಲಾಗಿದ್ದು, ಸುಮಾರು ಎರಡರಿಂದ ಮೂರು ಸೆಕೆಂಡುಗಳವರೆಗೆ ಭೂಮಿ ಕಂಪಿಸಿತು ಎಂದು ಹವಾಮಾನ ಇಲಾಖೆಯ ನಿರ್ದೇಶಕ ಡಾ. ಎ.ಎಲ್. ಕೊಪ್ಪರ್ 'ಪ್ರಜಾವಾಣಿ'ಗೆ ತಿಳಿಸಿದರು.

75 ವರ್ಷಗಳ ಹಿಂದೆ

ಮಂಗಳವಾರ, 30-1-1951

• ಆರೋಗ್ಯ ಮಂತ್ರಿಗಳಿಗೆ ಮಾಸಕ್ಕೊಂದು ರೂ ಸಂಬಳ

ಮದರಾಸ್, ಜ. 29– ಆರೋಗ್ಯ ಕಾರಣಗಳಿಗಾಗಿ ಎರಡು ತಿಂಗಳು ರಜಾದ ಮೇಲಿರುವ ಮದರಾಸಿನ ಆರೋಗ್ಯ ಸಚಿವ ಡಾ. ಟಿ.ಎಸ್. ಎಸ್. ರಾಜನ್‌ರವರು ಒಂದು ರೂಪಾಯಿಯಂತೆ ಸಾಂಕೇತಿಕ ಸಂಬಳವನ್ನು ತೆಗೆದುಕೊಳ್ಳಲು ಸ್ವಯಂಪ್ರೇರಿತರಾಗಿ ಒಪ್ಪಿದ್ದಾರೆ.

ರಜಾ ಕಾಲದಲ್ಲಿ ಮಂತ್ರಿಗಳು ತಮ್ಮ ಪೂರ್ಣ ಸಂಬಳವನ್ನು ತೆಗೆದುಕೊಳ್ಳಲು ಅಡ್ಡಿಪಡಿಸುವಂತಹ ಸರ್ಕಾರಿ ಕಾನೂನೇನೂ ಇರುವುದಿಲ್ಲ.

• ಕೆನಡಾ ಗೋಧಿ ತುಂಬಿದ ಹಡಗು ಮದರಾಸಿಗೆ

ಮದರಾಸ್, ಜ. 29– ಕೆನಡಾದಿಂದ 9,780 ಟನ್ ಗೋಧಿ ತೆಗೆದುಕೊಂಡು ಷೆಗ್ರೊಕ್ ಹಡಗು ಇಂದು ಮದರಾಸ್ ರೇವಿಗೆ ಆಗಮಿಸಿತು. ಇಲ್ಲಿ 3,000 ಟನ್ ಧಾನ್ಯವನ್ನು ಇಳಿಸಿ ಉಳಿದುದ್ದನ್ನು ಕಲ್ಕತ್ತೆಗೆ ಕೊಂಡೊಯ್ಯುವುದು.

ಈ ಧಾನ್ಯದಲ್ಲಿ ಮೈಸೂರಿಗೆ 1,500 ಟನ್, ಮದರಾಸಿಗೆ 500 ಟನ್ ಮತ್ತು ಹೈದರಾಬಾದ್‌ಗೆ 1,000 ಟನ್ ಹಂಚಲಾಗುವುದು

ಗಾಂಧಿಗೆ ಆದುದು ಸಂವಿಧಾನಕ್ಕೂ?

ಅನುರಣನ

ನಾರಾಯಣ ಎ.

> ಒಳಿತಿನ ರಾಕ್ಷಸೀಕರಣದ ಎಲ್ಲ ಕಾಲದ ಪಿತೂರಿ ಗಾಂಧೀಜಿಯ ಮೇಲೂ ನಡೆದಿದೆ ಹಾಗೂ ಮಹಾತ್ಮನ ಚಾರಿತ್ರ್ಯವಧೆಯ ಪ್ರಯತ್ನ ಸಾಕಷ್ಟು ಯಶಸ್ವಿಯಾಗಿದೆ. ಈ ಷಡ್ಯಂತ್ರದ ಮುಂದಿನ ಗುರಿ, ಮಹಾತ್ಮನಂತೆಯೇ 'ಈ ದೇಶ ಎಲ್ಲರಿಗೂ ಸೇರಿದ್ದು' ಎಂದು ಸಾರುತ್ತಿರುವ ಸಂವಿಧಾನವೇ?

ಕಾಲದ ಒಳಿತೇ ಮನುಷ್ಯರೂಪ ತಳೆದು ಗಾಂಧೀಜಿಯಾಗಿ ಈ ದೇಶದಲ್ಲಿ ಜನಿಸಿತು ಎಂದು ಅವರ ಜೀವಿತಾವಧಿಯಲ್ಲಿ ಬಹುಪಾಲು ಮಂದಿ ಭಾವಿಸಿದ್ದರು. ಹಾಗಾಗಿಯೇ ಅವರನ್ನು ಕೊಂದ ರಾಮಚಂದ್ರ ವಿನಾಯಕ ಗೋಡ್ಸೆ ಅಲಿಯಾಸ್ ನಾಥೂರಾಮ್ ಗೋಡ್ಸೆ ಜನರ ಕಣ್ಣಲ್ಲಿ ಬಹುದೊಡ್ಡ ಕೆಡುಕಾಗಿ ಕಾಣಿಸಿಕೊಂಡ. ಆತನನ್ನು ಛೂ ಬಿಟ್ಟ ಕೂಟದವರು ಕೆಡುಕಿನ ಪ್ರತಿನಿಧಿಗಳಾಗಿ ಕಂಡರು. ಅವರು ಪ್ರತಿಪಾದಿಸುತ್ತಿದ್ದ ಸಿದ್ಧಾಂತ ಕೆಡುಕಿನ ಬೀಜಮಂತ್ರವೇನೋ ಎಂದು ಆ ಕಾಲದಲ್ಲಿ ಜನ ಭಾವಿಸುವಂತಾಯಿತು. ಗೋಡ್ಸೆಯನ್ನು ಗೋಡ್ಸೆಯನ್ನಾಗಿ ತಯಾರಿಸಿದವರು 'ಈ ದೇಶ ನಮಗೆ ಮತ್ತು ನಮ್ಮವರಿಗೆ ಮಾತ್ರ ಸೇರಿದ್ದು' ಎಂದು ಪ್ರತಿಪಾದಿಸುತ್ತಿದ್ದರು. ಹಾಗಾಗಿ 'ದೇಶ ಎಲ್ಲರಿಗೂ ಸೇರಿದ್ದು' ಎಂದು ಗಟ್ಟಿಯಾಗಿ ಪ್ರತಿಪಾದಿಸುತ್ತಿದ್ದ ಗಾಂಧೀಜಿಯವರು ಗೋಡ್ಸೆಯ ಬೆನ್ನಾಗಿ ನಿಂತವರಿಗೆ ವೈರಿಯಾಗಿ ಕಾಣಿಸಿದರು. 'ಎಲ್ಲರಿಗೂ' ಎನ್ನುವಲ್ಲಿ ಒಂದು ಒಳಿತು ಇದೆ. 'ನಮಗೆ', 'ನಮ್ಮವರಿಗೆ ಮಾತ್ರ' ಎನ್ನುವಲ್ಲಿ ಸ್ವಾರ್ಥವಿದೆ, ಸಂಕುಚಿತತೆ ಇದೆ. ಹಾಗಾಗಿ, ಗಾಂಧೀಜಿಯ ಹತ್ಯೆಯ ನಂತರ ಅವರ ಕೊಲೆಗೆ ಒತ್ತಾಸೆ ನೀಡಿದವರನ್ನು ಕೆಡುಕಿನ ಪ್ರತೀಕಗಳು ಎಂದು ಜನ ಭಾವಿಸಿದ್ದು ಸಹಜವಾಗಿಯೇ ಇತ್ತು.

ಜನಾಭಿಪ್ರಾಯ ಈ ರೀತಿಯಾಗಿ ಮೂಡಿದ ಹಿನ್ನೆಲೆಯಲ್ಲಿ ಗೋಡ್ಸೆಯ ಮನಸ್ಸು ಕೆಡಿಸಿ ಪಾತಕೋದ್ಯಮಕ್ಕೆ ಹಚ್ಚಿದವರಿಗೆ ತಮಗೆ ಅಂಟಿದ ಕಾಳಕಳಂಕವನ್ನು ತೊಳೆದುಕೊಳ್ಳಬೇಕಿತ್ತು. ಗಾಂಧೀಜಿಯಿಂದಾಗಿ ಪಾಕಿಸ್ತಾನ ಹುಟ್ಟಿಕೊಂಡದ್ದು ಎಂಬ ಕಾರಣಕ್ಕೆ ಉದ್ವೇಗಗೊಂಡ ಗೋಡ್ಸೆ ಗಾಂಧೀಜಿಯನ್ನು ಕೊಂದ ಎಂಬ ಅವರ ಅಸಂಗತ ಸಮರ್ಥನೆ ಟೊಳ್ಳಾಗಿತ್ತು. ಜನ ಅದನ್ನು ಒಪ್ಪಿಕೊಳ್ಳಲಿಲ್ಲ. ಯಾಕೆಂದರೆ, ಗಾಂಧೀಜಿಯ ಕೊಲೆ ಯತ್ನ ಪಾಕಿಸ್ತಾನದ ಪ್ರಸ್ತಾಪ ಮುನ್ನೆಲೆಗೆ ಬರುವ ಮೊದಲೇ ಪ್ರಾರಂಭವಾಗಿತ್ತು. ಹಾಗಾಗಿ, ಕಳಂಕ ಕಳೆದುಕೊಳ್ಳಲು ಅವರಿಗಿದ್ದ ಒಂದೇ ದಾರಿ, ಗಾಂಧೀಜಿ ಪ್ರತಿನಿಧಿಸಿದ್ದ ಒಳಿತನ್ನೇ ಕೆಡುಕು ಎಂದು ಚಿತ್ರಿಸುವುದು. ವ್ಯವಸ್ಥಿತ ಸುಳ್ಳುಗಳ ಮೂಲಕ ಅವರ ಚಾರಿತ್ರ್ಯವಧೆ ಮಾಡುವುದು ಮತ್ತು ಚರಿತ್ರೆಯನ್ನು ತಿರುಚಿ ಗಾಂಧೀಜಿ ಮಹಾನ್ ಕೆಡುಕಿನ ಬಹುದೊಡ್ಡ ಪ್ರತಿನಿಧಿ ಎಂದು ಬಿಂಬಿಸುವುದು. ಆ ಕೆಡುಕನ್ನು ಕೆಡವಿದ ಗೋಡ್ಸೆ, ಅವನ ಬೆನ್ನಿಗೆ ನಿಂತ ಸಮುದಾಯ ಮತ್ತು ಸಿದ್ಧಾಂತ ಒಳಿತಿನ ಮಹಾನ್ ಪ್ರತಿನಿಧಿಗಳು ಎಂದು ಜನರನ್ನು ನಂಬಿಸುವುದು. ಇದು ಗಾಂಧೀಜಿಯ ರಾಕ್ಷಸೀಕರಣ. ಇದನ್ನು ಅವರು ಮಾಡಿದರು. ಎಡೆಬಿಡದೆ, ಅಡೆತಡೆಗಳನ್ನು ಲೆಕ್ಕಿಸದೆ ಮಾಡಿದರು. ಆಗ ಗುಪ್ತವಾಗಿ, ಈಗ ಮುಕ್ತವಾಗಿ ಮಾಡುತ್ತಿದ್ದಾರೆ. ದೊಡ್ಡ ಯಶಸ್ಸು ಗಳಿಸಿದ್ದಾರೆ.

ಹೀಗೆಲ್ಲಾ ಆಗಿಹೋಗಿದ್ದು ಗಾಂಧೀಜಿಯ ವಿಚಾರದಲ್ಲಿ ಮಾತ್ರವಲ್ಲ. ಚರಿತ್ರೆಯುದ್ದಕ್ಕೂ ಇದುವೇ ಆಗಿದೆ. ಒಳಿತಿನ ರಾಕ್ಷಸೀಕರಣ ಮತ್ತು ಕೆಡುಕಿನ ದೈವೀಕರಣ ಒಂದು ನಿರಂತರ ರಾಜಕೀಯ ಪ್ರಕ್ರಿಯೆ. ಸಮಸ್ತ ಭಾರತೀಯ ಪುರಾಣಗಳಲ್ಲಿ ಬರುವ ಅಷ್ಟೂ ರಾಕ್ಷಸರ ಪಾತ್ರಗಳೂ ನಿಜವಾಗಿ ಕೆಡುಕುಗಳನ್ನು ಪ್ರತಿನಿಧಿಸುತ್ತವೆಯೇ? ಅಥವಾ ಸಮಾಜದ ಕೆಲವೊಂದು ಶಕ್ತಿಗಳನ್ನು ಎದುರು ಹಾಕಿಕೊಂಡದ್ದಕ್ಕಾಗಿ ಅವರನ್ನೆಲ್ಲ ರಾಕ್ಷಸರನ್ನಾಗಿ ಬಿಂಬಿಸಲಾಗಿದೆಯೆ? ಈ ಪ್ರಶ್ನೆಯನ್ನು ಕಾಲಕಾಲಕ್ಕೆ ಬಹಳಷ್ಟು ಮಂದಿ ಎತ್ತಿದ್ದಾರೆ.

ದೇಶದಾದ್ಯಂತ ಒಂದು ಸಮುದಾಯದವರು ರಾಕ್ಷಸರು ಎಂದು ಕಟ್ಟಿಕೊಟ್ಟ ಹಲವಾರು ಪುರಾಣಪಾತ್ರಗಳನ್ನು ಇತರ ಸಮುದಾಯಗಳವರು ಪೂಜಿಸುತ್ತಾರೆ. ಇಂದಿಗೂ ಜನಪದರು ಲಂಕೇಶ, ರಾವಣ, ದುರ್ಯೋಧನ ಮುಂತಾದ ಹೆಸರುಗಳನ್ನು ಮಕ್ಕಳಿಗೆ ಇಡುತ್ತಾರೆ ಎಂದರೆ, ಅವರ ಕಲ್ಪನೆಯಲ್ಲಿ ಈ ಪಾತ್ರಗಳೆಲ್ಲ ಕೆಡುಕುಗಳ ಪ್ರತಿನಿಧಿಗಳಾಗಿರಲಿಲ್ಲ ಎಂದೇ ಲೆಕ್ಕ. ಕೇರಳದಂತಹ ರಾಜ್ಯ, ವೈದಿಕ ಪುರಾಣಗಳು ರಾಕ್ಷಸ ಅಂತ ಚಿತ್ರಿಸುವ ಬಲಿ ಚಕ್ರವರ್ತಿಯ ಮಾನವೀಯ ಗುಣಗಳನ್ನು ಕೊಂಡಾಡುತ್ತದೆ. ಬಲಿಯ ಆಡಳಿತವನ್ನು ಕಟ್ಟಿಕೊಡುವ ಒಂದು ಮಲಯಾಳದ ಜಾನಪದ ಗೀತೆಯ ಆರಂಭದ ಸಾಲುಗಳು ಹೀಗಿವೆ: ಮಾವೆಲಿ ನಾಡುಂ ಈಡುಮ್ ಕಾಲಂ, ಮನುಷ್ಯರೆಲ್ಲವರೂಂ ಒನ್ನು ಪೋಲೆ, ಆಮೋದತ್ತೋಡೇ ವಶಿಕ್ಕುಮ್ ಕಾಲಂ, ಆಪತ್ತಂಗಾರ್ಕುಂ ಮೊತ್ತಿಲ್ಲ ತಾನುಂ (ಮಹಾಬಲಿಯ ಕಾಲದಲ್ಲಿ/ ಮನುಷ್ಯರೆಲ್ಲರೂ ಸಮಾನರಲ್ಲಿ/ ನಾಡಗುಂಟ ನೆಮ್ಮದಿ/ ಕಾಡಿದ್ದಿಲ್ಲ ಬೇಗುದಿ). ಇದರಲ್ಲಿ ಸಾಂವಿಧಾನಿಕ ಮೌಲ್ಯಗಳಿವೆ. ಆ ಕಾರಣಕ್ಕೇನೆ ಬಲಿ ಕೆಲವರ ಕಣ್ಣಲ್ಲಿ ರಾಕ್ಷಸನಾಗಿರಬೇಕು. ಕೇರಳದ ರಾಜ್ಯಹಬ್ಬ ಆದ ಓಣಂ ಸಂದರ್ಭದಲ್ಲಿ ಈ ಹಾಡು ಎಲ್ಲ ಸಮುದಾಯಗಳ ಮನೆ ಮನೆಯಲ್ಲೂ ರಿಂಗಣಿಸುತ್ತದೆ.

ಒಳಿತು ಮತ್ತು ಕೆಡುಕುಗಳು ಎಂದರೆ ಕಪ್ಪು ಮತ್ತು ಬಿಳುಪು ಎಂದು ಪ್ರತ್ಯೇಕಿಸಬಹುದಾದಷ್ಟು ಸ್ಪಷ್ಟವಾಗಿರುವುದಿಲ್ಲ ಎನ್ನುವ ಸಂದೇಶವನ್ನೇ ಎಲ್ಲ ಪುರಾಣಗಳು ಕಟ್ಟಿಕೊಡುವುದು. ಸ್ಥಳೀಯ ಪುರಾಣಗಳಾದರೂ ಅಷ್ಟೇ, ಅವುಗಳನ್ನು ಮೂಲೆಗುಂಪು ಮಾಡಿ ಜನಮನವನ್ನು ಆವರಿಸಿರುವ ದೊಡ್ಡ ದೊಡ್ಡ ಪುರಾಣಗಳಾದರೂ ಅಷ್ಟೇ. ಆದರೆ, ಪುರಾಣ ಪಾತ್ರಗಳನ್ನು ಬಳಸಿಕೊಂಡು ಜನರ ಭಾವನೆಗಳನ್ನು ಬಡಿದೆಬ್ಬಿಸಿ ಅಧಿಕಾರ ಹಿಡಿಯುವ ತಂತ್ರ ಹೇಳಿಕೊಡುವ ವರ್ಗಗಳು ತಮಗೆ ಅನುಕೂಲವೆನಿಸುವ ಪಾತ್ರಗಳನ್ನು ಒಳಿತಿನ ಮಹಾನ್ ಪ್ರತೀಕಗಳೆಂದೂ, ತಮಗಾಗದವರನ್ನು– ಅವರೆಷ್ಟೇ ಜೀವಪರವಾಗಿದ್ದರೂ ಸರಿ– ರಾಕ್ಷಸರೆಂದೂ ಚಿತ್ರಿಸುವ ನೀಚ ಬೌದ್ಧಿಕೋದ್ಯಮದಲ್ಲಿ ಯಶಸ್ವಿಯಾಗಿವೆ. ಗಾಂಧೀಜಿ ಈ ದಂಧೆಗೆ ಬಲಿಯಾಗುತ್ತಿರುವ ಇತ್ತೀಚಿನ ಚಾರಿತ್ರಿಕ ವ್ಯಕ್ತಿ.

ಅಕ್ಷರ ಮತ್ತು ವಿದ್ಯೆ ಕೆಲವೇ ಅಧಿಕಾರದಾಹಿ ವರ್ಗಗಳ ಏಕಸ್ವಾಮ್ಯವಾಗಿ ಉಳಿದಿದ್ದಾಗ, ಪುರಾಣ ಪಾತ್ರಗಳನ್ನು ತಮ್ಮ ಮೂಗಿನ ನೇರಕ್ಕೆ ಬೇಕಾದಂತೆ ಚಿತ್ರಿಸಿಕೊಂಡು ಜನಮನದಲ್ಲಿ ಪ್ರತಿಷ್ಠಾಪಿಸಲು ಸುಲಭವಾಗಿತ್ತು. ಅದೃಷ್ಟವಶಾತ್, ಗಾಂಧೀಜಿಯ ರಾಕ್ಷಸೀಕರಣ ಪ್ರಾರಂಭವಾಗುವ ಹೊತ್ತಿಗೆ ಅಕ್ಷರ ಮತ್ತು ವಿದ್ಯೆ ಬಹುಜನರನ್ನು ತಲಪಿತ್ತು. ಇಲ್ಲದೇ ಹೋಗಿದ್ದರೆ, ಈ ವೇಳೆಗೆ ಗಾಂಧೀಜಿ ಕೂಡ ಕೋರೆ ಹಲ್ಲು ಹೊತ್ತ, ಹತ್ತೋ ಇಪ್ಪತ್ತೋ ತಲೆ ಹೊತ್ತ ರಾಕ್ಷಸನಾಗಿ ರೂಪುಗೊಳ್ಳುತ್ತಿದ್ದರು; ಗೋಡ್ಸೆ ಸಕಲಗುಣಸಂಪನ್ನನಾದ ಪುರುಷೋತ್ತಮನಾಗಿ, ಒಂದು ದೈವೀ ಅವತಾರವಾಗಿ ರೂಪುಗೊಳ್ಳುತ್ತಿದ್ದ. ಪುರಾಣ ಪಾತ್ರಗಳನ್ನು ರಾಕ್ಷಸೀಕರಿಸಿದಷ್ಟು ಸುಲಲಿತವಾಗಿ ಗಾಂಧೀಜಿಯವರನ್ನು ಪೂರ್ಣ ರಾಕ್ಷಸೀಕರಿಸಲು ಸಾಧ್ಯವಾಗಿಲ್ಲ. ಹಾಗೆಂದು ಈ ಪ್ರಯತ್ನ ಪೂರ್ತಿ ಸೋಲಲೂ ಇಲ್ಲ. ಇವತ್ತು ಮಕ್ಕಳು ಕೂಡಾ ಗಾಂಧೀಜಿ ಎಂದರೆ ಏನೋ ಕೆಡುಕಿನ ಅಪಅವತಾರ ಎಂದು ಭಾವಿಸುವ ಹಂತ ತಲಪಿದೆ. ಗೋಡ್ಸೆಯ ಹೆಸರು ಮತ್ತು ಚಿತ್ರ ಲಾರಿ, ಬಸ್, ಆಟೊಗಳ ಹಿಂಭಾಗದಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ (ಎಲ್ಲೆಲ್ಲಿ ದೇವರುಗಳ, ಮಹಾಪುರುಷರ, ಮೇರುನಟರ ಚಿತ್ರಗಳಿಗೆ ಮಾತ್ರ ಅವಕಾಶವಿತ್ತೋ ಅಲ್ಲೆಲ್ಲ) ನಿಧಾನಕ್ಕೆ ಸ್ಥಾನ ಪಡೆಯುತ್ತಿದೆ. ಉತ್ತರ ಭಾರತದ ಕೆಲವೆಡೆ ಗೋಡ್ಸೆಗೆ ದೇವಾಲಯ ನಿರ್ಮಾಣವಾದ ಸುದ್ದಿ ಬರುತ್ತಿದೆ. ಅಷ್ಟರಮಟ್ಟಿಗೆ ಒಂದು ವರ್ಗದ ಬೌದ್ಧಿಕ ಪಿತೂರಿ ಯಶಸ್ವಿಯಾಗಿದೆ.

ಗಾಂಧೀಜಿಯವರ ವಿರುದ್ಧ ಯಾವ ವರ್ಗ ತಿರುಗಿ ಬಿತ್ತೋ, ಅವರೇ ಇಂದು ಸಂವಿಧಾನದ ವಿರುದ್ಧವೂ ಕತ್ತಿಮಸೆಯುತ್ತಿರುವುದು. ಯಾವ ಕಾರಣಕ್ಕೆ ಅವರು ಗಾಂಧೀಜಿಯವರನ್ನು ದ್ವೇಷಿಸಿದರೋ ಅದೇ ಕಾರಣಕ್ಕೆ ಅವರು ಇಂದು ಸಂವಿಧಾನವನ್ನೂ ದ್ವೇಷಿಸುತ್ತಿರುವುದು. ಗಾಂಧೀಜಿ ಪ್ರತಿಪಾದಿಸುತ್ತಿದ್ದಂತೆಯೇ ಸಂವಿಧಾನವೂ ಈ ದೇಶ ಎಲ್ಲರಿಗೂ ಸೇರಿದ್ದು ಎಂದು ವಿಧಿಸುತ್ತದೆ. ಎಲ್ಲ ದೇಶಗಳಲ್ಲೂ ಎಲ್ಲರೂ, ಯಾವುದೋ ಕಾಲಘಟ್ಟದಲ್ಲಿ ಎಲ್ಲಿಂದಲೋ ಬಂದವರೇ ಆಗಿರುತ್ತಾರೆ ಮತ್ತು ಎಲ್ಲರೂ ಮನುಷ್ಯರೇ ಆಗಿರುತ್ತಾರೆ. ಹಾಗಾಗಿ, 'ನಾವು ಇಲ್ಲಿನವರು', 'ಅವರು ಎಲ್ಲಿಂದಲೋ ಬಂದ ಅನ್ಯರು', 'ನಾವು ಮೇಲಿನವರು', 'ಅವರು ಕೆಳಗಿನವರು' ಎಂಬಿತ್ಯಾದಿ ಪ್ರತ್ಯೇಕೀಕರಣಗಳಿಗೆ ಗಾಂಧೀಜಿಯಂತೆ ಸಂವಿಧಾನವೂ ಅವಕಾಶ ನೀಡುವುದಿಲ್ಲ. ಈ ಅಂಶವೇ ಗಾಂಧೀಜಿಯ ಕಗ್ಗೊಲೆಗೆ ಕಾರಣರಾದ ಶಕ್ತಿಗಳನ್ನು ಸಂವಿಧಾನದ ವಿರುದ್ಧವೂ ಕೊತಕೊತ ಕುದಿಯುವಂತೆ ಮಾಡಿರುವುದು. ಹಾಗಾಗಿಯೇ ಗಾಂಧೀಜಿಯ ವಿರುದ್ಧ ಮಾಡುತ್ತಿರುವ ಅದೇ ಅಪಪ್ರಚಾರವನ್ನು, ಅದೇ ರಾಕ್ಷಸೀಕರಣ ತಂತ್ರವನ್ನು ಅವರು ಸಂವಿಧಾನದ ವಿರುದ್ಧವೂ ಗುಪ್ತವಾಗಿಯೂ, ಬಹಿರಂಗವಾಗಿಯೂ ಮಾಡುತ್ತಿರುವುದು. ಆರು ಬಾರಿ ಪ್ರಯತ್ನಿಸಿ ಏಳನೆಯ ಬಾರಿಗೆ ಕೊನೆಗೂ ಅವರು ಗಾಂಧೀಜಿಯ ಎದೆಗೆ ಗುಂಡಿಕ್ಕುವಲ್ಲಿ ಸಫಲರಾದ ಹೊತ್ತಿಗೆ ಗಾಂಧೀಜಿಗೆ ಎಪ್ಪತ್ತೊಂಬತ್ತು ವರ್ಷ ವಯಸ್ಸಾಗಿತ್ತು. ಮುಂದಿನ ಮೂರು ವರ್ಷಗಳಲ್ಲಿ ಸಂವಿಧಾನಕ್ಕೂ ಎಪ್ಪತ್ತೊಂಬತ್ತು ತುಂಬಲಿದೆ. ಮುಂದಿನ ಮೂರು ವರ್ಷಗಳು! ಸಂವಿಧಾನ ಪ್ರೇಮಿಗಳೇ, ಸಂವಿಧಾನಕ್ಕಿರುವ ಈ ಎಪ್ಪತ್ತೊಂಬತ್ತರ ಕಂಟಕದ ಬಗ್ಗೆ ಎಚ್ಚರವಿರಲಿ.

ಆರು ಬಾರಿ ಗಾಂಧೀಜಿಯವರ ಜೀವದ ಮೇಲೆ ದಾಳಿ ಆಗಿದ್ದರೂ ಇನ್ನೊಮ್ಮೆಯೂ ಅದು ಆಗಬಹುದು ಎಂದು ಆಗ ಅಧಿಕಾರದಲ್ಲಿದ್ದ ಗಾಂಧೀಜಿಯ ಶಿಷ್ಯವರ್ಗ ಮತ್ತು ಗಾಂಧೀಜಿಯನ್ನು ಆರಾಧಿಸುತ್ತಿದ್ದ ಅಂದಿನ ಇಡೀ ಜನಸಮೂಹ ಊಹಿಸದೇ ಹೋದದ್ದು ಒಂದು ಚೋದ್ಯ. ಗಾಂಧೀಜಿಯ ಜೀವಕ್ಕಿದ್ದ ಕಂಟಕದ ಬಗ್ಗೆ ಅಂದಿನ ಭಾರತ ಪ್ರದರ್ಶಿಸಿದ್ದು ಅಸಾಧಾರಣ ಮೂರ್ಖತನ. ಅದು ಎರಡು ಹೆಜ್ಜೆಗಳಲ್ಲಿ ಭೂಮ್ಯಾಕಾಶ ವ್ಯಾಪಿಸಿದ ವಾಮನನಿಗೆ ಮೂರನೆಯ ಹೆಜ್ಜೆಯನ್ನು ತನ್ನ ತಲೆಯ ಮೇಲಿಡಲು ಅನುಮತಿಸಿದ ಬಲಿ ಚಕ್ರವರ್ತಿಯ ಹುಂಬತನಕ್ಕೆ ಸಮಾನ. ಸಂವಿಧಾನದ ವಿಚಾರದಲ್ಲಿ ಈ ಅವಿವೇಕತನ ಪುನರಾವರ್ತನೆ ಆಗಬಾರದು ಎಂದಾದರೆ, ಗಾಂಧೀಜಿಯ ರಾಕ್ಷಸೀಕರಣ ಬೇರಲ್ಲ, ಸಂವಿಧಾನದ ರಾಕ್ಷಸೀಕರಣ ಬೇರಲ್ಲ ಎನ್ನುವ ಸತ್ಯದರ್ಶನದ ಅಗತ್ಯವಿದೆ.



ವಾಚಕರ ವಾಣಿ

'ಪದ್ಮಶ್ರೀ' ಭಾಜನರ ಸಂಕಷ್ಟದ ಬದುಕು

'ಪದ್ಮ ಪ್ರಶಸ್ತಿ: ಆರ್ಥಿಕ ಭದ್ರತೆಯೂ ಬೇಕಲ್ಲವೇ?' ಲೇಖನವು (ಲೇ: ಡಿ.ಸಿ. ನಂಜುಂಡ, ಪ್ರ.ವಾ., ಜ. 29) ಪದ್ಮ ಪುರಸ್ಕೃತರ ಸಂಕಟಗಳ ಮೇಲೆ ಬೆಳಕು ಚೆಲ್ಲಿದೆ. ಇದಕ್ಕೆ ಬಾಗಲಕೋಟೆ ಜಿಲ್ಲೆಯ ಜಾನಪದ ಕಲಾವಿದ ವೆಂಕಪ್ಪ ಅಂಬಾಜಿ ಸುಗತೇಕರ್ ನಿದರ್ಶನವಾಗಿದ್ದಾರೆ. ಸುಗತೇಕರ್ ಅವರಿಗೆ 76ನೇ ಗಣರಾಜ್ಯೋತ್ಸವದಲ್ಲಿ 'ಪದ್ಮಶ್ರೀ' ನೀಡಲಾಗಿದೆ. ನಾಡೋಜ ಪ್ರಶಸ್ತಿಯೂ ಸೇರಿ 2 ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್‌ಗೂ ಭಾಜನರಾಗಿದ್ದಾರೆ. ಅವರಿಗೀಗ 84 ವರ್ಷ. ಅನಾರೋಗ್ಯ ಕಾಡುತ್ತಿದೆ. ಎಲ್ಲ ನೋವು ಹೊತ್ತುಕೊಂಡೇ ಹಳ್ಳಿ ಹಳ್ಳಿಗೆ ಹೋಗಿ ಗೊಂದಲಿಗರ ಕಥೆ ಹೇಳಿ ಬದುಕು ಸಾಗಿಸುತ್ತಿದ್ದಾರೆ. ಅವರಿಗೆ ಮಾಸಿಕ ಗೌರವಧನ ನೀಡಿದರೆ ಆರ್ಥಿಕ ಸಂಕಷ್ಟದಿಂದ ಹೊರಬರಲು ಸಾಧ್ಯವಾಗಲಿದೆ. ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರ ಈ ಬಗ್ಗೆ ಗಮನಹರಿಸಬೇಕಿದೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಲಕ್ಕುಂಡಿಯು ಪಾರಂಪರಿಕ ತಾಣವಾಗಲಿ

ಗದಗ ಜಿಲ್ಲೆಯ ಲಕ್ಕುಂಡಿ ಕರ್ನಾಟಕದ ಐತಿಹಾಸಿಕ ಗರಿಮೆ ಹೊತ್ತುಕೊಂಡಿರುವ ಊರು. ದಕ್ಷಿಣ ಭಾರತದಲ್ಲಿ ಹೊಯ್ಸಳರು ಹಾಗೂ ಕಲ್ಯಾಣಿ ಚಾಲುಕ್ಯರ ಕಾಲಘಟ್ಟದಲ್ಲಿ ನಾಣ್ಯಗಳನ್ನು ಟಂಕಿಸುತ್ತಿದ್ದ ಪ್ರಮುಖ ಆರ್ಥಿಕ ಕೇಂದ್ರವಾಗಿತ್ತು. ಜೊತೆಗೆ ಪಂಪ, ಪೊನ್ನ, ರನ್ನರಂತಹ ಕವಿಶ್ರೇಷ್ಠರಿಗೆ ಆಶ್ರಯ ನೀಡಿದ್ದ ಅತ್ತಿಮಬ್ಬೆಯ ಕರ್ಮಭೂಮಿಯೂ ಆಗಿತ್ತು. ಹಿಂದೂ, ಜೈನ, ಬೌದ್ಧಧರ್ಮದ ಸಾಂಸ್ಕೃತಿಕ ಸಾಮರಸ್ಯಕ್ಕೆ ಹಿಡಿದ ಕೈಗನ್ನಡಿಯೇ ಲಕ್ಕುಂಡಿ ಎಂದರೆ ತಪ್ಪಾಗಲಾರದು. ತನ್ನ ಒಡಲಲ್ಲಿ ಐತಿಹ್ಯಗಳ ಆಗರವನ್ನೇ ಹೊಂದಿರುವ ಲಕ್ಕುಂಡಿಯಲ್ಲಿ ಇತ್ತೀಚೆಗೆ ಸಿಕ್ಕ ಚಿನ್ನಾಭರಣಗಳು ಬರೀ ಆಭರಣಗಳಲ್ಲ; ಅವು ನಾಡಿನ ಇತಿಹಾಸ, ಸಂಸ್ಕೃತಿ ಮತ್ತು ಪುರಾತತ್ವ ಪರಂಪರೆಯ ಅಮೂಲ್ಯ ಕುರುಹುಗಳಾಗಿವೆ. ಈ ಊರನ್ನು ಕರ್ನಾಟಕದ ಐತಿಹಾಸಿಕ ಪಾರಂಪರಿಕ ತಾಣವೆಂದು ಘೋಷಿಸಿ ಸಂರಕ್ಷಿಸಬೇಕಿದೆ.

ತ್ರಿವೇಣಿ ವಿಜಯ್, ಬೆಂಗಳೂರು

ಅಂಚೆ ಕಚೇರಿ: ಕನ್ನಡದಲ್ಲಿ ಸೇವೆಗೆ ಬದ್ಧ

ಅಂಚೆ ಇಲಾಖೆಯ ಸೇವೆಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಚಲನ್‌ಗಳು ಲಭ್ಯವಿಲ್ಲವೆಂಬ ಬಗ್ಗೆ ಕೆಲವು ಗ್ರಾಹಕರು ಅಳಲು ತೋಡಿಕೊಂಡಿರುವುದು ವರದಿಯಾಗಿದೆ. ಅಂಚೆ ಕಚೇರಿಗಳಲ್ಲಿ ಸಾರ್ವಜನಿಕರಿಗೆ ಒದಗಿಸುವ ಸೇವೆಗಳಿಗೆ ಅಗತ್ಯವಿರುವ ಅರ್ಜಿ ಪತ್ರಗಳು ಕನ್ನಡದಲ್ಲಿ ಲಭ್ಯವಿವೆ. ಕನ್ನಡವು ರಾಜ್ಯದ ಅಧಿಕೃತ ಭಾಷೆ. ಸಾರ್ವಜನಿಕರಿಗೆ ಕನ್ನಡದಲ್ಲಿಯೇ ಸೇವೆ ಒದಗಿಸಲು ಇಲಾಖೆಯು ಬದ್ಧವಾಗಿದೆ. ಯಾವುದೇ ಕಚೇರಿಯಲ್ಲಿ ಕನ್ನಡದ ಅರ್ಜಿಗಳ ಲಭ್ಯತೆಗೆ ಸಂಬಂಧಿಸಿದಂತೆ ಸಮಸ್ಯೆ ಎದುರಾದರೆ ಸಂಬಂಧಿಸಿದ ಹಿರಿಯ ಅಂಚೆ ಅಧಿಕಾರಿಗಳ ಗಮನಕ್ಕೆ ತರಬಹುದು. ಗಂಭೀರ ಸಮಸ್ಯೆ ಇದ್ದರೆ ಪೋಸ್ಟ್ ಮಾಸ್ಟರ್ ಜನರಲ್ ಕಚೇರಿ, ಉತ್ತರ ಕರ್ನಾಟಕ ವಲಯ, ಧಾರವಾಡ ಇವರನ್ನು ಸಂಪರ್ಕಿಸಬಹುದು (ಇ–ಮೇಲ್: sb.karnk@indiapost.gov.in, ಸಂಪರ್ಕ ಸಂಖ್ಯೆ: 08362796348).

ಸಹಾಯಕ ನಿರ್ದೇಶಕರು, ಉತ್ತರ ಕರ್ನಾಟಕ ವಿಭಾಗ, ಧಾರವಾಡ

ಜೀಪ್ ಚಾಲಕರಿಂದ ಸುಲಿಗೆಯನ್ನು ತಪ್ಪಿಸಿ

ಚಿಕ್ಕಮಗಳೂರಿನಲ್ಲಿ ಜರಿ ಫಾಲ್ಸ್ ಸೇರಿದಂತೆ ಹತ್ತಾರು ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರಿಗೆ ರಕ್ಷಣೆ ಹಾಗೂ ಸುರಕ್ಷತೆ ಇಲ್ಲದಂತಾಗಿದೆ. ಸಾರಿಗೆಯ ಅನಿವಾರ್ಯತೆಯನ್ನೇ ಬಂಡವಾಳ ಮಾಡಿಕೊಂಡಿರುವ ಕೆಲವು ಜೀಪ್ ಚಾಲಕರು ನಿಗದಿತ ದರಕ್ಕಿಂತ ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದಾರೆ. ಪ್ರಶ್ನಿಸಿದರೆ ಅಸಭ್ಯವಾಗಿ ವರ್ತಿಸುವುದು, ಬೆದರಿಕೆ ಹಾಕುವುದು ಹಾಗೂ ಅತಿವೇಗವಾಗಿ ವಾಹನ ಚಲಾಯಿಸಿ ಪ್ರವಾಸಿಗರಲ್ಲಿ ಪ್ರಾಣಭಯ ಹುಟ್ಟಿಸುತ್ತಿದ್ದಾರೆ. ಇಂತಹ ವರ್ತನೆಗಳು ಜಿಲ್ಲೆಯ ಪ್ರವಾಸೋದ್ಯಮ ಮತ್ತು ಆತಿಥ್ಯ ಸಂಸ್ಕೃತಿಯ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ಪ್ರವಾಸೋದ್ಯಮ ಇಲಾಖೆ ಹಾಗೂ ಜಿಲ್ಲಾಡಳಿತ ತಕ್ಷಣ ಎಚ್ಚೆತ್ತುಕೊಂಡು, ಅಶಿಸ್ತಿನ ಚಾಲಕರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಪ್ರತಿಯೊಂದು ಪ್ರವಾಸಿ ತಾಣಗಳಲ್ಲಿ ದರಪಟ್ಟಿ ಫಲಕ ಅಳವಡಿಸಿ, ಪ್ರವಾಸಿಗರ ರಕ್ಷಣೆಗಾಗಿ ವಿಶೇಷ ಸಹಾಯವಾಣಿ ತೆರೆಯಬೇಕಿದೆ.

ನಾಗರಾಜ್ ಕೆ. ಕಲ್ಲಹಳ್ಳಿ, ತುಮಕೂರು

ಕುಟುಂಬ ಪ್ರೇಮವೇ ಜೆಡಿಎಸ್‌ಗೆ ಉರುಳು

'ಜೆಡಿಎಸ್‌ಗೆ 'ಎಸ್' ಎಂದಾರೆ ಜನ?' ಲೇಖನವು (ಲೇ: ರವೀಂದ್ರ ಭಟ್ಟ, ಪ್ರ.ವಾ., ಜ. 29) ಜೆಡಿಎಸ್ ಪಕ್ಷದಲ್ಲಿನ ನೈಜ ಚಿತ್ರಣವನ್ನು ತೆರೆದಿಟ್ಟಿದೆ. ಜೆಡಿಎಸ್ ಕುಟುಂಬ ರಾಜಕೀಯದಿಂದ ಹೊರಬಂದು ಪ್ರಜಾಸತ್ತಾತ್ಮಕ ನೆಲೆಯಲ್ಲಿ ಮುನ್ನಡೆದರೆ ಖಂಡಿತವಾಗಿಯೂ ಮತದಾರರು ಒಲಿಯುತ್ತಾರೆ. ಜೊತೆಗೆ, 'ಜಾತ್ಯತೀತ' ಮೌಲ್ಯಕ್ಕೆ ಬದ್ಧವಾಗಿ ಕೋಮುವಾದಿ ಪಕ್ಷದ ಸಹವಾಸದಿಂದ ಹೊರಬರಬೇಕು. ಆಗ ಖಂಡಿತವಾಗಿಯೂ ಒಂದು ಬಲಿಷ್ಠ ಪಕ್ಷವಾಗಿ ಹೊರಹೊಮ್ಮಿ ರಾಷ್ಟ್ರ ರಾಜಕೀಯದಲ್ಲೂ ಮೆರೆಯಬಹುದು. ಅಂತಹ ಅವಕಾಶ ಈಗಲೂ ಜೆಡಿಎಸ್‌ಗೆ ಇದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ನೇಮಕಾತಿ ತಡ: ಯುವಜನರಿಗೆ ಸಂಕಟ

ರಾಜ್ಯದಲ್ಲಿ ವೈಜ್ಞಾನಿಕ ಬೆಲೆಗಾಗಿ ನಿರೀಕ್ಷಿಸುವ ರೈತನ ಬಾಳು ಹಾಗೂ ಸರ್ಕಾರಿ ಹುದ್ದೆಗಾಗಿ ಹಂಬಲಿಸುತ್ತಿರುವ ಉದ್ಯೋಗಾಕಾಂಕ್ಷಿಗಳ ಗೋಳು ಹೇಳತೀರದು. ಆಧುನಿಕ ವಿಷವರ್ತುಲದಲ್ಲಿ ಸಿಲುಕಿ ರೈತರ ಬದುಕು ಹಳಿ ತಪ್ಪಿದೆ. ಉತ್ತಮ ಬೆಳೆಯಿಲ್ಲದೆ, ಸೂಕ್ತ ಬೆಲೆಯೂ ದೊರೆಯದೆ ಕೃಷಿಕರು ಕಂಗಾಲಾಗಿದ್ದಾರೆ. ಇತ್ತ, ಕಳೆದ ಐದು ವರ್ಷಗಳಿಂದ ಯುವಜನರು ನೇಮಕಾತಿ ಅಧಿಸೂಚನೆಗಾಗಿ ಶಬರಿಯಂತೆ ಕಾಯುತ್ತಿದ್ದಾರೆ. ಮೀಸಲಾತಿ ಸಮಸ್ಯೆ ಬಗೆಹರಿಸಿ ಹಂತ ಹಂತವಾಗಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರ್ಕಾರ ಇನ್ನಷ್ಟು ವಿಳಂಬ ಮಾಡದೆ ಕಾರ್ಯಪ್ರವೃತ್ತ ಆಗಬೇಕಾಗಿದೆ,

ಅಜಯ್ ಎನ್.ಎಸ್., ಹಾವೇರಿ

ಚುರುಮುರಿ

ಒಳ್ಳೇ ಬಜೆಟ್ ಅಂದ್ರೆ...

• ಬಿ.ಎನ್. ಮಲ್ಲೇಶ್

'ಏನ್ರಲೆ ಹೊಸ ಸುದ್ದಿ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಹೊಸ ಸುದ್ದೀನಾ? ಗುಂಡು, ಗೋಲ್ಡ್ ರೇಟಲ್ಲಿ ಭಾರೀ ಕಡಿತ...' ಎಂದ ಗುಡ್ಡೆ.

'ಗೊತ್ತಾತು, ನಿಂಗೆ ರಾತ್ರಿದಿನ್ನೂ ಇಳಿದಿಲ್ಲ...' ಮಂಜಮ್ಮ ನಕ್ಕಳು.

'ನಿನ್ತೆಲಿ, ನೆಟ್ಟಗೆ ಪೇಪರ್ ಓದೋದು ಕಲಿ. 'ಮದರ್ ಆಫ್ ಡೀಲ್ಸ್'ನಿಂದಾಗಿ ಮದ್ಯ, ಆಭರಣಗಳಿಗೆ ಟ್ಯಾಕ್ಸ್ ಕಮ್ಮಿ ಆಗ್ತಾವು, ರೇಟೂ ಇಳೀತತಿ...' ಗುಡ್ಡೆ ವಿವರಿಸಿದ.

'ಓ.... ಹೌದಾ? ಇದು ಗೊತ್ತಿದ್ದಿಲ್ಲ... ಅದಿರ್ಲಿ, 'ನಮ್ ಮದರ್ ಆಫ್ ಡೀಲ್ಸ್' ಏನಂತತಿ?' ಕೊಟ್ರೇಶಿ ಕೊಕ್ಕೆ.

'ನಮ್ ಮದರ್ರಾ? ಅಂದ್ರೆ?'

'ನಮ್ ನಿರ್ಮಲಾ ಸೀತಾರಾಂ ಕಣಲೆ! ನಾಳೆನೋ ನಾಡಿದ್ದೋ ಅವರು ಮಂಡಿಸೋ ಕೇಂದ್ರ ಬಜೆಟ್ ಏನಂತತಿ ಅಂದೆ...'

'ಓ... ಅದಾ, ಕಾಂಗ್ರೆಸ್‌ನೋರ ಪ್ರಕಾರ ನಿರಾಶಾದಾಯಕ, ನೀರಸ, ಖಾಲಿ ಡಬ್ಬಾ, ಕರ್ನಾಟಕಕ್ಕೆ ಚೊಂಬು, ಕುರ್ಚಿ ಉಳಿಸಿಕೊಳ್ಳೋ ಬಜೆಟ್...'

'ಮತ್ತೆ ಬಿಜೆಪಿಯೋರ ಪ್ರಕಾರ?'

'ಸರ್ವಸ್ಪರ್ಶಿ, ಐತಿಹಾಸಿಕ ಬಜೆಟ್... ಜನಪರ, ರೈತಪರ, ದೂರದೃಷ್ಟಿ ಬಜೆಟ್...'

'ಅಲ್ಲೋ ಗುಡ್ಡೆ, ಇನ್ನೂ ಬಜೆಟ್ ಮಂಡನೇನೆ ಆಗಿಲ್ಲ, ಆಗ್ಲೇ ಯಾರ್ಯಾರು ಏನೇನಂತಾರೆ ಅಂತ ತೆಲಿ ಮ್ಯಾಲ ಹೊಡೆದಂಗೆ ಹೇಳ್ತೀಯಲ್ಲೋ...' ಮಂಜಮ್ಮಗೆ ನಗು ಬಂತು.

'ಬೇಕಾದ್ರೆ ನೋಡ್ತಿರು, ಬಜೆಟ್ ಮಂಡನೆ ಆದಮೇಲೆ ಎಲ್ರೂ ಹಿಂಗೇ ಹೇಳೋದು... ಎಂಥಾ ಒಳ್ಳೇ ಬಜೆಟ್ ಕೊಟ್ರೂ ಕಾಂಗ್ರೆಸ್‌ನೋರು ಅದನ್ನ ಡಬ್ಬಾ ಅಂತಾರೆ. ಡಬ್ಬಾ ಬಜೆಟ್ ಮಂಡಿಸಿದ್ರೂ ಬಿಜೆಪಿಯೋರು ಅದನ್ನ ಅದ್ಭುತ, ಐತಿಹಾಸಿಕ ಅಂತಾರೆ...'

'ಆಯ್ತಪ್ಪ, ಈಗ ನಿನ್ ಪ್ರಕಾರ ಒಳ್ಳೇ ಬಜೆಟ್ ಅಂದ್ರೆ ಯಾವುದು?' ತೆಪರೇಸಿ ಕೇಳಿದ.

'ಒಳ್ಳೇ ಬಜೆಟ್ ಅಂದ್ರೆ ನಿರ್ಮಲಮ್ಮನ ಬಜೆಟ್‌ನ ರಾಹುಲ್ ಗಾಂಧಿ ಹೊಗಳಬೇಕು, ಸಿದ್ರಾಮಣ್ಣನ ಬಜೆಟ್‌ನ ಯಡ್ಯೂರಪ್ಪ, ಅಶೋಕಣ್ಣ ಮೆಚ್ಕಾಬೇಕು...'

'ಅದು ಈ ಜನ್ಮದಲ್ಲಿ ಸಾಧ್ಯ ಇಲ್ಲ ಬಿಡು' ಎಂದ ದುಬ್ಬೀರ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಶಿಕ್ಷಣ: ನೈತಿಕ ಮೌಲ್ಯಗಳ 'ಬಾಪು ಪಥ'

ಶಿಕ್ಷಣದಿಂದ ಸ್ವಾವಲಂಬನೆ, ಸ್ವಾಭಿಮಾನ, ಚಾರಿತ್ರ್ಯ ನಿರ್ಮಾಣವಾಗಬೇಕೆನ್ನುವುದು ಗಾಂಧೀಜಿಯ ಆಶಯವಾಗಿತ್ತು. ಗಾಂಧಿ ಚಿಂತನೆ ಇಂದಿನ ಶಿಕ್ಷಣದಲ್ಲಿ ಎಷ್ಟಿದೆ?

• ತೋಂಟದ ಸಿದ್ಧರಾಮ ಸ್ವಾಮೀಜಿ

'ಸಾ ವಿದ್ಯಾ ಯಾ ವಿಮುಕ್ತಯೇ' ಎಂಬುದು ಭಾರತೀಯ ಪರಂಪರೆಯಲ್ಲಿ ಪ್ರಸಿದ್ಧವಾದ ಸೂಕ್ತಿ. ವಿದ್ಯೆ ಅಥವಾ ಶಿಕ್ಷಣದ ಉದ್ದೇಶವನ್ನು ಈ ಸೂಕ್ತಿಯಿಂದ ಅರಿಯಬಹುದು. ಶಿಕ್ಷಣದ ಉದ್ದೇಶವು ಸಂಕುಚಿತವಾಗಿರಬಾರದು. ಅದು ವ್ಯಕ್ತಿಯನ್ನು ಕ್ರಿಯಾಶೀಲಗೊಳಿಸಬೇಕು; ಸಾಮಾಜಿಕವಾಗಿ, ನೈತಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ವ್ಯಕ್ತಿಯನ್ನು ಸಮೃದ್ಧಗೊಳಿಸಬೇಕು. ಹಾಗೆಯೇ ವ್ಯಕ್ತಿಯಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಜಾಗೃತಗೊಳಿಸಬೇಕು. ಈ ದಿಸೆಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಶೈಕ್ಷಣಿಕ ವಿಚಾರಗಳು ಗಮನಾರ್ಹವಾಗಿವೆ.

ಗಾಂಧೀಜಿ ಅವರು ಬದುಕಿರುವಾಗಲೇ ದಂತಕಥೆಯಾಗಿದ್ದವರು. ಹಾಗಾಗಿ, ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯಲ್ಲಿ ಅವರಿಗೊಂದು ವಿಶಿಷ್ಟ ಸ್ಥಾನವಿದೆ. ಅವರು ಆಧುನಿಕ ಭಾರತದ ಶಿಕ್ಷಣತಜ್ಞರಲ್ಲಿ ಒಬ್ಬರು. ರಾಷ್ಟ್ರೀಯವಾದವನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದ ಅವರು ಶಿಕ್ಷಣದ ವಿಷಯದಲ್ಲಿ ತಮ್ಮ ವಿಚಾರಗಳನ್ನು ಸಾಂದರ್ಭಿಕವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ಶಿಕ್ಷಣವನ್ನು ಕೇವಲ ಅಕ್ಷರಾಭ್ಯಾಸವೆಂದು ಪರಿಗಣಿಸಬಾರದು. ಸಾಕ್ಷರತೆ ಎಂಬುದು ಶಿಕ್ಷಣದ ಆದಿಯೂ ಅಲ್ಲ, ಅಂತ್ಯವೂ ಅಲ್ಲ. ಅದು ವ್ಯಕ್ತಿಯ ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕ ವಿಕಾಸದ ಸಾಧನವಾಗಿದೆ ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು.

ಶಿಕ್ಷಣ ಕೇವಲ ಔಪಚಾರಿಕ ಜ್ಞಾನದ ಮಾಧ್ಯಮವಾಗಿರದೆ, ಅದು ಜೀವನ ದರ್ಶನ, ಚಾರಿತ್ರ್ಯ ನಿರ್ಮಾಣ ಹಾಗೂ ಸಾಮಾಜಿಕ ಪರಿವರ್ತನೆಯ ಸಶಕ್ತ ಸಾಧನವಾಗಿದೆ. ಶಿಕ್ಷಣದ ಉದ್ದೇಶ ಆಡಳಿತಯಂತ್ರ ನಡೆಸುವ ಗುಮಾಸ್ತರನ್ನು ತರಬೇತುಗೊಳಿಸುವುದಲ್ಲ. ಅದು ಮನುಷ್ಯನ ಆಂತರಿಕ ಶಕ್ತಿಯನ್ನು ಹೆಚ್ಚಿಸಬೇಕು. ಕೌಶಲಾಭಿವೃದ್ಧಿ ಮತ್ತು ಪರಿಪೂರ್ಣ ವ್ಯಕ್ತಿತ್ವದ ನಿರ್ಮಾಣ ಮಾಡುವಂತಿರಬೇಕು ಮತ್ತು ಇಂತಹ ಶಿಕ್ಷಣದಿಂದಲೇ ರಾಷ್ಟ್ರವು ಸ್ವಾವಲಂಬಿಯಾಗುವುದು ಎಂದವರು ನಂಬಿದ್ದರು.



ಗಾಂಧೀಜಿಯವರು ಶಿಕ್ಷಣದ ವಿಷಯದಲ್ಲಿ ಸಾಂದರ್ಭಿಕವಾಗಿ ಹೇಳಿದ ವಿಚಾರಗಳನ್ನು ಕ್ರೋಡೀಕರಿಸಿ ಹೇಳುವುದಾದರೆ, ಶಿಕ್ಷಣದಿಂದ ಸಾಂಸ್ಕೃತಿಕ ವಾತಾವರಣ ಸೃಷ್ಟಿಯಾಗಬೇಕು. ವ್ಯಕ್ತಿಯ ಚಾರಿತ್ರ್ಯದ ವಿಕಾಸವಾಗಬೇಕು. ವ್ಯಕ್ತಿಯ ವ್ಯಕ್ತಿತ್ವವು ಪರಿಪೂರ್ಣವಾಗುವುದರ ಜತೆಗೆ ವ್ಯಸನಮುಕ್ತವಾದ ಸರ್ವಾಂಗಸುಂದರ ಸಮಾಜ ನಿರ್ಮಾಣಗೊಳ್ಳಬೇಕು. ಅವರು ತಮ್ಮ ಆತ್ಮಚರಿತ್ರೆಯಲ್ಲಿ, 'ನಾನು ಯಾವಾಗಲೂ ಹೃದಯದ ಸಂಸ್ಕೃತಿ ಹಾಗೂ ಚಾರಿತ್ರ್ಯ ನಿರ್ಮಾಣಕ್ಕೆ ಮೊದಲ ಆದ್ಯತೆ ನೀಡುತ್ತ ಬಂದಿದ್ದೇನೆ. ನನ್ನ ದೃಷ್ಟಿಯಲ್ಲಿ ಚಾರಿತ್ರ್ಯ ನಿರ್ಮಾಣಕ್ಕೆ ಶಿಕ್ಷಣವೇ ಆಧಾರ' ಎಂದು ಹೇಳಿದ್ದಾರೆ.

ವ್ಯಕ್ತಿಯು ಶಿಕ್ಷಣದಿಂದ ತನ್ನ ಬದುಕಿನ ನಿರ್ವಹಣೆಯನ್ನು ತಾನೇ ಮಾಡಿಕೊಳ್ಳುವುದರ ಜತೆಗೆ ಉತ್ತಮ ಚಾರಿತ್ರ್ಯವನ್ನೂ ನಿರ್ಮಿಸಿಕೊಳ್ಳಬೇಕು. ಚಾರಿತ್ರ್ಯನಿರ್ಮಾಣ ಮಾಡದ ಶಿಕ್ಷಣ ನಿಷ್ಪ್ರಯೋಜಕ. ಶಿಕ್ಷಣದ ಉದ್ದೇಶ ಜ್ಞಾನಾಭಿವೃದ್ಧಿಯಷ್ಟೇ ಅಲ್ಲ, ಹಾರ್ದಿಕ ಮತ್ತು ಕಾಯಕ ಸಂಸ್ಕೃತಿಯ ವಿಕಾಸವೂ ಆಗಿದೆ. ಶಿಕ್ಷಣಕ್ಕೆ ಸದಾಚಾರ ಮತ್ತು ನೈತಿಕತೆ ಆಧಾರವಾಗಬೇಕು. ಆದರೆ, ಇಂದಿನ ಶಿಕ್ಷಣವು ಭೌತಿಕತೆ ಹಾಗೂ ಹಿಂಸೆಗೆ ಉತ್ತೇಜನ ನೀಡುತ್ತಿರುವುದು ವಿಪರ್ಯಾಸ. ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವುದು, ಆರ್ಥಿಕವಾಗಿ ಅವರನ್ನು ಆತ್ಮನಿರ್ಭರರನ್ನಾಗಿಸುವುದು ಮತ್ತು ಹೊಣೆಗಾರಿಕೆಯುಳ್ಳ ಕ್ರಿಯಾಶೀಲ ನಾಗರಿಕರನ್ನಾಗಿ ರೂಪಿಸುವುದು ಶಿಕ್ಷಣದ ಉದ್ದೇಶ.

ಗಾಂಧೀಜಿಯವರ ದೃಷ್ಟಿಯಲ್ಲಿ, ಶಿಕ್ಷಣದಿಂದ ಬರೀ ಬೌದ್ಧಿಕ ವಿಕಾಸ ಆಗುವುದಾದರೆ ಪ್ರಯೋಜನವಿಲ್ಲ. ಬೌದ್ಧಿಕ ವಿಕಾಸದೊಂದಿಗೆ ನಮ್ಮ ಸಕಲ ಇಂದ್ರಿಯಗಳನ್ನು ಸದುಪಯೋಗಪಡಿಸಿಕೊಳ್ಳುವ ಶಿಕ್ಷಣ ಬಹಳ ಮುಖ್ಯ. ಇಂದಿನ ಶಿಕ್ಷಣವು ಮನುಷ್ಯನಿಗೆ ಅವನ ಕಣ್ಣು, ಕಿವಿ, ಮೂಗು, ಬಾಯಿ, ಕೈ-ಕಾಲುಗಳನ್ನು ಸದುಪಯೋಗ ಮಾಡಿಕೊಳ್ಳುವುದನ್ನು ಕಲಿಸುತ್ತಿಲ್ಲ. ಗಾಂಧೀಜಿಯವರು ಪ್ರತಿಪಾದಿಸಿರುವುದು ಕಾಯಕ ಕೇಂದ್ರಿತ, ಮೌಲ್ಯಾಧಾರಿತ ಮತ್ತು ಸಮಾಜಮುಖಿ ಶಿಕ್ಷಣವಾಗಿದೆ.

ಮಾದರಿ ಶಿಕ್ಷಣ ಕುರಿತಂತೆ ಗಾಂಧೀಜಿ ಅವರ ಕೆಲವು ಸಲಹೆಗಳು ಹೀಗಿವೆ:

- ದೇಶದಲ್ಲಿ ಹುಟ್ಟಿದ ಪ್ರತಿಯೊಂದು ಮಗುವೂ ಮೌಲಿಕ ಶಿಕ್ಷಣ ಪಡೆಯುವಂತಾಗಲು ಪ್ರೌಢಶಾಲಾ ಹಂತದವರೆಗೆ ಮಗುವಿಗೆ ಶುಲ್ಕರಹಿತ ಶಿಕ್ಷಣ ನೀಡಬೇಕು. ಇದು ಜಾರಿಯಾಗದಿದ್ದರೆ ಸಮಾಜದಲ್ಲಿ ಅಸಮಾನತೆ ಉಂಟಾಗಲಿದೆ.
- ಮಗುವು ಪ್ರಾಥಮಿಕ ಶಿಕ್ಷಣವನ್ನು ತನ್ನ ಮಾತೃಭಾಷೆಯಲ್ಲಿಯೇ ಪಡೆಯಬೇಕು. ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದರಿಂದ ಮಗುವು ವಿಷಯವನ್ನು ಚೆನ್ನಾಗಿ ಅರ್ಥೈಸಿಕೊಳ್ಳುತ್ತದೆ, ನಮ್ಮ ಸಂಸ್ಕೃತಿ ಹಾಗೂ ಪರಂಪರೆಯ ಜತೆಗೆ ಸಂಬಂಧ ಬೆಳೆಸಿಕೊಳ್ಳುತ್ತದೆ. ಭಾಷೆ ಕೇವಲ ಅಭಿವ್ಯಕ್ತಿಯ ಮಾಧ್ಯಮವಲ್ಲ. ಅದು ಸಂಸ್ಕೃತಿ ಮತ್ತು ಸಭ್ಯತೆಯ ವಾಹಕವಾಗಿರುವುದನ್ನು ಗಮನಿಸಬೇಕು.
- ಶಿಕ್ಷಣ ಪಡೆದ ವಿದ್ಯಾರ್ಥಿಯು ಸರ್ಕಾರಿ ನೌಕರಿಗಾಗಿ ಅಲೆದಾಡುವಂತಾಗಬಾರದು. ನೌಕರಿ ಸಿಗದಿದ್ದರೆ ಬದುಕಿನ ನಿರ್ವಹಣೆಗಾಗಿ ಯಾವುದೇ ಭ್ರಷ್ಟ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಬಾರದು. ಹಾಗೆಯೇ ಶಿಕ್ಷಣದಿಂದ ವಿದ್ಯಾರ್ಥಿಯು ಭ್ರಮಾಧೀನ ಆಗಬಾರದು. ಶಿಕ್ಷಣವು ವ್ಯಕ್ತಿಯನ್ನು ಸ್ವಾವಲಂಬಿಯಾಗಿಸಬೇಕು. ಸ್ವಾವಲಂಬನೆ ಎಂಬುದು ಕೇವಲ ಆರ್ಥಿಕ ಸ್ವಾತಂತ್ರ್ಯದ ತಳಹದಿಯಲ್ಲ. ಅದು ಮಾನವೀಯತೆಯನ್ನು ಉನ್ನತೀಕರಿಸುವುದಕ್ಕೆ ಮತ್ತು ಆತ್ಮಗೌರವದಿಂದ ಬದುಕುವುದಕ್ಕೆ ಮೂಲಾಧಾರವಾಗಿದೆ.

ಗಾಂಧೀಜಿ ಅವರ ಶಿಕ್ಷಣವನ್ನು ಕುರಿತಾದ ವಿಚಾರಗಳು ವ್ಯಕ್ತಿ ಸ್ವಾವಲಂಬಿಯಾಗಿ ಮತ್ತು ಸ್ವಾಭಿಮಾನದಿಂದ ಬದುಕುವುದನ್ನು ಕಲಿಸುತ್ತವೆ. ಸತ್ಯ, ಅಹಿಂಸೆ, ನಿರ್ಭಯ ಮತ್ತು ಸತ್ಯಾಗ್ರಹಗಳು ಗಾಂಧೀಜಿ ಅವರ ಜೀವನ ದರ್ಶನದ ತತ್ತ್ವಗಳಾಗಿವೆ. ಇವುಗಳ ಅನುಷ್ಠಾನದಿಂದ ವ್ಯಕ್ತಿಯ ಚಾರಿತ್ರ್ಯನಿರ್ಮಾಣವೂ ಸಾಧ್ಯವಾಗುತ್ತದೆ ಹಾಗೂ ದೇಶಾಭಿಮಾನವೂ ಬೆಳೆಯುತ್ತದೆ. ಈ ದಿಸೆಯಲ್ಲಿ ಗಾಂಧೀಜಿ ಅವರ ಶೈಕ್ಷಣಿಕ ಕೊಡುಗೆಗಳನ್ನು ಕುರಿತು ಅಧ್ಯಯನ ಮಾಡುವುದು ಮತ್ತು ಮುಂದಿನ ಪೀಳಿಗೆಗೆ ಅವರ ವಿಚಾರಗಳನ್ನು ತಲಪಿಸುವುದು ಇಂದಿನ ಅಗತ್ಯವಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆರ್ಥಿಕ ಸಮೀಕ್ಷೆ 2025–26

ಹಲವು ಸಾಧನೆ ಬದಲಾವಣೆಯ ಪ್ರತಿಪಾದನೆ

2025-26ನೇ ಸಾಲಿನ ಆರ್ಥಿಕ ಸಮೀಕ್ಷೆಯನ್ನು ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿದ್ದು, ಹಲವು ಕ್ಷೇತ್ರಗಳ ಬೆಳವಣಿಗೆ ಮತ್ತು ಕೊರತೆಗಳ ಬಗ್ಗೆ ಉಲ್ಲೇಖಿಸಿದೆ. ಕೃಷಿ, ಆರೋಗ್ಯ, ಶಿಕ್ಷಣ ಮುಂತಾದ ಕ್ಷೇತ್ರಗಳ ಬೆಳವಣಿಗೆಯನ್ನು ಗಮನಿಸುತ್ತಲೇ ಆಗಬೇಕಾದ ಕೆಲಸಗಳ ಬಗ್ಗೆಯೂ ಪ್ರಸ್ತಾಪಿಸಿದೆ. ಡಿಜಿಟಲ್ ವ್ಯಸನ ಹೆಚ್ಚುತ್ತಿರುವ ಬಗ್ಗೆ ಸಮೀಕ್ಷೆ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಈ ದಿಸೆಯಲ್ಲಿ ನಿರ್ದಿಷ್ಟ ಪರಿಹಾರ ಕ್ರಮಗಳನ್ನು ರೂಪಿಸಬೇಕು ಎಂದು ಸೂಚಿಸಿದೆ

ಮಕ್ಕಳ ಡಿಜಿಟಲ್ ವ್ಯಸನಕ್ಕೆ ಬೀಳಲಿ ಕಡಿವಾಣ

ಪ್ರಜಾವಾಣಿ ವಾರ್ತೆ

ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸುವುದಕ್ಕೆ ಮಿತಿ ಹೇರುವ, ಬಳಕೆದಾರನ ವಯಸ್ಸು ಆಧರಿಸಿ ಆನ್‌ಲೈನ್ ವೇದಿಕೆಗಳ ಬಳಕೆಗೆ ಅವಕಾಶ ಕಲ್ಪಿಸುವ ಮತ್ತು ಡಿಜಿಟಲ್ ವ್ಯಸನವನ್ನು ತಡೆಯಲು ಆನ್‌ಲೈನ್ ತರಗತಿಗಳನ್ನು ಕಡಿತಗೊಳಿಸುವ ಅಗತ್ಯದ ಬಗ್ಗೆ ಆರ್ಥಿಕ ಸಮೀಕ್ಷೆ ಪ್ರತಿಪಾದಿಸಿದೆ. ಹೆಚ್ಚುತ್ತಿರುವ ಡಿಜಿಟಲ್ ವ್ಯಸನಕ್ಕೆ ಸಂಬಂಧಿಸಿದಂತೆ ವಯಸ್ಸು ದೃಢೀಕರಣಕ್ಕೆ ಆನ್‌ಲೈನ್ ವೇದಿಕೆಗಳನ್ನು ಜವಾಬ್ದಾರರನ್ನಾಗಿಸಬೇಕು ಮತ್ತು ಶೈಕ್ಷಣಿಕ ವಸ್ತು–ವಿಷಯ ತಿಳಿಯಲು ಮಕ್ಕಳ ನಡುವೆ ಬೇಸಿಕ್ ಫೋನ್‌ಗಳಂತಹ ಸರಳ ಸಾಧನಗಳ ಬಳಕೆ ಉತ್ತೇಜಿಸಬೇಕು. ವಿಶೇಷವಾಗಿ ಸಾಮಾಜಿಕ ಜಾಲತಾಣಗಳು, ಜೂಜಿನ ಆ್ಯಪ್‌ಗಳು ಮತ್ತು ಜಾಹೀರಾತುಗಳಿಗೆ ಸಂಬಂಧಿಸಿದಂತೆ ವಯಸ್ಸು ಮುಖ್ಯವಾಗುತ್ತದೆ ಎಂದಿದೆ.

ಆಸ್ಟ್ರೇಲಿಯಾ, ಚೀನಾ, ದಕ್ಷಿಣ ಕೊರಿಯಾದಂಥ ದೇಶಗಳಲ್ಲಿ ಈ ಕುರಿತು ಜಾರಿಗೆ ತರಲಾಗಿರುವ ನಿಯಮಗಳನ್ನು ಉಲ್ಲೇಖಿಸಲಾಗಿದ್ದು, ಯುವಕರು ಮತ್ತು ವಯಸ್ಕರ ಮಾನಸಿಕ ಆರೋಗ್ಯದ ಮೇಲೆ ಡಿಜಿಟಲ್ ವ್ಯಸನವು ಪರಿಣಾಮ ಬೀರುತ್ತಿದೆ. ಈ ವಿಚಾರದಲ್ಲಿ ಕುಟುಂಬಕ್ಕೂ ಅರಿವು ಮೂಡಿಸುವ ಅಗತ್ಯವಿದ್ದು, ಸ್ಕ್ರೀನ್ ಟೈಮ್‌ಗೆ ಮಿತಿ ಹೇರುವುದು, ಸಾಧನಗಳಿಂದ ಮುಕ್ತವಾಗಿ ಸಮಯ ಕಳೆಯುವುದು, ಎಲ್ಲರೂ ಒಟ್ಟಾಗಿ ಆಫ್‌ಲೈನ್ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಉತ್ತೇಜಿಸಬೇಕು ಎಂದು ಸಮೀಕ್ಷೆ ಹೇಳಿದೆ.

ಕಲಿಕೆ, ಉತ್ಪಾದಕತೆಗೆ ಕುತ್ತು: ಡಿಜಿಟಲ್ ವ್ಯಸನವು ಶೈಕ್ಷಣಿಕ ಸಾಧನೆ, ಉತ್ಪಾದಕತೆಯ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ಸಾರ್ವಜನಿಕ ಆರೋಗ್ಯ ಕ್ಷೇತ್ರದ ಗಮನಾರ್ಹ ಸಮಸ್ಯೆಯಾಗಿದೆ.

ಭಾರತದಲ್ಲಿ ಡಿಜಿಟಲ್ ವ್ಯಸನ ಮತ್ತು ಅದು ಮಾನಸಿಕ ಆರೋಗ್ಯದ ಮೇಲೆ ಬೀರುವ ಪರಿಣಾಮಗಳ ಸಮಗ್ರ ರಾಷ್ಟ್ರೀಯ ದತ್ತಾಂಶ ಲಭ್ಯವಿಲ್ಲ. ಗುರಿ ಆಧಾರಿತ ಕಾರ್ಯಕ್ರಮಗಳು, ಸಂಪನ್ಮೂಲ ಮೀಸಲಿಡುವಿಕೆ ಮತ್ತು ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯತಂತ್ರಗಳಲ್ಲಿ ಡಿಜಿಟಲ್ ಆರೋಗ್ಯವನ್ನು ಒಳಗೊಳ್ಳುವುದರ ಅಗತ್ಯ ಇದೆ ಎಂದು ಸಮೀಕ್ಷೆ ಹೇಳಿದೆ.

ಭಾರತೀಯ ಸಂದರ್ಭದಲ್ಲಿ ಡಿಜಿಟಲ್ ವ್ಯಸನದ ಮಾನಸಿಕ ಪರಿಣಾಮಗಳ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ನಿಮ್ಹಾನ್ಸ್ ನೇತೃತ್ವದಲ್ಲಿ ಅಧ್ಯಯನ ನಡೆಸುತ್ತಿದ್ದು, ಅದರ ವರದಿಯು ಸಮಗ್ರ ಮತ್ತು ಕಾರ್ಯಯೋಗ್ಯವಾದ ಒಳನೋಟಗಳನ್ನು ನೀಡಲಿದೆ. ಈ ವ್ಯಸನವು ಕಲಿಕೆ, ನಾಗರಿಕ ಸಹಭಾಗಿತ್ವದ ಮೇಲೆ ಪರಿಣಾಮ ಬೀರುತ್ತಿದ್ದು, ಮುಂದುವರಿದ ಹಂತದಲ್ಲಿ ಹಲವು ರೀತಿಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೂ ಕಾರಣವಾಗುತ್ತಿದೆ.



ಚಿತ್ರ: ಆರ್ಥಿಕ ಸಮೀಕ್ಷೆ

ವಿದೇಶಿ ನೇರ ಬಂಡವಾಳ ಹೂಡಿಕೆ ಹೆಚ್ಚಳ (ಲಕ್ಷ ಕೋಟಿಗಳಲ್ಲಿ)

2023-24	₹6.55
2024-25	₹7.45
2025-26*	₹5.96

(2025ರ ಏಪ್ರಿಲ್‌ನಿಂದ ನವೆಂಬರ್‌ವರೆಗೆ)

ಕೃಷಿ ರಫ್ತು: ಸ್ಥಿರ ನೀತಿ ಅಗತ್ಯ



ಮುಂದಿನ ನಾಲ್ಕು ವರ್ಷಗಳಲ್ಲಿ ಕೃಷಿ, ಸಾಗರೋತ್ಪನ್ನ, ಆಹಾರ ಮತ್ತು ಪಾನೀಯಗಳ ರಫ್ತಿನ ಮೌಲ್ಯ ₹9.19 ಲಕ್ಷ ಕೋಟಿಗೆ (10,000 ಕೋಟಿ ಡಾಲರ್) ಹೆಚ್ಚಿಸುವ ಗುರಿಯನ್ನು ತಲುಪಲು ಭಾರತವು ತನ್ನ ಕೃಷಿ ರಫ್ತು ನೀತಿಗಳನ್ನು ಸರಿಪಡಿಸಬೇಕು. ಹೆಚ್ಚು ಸ್ಥಿರವಾದ ನೀತಿ ಬೇಕು ಎಂದು ಆರ್ಥಿಕ ಸಮೀಕ್ಷೆ ಹೇಳಿದೆ. ಸರ್ಕಾರದ ತಾತ್ಕಾಲಿಕ ನೀತಿಗಳು, ವ್ಯಾಪಾರ ನಿರ್ಬಂಧಗಳು ಪೂರೈಕೆ ಸರಪಣಿಗೆ ಅಡಚಣೆ ಉಂಟುಮಾಡುತ್ತಿರುವುದಲ್ಲದೆ, ದೇಶವು ಹೊಂದಿರುವ ವಿಶ್ವಾಸಾರ್ಹ ಪೂರೈಕೆದಾರ ಎಂಬ ವರ್ಚಸ್ಸಿಗೆ ಧಕ್ಕೆ ತರುತ್ತಿದೆ. 2024–25ರಲ್ಲಿ ಭಾರತದ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಉತ್ಪನ್ನಗಳ ರಫ್ತು ಮೌಲ್ಯ ₹4.70 ಲಕ್ಷ ಕೋಟಿಗಳಷ್ಟಿತ್ತು (5,110 ಕೋಟಿ ಡಾಲರ್).

ಭಾರತವು ಜಗತ್ತಿನಲ್ಲೇ ಎರಡನೇ ಅತಿದೊಡ್ಡ ಕೃಷಿ ಉತ್ಪಾದಕ ರಾಷ್ಟ್ರವಾಗಿದ್ದರೂ ಜಾಗತಿಕ ಕೃಷಿ ಉತ್ಪನ್ನಗಳ ಒಟ್ಟು ರಫ್ತಿನಲ್ಲಿ ಭಾರತದ ಪಾಲು ಶೇ 2.2ರಷ್ಟು ಮಾತ್ರ ಇದೆ. 2019–20 ಮತ್ತು 2024–25ರ ನಡುವೆ ಕೃಷಿ ರಫ್ತಿನ ವಾರ್ಷಿಕ ಅಭಿವೃದ್ಧಿ ದರ ಶೇ 8.2ರಷ್ಟರಲ್ಲೇ ನಿಂತಿದೆ ಎಂದು ಸಮೀಕ್ಷೆ ಹೇಳಿದೆ.

ಐದು ವರ್ಷಗಳಲ್ಲಿ ಕೃಷಿ ಕ್ಷೇತ್ರದ ವಾರ್ಷಿಕ ಸರಾಸರಿ ಅಭಿವೃದ್ಧಿ ದರ ಶೇ 4.4ರಷ್ಟಿದೆ ಎಂದು ಹೇಳಿರುವ ಸಮೀಕ್ಷೆ, ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಾಗಿದೆ. ತೋಟಗಾರಿಕಾ ಬೆಳೆಗಳ ಉತ್ಪಾದನೆಯಲ್ಲೂ ಗಣನೀಯ ಏರಿಕೆ ಕಂಡು ಬಂದಿದೆ ಎಂದೂ ವಿವರಿಸಿದೆ.

ಕರ್ನಾಟಕದ ‘ಫ್ರೂಟ್ಸ್’ ತಂತ್ರಾಂಶ ಸೇರಿದಂತೆ ಕೃಷಿ ಕ್ಷೇತ್ರದಲ್ಲಿ ಕೆಲವು ರಾಜ್ಯಗಳು ಅಳವಡಿಸಿಕೊಂಡಿರುವ ತಂತ್ರಜ್ಞಾನ ಆಧಾರಿತ ಸೇವೆಗಳನ್ನೂ ಸಮೀಕ್ಷೆಯಲ್ಲಿ ಉಲ್ಲೇಖಿಸಲಾಗಿದೆ. ರಾಜ್ಯ ಮಟ್ಟದಲ್ಲಿ ಅಭಿವೃದ್ಧಿಪಡಿಸಲಾದ ಈ ವಿನೂತನ ಪರಿಕಲ್ಪನೆಗಳು ಕೃಷಿ ಆಡಳಿತದಲ್ಲಿ ಪರಿಣಾಮಕಾರಿ ಬದಲಾವಣೆಯನ್ನು ತಂದಿವೆ ಮತ್ತು ಕೃಷಿಕರಿಗೆ ಉತ್ತಮ ಸೇವೆ ಒದಗಿಸಲು ನೆರವಾಗಿವೆ ಎಂದು ಹೇಳಿದೆ.

ಆಂಧ್ರಪ್ರದೇಶದಲ್ಲಿ ಜಾರಿಯಲ್ಲಿರುವ ಡ್ರೋನ್ ಆಧಾರಿತ ಸಮೀಕ್ಷೆ, ಇ–ಫಾರ್ಮಾರ್ಕೆಟ್ ಪ್ಲಾಟ್‌ಫಾರ್ಮ್, ಬಿಹಾರದ ಮುಖ್ಯಮಂತ್ರಿ ಸಮೀಕ್ಷಿತ್ ಚೌರ್ (ಜೌಗು ಭೂಮಿ) ವಿಕಾಸ್ ಯೋಜನೆ, ಅಸ್ಸಾಂ ರಾಜ್ಯ ನೀರಾವರಿ ಯೋಜನೆ, ಉತ್ತರ ಪ್ರದೇಶದ ಅಂತರ್ಜಲ ನಿಯಮಗಳು, ಕರ್ನಾಟಕದ ಫ್ರೂಟ್ಸ್ ಪ್ಲಾಟ್‌ಫಾರ್ಮ್ ಜಾರ್ಖಂಡ್‌ನ ಜಿಐಎಸ್ ಆಧಾರಿತ ಕ್ಲೈಮೇಟ್ ಸ್ಮಾರ್ಟ್ ಅಗ್ರಿಕಲ್ಚರ್ ಆ್ಯಂಡ್ ಅಗ್ರಿ ಸ್ಟೇಕ್ ಸ್ಕೀಮ್, ಬಿಹಾರದ ನಾಲ್ಕನೇ ಕೃಷಿ ನೀಲ ನಕ್ಷೆಗಳನ್ನು ಸಮೀಕ್ಷೆ ಶ್ಲಾಘಿಸಿದೆ.

ಎಥೆನಾಲ್‌ಗಾಗಿ ಮೆಕ್ಕೆಜೋಳ ಆಹಾರ ಭದ್ರತೆಗೆ ಕುತ್ತು

ಭಾರತದಲ್ಲಿ ಪೆಟ್ರೋಲ್‌ಗೆ ಎಥೆನಾಲ್ ಮಿಶ್ರಣ ಮಾಡುವ ಯೋಜನೆಯಿಂದ ₹1.44 ಲಕ್ಷ ಕೋಟಿಗೂ ಹೆಚ್ಚು ವಿದೇಶಿ ವಿನಿಮಯ ಉಳಿತಾಯವಾಗಿದ್ದು, ಆಗಸ್ಟ್ 2025ರ ವೇಳೆಗೆ 245 ಲಕ್ಷ ಟನ್ ಕಚ್ಚಾ ತೈಲಕ್ಕೆ ಪರ್ಯಾಯವಾಗಿ ಎಥೆನಾಲ್ ಅನ್ನು ಬಳಸಲಾಗಿದೆ ಎಂದು ಆರ್ಥಿಕ ಸಮೀಕ್ಷೆ ಹೇಳಿದೆ.

ಆದರೆ, ಇದರ ತ್ವರಿತ ವಿಸ್ತರಣೆಯು ಹಲವು ಅನಪೇಕ್ಷಿತ ಪರಿಣಾಮಗಳಿಗೆ ಕಾರಣವಾಗುತ್ತಿದೆ. ಸರ್ಕಾರವು ಮೆಕ್ಕೆಜೋಳ ಆಧಾರಿತ ಎಥೆನಾಲ್ ಉತ್ಪಾದನೆಯನ್ನು ಉತ್ತೇಜಿಸುತ್ತಿದ್ದು, ರೈತರು ಬೇಳೆ, ಎಣ್ಣೆಕಾಳುಗಳ ಬದಲಿಗೆ ಮೆಕ್ಕೆಜೋಳ ಬೆಳೆಯುತ್ತಿದ್ದಾರೆ. ಇದರಿಂದ ದೇಶದಲ್ಲಿ ದೀರ್ಘಾವಧಿಯ ಆಹಾರ ಭದ್ರತೆ ಮತ್ತು ಪೌಷ್ಟಿಕತೆಯ ಸಮಸ್ಯೆಗಳು ಉಂಟಾಗಬಹುದು ಎಂದು ಸಮೀಕ್ಷೆ ಹೇಳಿದೆ. ಭಾರತವು ಪೆಟ್ರೋಲ್‌ಗೆ ಶೇ 20ರಷ್ಟು ಎಥೆನಾಲ್ ಅನ್ನು ಮಿಶ್ರಣ ಮಾಡುವ ಗುರಿಯತ್ತ ಸಾಗುತ್ತಿದ್ದು, ಈ ಗುರಿಸಾಧನೆಗಾಗಿ ಸಾಂಪ್ರದಾಯಿಕವಾದ ಸಕ್ಕರೆ ಆಧಾರಿತ ಕಚ್ಚಾ ಪದಾರ್ಥಗಳನ್ನೂ ಮೀರಿ ಆಹಾರ ಧಾನ್ಯಗಳಿಗೆ (ವಿಶೇಷವಾಗಿ ಮೆಕ್ಕೆಜೋಳ) ವಿಸ್ತರಿಸಿದೆ. ದೇಶದ ಹಲವೆಡೆ ಮೆಕ್ಕೆಜೋಳದ ಉತ್ಪಾದನೆ (ಶೇ 8.77) ಮತ್ತು ಬೆಳೆ ಬೆಳೆಯುವ ಪ್ರದೇಶ (ಶೇ 6.68) ಹೆಚ್ಚಾಗಿದ್ದು, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಮೆಕ್ಕೆಜೋಳವು ಬೇಳೆಕಾಳು, ಎಣ್ಣೆಕಾಳು, ಸೋಯಾಬೀನ್, ಸಿರಿಧಾನ್ಯ ಮತ್ತು ಹತ್ತಿಯೊಂದಿಗೆ ಪೈಪೋಟಿ ನಡೆಸುತ್ತಿದೆ.

ಇಪ್ಪತ್ತು ವರ್ಷಗಳಷ್ಟು ಹಳೆಯದಾದ ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯನ್ನು ಮರುಪರಿಶೀಲಿಸಬೇಕು ಎಂದು ಆರ್ಥಿಕ ಸಮೀಕ್ಷೆ ಪ್ರಬಲವಾಗಿ ಪ್ರತಿಪಾದಿಸಿದೆ. ಕಾಯ್ದೆಯ ಅಡಿಯಲ್ಲಿ ಗೋಪ್ಯ ವರದಿಗಳು ಮತ್ತು ಕರಡು ಅಭಿಪ್ರಾಯಗಳನ್ನು ಬಹಿರಂಗ ಪಡಿಸುವುದಕ್ಕೆ ಅವಕಾಶ ನೀಡಬಾರದು. ಅಂತಹ ನಿಯಮಗಳು ಆಡಳಿತವನ್ನು ನಿರ್ಬಂಧಕ್ಕೊಳಪಡಿಸುತ್ತವೆ ಎಂದು ಅದು ಹೇಳಿದೆ.

ಜಾಹೀರಾತು ನಿರ್ಬಂಧಿಸಿ

ಉಪ್ಪು, ಸಕ್ಕರೆ, ಕೊಬ್ಬಿನ ಅಂಶ ಜಾಸ್ತಿ ಇರುವ ಹೆಚ್ಚು ಸಂಸ್ಕರಿತ ಆಹಾರ ಪದಾರ್ಥಗಳ ಬಳಕೆ ಹೆಚ್ಚುತ್ತಿದ್ದು, ಭಾರತದಲ್ಲಿ ಇಂತಹ ಆಹಾರ ಪದಾರ್ಥಗಳ ಮಾರುಕಟ್ಟೆ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. ಈ ದಿಸೆಯಲ್ಲಿ, ಬೆಳಿಗ್ಗೆ 6ರಿಂದ ರಾತ್ರಿ 11 ಗಂಟೆಯವರೆಗೆ ಇಂಥ ಆಹಾರ ವಸ್ತುಗಳ ಜಾಹೀರಾತುಗಳನ್ನು ನಿರ್ಬಂಧಿಸಬೇಕು ಎಂದು ಬಲವಾಗಿ ಪ್ರತಿಪಾದಿಸಿದೆ.

ದೇಶದಲ್ಲಿ 2020ರಲ್ಲಿ 3.3 ಕೋಟಿ ಮಕ್ಕಳು ಸ್ಥೂಲಕಾಯದವರಾಗಿದ್ದರೆ, 2035ಕ್ಕೆ ಈ ಸಂಖ್ಯೆ 8.3 ಕೋಟಿಗೆ ಏರಲಿದೆ. 2019–21ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ, ದೇಶದ ಶೇ 24ರಷ್ಟು ಮಹಿಳೆಯರು ಮತ್ತು ಶೇ 23ರಷ್ಟು ಪುರುಷರು ಅಧಿಕ ತೂಕ ಮತ್ತು ಬೊಜ್ಜು ಹೊಂದಿದ್ದಾರೆ. ದೇಶದಲ್ಲಿ 2009 ಮತ್ತು 2023ರ ನಡುವೆ ಹೆಚ್ಚು ಸಂಸ್ಕರಿತ ಆಹಾರ ಪದಾರ್ಥಗಳ ಮಾರಾಟವು ಶೇ 150ರಷ್ಟು ಹೆಚ್ಚಳವಾಗಿದೆ. ಇದೇ ಅವಧಿಯಲ್ಲಿ ಮಹಿಳೆಯರು ಮತ್ತು ಪುರುಷರಲ್ಲಿ ಬೊಜ್ಜು ಕೂಡ ದ್ವಿಗುಣಗೊಂಡಿದೆ. ಇವುಗಳ ಪರಿಹಾರಕ್ಕೆ ಗ್ರಾಹಕರ ಸ್ವಭಾವದಲ್ಲಿ ಬದಲಾವಣೆ ತರುವುದರ ಜತೆಗೆ ನಿಮಯ ರೂಪಿಸುವುದೂ ಅಗತ್ಯವಾಗಿದೆ. ಮಾಧ್ಯಮಗಳ ಜತೆಗೆ ಡಿಜಿಟಲ್ ಮಾಧ್ಯಮಗಳ ಜಾಹೀರಾತುಗಳ ಮೇಲೂ ನಿರ್ಬಂಧ ವಿಧಿಸುವ ಅಗತ್ಯವಿದೆ ಎಂದು ಸಮೀಕ್ಷೆ ಪ್ರತಿಪಾದಿಸಿದೆ.

ಪ್ರಮುಖ ಅಂಶಗಳು

- ಆಹಾರದಲ್ಲಿ ಸುಧಾರಣೆಯು ಸಾಂಕ್ರಾಮಿಕವಲ್ಲದ ರೋಗಗಳನ್ನು ಗುಣಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಆದರೆ, ಶಕ್ತಿವರ್ಧಕಗಳು, ಪೌಷ್ಟಿಕತೆಯ, ತೂಕ ಇಳಿಸುವ ಪೇಯಗಳನ್ನು ಸೇವಿಸುವುದು ವೈದ್ಯಕೀಯವಾಗಿ ನಿರೂಪಿತವಾದ ವಿಧಾನಗಳಲ್ಲ. ಈ ಕುರಿತು ಜನರಿಗೆ ತಿಳಿವಳಿಕೆ ಅಗತ್ಯ
- ಸರ್ಕಾರದ ಗುರಿ ನಿರ್ದಿಷ್ಟವಾದ ಕಲ್ಯಾಣ ಕಾರ್ಯಕ್ರಮಗಳಿಂದ ದೇಶದಲ್ಲಿ ಬಡತನ ಕಡಿಮೆ ಆಗಿದ್ದು, ಆದಾಯ ಹಂಚಿಕೆಯಲ್ಲಿಯೂ ಉತ್ತಮಿಕೆ ಕಂಡುಬಂದಿದೆ. ಅಂಚಿನಲ್ಲಿರುವ ಶೇ 5–10ರಷ್ಟು ಜನರ ಬಳಕೆ ವೆಚ್ಚದಲ್ಲಿ ಏರಿಕೆ ಕಂಡುಬಂದಿದ್ದು, ಇದು ಸಬ್ಸಿಡಿಗಳು, ಪಿಂಚಣಿ, ನೇರ ಹಣ ವರ್ಗಾವಣೆ ಮತ್ತು ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಮಾಡಿದ ವೆಚ್ಚದ ಫಲ
- ರಫ್ತು ನಿಯಂತ್ರಣ ಹೆಚ್ಚುತ್ತಿರುವ ಸಂದರ್ಭದಲ್ಲಿ ಸ್ವದೇಶಿ ನಿಯಮಕ್ಕೆ ಒತ್ತು ನೀಡುವುದು ಅನಿವಾರ್ಯವಾಗಿದೆ. ರಫ್ತಿನ ಮೇಲೆ ನಿಯಂತ್ರಣ, ತಂತ್ರಜ್ಞಾನದ ನಿರಾಕರಣೆ, ಇಂಗಾಲ ಹೊರಸೂಸುವಿಕೆಗೆ ಸಂಬಂಧಿಸಿದ ತೆರಿಗೆ ನಿಯಮಗಳು, ಪೂರ್ವ ಮತ್ತು ಪಶ್ಚಿಮ ಎರಡೂ ಕಡೆ ಒಂದೇ ರೀತಿಯ ಕೈಗಾರಿಕಾ ನೀತಿಗಳನ್ನು ಅಳವಡಿಸಿಕೊಂಡಿರುವುದು ಜಾಗತೀಕರಣದ ಅಂತ್ಯವನ್ನು ಸೂಚಿಸುತ್ತಿವೆ
- 15–29 ವಯೋಮಾನದ ಶೇ 4.9ರಷ್ಟು ಮಂದಿ ಮಾತ್ರ ಔಪಚಾರಿಕ ವೃತ್ತಿಪರ ಅಥವಾ ತಾಂತ್ರಿಕ ತರಬೇತಿ ಪಡೆದಿದ್ದು, ಕೌಶಲ ತರಬೇತಿ ಕಾರ್ಯಕ್ರಮಗಳನ್ನು ವಿಸ್ತರಿಸುವ ಅಗತ್ಯವಿದೆ
- ಭಾರತವು ಕೃತಕ ಬುದ್ಧಿಮತ್ತೆ ಕ್ಷೇತ್ರಕ್ಕೆ ವಿಳಂಬವಾಗಿ ಕಾಲಿಟ್ಟಿದೆ. ಆದರೂ ಇದು ದೇಶಕ್ಕೆ ಅನುಕೂಲವನ್ನು ಕಲ್ಪಿಸಿದೆ. ಈ ಕ್ಷೇತ್ರದಲ್ಲಿ ಆರಂಭದಿಂದಲೂ ತೊಡಗಿಕೊಂಡಿರುವ ದೇಶಗಳು ಸಂಶೋಧನೆಗೆ ಹೆಚ್ಚು ಖರ್ಚು ಮಾಡಿವೆ. ಆದರೆ, ಭಾರತವು ಈಗ ಇರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಈ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಬಹುದು. ದೇಶದಲ್ಲಿ ಎಐ ತಂತ್ರಜ್ಞಾನ ಅಳವಡಿಕೆಗಾಗಿ ಎಐ ಆರ್ಥಿಕ ಮಂಡಳಿ ಸ್ಥಾಪಿಸಬೇಕು

ಸ್ಥಿರ ಅಭಿವೃದ್ಧಿಗೆ ಒತ್ತು ಬೇಕು

ಜಗತ್ತಿನಲ್ಲಿರುವ ಭೌಗೋಳಿಕ ರಾಜಕೀಯ ಪ್ರಕ್ಷುಬ್ಧ ವಾತಾವರಣದ ನಡುವೆಯೇ ಭಾರತವು ದೀರ್ಘಾವಧಿಯ ಸ್ಥಿರ ಅಭಿವೃದ್ಧಿ ಸಾಧಿಸಬೇಕು. ಇದೇ ಹೊತ್ತಿನಲ್ಲಿ ತಕ್ಷಣದಲ್ಲಿ ಎದುರಾಗುವ ಪರಿಸ್ಥಿತಿಯನ್ನೂ ಸಮರ್ಥವಾಗಿ ನಿಭಾಯಿಸಬೇಕು ಎಂದು ಆರ್ಥಿಕ ಸಮೀಕ್ಷೆ ಸಲಹೆ ನೀಡಿದೆ.

‘ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಏರಿಳಿತಕ್ಕೆ ಪ್ರತಿಯಾಗಿ ಭಾರತವು ಅಲ್ಪಾವಧಿಯ ಒತ್ತಡಗಳನ್ನು ನಿವಾರಿಸಲು ತಕ್ಷಣದ ಪರಿಹಾರಕ್ಕೆ ಒತ್ತು ನೀಡುವುದರ ಬದಲಿಗೆ ವಿಕಸಿತ ಭಾರತವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಸ್ಥಿತಿಸ್ಥಾಪಕತ್ವವನ್ನು ಹೊಂದಿ, ನಿರಂತರವಾಗಿ ನವೀನ ಪರಿಕಲ್ಪನೆಗಳನ್ನು ಅಳವಡಿಸಿಕೊಳ್ಳುವುದಕ್ಕೆ ಹೆಚ್ಚಿನ ಗಮನ ನೀಡಬೇಕು’ ಎಂದು ಹೇಳಿದೆ.

ಫಾರ್ಮಾ ಉದ್ದಿಮೆಯಿಂದ ಕಲಿಯಿರಿ: ಅನಿರೀಕ್ಷಿತ ಜಾಗತಿಕ ಸುಂಕ ಹೇರಿಕೆಯಿಂದ ಎದುರಾಗಿರುವ ಸವಾಲನ್ನು ನಿಭಾಯಿಸಲು ಭಾರತದ ಉದ್ದಿಮೆಗಳು ಫಾರ್ಮಾ ಉದ್ದಿಮೆಯಿಂದ ಸ್ಫೂರ್ತಿ ಪಡೆಯಬಹುದು ಎಂದು ಆರ್ಥಿಕ ಸಮೀಕ್ಷೆ ಹೇಳಿದೆ. 1995ರಲ್ಲಿ ಟಿಆರ್‌ಐಪಿಎಸ್ ಒಪ್ಪಂದದ ನಂತರ ಎದುರಾಗಿದ್ದ ಬಿಕ್ಕಟ್ಟನ್ನು ಫಾರ್ಮಾ ಉದ್ದಿಮೆಯು ಸ್ವತಃ ರೂಪಾಂತರಗೊಂಡು ಸಮರ್ಥವಾಗಿ ಎದುರಿಸಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಗಣರಾಜ್ಯೋತ್ಸವ ದಿನದ ಅಂಗವಾಗಿ ನಡೆದ ಸೇನಾ ಪರೇಡ್‌ನಲ್ಲಿ ಸೇನಾ ಸಿಬ್ಬಂದಿ ಬೈಕ್ ಸಾಹಸಗಳನ್ನು ಪ್ರದರ್ಶಿಸುತ್ತಿರುವಾಗ ಬೈಕ್‌ಗಳು ಅಪಘಾತಕ್ಕೀಡಾಗುವ ವಿಡಿಯೊ ತುಣುಕನ್ನು ‘ಎಕ್ಸ್’ ಬಳಕೆದಾರರೊಬ್ಬರು ಪೋಸ್ಟ್ ಮಾಡಿ ಸೇನೆಯನ್ನು ಅಣಕವಾಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



77ನೇ ಗಣರಾಜ್ಯೋತ್ಸವದ ಅಂಗವಾಗಿ ದೆಹಲಿಯ ಕರ್ತವ್ಯಪಥದಲ್ಲಿ ನಡೆದ ಪರೇಡ್‌ನ ಸಂಪೂರ್ಣ ವಿಡಿಯೊ ಮೈಗವ್ ಇಂಡಿಯಾ ಯೂಟ್ಯೂಬ್ ಚಾನೆಲ್‌ನಲ್ಲಿ ಲಭ್ಯವಿದ್ದು, ಪೋಸ್ಟ್‌ನಲ್ಲಿ ಹೇಳಿರುವಂತೆ ಬೈಕ್ ಸಾಹಸ ಪ್ರದರ್ಶನದ ವೇಳೆ ಅಪಘಾತ ಸಂಭವಿಸಿರುವ ದೃಶ್ಯ ಇಲ್ಲ. ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಡಿದಾಗಲೂ ಯಾವುದೇ ವಿಶ್ವಾಸಾರ್ಹ ಸುದ್ದಿಗಳು ಸಿಗಲಿಲ್ಲ. ದೃಶ್ಯಗಳನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿದಾಗ ಅನುಮಾನ ಬಂತು. ಇದರ ಆಧಾರದಲ್ಲಿ ಎಐ ಪತ್ತೆ ಟೂಲ್ ಹೈವ್ ಮಾಡರೇಷನ್ ಮೂಲಕ ವಿಡಿಯೊವನ್ನು ಪರಿಶೀಲನೆಗೆ ಒಳಪಡಿಸಿದಾಗ, ಅದು ಎಐ ಮೂಲಕ ಸೃಷ್ಟಿಸಿದ ವಿಡಿಯೊ ಎಂಬುದು ದೃಢಪಟ್ಟಿತು. ಡೀಪ್‌ಫೇಕ್ ಒ–ಮೀಟರ್ ಎಂಬ ಮತ್ತೊಂದು ಟೂಲ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ ಅದು ಎಐ ಸೃಷ್ಟಿ ವಿಡಿಯೊ ಎಂಬುದು ಖಾತ್ರಿಯಾಯಿತು ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ಪದಬಂಧ 6300

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಪ್ರಾಣವಾಯು ಇಲ್ಲಿದೆ (5)
4.ಅತ್ಯಂತ ಸೂಕ್ಷ್ಮವಾದದು (4)
7.ಮರ ಗಿಡಗಳ ಬುಡದಲ್ಲಿ ನೀರು ನಿಲ್ಲಲು ಮಾಡಿರುವ ಕಟ್ಟೆ ಉಲ್ಟಾ ಕಾಣುತ್ತಿದೆ (2)
9.ಗುಣಿಯಲ್ಲಿರುವ ಢಾಲು (2)
10.ಕಬ್ಬಿಣದಲ್ಲಿರುವ ಅತ್ಯಂತ ಚಿಕ್ಕ ಚೂರು ಕಾಣುತ್ತಿದೆಯೇ (2)
11.ಗಗನವನ್ನು ಮುಟ್ಟುವಂಥದ್ದು (5
12.ತೇರು ಇಲ್ಲಿದೆ (2)
13.ಧಾನ್ಯಗಳನ್ನು ಸಂಗ್ರಹಿಸುವ ಸ್ಥಳ (3)
14.ಹತ್ತಿರದಲ್ಲಿರುವ ಅರಳೆಯಿಲ್ಲಿ ತಿರುವುಮುರುವಾಗಿದೆ (2)
16.ಕಾಮನಬಿಲ್ಲನ್ನು ಹೀಗೂ ಕರೆವರು (4)
18.ರುಚಿಕಟ್ಟಾದ ಭೋಜನ (5)

ಮೇಲಿಂದ ಕೆಳಕ್ಕೆ

1.ಸುರಾಸುರರ ಹತ್ತಿರವಿರುವ ಜಾನುವಾರು! (2)
3.ಮೆಟ್ಟಿಲುಗಳಿರುವ ಕೊಳ (3)
5.ಲವ ಹಿಡಿದುಕೊಂಡಿರುವ ಉಪ್ಪು (3)
6.ಅತ್ತಿತ್ತ ನೋಡುವಾಗ ಗುಂಪು ಕಾಣಿಸಿತಲ್ಲಾ! (2)
8.ಅತ್ತಿಗೆ ತೋರಿಸಿದ ಚಿಟ್ಟೆ (5)
9.ಮುಳ್ಳುಗಳ ನಡುವೆ ಅರಳುವ ಸುಂದರ ಹೂ (3)
11.ನೀರಿನಲ್ಲಿ ಹುಟ್ಟಿದ ಕಮಲ (3)
12.ಚಮರೀ ಮೃಗದ ಬೀಸಣಿಕೆಯಿಂದ ಮಾಡಿದ ಬೀಸಣಿಗೆ ಉಲ್ಟಾ ಆಗಿದೆ (3)
13.ಕರದಲ್ಲಿರುವ ಉತ್ತುತ್ತಿ ಹಣ್ಣು (3)
15.ಹರಸುವಾಗ ಕಾಣಿಸಿದ ಆಕಳು (2)
17.ಕೈವಲ್ಯ ಅಥವಾ ಮೋಕ್ಷ (2)



6299ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಜಲಾಶಯ 4.ಕೂಸು 6.ಸಲಿಲ 8.ಪರ್ಣ 9.ಸಾರಜನಕ 10.ಜಲಜನಕ 12.ರವ 15.ನೀರದ 16.ನಿಜ 17.ಜಲಪಾತ

ಮೇಲಿಂದ ಕೆಳಕ್ಕೆ:
1.ಒಸಗೆ 2.ಜಲಚರ 3.ಯತಿ 5.ಸುಪರ್ಣ 7.ವನಪಾಲಕ 8.ಪರಿಷೇಕ 9.ಸಾವಯವ 11.ನವನೀತ 12.ರಜನಿ 13.ಪದರ 14.ರಾಜ

ಹಂಗಿನರಮನೆಗಿಂತ ಇಂಗಡದ ಗುಡಿ ಲೇಸು

ನುಡಿ ಬೆಳಗು

ರೇಣುಕಾ ನಿಡಗುಂದಿ

ತುಂಬಾ ಒಳ್ಳೆಯವರು ಎಂದು ಹೆಸರು ಮಾಡಿದ ಒಬ್ಬ ಮ್ಯಾನೇಜರ್ ದೀಪಾವಳಿ, ಹುಟ್ಟುಹಬ್ಬಗಳಂದು ಏನಾದರೂ ಉಡುಗೊರೆ ಕೊಡುತ್ತಿದ್ದರು. ಬೇಡವೆನ್ನಲು ಸಂಕೋಚ. ಅದು ಸಭ್ಯತೆ ಅಲ್ಲವೆಂದು ಸುಮ್ಮನಾಗುತ್ತಿದ್ದೆ. ಯಾಕೆಂದರೆ ಅವರು ತಮ್ಮ ಮನೆಯಲ್ಲಿನ ಬೇಡದ ವಸ್ತುಗಳನ್ನು, ಯಾರೋ ನೀಡಿದ ಬೇಡದ ಉಡುಗೊರೆಗಳನ್ನು ಇನ್ನೊಬ್ಬರಿಗೆ ದಾಟಿಸುತ್ತಿದ್ದರು. ‘ಒಂದು ಖರೀದಿಸಿ ಎರಡು ಪಡೆಯಿರಿ’ ಎಂಬ ಕೊಡುಗೆಯಲ್ಲಿ ಬಂದ ವಸ್ತುವನ್ನು ಉಡುಗೊರೆಯಾಗಿ ಕೊಟ್ಟು ಹತ್ತು ಸಲ, ‘ಹೇಗಿದೆ, ಇಷ್ಟವಾಯಿತೇ?’ ಎನ್ನುವವರೂ ಇದ್ದಾರೆ. ಈ ಪ್ರವೃತ್ತಿ ಇತ್ತೀಚೆಗೆ ಬಹಳಷ್ಟು ಜನರಲ್ಲಿ ಹೆಚ್ಚಾದುದನ್ನು ನೋಡುತ್ತೇವೆ. ನಿಮಗೆ ಬೇಡವಾದ ವಸ್ತು ಇನ್ನೊಬ್ಬರಿಗೂ ಬೇಡವಾಗಿರಬಹುದಲ್ಲ?

ದೀಪಾವಳಿಗೆ ಮನೆಯಲ್ಲಿ ಮಾಡಿದ ಚಕ್ಕುಲಿ, ಬೇಸನ್ ಉಂಡಿ, ಶಂಕರಪೋಳಿ, ಕೋಡುಬಳೆ ಇವನ್ನೇ ನೆರೆಹೊರೆಯವರಿಗೆ ಹಂಚಿ ಅವರು ಕಳಿಸಿದ ಫರಾಳವನ್ನು ನಾವು ಸವಿದು ಆನಂದಿಸುತ್ತಿದ್ದ ಕಾಲವಿತ್ತು. ಈಗ ದೀಪಾವಳಿಗೆ ಗೃಹೋಪಯೋಗಿ ಸಾಮಾನುಗಳನ್ನು, ಚಾಕಲೇಟ್ ಬುಟ್ಟಿಗಳನ್ನು ಉಡುಗೊರೆ ಕೊಡುವ ಸಂಪ್ರದಾಯ ಕೆಲವೊಮ್ಮೆ ಕಿರಿಕಿರಿಯುಂಟುಮಾಡುತ್ತದೆ. ಮನುಷ್ಯನ ಸಣ್ಣತನ, ಕ್ಷುಲ್ಲಕ ವರ್ತನೆಗಳು ಗೊತ್ತಾದರೆ ಹೇಗೆನಿಸಬೇಡ?

ಬಯಸಿ ಬಯಸಿ ಒಮ್ಮೆ ಪಕ್ಕದ ಮನೆಯ ರಾಜಸ್ಥಾನಿ ಆಂಟಿಗೆ ಉಪ್ಪಿನಕಾಯಿ ಹಾಕಲು ಎಲ್ಲಾ ಸಾಮಗ್ರಿ ಕೊಡಿಸಿದೆ. ಆಕೆ ಹಾಕಿಕೊಟ್ಟ ಉಪ್ಪಿನಕಾಯಿ ಬೇಗ ಕೆಟ್ಟುಹೋಯಿತು. ನಾನು ಒಳ್ಳೆಯ ಗುಣಮಟ್ಟದ ಮಾವಿನಕಾಯಿ, ಮಸಾಲೆಗಳನ್ನೇ ಕೊಟ್ಟಿದ್ದೆ. ಆಕೆ ತಮ್ಮ ಉಪ್ಪಿನಕಾಯಿ ನಮ್ಮನೆಗೆ ದಾಟಿಸಿ, ಒಳ್ಳೆಯದನ್ನು ಇಟ್ಟುಕೊಂಡಿದ್ದು ನಂತರ ಗೊತ್ತಾಯ್ತು. ಹೀಗಿರುತ್ತಾರೆ ಜನ. ಇಂತಹವರನ್ನು ನೋಡಿಯೇ ಮಾನ್ಯ ಗುಂಡಪ್ಪನವರು ಈ ಕಗ್ಗ ಹೇಳಿರಬೇಕೆನಿಸುತ್ತದೆ.

ನಗು, ಮನದಿ ಲೋಗರ ವಿಕಾರಂಗಳನು ನೋಡಿ
ಬಿಗಿ ತುಟಿಯ, ದುಡಿವಂದು ನೋವಪಡುವಂದು
ಪೊಗು, ವಿಶ್ವಜೀವನದ ಜೀವಾಂತರಂಗದಲಿ
ನಗುನಗುತ ಬಾಳ್, ತೆರಳು– ಮಂಕುತಿಮ್ಮ

ಲೋಕದ ವಿಚಿತ್ರಗಳ ಮತ್ತು ಲೋಕದ ಜನರ ವಿಚಿತ್ರ ನಡವಳಿಕೆಯನ್ನು ಕಂಡು, ಮನದಲ್ಲೇ ನಕ್ಕುಬಿಡು. ನಿನಗೆ ಕಷ್ಟ ಬಂದು ತೀವ್ರ ಹೋರಾಟ ನಡೆಸಬೇಕಾದಾಗ ಮೌನವಾಗಿ ಅನುಭವಿಸು, ಜಗವೆಲ್ಲವನು ‘ಏಕಾತ್ಮ’ಭಾವದಲಿ ನೋಡುತ್ತಾ ನಗುನಗುತ್ತಾ ಬಾಳು ಮತ್ತು ನಗುನಗುತ್ತಲೇ ಇಲ್ಲಿಂದ ತೆರಳು ಎಂದು ಸಂತೋಷದಿಂದ ಬದುಕುವ ಮತ್ತು ನಿರ್ಗಮಿಸುವ ಉಪಾಯವನ್ನು ನಮಗೆ ತಿಳಿಸಿದ್ದಾರೆ.

ಜಗತ್ತಿನ ಜನರ ಚಿತ್ರವಿಚಿತ್ರ ಭಾವಗಳಿಂದ ಕೂಡಿದ ನಡವಳಿಕೆಯನ್ನು ಕಂಡು ಟೀಕೆ, ಕುಹಕ ಮುಂತಾದವುಗಳನ್ನು ಮಾಡದೆ ಅವುಗಳನ್ನು, ಪ್ರಕೃತಿ ಪ್ರಚೋದಿತ, ತ್ರಿಗುಣಗಳ ಆಟವೆಂದು ಬಗೆದು ಮನದಲ್ಲೇ ಒಂದು ನಗೆಯನ್ನು ನಕ್ಕು ಸುಮ್ಮನಿರಬೇಕು. ಲೋಕದ ಡೊಂಕನ್ನು ತಿದ್ದಲು ಸಾಧ್ಯವಿಲ್ಲ. ಅದು ಇರುವುದೇ ಹಾಗೆ. ನಮ್ಮ ಮನಸ್ಸಿನ ಶಾಂತಿಯನ್ನು ಕಾಪಾಡಿಕೊಳ್ಳಲು ನಾವೇ ಬದಲಾಗುವುದು ಒಳಿತಲ್ಲವೇ? ಹೇಗೆ ಎಂದರೆ, ಬಹಳ ಸುಲಭ. ‘ಅವರು ಹೀಗಿರಬೇಕು ಅಥವಾ ಅವರು ಹೀಗಿದ್ದರೆ ಚೆನ್ನ’ ಎನ್ನುವಂತಹ ಭಾವಗಳನ್ನು ನಮ್ಮೊಳಗಿಂದ ಅಳಿಸಿ ಹಾಕಿ ‘ಅಪೇಕ್ಷಾರಹಿತ ನಿರ್ಲಿಪ್ತಿ’ಯನ್ನು ಬೆಳೆಸಿಕೊಂಡರೆ ನಮ್ಮ ಅಂತರಂಗದ ‘ಶಾಂತಿ’ಯನ್ನು ಕಾಪಾಡಿಕೊಳ್ಳಬಹುದು ಎನ್ನುತ್ತಾರೆ. ಆದರೆ ಹುಲುಮಾನವರಾದ ನಮಗೆ ಇಷ್ಟೆಲ್ಲ ನಿರ್ಲಿಪ್ತತೆ, ಸ್ಥಿತಪ್ರಜ್ಞ ಭಾವವನ್ನು ಸಿದ್ಧಿಸಿಕೊಳ್ಳುವುದು ಸುಲಭವೇ?

‘ಹಂಗಿನರಮನೆಗಿಂತ
ಇಂಗಡದ ಗುಡಿ ಲೇಸು
ಭಂಗಬಟ್ಟುಂಬ ಬಿಸಿಯನ್ನಕ್ಕಿಂತಲೂ
ತಂಗುಳವೆ ಲೇಸು’ ಎಂದಿಲ್ಲವೇ ಸರ್ವಜ್ಞ

ಸುಡೊಕು 6684

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	9				5		6	
2			4			8		5
	4				9		3	
4	6				7			
				4		1		6
8		7	5				4	
		4			2		1	7
7			1			6		
	8		7			2		4

6683 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

30 ಜನವರಿ 2026 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ದ್ವಾದಶಿ ಗಂ. 11-10 ನಕ್ಷತ್ರ: ಆರ್ದ್ರಾ ಗಂ. 27-28 ಯೋಗ: ವೈಧೃತಿ ಗಂ. 16-59 ಕರಣ: ಬಾಲವ ಗಂ. 11-10 ಮಕರ ಮಾಸದ 16 ನೇ ದಿನ. ಮಳೆ ನಕ್ಷತ್ರ : ಶ್ರವಣ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00,, ಸೂರ್ಯೋದಯ : 07-01 ಸೂರ್ಯಾಸ್ತ : 06-27, ಮುಸ್ಲಿಂ ದಿನಾಂಕ : 10 ಶಬನ್, ದಿನ ವಿಶೇಷ : ಭೀಷ್ಮದ್ವಾದಶಿ, ಅದೃಷ್ಟ ಸಂಖ್ಯೆ : 7, 1

ಮೇಷ: ಉತ್ತಮವಾಗಿ ಅಂಕಗಳನ್ನು ಪಡೆಯುತ್ತಿದ್ದ ಮಕ್ಕಳು ಏಕಾಗ್ರತೆಯನ್ನು ಕಡಿಮೆ ಮಾಡಿದ ಕಾರಣ ಗಮನಹರಿಸಬೇಕಾಗುತ್ತದೆ. ದರ್ಜಿಯ ನೌಕರರಿಗೆ ಆರ್ಥಿಕವಾಗಿ ಅನುಕೂಲವಾಗುವುದು.

ವೃಷಭ: ಇಂದಿನ ಪರಿಸ್ಥಿತಿ ಮನದ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಮಗಳಿಗೆ ತಾಯಿಯ ಕಡೆಯಿಂದ ಅಥವಾ ಹತ್ತಿರದ ಸಂಬಂಧಿಕರಿಂದ ವರ ನಿಶ್ಚಯವಾಗುವುದು.

ಮಿಥುನ: ಗೃಹಿಣಿಯರು ದೇವರಿಗೆ ವಿಶೇಷವಾಗಿ ಪೂಜೆ ಪುನಸ್ಕಾರವನ್ನು ನಡೆಸುವ ಮೂಲಕ ಪುಣ್ಯ ಸಂಪಾದನೆ ಮಾಡುವಿರಿ. ಕೆಲಸದಲ್ಲಿ ಬದಲಾವಣೆ ಬಯಸಿದಲ್ಲಿ ಬೇರೆ ಸ್ಥಳದಲ್ಲಿ ಕಾರ್ಯ ನಿರ್ವಹಿಸಲು ಸಿದ್ಧರಾಗಿ.

ಕರ್ಕಾಟಕ: ವ್ಯವಹಾರದಲ್ಲಿ ಬೇಕಾದ ರೀತಿಯಲ್ಲಿ ಲಾಭ ಮಾಡಿಕೊಳ್ಳಲು ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳುವಿರಿ. ಬಟ್ಟೆ ವ್ಯಾಪಾರಿಗಳು ರಿಯಾಯಿತಿ ಮಾರಾಟಗಳಿಂದ ಲಾಭವನ್ನು ಹೊಂದುವಿರಿ.

ಸಿಂಹ: ಮಧ್ಯಮವರ್ಗದ ಕುಟುಂಬದಲ್ಲಿ ಸಂಬಂಧಿಕರ ಎದುರು ಕೆಲವು ಇರಿಸು ಮುರಿಸುಗಳು ಆಗಬಹುದು. ಬೇಸರ ಪಡುವುದು ಬೇಡ. ಆಫೀಸಿನ ಜನರ ಬಗ್ಗೆ ಗಮನವಿಟ್ಟುಕೊಳ್ಳಿ. ಪರ್ವತಾರೋಹಣ ಮಾಡುವ ಸಾಧ್ಯತೆ ಇದೆ.

ಕನ್ಯಾ: ಅನುಕೂಲಕರ ವಾತಾವರಣವಿದ್ದಲ್ಲಿ ವಿಶೇಷ ದಿನಗಳಿಗೆ ಬೇಕಾದ ವಸ್ತು ಖರೀದಿ ಮಾಡಿ. ವೈದ್ಯರಿಗೆ ಬಿಡುವಿಲ್ಲದ ಅಭ್ಯಾಸದ ಜತೆಗೆ ಉನ್ನತ ಜವಾಬ್ದಾರಿ ಸಿಗಲಿದೆ.

ತುಲಾ: ಮೋಸದಿಂದ ಬೇರೆಯವರ ಕೈ ಸೇರಿದ ಹಣ ಹಿಂತಿರುಗುವ ಸೂಚನೆಗಳು ಕಾಣುತ್ತವೆ. ಕಠಿಣ ಪರಿಶ್ರಮದಿಂದ ಬೆಳೆಸಿದ ಸಂಸ್ಥೆ ಜನಮಾನಸವನ್ನು ಗೆಲ್ಲುವುದು. ಧಾರ್ಮಿಕ ಕಾರ್ಯಕ್ಕೆ ಹಣವ್ಯಯವಾಗುವುದು.

ವೃಶ್ಚಿಕ: ತಮಾಷೆಯ ಮಾತುಗಳು ಹಿರಿಯರ ಮನಸ್ಸನ್ನು ನೋಯಿಸುವುದು. ಮಾತಿನಲ್ಲಿ ಹಿಡಿತವಿರಲಿ. ದಾಂಪತ್ಯದಲ್ಲಿ ಪತಿ ಪತ್ನಿಯರ ನಡುವೆ ಪ್ರಬುದ್ಧತೆಯಿಂದ ಸಾಮರಸ್ಯ ಹೆಚ್ಚುತ್ತದೆ. ಅನವಶ್ಯಕ ಚಿಂತೆ ಬೇಡ.

ಧನು: ಹೂಡಿಕೆ ಮಾಡುವುದಿದ್ದರೆ ಅನುಭವಸ್ಥ ನಂಬಿಕಸ್ಥರಿಂದ ಕೇಳಿ ತಿಳಿದು ನಂತರವಷ್ಟೇ ಮಾಡಿ. ವೃತ್ತಿಯಲ್ಲಿ ಅನಿರೀಕ್ಷಿತ ಸ್ಥಾನ-ಮಾನದಲ್ಲಿ ಏರುಪೇರಾಗುವಂಥ ಬದಲಾವಣೆಗಳಾಗಬಹುದು.

ಮಕರ: ಗೃಹ ವಸ್ತುಗಳ ಖರೀದಿ ಮಾಡಿ ಬಂದ ನಂತರ ನೀವು ಕೊಟ್ಟ ಹಣ ದುಬಾರಿಯಾಯಿತೆಂದು ಪರಿತಪಿಸಬೇಕಾದೀತು. ರಿಯಾಯಿತಿಯ ವಸ್ತ್ರ ಖರೀದಿಯಿಂದಾಗಿ ಹೆಚ್ಚು ಹಣವನ್ನು ಉಳಿತಾಯ ಮಾಡುವಿರಿ.

ಕುಂಭ: ವಿಶೇಷ ಘಟನೆಯಿಂದಾಗಿ ಕಾರ್ಯಾಲಯದ ಎಲ್ಲಾ ವ್ಯಕ್ತಿಗಳು ನಿಮಗೆ ಹತ್ತಿರದವರಾಗುತ್ತಾರೆ. ನಡೆಸುತ್ತಿರುವ ಶುಭ ಕಾರ್ಯಕ್ರಮಗಳಿಗೆ ಅಶೌಚದ ಆತಂಕ ಎದುರಾಗುವುದು.

ಮೀನ: ಸ್ವಗ್ರಾಮ ಬಿಟ್ಟು ಬೇರೆ ಎಲ್ಲಿಯಾದರೂ ಆಸ್ತಿಯನ್ನು ಖರೀದಿಸುವ ಯೋಚನೆ ಇದ್ದಲ್ಲಿ ಸರಿಯಾದ ವ್ಯಕ್ತಿಯಲ್ಲಿ ವಿಚಾರವನ್ನು ನಡೆಸಿ. ಬಂಧು ಬಾಂಧವರೊಂದಿಗೆ ಅತ್ಯಂತ ಗೌಪ್ಯ ವಿಷಯವನ್ನು ತಿಳಿಸದಿರಿ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,342
ಇಂದಿನ ಅಂತ್ಯ: 25,418
ದಿನದ ಕನಿಷ್ಠ: 25,159
76

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹575
12 ಕ್ಕೆ ₹75
ಮೈಸೂರು: 100 ಕ್ಕೆ ₹577

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹335-768
ದ್ವಿತಳಿ (ಬಿ.ವಿ) ₹312-928

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹197
ಆರ್‌ಎಸ್‌ಎಸ್-5 ₹192
ಗುಡ್ ಲಾಟ್ ₹180

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹26,100
ಎಸಿ ₹14,280
ಆರ್‌ಪಿ ₹17,750
ಆರ್‌ಸಿ ₹10,500

ಡ್ರಗ್ಸ್ ಮಾರಾಟ ನಿಯಂತ್ರಿಸಲು ಕೇಂದ್ರ, ರಾಜ್ಯ ಸರ್ಕಾರಗಳು ವಿಫಲವಾಗಿವೆಯೇ?
ಹೌದು ಇಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಇಳಿಕೆ ಕಾಣದು ಚಿನ್ನ, ಬೆಳ್ಳಿಯ ಬೆಲೆ

ಆರ್ಥಿಕ ಸಮೀಕ್ಷೆ ವರದಿಯಲ್ಲಿ ಉಲ್ಲೇಖ, ಜಾಗತಿಕ ಅನಿಶ್ಚಿತ ಸ್ಥಿತಿ ಕಾರಣ

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆಗಳು ಮುಂದುವರಿದಿರುವ ಕಾರಣದಿಂದಾಗಿ ಚಿನ್ನ ಹಾಗೂ ಬೆಳ್ಳಿಯ ಬೆಲೆಯು ಹೆಚ್ಚಿನ ಮಟ್ಟದಲ್ಲಿಯೇ ಇರುವ ನಿರೀಕ್ಷೆ ಇದೆ ಎಂದು ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಗುರುವಾರ ಮಂಡಿಸಿರುವ 'ಆರ್ಥಿಕ ಸಮೀಕ್ಷೆ 2025-26' ವರದಿ ಹೇಳಿದೆ.

ವಿಶ್ವ ಮಟ್ಟದಲ್ಲಿ ಬಹುಕಾಲ ಉಳಿಯುವಂತಹ ಶಾಂತಿ ಸ್ಥಾಪನೆ ಆಗದೆ ಇದ್ದರೆ, ವ್ಯಾಪಾರ ಸಮರಕ್ಕೆ ಪರಿಹಾರ ಕಂಡುಕೊಳ್ಳದೆ ಇದ್ದರೆ ಚಿನ್ನ ಮತ್ತು ಬೆಳ್ಳಿಯ ಬೆಲೆಯು ಕಡಿಮೆ ಆಗದು ಎಂದು ಆರ್ಥಿಕ ಸಮೀಕ್ಷೆ ವರದಿಯಲ್ಲಿ ಹೇಳಲಾಗಿದೆ.

ಚಿನ್ನ ಮತ್ತು ಬೆಳ್ಳಿಯ ಬೆಲೆಯು ಏರುಹಾದಿಯಲ್ಲಿ ಇದೆ. ಇವುಗಳ ಬೆಲೆ ಏರಿಕೆಯು ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆ ಹೆಚ್ಚಾಗಿರುವುದನ್ನು, ಸುರಕ್ಷಿತ ಹೂಡಿಕೆಗಳಿಗೆ ಬೇಡಿಕೆ ಹೆಚ್ಚಾಗಿರುವು-ದನ್ನು ತೋರಿಸುತ್ತಿದೆ ಎಂದು ಸಮೀಕ್ಷೆ ಹೇಳಿದೆ.

ಆದರೆ, ಬೆಳ್ಳಿ ಹಾಗೂ ಚಿನ್ನವು 2025ರಲ್ಲಿ ಕಂಡಂತಹ ಬೆಲೆ ಏರಿಕೆಯು ಬಹುಕಾಲ ಉಳಿಯಲಿಕ್ಕಿಲ್ಲ ಎಂದು ಕೆಲವು ತಜ್ಞರು ಹೇಳಿರುವುದಾಗಿ ಸಮೀಕ್ಷೆಯು ಉಲ್ಲೇಖಿಸಿದೆ.

2024-25ರಲ್ಲಿ ಭಾರತವು ಆಮದು ಮಾಡಿಕೊಂಡ ಚಿನ್ನದ ಪ್ರಮಾಣವು ಅದರ ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇಕಡ 27.4ರಷ್ಟು ಹೆಚ್ಚಳ ಕಂಡಿದೆ. ಚಿನ್ನದ ಬೆಲೆಯು ಒಂದು ವರ್ಷದ ಅವಧಿಯಲ್ಲಿ ಶೇ 38.2ರಷ್ಟು ಹೆಚ್ಚಾಗಿದ್ದುದು, ದೇಶದಲ್ಲಿ ಚಿನ್ನದ ಬಳಕೆ ಹೆಚ್ಚಾಗಿದ್ದುದು ಆಮದು ಹೆಚ್ಚಾಗುವುದಕ್ಕೆ ಕಾರಣ ಆಗಿರಬಹುದು ಎಂದು ವರದಿಯಲ್ಲಿ ಹೇಳಲಾಗಿದೆ.

₹4 ಲಕ್ಷದ ಗಡಿ ದಾಟಿದ ಬೆಳ್ಳಿ

ನವದೆಹಲಿ (ಪಿಟಿಐ): ಬೆಳ್ಳಿಯ ಬೆಲೆಯು ಗುರುವಾರದ ವಹಿವಾಟಿನಲ್ಲಿ ಕೆ.ಜಿ.ಗೆ ₹4 ಲಕ್ಷದ ಗಡಿಯನ್ನು ದಾಟಿದೆ. ಚಿನ್ನದ ಬೆಲೆಯು 10 ಗ್ರಾಂಗಳಿಗೆ ₹1.83 ಲಕ್ಷ ಆಗಿದೆ.

ಬೆಳ್ಳಿಯ ಬೆಲೆಯು ಸತತ ನಾಲ್ಕನೆಯ ದಿನವೂ ಏರಿಕೆ ಕಂಡಿದೆ. ಗುರುವಾರದ ವಹಿವಾಟಿನಲ್ಲಿ ದೆಹಲಿಯ ಚಿನಿವಾರ ಪೇಟೆಯಲ್ಲಿ ₹19,500ರಷ್ಟು ಹೆಚ್ಚಾಗಿದ್ದು ₹4,04,500ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಂಗಳೂರಿನಲ್ಲಿ ಬೆಳ್ಳಿಯ ಬೆಲೆಯು ಗುರುವಾರ ₹4,10,900 ಆಗಿದೆ.

'ಬೆಳ್ಳಿಯ ಬೆಲೆಯು ಗುರುವಾರ ₹4 ಲಕ್ಷದ ಗಡಿಯನ್ನು ದಾಟಿದೆ. ಚಿನ್ನದ ಬೆಲೆ ಕೂಡ ದಾಖಲೆಯ ಮಟ್ಟ ತಲುಪಿದೆ. ಹೂಡಿಕೆದಾರರು ಚಿನ್ನ, ಬೆಳ್ಳಿಯ ಮೇಲೆ ಹೆಚ್ಚು ಆಸಕ್ತಿ ತೋರಿರುವುದು ಇದಕ್ಕೆ ಒಂದು ಕಾರಣ' ಎಂದು ಲೆಮನ್ ಮಾರ್ಕೆಟ್ಸ್ ಡೆಸ್ಕ್‌ನ ಸಂಶೋಧನಾ ವಿಶ್ಲೇಷಕ ಗೌರವ್ ಗರ್ಗ್ ಹೇಳಿದ್ದಾರೆ.

'ಬೆಳ್ಳಿಯ ಬೆಲೆ ಏರಿಕೆಯು ಚಿನ್ನದ ಬೆಲೆ ಏರಿಕೆಗಿಂತ ಹೆಚ್ಚಾಗಿದೆ. ಕೈಗಾರಿಕೆಗಳಿಂದ ಬೇಡಿಕೆ ಹೆಚ್ಚಾಗಿರುವುದು, ಅಮೆರಿಕದ ಡಾಲರ್ ದುರ್ಬಲ ಆಗುತ್ತಿರುವುದು ಇದಕ್ಕೆ ಕಾರಣ' ಎಂದು ಅವರು ಹೇಳಿದ್ದಾರೆ.

ತೂಕದ ಲೆಕ್ಕದಲ್ಲಿ 2025ರಲ್ಲಿ ಭಾರತದಲ್ಲಿ ಬೆಳ್ಳಿಯ ಬೇಡಿಕೆಯು ಶೇ 11ರಷ್ಟು ಕಡಿಮೆ ಆಗಿದೆ. ಈ ವರ್ಷದಲ್ಲಿ ಚಿನ್ನದ ಬೇಡಿಕೆಯು ದೇಶದಲ್ಲಿ 700 ಟನ್‌ಗಳಷ್ಟು ಇರುವ ನಿರೀಕ್ಷೆ ಇದೆ. ಚಿನ್ನದ ಬೆಲೆ ಹೆಚ್ಚಾಗಿರುವುದು, ಗ್ರಾಹಕರ ಖರೀದಿ ಬಯಕೆಗಳಲ್ಲಿನ ಬದಲಾವಣೆಯು ಬೇಡಿಕೆ ಕಡಿಮೆ ಆಗಲು ಕಾರಣ ಎಂದು ವಿಶ್ವ ಚಿನ್ನ ಸಮಿತಿಯು ಗುರುವಾರ ಬಿಡುಗಡೆ ಮಾಡಿರುವ ವರದಿಯೊಂದರಲ್ಲಿ ಹೇಳಿದೆ.

ಚಿನ್ನದ ಬೆಲೆ ಹೆಚ್ಚಳದ ಪರಿಣಾಮವಾಗಿ ಮೌಲ್ಯದ ಲೆಕ್ಕದಲ್ಲಿ 2025ರಲ್ಲಿ ಒಟ್ಟು ₹7.51 ಲಕ್ಷ ಕೋಟಿ ಬೆಲೆಯ ಚಿನ್ನಕ್ಕೆ ಬೇಡಿಕೆ ಬಂದಿದೆ. ಇದು ಹಿಂದಿನ ವರ್ಷದಲ್ಲಿ ಬಂದಿದ್ದ ಬೇಡಿಕೆ ಹೋಲಿಸಿದರೆ ಶೇ 30ರಷ್ಟು ಹೆಚ್ಚು.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶ್ರೀನಿವಾಸ ಎಸ್., ನಾಗರಬಾವಿ, ಬೆಂಗಳೂರು

• ಪ್ರಶ್ನೆ: ನಾನು ವಾಸವಾಗಿರುವ ಮನೆಯ ಕೆಳ ಮಹಡಿಯನ್ನು ವಾಣಿಜ್ಯ ಬಳಕೆಗೆ ತಿಂಗಳಿಗೆ ₹55,000ಕ್ಕೆ ಬಾಡಿಗೆ ಕೊಟ್ಟಿರುತ್ತೇನೆ. ಬಾಡಿಗೆದಾರರು ಬಾಡಿಗೆಯಲ್ಲಿ ಶೇ 10ರಷ್ಟು ಟಿಡಿಎಸ್ ಕಳೆದು ಹಣ ಕೊಡುತ್ತಿದ್ದಾರೆ. ನನ್ನ ಪ್ರಶ್ನೆ ಏನೆಂದರೆ: ಬಾಡಿಗೆದಾರರು ಕಡಿತಗೊಳಿಸಿದ ಟಿಡಿಎಸ್ ಹಣವನ್ನು ಸರ್ಕಾರಕ್ಕೆ ಸಂದಾಯ ಮಾಡಿರುತ್ತಾರೆಯೇ ಎಂಬುದನ್ನು ನಾನು ಹೇಗೆ ಖಚಿತಪಡಿಸಿಕೊಳ್ಳಬಹುದು? ಟಿಡಿಎಸ್ ಕಡಿತ ಮತ್ತು ಸರ್ಕಾರಕ್ಕೆ ಪಾವತಿಸಿದ ಮಾಹಿತಿಯನ್ನು ಬಾಡಿಗೆದಾರರಿಂದ ಹೇಗೆ ಪಡೆದುಕೊಳ್ಳಬಹುದು?

ನಾನು ಈ ಬಾಡಿಗೆ ಹಣದಲ್ಲಿ, ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 24(ಎ) ಆಧಾರದ ಮೇಲೆ ಶೇ 30ರಷ್ಟು ಕಳೆದು ತೆರಿಗೆ ಸಲ್ಲಿಸಬಹುದೇ? ನಾನು ಕಳೆದ ವರ್ಷದಿಂದ ಆದಾಯ ತೆರಿಗೆಯನ್ನು ಹೊಸ ತೆರಿಗೆ ಪದ್ಧತಿಯಲ್ಲಿ ಸಲ್ಲಿಸುತ್ತಿದ್ದೇನೆ.

ಉತ್ತರ: ನಿಮ್ಮ ಮನೆಯ ಕೆಳ ಮಹಡಿಯನ್ನು ವಾಣಿಜ್ಯ ಬಳಕೆಗೆ ಬಾಡಿಗೆ ನೀಡಿರುವ ಸಂದರ್ಭದಲ್ಲಿ, ಬಾಡಿಗೆದಾರರು ಅಥವಾ ಆ ಸಂಸ್ಥೆ ಬಾಡಿಗೆ ಮೊತ್ತದಿಂದ ಶೇ 10ರಷ್ಟು ಮೊತ್ತವನ್ನು ಟಿಡಿಎಸ್ ಮಾಡುವುದು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 194-ಐ ಅಡಿಯಲ್ಲಿ ಅಗತ್ಯ. ತಿಂಗಳಿಗೆ ₹50 ಸಾವಿರ ಬಾಡಿಗೆ ಮೀರುವ ಕರಾರು ಒಪ್ಪಂದ ಇದ್ದ ಸಂದರ್ಭದಲ್ಲಿ ಇದು ಅನ್ವಯಿಸುತ್ತದೆ. ಆದರೆ ಟಿಡಿಎಸ್ ಕಡಿತಗೊಳಿಸಿದರಷ್ಟೇ ಸಾಕಾಗುವುದಿಲ್ಲ; ಅದನ್ನು ಸರ್ಕಾರಕ್ಕೆ ಸರಿಯಾಗಿ ಸಂದಾಯ ಮಾಡುವುದೂ ಬಹಳ ಮುಖ್ಯ. ಇದನ್ನು ಖಚಿತಪಡಿಸಿಕೊಳ್ಳಲು ಕೆಲವು ಅಗತ್ಯ ಕ್ರಮಗಳನ್ನು ಬಾಡಿಗೆದಾರರು ತೆರಿಗೆ ಇಲಾಖೆಗೆ ವರದಿ ಮಾಡಬೇಕಾಗುತ್ತದೆ.

ಬಾಡಿಗೆದಾರರು ಕಡಿತಗೊಳಿಸಿದ ಟಿಡಿಎಸ್ ಮೊತ್ತವನ್ನು ಸರ್ಕಾರಕ್ಕೆ ಮುಂದಿನ ತಿಂಗಳ 7ನೆಯ ತಾರೀಕಿನೊಳಗೆ ಪಾವತಿಸಬೇಕು ಹಾಗೂ ಅವರು ತ್ರೈಮಾಸಿಕವಾಗಿ ಈ ಟಿಡಿಎಸ್ ವಿವರ ಸಲ್ಲಿಸಬೇಕಾಗುತ್ತದೆ. ಈ ವಿವರದಲ್ಲಿ ಬಾಡಿಗೆದಾರರ ಮಾಹಿತಿ, ನಿಮ್ಮ ಪ್ಯಾನ್, ಕಡಿತಗೊಂಡ ಮೊತ್ತ ಮತ್ತು ಪಾವತಿ ವಿವರಗಳು ದಾಖಲಾಗುತ್ತವೆ. ಈ ಮಾಹಿತಿಯ ಆಧಾರದಲ್ಲಿ, ನಿಮ್ಮ ಪ್ಯಾನ್‌ಗೆ ಸಂಬಂಧಿಸಿದಂತೆ 'ಫಾರ್ಮ್ 26ಎ ಎಸ್' ಹಾಗೂ ವಾರ್ಷಿಕ ಮಾಹಿತಿ ವರದಿಯಲ್ಲಿ (ಎಐಎಸ್) ಟಿಡಿಎಸ್ ಜಮಾ ಸ್ವಯಂಚಾಲಿತವಾಗಿ ಪ್ರತಿಬಿಂಬಿತ ಆಗುತ್ತದೆ. ಆದ್ದರಿಂದ, ನೀವು ಪ್ರತಿ ಮೂರು ತಿಂಗಳಿಗೊಮ್ಮೆ ನಿಮ್ಮ ಆದಾಯ ತೆರಿಗೆ ಖಾತೆಗೆ ಲಾಗಿನ್ ಆಗಿ '26 ಎ ಎಸ್' ಪರಿಶೀಲಿಸುವುದರ ಮೂಲಕ, ಟಿಡಿಎಸ್ ಕಡಿತ ಹಾಗೂ ಸರ್ಕಾರಕ್ಕೆ ಪಾವತಿ ನಡೆದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು. ಜೊತೆಗೆ, ಬಾಡಿಗೆದಾರರಿಂದ ಫಾರ್ಮ್ 16ಎ (ಟಿಡಿಎಸ್ ಪ್ರಮಾಣಪತ್ರ) ಪಡೆಯುವುದು ನಿಮ್ಮ ಕಾನೂನುಬದ್ಧ ಹಕ್ಕಾಗಿದೆ.

ಯಾವುದೇ ಕಾರಣಕ್ಕೆ ಟಿಡಿಎಸ್ ಕಡಿತಗೊಂಡಿದ್ದರೂ ಸರ್ಕಾರಕ್ಕೆ ಪಾವತಿಸದಿದ್ದರೆ, ಅಥವಾ '26 ಎ ಎಸ್'ನಲ್ಲಿ ಪ್ರತಿಬಿಂಬಿತ ಆಗದಿದ್ದರೆ, ತೆರಿಗೆ ಕಾಯ್ದೆಯ ಪ್ರಕಾರ ಬಾಡಿಗೆದಾರನೇ ಜವಾಬ್ದಾರನಾಗುತ್ತಾನೆ. ಈ ಸಂದರ್ಭದಲ್ಲಿ, ನೀವು ಲಿಖಿತವಾಗಿ ಬಾಡಿಗೆದಾರರಿಗೆ ಸೂಚನೆ ನೀಡುವುದು, ಮತ್ತೂ ಪರಿಹಾರ ಕಾಣದಿದ್ದರೆ, ಅನಿವಾರ್ಯವಾಗಿ ಆದಾಯ ತೆರಿಗೆ ಇಲಾಖೆಯ ಗಮನಕ್ಕೆ ತರುವಂತಹ ಕಾನೂನು ಮಾರ್ಗಗಳು ಲಭ್ಯವಿವೆ. ಇನ್ನು ನೀವು ನಿಮ್ಮ ಕಟ್ಟಡವನ್ನು ಬಾಡಿಗೆಗೆ ನೀಡಿರುವ ಕಾರಣ ಸೆಕ್ಷನ್ 24(ಎ) ರ ಅಡಿಯಲ್ಲಿ ಶೇ 30ರಷ್ಟು ನಿಶ್ಚಿತ ಕಡಿತ ನಿಮಗೆ ಯಾವುದೇ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿದರೂ ಲಭ್ಯ ಇರುತ್ತದೆ.

ಮನೋಜ್ ಎಸ್., ಬೆಂಗಳೂರು

• ಪ್ರಶ್ನೆ: ನಾನು ಕುಣಿಗಲ್ ತಾಲ್ಲೂಕು (ತುಮಕೂರು ಜಿಲ್ಲೆ) ಹುಲಿಯೂರುದುರ್ಗ ಸಮೀಪದಲ್ಲಿರುವ ನನ್ನ 1.5 ಎಕರೆ ಕೃಷಿ ಜಮೀನನ್ನು ಕಳೆದ ವರ್ಷ ಮಾರಾಟ ಮಾಡಿರುತ್ತೇನೆ. ಈ ಹಿಂದೆ ನಿಮ್ಮ ಅಂಕಣದಲ್ಲಿ ಹಳ್ಳಿಯ ಕೃಷಿ ಜಮೀನು ಮಾರಾಟದ ವ್ಯವಹಾರಕ್ಕೆ ಬಂಡವಾಳ ವೃದ್ಧಿ ತೆರಿಗೆ ಅನ್ವಯಿಸುವುದಿಲ್ಲ ಎಂಬುದಾಗಿ ಓದಿದ ನೆನಪು. ಇದು ಈಗಲೂ ಅನ್ವಯಿಸುವುದೇ ಅಥವಾ ಆದಾಯ ತೆರಿಗೆ ಕಾಯ್ದೆಯಲ್ಲಿ ಯಾವುದಾದರೂ ಬದಲಾವಣೆ ಆಗಿದೆಯೇ? ಇದು ಹಳ್ಳಿಯ ಕೃಷಿ ಜಮೀನಿನ ವ್ಯವಹಾರವೆಂದು ಆದಾಯ ತೆರಿಗೆ ಇಲಾಖೆಗೆ ದೃಢೀಕರಿಸಲು ಕಾಯ್ದೆಯ ಅನ್ವಯ ಯಾವ ದಾಖಲೆಗಳು ಬೇಕಾಗುತ್ತವೆ? ಈ ಬಗ್ಗೆ ತಿಳಿಸುವಂತೆ ವಿನಂತಿ.

ಉತ್ತರ: ಆದಾಯ ತೆರಿಗೆ ಕಾಯ್ದೆಯ ಪ್ರಕಾರ ಕೃಷಿ ಜಮೀನುಗಳನ್ನು 'ಬಂಡವಾಳ ಆಸ್ತಿ'ಯ ವ್ಯಾಖ್ಯೆಯಲ್ಲಿ ಪರಿಗಣಿಸಲಾಗುವುದಿಲ್ಲ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 2(14) ಅಡಿಯಲ್ಲಿ, ನಗರ ಅಥವಾ ಅಧಿಸೂಚಿತ ಪ್ರದೇಶಗಳ ವ್ಯಾಪ್ತಿಗೆ ಒಳಪಡದ ಗ್ರಾಮೀಣ ಕೃಷಿ ಜಮೀನುಗಳು ಈ ವಿನಾಯಿತಿಗೆ ಒಳಪಡುವುದರಿಂದ, ಅವುಗಳ ಮಾರಾಟದಿಂದ ಸಿಗುವ ಲಾಭಕ್ಕೆ ಸಾಮಾನ್ಯವಾಗಿ ಬಂಡವಾಳ ವೃದ್ಧಿ ತೆರಿಗೆ ಅನ್ವಯಿಸುವುದಿಲ್ಲ. ಅಂದರೆ, ಜಮೀನು ನಗರ ಪಾಲಿಕೆ, ನಗರಸಭೆ ಅಥವಾ ಕಂಟೋನ್ಮೆಂಟ್ ವ್ಯಾಪ್ತಿಯೊಳಗೆ ಇಲ್ಲದಿದ್ದರೆ ಹಾಗೂ ಆದಾಯ ತೆರಿಗೆ ಕಾಯ್ದೆಯಲ್ಲಿ ಸೂಚಿಸಿರುವ ದೂರದ ಮಿತಿಗಳೊಳಗೆ ಬಾರದಿದ್ದರೆ, ಅಂತಹ ಜಮೀನಿನ ಮಾರಾಟ ಲಾಭ ತೆರಿಗೆಯಿಂದ ಮುಕ್ತವಾಗಿರುತ್ತದೆ.

ನಿಮ್ಮ ಕೃಷಿ ಜಮೀನು, ನಗರೀಕರಣಗೊಂಡ ಪ್ರದೇಶದ ವ್ಯಾಪ್ತಿಗೆ ಒಳಪಡದಿದ್ದಲ್ಲಿ, ಇದನ್ನು ಗ್ರಾಮೀಣ ಕೃಷಿ ಜಮೀನು ಎಂದು ಪರಿಗಣಿಸಬಹು-ದು. ಆದರೆ, ಈ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಗೆ ಸ್ಪಷ್ಟವಾಗಿ ತೋರಿಸುವ ಜವಾಬ್ದಾರಿ ತೆರಿಗೆದಾರರ ಮೇಲಿದೆ. ಆದ್ದರಿಂದ, ಜಮೀನು ಮಾರಾಟದ ಮೊತ್ತವನ್ನು ಆದಾಯ ತೆರಿಗೆ ವಿವರದಲ್ಲಿ ಉಲ್ಲೇಖಿಸುವಾಗ, ಇದು ತೆರಿಗೆಯಿಂದ ವಿನಾಯಿತಿಯೋಗ್ಯ ವ್ಯವಹಾರ ಎಂಬುದನ್ನು ಸರಿಯಾಗಿ ವಿವರಿಸುವುದು ಮುಖ್ಯ.

ಈ ವ್ಯವಹಾರವನ್ನು ಗ್ರಾಮೀಣ ಕೃಷಿ ಜಮೀನು ಮಾರಾಟವೆಂದು ಘೋಷಿಸುವ ಮೊದಲು, ಮಾರಾಟದ ಇತ್ತೀಚಿನ ಎರಡು ವರ್ಷಗಳಲ್ಲಿ ಕೃಷಿ ಮಾಡಿರುವ ದಾಖಲೆಯಾಗಿ ಪಹಣಿ ಹೊಂದಿರಬೇಕು. ಇಂತಹ ದಾಖಲೆಗಳನ್ನು ಸಂಗ್ರಹಿಸಿ ಇಟ್ಟುಕೊಂಡರೆ, ಭವಿಷ್ಯದಲ್ಲಿ ಆದಾಯ ತೆರಿಗೆ ಇಲಾಖೆಯಿಂದ ಯಾವುದೇ ವಿಚಾರಣೆ ಬಂದರೂ ಕಾನೂನುಬದ್ಧವಾ-ಗಿ ಸಮರ್ಪಕ ಉತ್ತರ ನೀಡಲು ಸಹಕಾರಿಯಾಗುತ್ತದೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ



ಶ್ರೀ ವಿವೇಕ್. ಜಿ.
ಇವರು ದಿನಾಂಕ: 20/01/2026ರಂದು ದೈವಾಧೀನರಾಗಿದ್ದು, ಉತ್ತರಕ್ರಿಯಾದಿ ಕಾರ್ಯವನ್ನು ದಿನಾಂಕ: 30/01/2026ನೇ ಶುಕ್ರವಾರದಂದು ಸ್ವಗೃಹ ನಂ.ಎಸ್-6, 52ನೇ ಕ್ರಾಸ್, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ. ತಾವು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ವಿನಂತಿ.
ಇಂತಿ ದುಃಖತಪ್ತರು: ಮೃತರ ಧರ್ಮಪತ್ನಿ ಶ್ರೀಮತಿ ದೀಪುರಾಣಿ ಟಿ, ಮಗನಾದ ತನುಷ್ ಕುಮಾರ್, ತಂದೆ: ಎಂ.ವಿ.ಗೋವಿಂದರಾಜು ಹಾಗೂ ಕುಟುಂಬ ವರ್ಗದವರು.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಶಶಿಕಲಾ .ವಿ
ಅಧ್ಯಕ್ಷರು, ಶ್ರೀ ಬನಶಂಕರಿ ಮಹಿಳಾ ಕೋ-ಆಪರೇಟಿವ್ ಬ್ಯಾಂಕ್ ಲಿ.
ಜನನ : 31-12-1955 ನಿಧನ : 29-01-2026
ಇವರು ದಿನಾಂಕ 29-01-2026, ಗುರುವಾರದಂದು ಮಧ್ಯಾಹ್ನ ದೈವಾಧೀನರಾಗಿರುತ್ತಾರೆ.
ಇವರು ಶ್ರೀ ಬನಶಂಕರಿ ಮಹಿಳಾ ಬ್ಯಾಂಕಿನ ಸಂಸ್ಥಾಪಕ ನಿರ್ದೇಶಕರಾಗಿದ್ದು ಉಪಾಧ್ಯಕ್ಷರಾಗಿ ಹಾಗೂ ಹಾಲಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.
ಕಳೆದ 28 ವರ್ಷಗಳಿಂದ ಬ್ಯಾಂಕಿಗೆ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು.
ಅಂತಿಮ ದರ್ಶನಕ್ಕಾಗಿ ಮೃತರ ಸ್ವಗೃಹದಲ್ಲಿ 30-01-2026, ಶುಕ್ರವಾರದಂದು ಮಧ್ಯಾಹ್ನ 12-00 ಘಂಟೆಯವರೆಗೆ ಇರಿಸಲಾಗುವುದು. ನಂತರ ಅವರ ಅಂತಿಮ ಸಂಸ್ಕಾರವನ್ನು ಟಿ.ಆರ್. ಮಿಲ್, ಹಿಂದು ರುದ್ರಭೂಮಿ ಚಿತಾಗಾರದಲ್ಲಿ ಮಧ್ಯಾಹ್ನ 2-30 ಘಂಟೆಗೆ ನೆರವೇರಿಸಲಾಗುವುದು.
ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು

ಮಾರುತಿ ಸುಜುಕಿಗೆ ₹3,879 ಕೋಟಿ ಲಾಭ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ವಾಹನ ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ ₹3,879 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹3,727 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 4ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿ ಬುಧವಾರ ಷೇರುಪೇಟೆಗೆ ತಿಳಿಸಿದೆ.

ಕಂಪನಿಯ ಒಟ್ಟು ವರಮಾನವು ಈ ಅವಧಿಯಲ್ಲಿ ₹38,764 ಕೋಟಿಯಿಂದ ₹49,904 ಕೋಟಿಗೆ ಏರಿಕೆಯಾಗಿದೆ.

2024ರ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು 4.66 ಲಕ್ಷ ವಾಹನಗಳು ದೇಶೀಯವಾಗಿ ಮಾರಾಟವಾಗಿದ್ದವು. ಈ ಬಾರಿ 5.64 ಲಕ್ಷ ವಾಹನಗಳು ಮಾರಾಟ ಆಗಿದೆ. ಇದು ಕಂಪನಿಯ ಅತಿ ಹೆಚ್ಚು ವಾಹನ ಮಾರಾಟವಾದ ತ್ರೈಮಾಸಿಕವಾಗಿದೆ.

ಕಂಪನಿಯು ಒಟ್ಟು 6.67 ಲಕ್ಷ ವಾಹನಗಳನ್ನು ಮಾರಾಟ ಮಾಡಿದೆ. ಈ ಪೈಕಿ 1.03 ಲಕ್ಷ ವಾಹನಗಳು ರಫ್ತಾಗಿವೆ ಎಂದು ತಿಳಿಸಿದೆ. ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ಕಂಪನಿಯ 17.46 ಲಕ್ಷ ವಾಹನಗಳು ಮಾರಾಟವಾಗಿವೆ.

₹30 ಸಾವಿರ ದಾಟಿದ ಕೊಬ್ಬರಿ

ಪ್ರಜಾವಾಣಿ ವಾರ್ತೆ

ತುಮಕೂರು: ಉಂಡೆ ಕೊಬ್ಬರಿ ಧಾರಣೆ ಏರಿದ್ದು, ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಗುರುವಾರ ನಡೆದ ಹರಾಜಿನಲ್ಲಿ ಕ್ವಿಂಟಲ್ ಕೊಬ್ಬರಿ ₹31,026ಕ್ಕೆ ಮಾರಾಟವಾಗಿದೆ.

ಗುರುವಾರದ ಮಾರುಕಟ್ಟೆಯಲ್ಲಿ ಕ್ವಿಂಟಲ್ ಕೊಬ್ಬರಿ ಕನಿಷ್ಠ ₹28,500, ಮಾದರಿ ₹30,060ಕ್ಕೆ ಮಾರಾಟವಾಗಿದೆ. ಒಟ್ಟು 3,572 ಕ್ವಿಂಟಲ್ ಆವಕವಾಗಿತ್ತು.

ಹೊಸ ವರ್ಷದ ಆರಂಭದಲ್ಲೇ ಮತ್ತೊಮ್ಮೆ ಕ್ವಿಂಟಲ್ ಕೊಬ್ಬರಿ ದರ ₹30 ಸಾವಿರ ದಾಟಿರುವುದು ತೆಂಗು ಬೆಳೆಗಾರರ ಮುಖದಲ್ಲಿ ಹರ್ಷ ಮೂಡಿಸಿದೆ.



ಕೊಬ್ಬರಿ

ಹಿಂದಿನ ವರ್ಷದ ಜೂನ್ ತಿಂಗಳಲ್ಲಿ ಕ್ವಿಂಟಲ್ ₹31,606ಕ್ಕೆ ಏರಿಕೆಯಾಗುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿತ್ತು. ನಂತರದ ದಿನಗಳಲ್ಲಿ ನಿಧಾನವಾಗಿ ಇಳಿಕೆಯಾಗಿ ₹25 ಸಾವಿರಕ್ಕಿಂತ ಕಡಿಮೆಯಾಗಿತ್ತು. ಕೆಲವು ತಿಂಗಳಿಂದ ಈಚೆಗೆ ₹28 ಸಾವಿರದವರೆಗೂ ಏರಿಕೆ ಆಗಿತ್ತು.

ಸಾಮಾನ್ಯವಾಗಿ ಜೂನ್ ಅಥವಾ ದೀಪಾವಳಿ ವೇಳೆಗೆ ಕೊಬ್ಬರಿ ಧಾರಣೆ ಹೆಚ್ಚಳವಾಗುತಿತ್ತು. ಆದರೆ, ಈ ವರ್ಷದ ಆರಂಭದಲ್ಲೇ ಏರಿಕೆಯಾಗಿದ್ದು ಬೇಸಿಗೆ ಹೊತ್ತಿಗೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಕೊಬ್ಬರಿ ಉತ್ಪಾದನೆ ಗಣನೀಯವಾಗಿ ಇಳಿಕೆಯಾಗಿದ್ದು, ಮಾರುಕಟ್ಟೆಯಲ್ಲಿ ಆವಕ ಕಡಿಮೆಯಾಗಿದೆ. ಹವಾಮಾನ ವೈಪರೀತ್ಯದಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ತೆಂಗು ಬೆಳೆಯುವ ಕೇರಳ, ತಮಿಳುನಾಡು ರಾಜ್ಯದಲ್ಲಿ ಉತ್ಪಾದನೆ ಕಡಿಮೆಯಾಗಿದೆ. ಜತೆಗೆ ತೆಂಗಿನ ಕಾಯಿಯನ್ನು ಕೊಬ್ಬರಿ ಮಾಡುವ ಬದಲು ಹೆಚ್ಚು ಪ್ರಮಾಣದಲ್ಲಿ ಕಾಯಿ ಪೌಡರ್ ಉತ್ಪಾದನೆಗೆ ಬಳಸಲಾಗುತ್ತಿದೆ. ಇದರಿಂದಾಗಿ ಕೊಬ್ಬರಿ ಉತ್ಪಾದನೆ ಕಡಿಮೆಯಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಕೆನರಾ ಬ್ಯಾಂಕ್ ಲಾಭ ಶೇ 25ರಷ್ಟು ಏರಿಕೆ

ಮುಂಬೈ (ಪಿಟಿಐ): ಕೆನರಾ ಬ್ಯಾಂಕ್‌ನ ಡಿಸೆಂಬರ್ ತ್ರೈಮಾಸಿಕದ ನಿವ್ವಳ ಲಾಭವು ಶೇಕಡ 25ರಷ್ಟು ಹೆಚ್ಚಳ ಕಂಡಿದ್ದು, ₹5,254 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹4,214 ಕೋಟಿ ಲಾಭ ಗಳಿಸಿತ್ತು.

ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನವು ಶೇ 1.13ರಷ್ಟು ಹೆಚ್ಚಳ ಕಂಡಿದ್ದು ₹9,252 ಕೋಟಿಗೆ ತಲುಪಿದೆ. ಬಡ್ಡಿಯೇತರ ವರಮಾನವು ಶೇ 36ರಷ್ಟು ಜಿಗಿತ ಕಂಡು ₹7,900 ಕೋಟಿಗೆ ತಲುಪಿದೆ.

ವಾಹನ ಸಾಲ ನೀಡಿಕೆಯು ಬ್ಯಾಂಕ್‌ನ ಒಟ್ಟು ಸಾಲ ನೀಡಿಕೆಯ ಮೇಲೆ ಧನಾತ್ಮಕ ಪರಿಣಾಮ ಬೀರಿದೆ. ಒಟ್ಟು ಠೇವಣಿ ಬೆಳವಣಿಗೆ ದರವು ಶೇ 12.95ರಷ್ಟು ಇದೆ.

ಬ್ಯಾಂಕ್‌ನ ಒಟ್ಟು ಎನ್‌ಪಿಎ ಪ್ರಮಾಣವು ಶೇ 2.08ಕ್ಕೆ ಇಳಿಕೆ ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಇದು ಶೇ 2.35ರಷ್ಟು ಇತ್ತು.

ಗಿಗ್ ಕಾರ್ಮಿಕರಿಗೆ ಕನಿಷ್ಠ ಸಂಭಾವನೆಗೆ ಸಲಹೆ

ನವದೆಹಲಿ (ಪಿಟಿಐ): ದೇಶದ ಗಿಗ್ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿರುವವರ ಪೈಕಿ ಶೇಕಡ 40ರಷ್ಟು ಮಂದಿ ತಿಂಗಳಿಗೆ ₹15 ಸಾವಿರಕ್ಕಿಂತ ಕಡಿಮೆ ಸಂಪಾದಿಸುತ್ತಿದ್ದಾರೆ ಎಂದು ಆರ್ಥಿಕ ಸಮೀಕ್ಷೆ ವರದಿಯು ಆತಂಕ ವ್ಯಕ್ತಪಡಿಸಿದೆ.

ಅಲ್ಲದೆ, ಈ ವಲಯದ ಕಾರ್ಮಿಕರ ಸ್ಥಿತಿಯಲ್ಲಿ ಸುಧಾರಣೆ ತರಲು ಕಾರ್ಮಿಕರಿಗೆ ಪ್ರತಿ ಒಂದು ಗಂಟೆಯ ಕೆಲಸಕ್ಕೆ ಅಥವಾ ವಹಿಸಿದ ಪ್ರತಿ ಒಂದು ಕೆಲಸಕ್ಕೆ ಕನಿಷ್ಠ ಸಂಭಾವನೆ ನಿಗದಿ ಆಗಬೇಕು ಎಂದು ಸಲಹೆ ನೀಡಿದೆ. ಗಿಗ್ ಕಾರ್ಮಿಕರು ಕೆಲಸದ ಭಾಗವಾಗಿ ಕಾಯುತ್ತ ನಿಂತರೆ ಅದಕ್ಕೆ ಪ್ರತ್ಯೇಕವಾಗಿ ಪರಿಹಾರ ಮೊತ್ತ ನೀಡಬೇಕು ಎಂದು ಹೇಳಿದೆ.

ದೇಶದ ಗಿಗ್ ಅರ್ಥ ವ್ಯವಸ್ಥೆಯು ಬಹಳ ವೇಗವಾಗಿ ವಿಸ್ತರಣೆ ಕಾಣುತ್ತಿದೆ. ಹೀಗಿದ್ದರೂ ಅಲ್ಲಿ ಕೆಲಸ ಮಾಡುವವರ ಆದಾಯ ಅಸ್ಥಿರವಾಗಿದೆ. ಇದರಿಂದಾಗಿ ಅವರಿಗೆ ಹಣಕಾಸಿನ ಸೇವೆಗಳು ಸರಿಯಾಗಿ ಸಿಗುತ್ತಿಲ್ಲ ಎಂಬ ದೂರುಗಳು ಇವೆ.

ಸೀಮಿತ ಕೌಶಲ ಹೊಂದಿರುವುದು, ಕೃತಕ ಬುದ್ಧಿಮತ್ತೆಯಂತಹ ತಾಂತ್ರಿಕ ಮುನ್ನಡೆಗಳಿಂದಾಗಿ ಕೆಲಸ ಕಳೆದುಕೊಳ್ಳುವ ಭಯವು ಗಿಗ್ ಕಾರ್ಮಿಕರನ್ನು ಇನ್ನಷ್ಟು ತೊಂದರೆಗೆ ಸಿಲುಕಿಸುತ್ತವೆ ಎಂದು ವರದಿ ಕಳವಳ ವ್ಯಕ್ತಪಡಿಸಿದೆ.

'ಗಿಗ್ ಮಾರುಕಟ್ಟೆಯಲ್ಲಿ ಕೆಲಸ ಹುಡುಕಿಕೊಳ್ಳಲು ಡಿಜಿಟಲ್ ವೇದಿಕೆಗಳು ಅಗತ್ಯವಾಗಿವೆ. ಇದು ಶುಲ್ಕ, ಅಲ್ಗರಿದಂ ಮತ್ತು ಕಾರ್ಮಿಕರ ರಕ್ಷಣೆಗೆ ಸಂಬಂಧಿಸಿದ ಕಳವಳಕ್ಕೆ ಕಾರಣ. ಸ್ಪರ್ಧಾತ್ಮಕತೆಗೆ ಸಂಬಂಧಿಸಿದ ನಿಯಮ, ದತ್ತಾಂಶ ಲಭ್ಯತೆ, ಅಲ್ಗರಿದಂಗಳಲ್ಲಿ ಪಾರದರ್ಶಕತೆ ಮೂಲಕ ಇವಕ್ಕೆ ಸ್ಪಂದಿಸಬೇಕು' ಎಂದು ಸಲಹೆ ನೀಡಿದೆ.

ಎಲ್&ಟಿ ವರಮಾನ ಶೇ 10ರಷ್ಟು ಏರಿಕೆ

ನವದೆಹಲಿ (ಪಿಟಿಐ): ದೇಶದ ಮೂಲಸೌಕರ್ಯ ನಿರ್ಮಾಣ ವಲಯದ ಪ್ರಮುಖ ಕಂಪನಿ ಲಾರ್ಸನ್ ಆ್ಯಂಡ್ ಟೂಬ್ರೊ (ಎಲ್‌ಆ್ಯಂಡ್‌ಟಿ) ಡಿಸೆಂಬರ್ ತ್ರೈಮಾಸಿಕದಲ್ಲಿ ₹3,215 ಕೋಟಿ ಲಾಭ ಗಳಿಸಿದೆ. ಇದು ಕಳೆದ ವರ್ಷದ ಇದೇ ಅವಧಿಯ ಲಾಭಕ್ಕೆ ಹೋಲಿಸಿದರೆ ಶೇ 4.2ರಷ್ಟು ಕಡಿಮೆ.

ಹೊಸದಾಗಿ ಜಾರಿಗೆ ಬಂದ ಕಾರ್ಮಿಕ ಸಂಹಿತೆಗಳಿಗೆ ಮಾಡಬೇಕಿರುವ ಒಂದು ಬಾರಿಯ ವೆಚ್ಚದ ಕಾರಣದಿಂದಾಗಿ ಲಾಭ ಕಡಿಮೆ ಆಗಿದೆ ಎಂದು ಕಂಪನಿ ಹೇಳಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹3,359 ಕೋಟಿ ತೆರಿಗೆ ನಂತರದ ಲಾಭ ದಾಖಲಿಸಿತ್ತು.

ಆದರೆ ಈ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನವು ಶೇ 10ರಷ್ಟು ಜಿಗಿದಿದ್ದು, ₹71,450 ಕೋಟಿಗೆ ತಲುಪಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹64,668 ಕೋಟಿ ಆಗಿತ್ತು.

2025ರ ಡಿಸೆಂಬರ್ 31ಕ್ಕೆ ಅನ್ವಯ-ವಾಗುವಂತೆ ಕಂಪನಿಯು ಪಡೆದಿರುವ ಕಾರ್ಯಾದೇಶಗಳ ಒಟ್ಟು ಮೊತ್ತವು ₹7.33 ಲಕ್ಷ ಕೋಟಿ ಆಗಿದೆ. ಇದು 2024ರ ಡಿಸೆಂಬರ್ ಅಂತ್ಯಕ್ಕೆ ಇದ್ದ ಕಾರ್ಯಾದೇಶಗಳ ಒಟ್ಟು ಮೊತ್ತಕ್ಕೆ ಹೋಲಿಸಿದರೆ ಶೇ 30ರಷ್ಟು ಹೆಚ್ಚು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ,ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ: ಟಯೋಟಾ, ಬ್ರಿಟಾನಿಯಾ, ಟಾಟಾಮೋಟಾರ್ಸ್, TVSಗಳಿಗೆ SSLC,PUC, Degree, Diploma, ITIನವರು 18,500/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571.

Wanted

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597/ 9739320897/ 9743972747/ 9448842717

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Part-Time Jobs

ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ,ಪುರುಷರಿಗೆ ಆದ್ಯತೆ. 19,000-25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964311522, 9742133993

ಭವಿಷ್ಯ

Astrology

ಶಿವಶಕ್ತಿ ಜ್ಯೋತಿಷ್ಯಂ (ಪ್ರೇಮಭವಿಷ್ಯ) ಪ್ರೀತಿಸಿದವರನ್ನು ಮರಳಿ ಸ್ತ್ರೀಪುರುಷ ವಶೀಕರಣ ಮಾಡಿಕೊಡುತ್ತಾರೆ. ಶತ್ರುನಾಶ ಗಂಡಹೆಂಡತಿ ಪರಿಹಾರಕ್ಕೆ ಮಂಜುನಾಥ್ ಭಟ್ 9663243202

ಪ್ರವಾಸ

Travel Agencies

ರಾಜಸ್ಥಾನ್ ಪ್ರವಾಸ 5/3/2026 9 ದಿನಗಳ, ಕಾಶಿ ಪ್ರವಾಸ 6/2/2026 4 ದಿನಗಳ, ನೇಪಾಳ ಪ್ರವಾಸ 18/2/26 9 ದಿನಗಳ: ಸುವರ್ಣಯಾತ್ರೆ: 6360146483/ 9008381022

Travel

1ದಿನ ಕದ್ರಿ, ನರಸಿಂಹಸ್ವಾಮಿ, ಲೇಪಾಕ್ಷಿ, ಪುಟ್ಟಪರ್ತಿ 1ದಿನ ತಿರುವಣ್ಣಾಮಲೈ, ಗೋಲ್ಡನ್ ಟೆಂಪಲ್ ಜಲಕಂಠೇಶ್ವರ 2 ದಿನಗಳು ಅಹೋಬಿಲಂ ನವನರಸಿಂಹ,ಲೇಪಾಕ್ಷಿ ಬೆಲುಂಗುಹೆಗಳು ಪ್ರತಿ ಬುಧವಾರ 6 ದಿನಗಳು ಪಂಚರಾಮ ವಿಜಯವಾಡ ವಿಶಾಖಪಟ್ಟಣಂ, ರಾಜಮಹೇಂದ್ರವರಂ ಅಣ್ಣವರಂ, ಸಿಂಹಾಚಲಂ ಪೆಣುಗೊಂಡ ಪ್ರತಿತಿಂಗಳು ವಿಮಾನ ಪ್ರಯಾಣ 9403890729 ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್

ಅಡಿಕೆ ಧಾರಣೆ

ಕುಮಟಾ		ಚಾಲಿ	43799-49239	ಆಪಿ	62999-65695
ಹೊಸಚಾಲಿ	36219-45599	ಕೋಕ	21699-30789	ಬಿಳಿಗೋಟು	16899-36869
ಚಾಲಿ	42699-49699	ಕೆಂಪುಗೋಟು	30809-38699	ಹಳೆಚಾಲಿ	37405-50519
ಚಿಪ್ಪು	24001-39569	ರಾಶಿ	48099-55499	ಕೋಕ	11069-31502
ಕೋಕ	12899-34685	ತಟ್ಟಿಬೆಟ್ಟೆ	37609-53099	ಹೊಸಚಾಲಿ	38000-46709
ಸಾಗರ		ಹೊಸಚಾಲಿ	36899-45099	ಕೆಂಪುಗೋಟು	21099-42599
ಬಿಳಿಗೋಟು	18399-36185	**ಶಿರಸಿ**		ರಾಶಿ	50099-60699
ಚಾಲಿ	21129-45399	ಬೆಟ್ಟೆ	41018-52769	ತಟ್ಟಿಬೆಟ್ಟೆ	37100-53489
ಕೋಕ	14109-34299	ಬಿಳಿಗೋಟು	25100-39099	**ಶಿವಮೊಗ್ಗ**	
ಕೆಂಪುಗೋಟು	30989-42981	ಚಾಲಿ	46099-50399	ಬೆಟ್ಟೆ	50009-66300
ರಾಶಿ	41599-58210	ಕೆಂಪುಗೋಟು	30211-37109	ಗೊರಬಲು	19009-52089
ಸಿಪ್ಪೆಗೋಟು	8599-24699	ರಾಶಿ	51229-56618	ರಾಶಿಇಡಿ	44399-56399
ಸಿದ್ದಾಪುರ		**ಯಲ್ಲಾಪುರ**		ಸರಕು/ಹಸ	53800-94996
ಬಿಳಿಗೋಟು	25689-35699				

ಮ್ಯೂಸಿಯಂನಲ್ಲಿ ಕಳವು: ಶಂಕಿತರ ಬಂಧನ

ಲಂಡನ್ (ಪಿಟಿಐ): ಇಂಗ್ಲೆಂಡ್‌ನ ಮ್ಯೂಸಿಯಂನಲ್ಲಿದ್ದ ಭಾರತದ ಕಲಾಕೃತಿಗಳು ಸೇರಿದಂತೆ ಹಲವು ಮೌಲ್ಯಯುತ ವಸ್ತುಗಳನ್ನು ಕಳವು ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ವ್ಯಕ್ತಿಯೊಬ್ಬರನ್ನು ಗುರುವಾರ ಬಂಧಿಸಲಾಗಿದೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಬ್ರಿಸ್ಟಲ್ ಮ್ಯೂಸಿಯಂನಿಂದ ಕಳವಾಗಿದ್ದ 600ಕ್ಕೂ ಅಧಿಕ ಮೌಲ್ಯಯುತ ವಸ್ತುಗಳನ್ನು ಇಟ್ಟುಕೊಂಡಿರುವ ಶಂಕೆಯಡಿ ವ್ಯಕ್ತಿಯೊಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಬಿಡುಗಡೆಗೊಳಿಸಿದ್ದ ಪೊಲೀಸರು, ಅದರಲ್ಲಿದ್ದ ನಾಲ್ವರು ಶಂಕಿತರ ಮಾಹಿತಿ ನೀಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದ್ದರು.

ಭಾರತ– ಇಯು ವ್ಯಾಪಾರ ಒಪ್ಪಂದ ನಿರಾಶಾದಾಯಕ ಎಂದ ಅಮೆರಿಕ

ನ್ಯೂಯಾರ್ಕ್ (ಪಿಟಿಐ): ಭಾರತ ಮತ್ತು ಐರೋಪ್ಯ ಒಕ್ಕೂಟದ (ಇಯು) ನಡುವಿನ 'ಮುಕ್ತ ವ್ಯಾಪಾರ ಒಪ್ಪಂದ'ದ (ಎಫ್‌ಟಿಎ) ಕುರಿತು ಬೇಸರ ವ್ಯಕ್ತಪಡಿಸಿರುವ ಅಮೆರಿಕ, ಈ ಕುರಿತ ಇಯು ನಿರ್ಧಾರವನ್ನು ನಿರಾಶಾದಾಯಕ ಎಂದು ಬಣ್ಣಿಸಿದೆ.

'ರಷ್ಯಾದಿಂದ ತೈಲ ಖರೀದಿಸುವ ಭಾರತದ ಮೇಲೆ ಅಮೆರಿಕ ಹೆಚ್ಚುವರಿ ಸುಂಕ ವಿಧಿಸಿದ್ದು ಐರೋಪ್ಯ ಒಕ್ಕೂಟಕ್ಕೆ ಇಷ್ಟವಾಗಲಿಲ್ಲ. ಹೀಗಾಗಿಯೇ ಅದು ನಮ್ಮೊಂದಿಗೆ ಕೈಜೋಡಿಸಲಿಲ್ಲ ಎಂಬುದು ಈ ಒಪ್ಪಂದದಿಂದ ಸ್ಪಷ್ಟವಾಗುತ್ತದೆ' ಎಂದು ಅಮೆರಿಕದ ಹಣಕಾಸು ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಹೇಳಿದ್ದಾರೆ.

'ಯುರೋಪಿನಲ್ಲಿ ಉಕ್ರೇನ್-ರಷ್ಯಾ ನಡುವೆ ಯುದ್ಧ ನಡೆಯುತ್ತಿದೆ. ಭಾರತವು ರಷ್ಯಾದಿಂದ ತೈಲ ಖರೀದಿಸುತ್ತಿತ್ತು ಮತ್ತು ಅದರ ಸಂಸ್ಕರಿಸಿದ ಉತ್ಪನ್ನಗಳನ್ನು ಖರೀದಿಸುತ್ತಿದ್ದವರು ಯಾರು? ಯುರೋಪಿಯನ್ನರು ತಾನೇ. ಅಂದರೆ ಯುರೋಪಿಯನ್ನರು ಈ ಭಾರತದ ಮೂಲಕ ರಷ್ಯಾಗೆ ಹಣಕಾಸು ಒದಗಿಸುತ್ತಿದ್ದಾರೆ' ಎಂದು ಅವರು ಖಾಸಗಿ ಸುದ್ದಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

ಸ್ಕಾಟ್ ಬೆಸೆಂಟ್

'ಐರೋಪ್ಯ ಒಕ್ಕೂಟದವರಿಗೆ ಉಕ್ರೇನ್ ಜನರಿಗಿಂತ ವ್ಯಾಪಾರ ಮುಖ್ಯವಾಗಿದೆ. ಅವರಿಗೆ ಉಕ್ರೇನ್ ಯುದ್ಧವನ್ನು ಕೊನೆಗೊಳಿಸುವುದು ಬೇಕಿಲ್ಲಎನಿಸುತ್ತದೆ' ಎಂದುಬೆಸೆಂಟ್‌ದೂರಿದ್ದಾರೆ.

ಭಾರತ ಮತ್ತು ಐಯು ನಡುವೆ ಮಂಗಳವಾರ 'ಮುಕ್ತ ವ್ಯಾಪಾರ ಒಪ್ಪಂದ' (ಎಫ್‌ಟಿಎ) ಏರ್ಪಟ್ಟ ಬೆನ್ನಲ್ಲೇ ಅವರು ಪ್ರತಿಕ್ರಿಯಿಸಿದ್ದಾರೆ.

ಬಾಂಗ್ಲಾ ಸಾರ್ವತ್ರಿಕ ಚುನಾವಣೆ ಖಂಡಿಸಿದ ಶೇಖ್ ಹಸೀನಾ

ಢಾಕಾ (ಎಪಿ): ಬಾಂಗ್ಲಾದೇಶದಲ್ಲಿ ಫೆಬ್ರುವರಿಯಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯನ್ನು ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರು ಖಂಡಿಸಿದ್ದಾರೆ.

ತಮ್ಮ ಪಕ್ಷ ಅವಾಮಿ ಲೀಗ್ ಅನ್ನು ನಿಷೇಧಿಸಿರುವುದನ್ನು ಅವರು ವಿರೋಧಿಸಿದ್ದಾರೆ.

'ನ್ಯಾಯಸಮ್ಮತ ಮತ್ತು ಪಾರದರ್ಶಕವಾದ ಚುನಾವಣೆ ನಡೆಯದಿದ್ದರೆ, ಬಾಂಗ್ಲಾದೇಶವು ದೀರ್ಘಕಾಲದ ಅಸ್ಥಿರತೆಯನ್ನು ಎದುರಿಸಬೇಕಾಗುತ್ತದೆ' ಎಂದು ಹಸೀನಾ ಇ-ಮೇಲ್‌ನಲ್ಲಿ ಸಂದೇಶ ಹಂಚಿಕೊಂಡಿದ್ದಾರೆ.

ಶೇಖ್ ಹಸೀನಾ

'ತಮ್ಮ ಪಕ್ಷವನ್ನು ನಿಷೇಧಿಸುವ ಮೂಲಕ ಲಕ್ಷಾಂತರ ಬೆಂಬಲಿಗರ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ಬಹುಪಾಲು ಜನರ ರಾಜಕೀಯ ಭಾಗವಹಿಸುವಿಕೆಯನ್ನು ತಡೆಯಲಾಗುತ್ತಿದೆ. ಇದು ಭವಿಷ್ಯದಲ್ಲಿ ಅಸ್ಥಿರತೆಯನ್ನು ಸೃಷ್ಟಿಸುತ್ತದೆ' ಎಂದು ತಿಳಿಸಿದ್ದಾರೆ.

'ಒಂದಿಷ್ಟು ಜನರನ್ನು ಹೊರಗಿಡುವ ಮೂಲಕ ಹುಟ್ಟಿದ ಸರ್ಕಾರದಿಂದ ವಿಭಜಿತ ರಾಷ್ಟ್ರ ಒಗ್ಗೂಡಲು ಸಾಧ್ಯವಿಲ್ಲ' ಎಂದಿದ್ದಾರೆ.

'ಬಹುಪಕ್ಷೀಯತೆ ಪ್ರತಿಪಾದಿಸಬೇಕು'

ಬೀಜಿಂಗ್/ಲಂಡನ್ (ಪಿಟಿಐ): ಮುಕ್ತ ವ್ಯಾಪಾರದ ಬೆಂಬಲಿಗರಾಗಿ ಉಭಯ ದೇಶಗಳು ಜಂಟಿಯಾಗಿ ಬಹುಪಕ್ಷೀಯತೆಯನ್ನು ಪ್ರತಿಪಾದಿಸಬೇಕು ಮತ್ತು ಅನುಸರಿಸಬೇಕು ಎಂದು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರಿಗೆ ಗುರುವಾರ ತಿಳಿಸಿದರು.

ಎಂಟು ವರ್ಷಗಳಲ್ಲಿ ಚೀನಾಕ್ಕೆ ಭೇಟಿ ನೀಡಿದ ಮೊದಲ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರೊಂದಿಗೆ ಜಿನ್‌ಪಿಂಗ್ ಅವರು ಬೀಜಿಂಗ್‌ನ 'ಗ್ರೇಟ್ ಹಾಲ್ ಆಫ್ ದ ಪೀಪಲ್'ನಲ್ಲಿ ಸಭೆ ನಡೆಸಿದರು.

'ಎಲ್ಲ ದೇಶಗಳು ಪಾಲಿಸಿದರಷ್ಟೆ ಅಂತರರಾಷ್ಟ್ರೀಯ ಕಾನೂನುಗಳು ಪರಿಣಾಮಕಾರಿಯಾಗಬಲ್ಲವು ವಿಶೇಷವಾಗಿ ಪ್ರಮುಖ ದೇಶಗಳು ಮುಂದಾಳತ್ವ ವಹಿಸಬೇಕು. ಇಲ್ಲವಾದರೆ, ಜಗತ್ತು ಅರಾಜಕತೆಯತ್ತ ಸಾಗುತ್ತದೆ. ಚೀನಾ ಎಷ್ಟೇ ಬೆಳೆದರೂ ಇತರ ದೇಶಗಳಿಗೆ ಬೆದರಿಕೆ ಒಡ್ಡುವುದಿಲ್ಲ' ಎಂದು ಜಿನ್‌ಪಿಂಗ್ ಹೇಳಿದ್ದಾರೆ ಎಂದು ರಾಜ್ಯ ಪ್ರಸಾರಕ ಸುದ್ದಿಸಂಸ್ಥೆಯೊಂದು ತಿಳಿಸಿದೆ.

'ಉಭಯ ದೇಶಗಳಿಗೆ ಪ್ರಯೋಜನವಾಗುವ ಸ್ಥಿರ, ದೀರ್ಘಕಾಲೀನ ಮತ್ತು ಕಾರ್ಯತಂತ್ರದ ಪಾಲುದಾರಿಕೆಯನ್ನು ನಿರ್ಮಿಸುವಲ್ಲಿ ತಮ್ಮ ಬದ್ಧತೆಯ ಕುರಿತು ಇಬ್ಬರೂ ನಾಯಕರು ದೃಢಪಡಿಸಿದ್ದಾರೆ' ಎಂದು ಲಂಡನ್ ಪ್ರಧಾನಿಯ ಅಧಿಕೃತ ನಿವಾಸ (ಡೌನಿಂಗ್ ಸ್ಟ್ರೀಟ್) ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ಪರಸ್ಪರ ಆಸಕ್ತಿಯ ಕ್ಷೇತ್ರಗಳಲ್ಲಿ ಸಹಕಾರ ಹೆಚ್ಚಿಸುವುದನ್ನು ಮುಂದು ವರಿಸಲು ಮತ್ತು ಭಿನ್ನಾಭಿಪ್ರಾಯ ಹೊಂದಿದ ಕ್ಷೇತ್ರಗಳಲ್ಲಿ ಮುಕ್ತ ಮತ್ತು ಸ್ಪಷ್ಟ ಸಂವಾದ ನಡೆಸುವುದಾಗಿ ಉಭಯ ನಾಯಕರು ಒಪ್ಪಿಕೊಂಡಿದ್ದಾರೆ ಎಂದು ಅದು ತಿಳಿಸಿದೆ.

'ದೇಶದಲ್ಲಿನ ಬೆಳವಣಿಗೆ ನಿಟ್ಟನಲ್ಲಿ ವಿದೇಶದಲ್ಲಿರುವ ವಿಶ್ವದ ಅತಿದೊಡ್ಡ ಶಕ್ತಿಗಳೊಂದಿಗಿನ ನಮ್ಮ ಬಾಂಧವ್ಯಕ್ಕೆ ನೇರವಾಗಿ ಸಂಬಂಧಿಸಿದೆ' ಎಂದು ಕಿಯರ್ ಸ್ಟಾರ್ಮರ್ ತಿಳಿಸಿದ್ದಾರೆ.

ಗಡಿ ಭದ್ರತಾ ಒಪ್ಪಂದ: ಮಾನವ ಕಳ್ಳಸಾಗಣೆಯನ್ನು ಹತ್ತಿಕ್ಕುವ ಸಲುವಾಗಿ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಚೀನಾದೊಂದಿಗೆ ಹೊಸ ಗಡಿ ಭದ್ರತಾ ಒಪ್ಪಂದ ಮಾಡಿಕೊಳ್ಳಲಿದ್ದಾರೆ ಎಂದು ಡೌನಿಂಗ್ ಸ್ಟ್ರೀಟ್ ತಿಳಿಸಿದೆ. ಸ್ಕಾಚ್, ವಿಸ್ಕಿ ರಫ್ತು ಸುಂಕ ಕಡಿತ ಮತ್ತು ಬ್ರಿಟನ್ ಪ್ರವಾಸಿಗರಿಗೆ ಚೀನಾದಲ್ಲಿ ವೀಸಾ-ಮುಕ್ತ ಪ್ರಯಾಣಕ್ಕೆ ಅನುಮತಿಯನ್ನು ನಿರೀಕ್ಷಿಸಲಾಗಿದೆ. ಜೊತೆಗೆ ಕಳ್ಳಸಾಗಣೆ ತಡೆಯಲು ಈ ದೇಶಗಳು ಈ ಒಪ್ಪಂದಕ್ಕೆ ಮುಂದಾಗಿವೆ.

ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಮತ್ತು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಮಾತುಕತೆಗೂ ಮುನ್ನ ಕೈ ಕುಲುಕಿದರು —ಎಎಫ್‌ಪಿ ಚಿತ್ರ

ಬ್ರಿಟನ್- ಚೀನಾ ಪಾಲುದಾರಿಕೆ ಒಪ್ಪಂದ

ಬೀಜಿಂಗ್ (ಎಪಿ): ಉಭಯ ದೇಶಗಳ ನಡುವೆ ಬಾಂಧವ್ಯ ವೃದ್ಧಿಸಿಕೊಳ್ಳುವ ಸಲುವಾಗಿ ಬ್ರಿಟನ್ ಮತ್ತು ಚೀನಾ ಗುರುವಾರ 'ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ'ಕ್ಕೆ ಕರೆ ನೀಡಿವೆ.

ಬೀಜಿಂಗ್‌ನಲ್ಲಿ ನಡೆದ ಸಭೆಯಲ್ಲಿ, ಜಾಗತಿಕ ಬಿಕ್ಕಟ್ಟು ಮತ್ತು ಅನಿಶ್ಚಿತತೆ ನಡುವೆ ಜಾಗತಿಕ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳಲು ಚೀನಾ ಮತ್ತು ಬ್ರಿಟನ್ ಮಾತುಕತೆ ಮತ್ತು ಸಹಕಾರವನ್ನು ಬಲಪಡಿಸುವ ಕುರಿತು ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಮತ್ತು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಚರ್ಚಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

29-01-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1690 (1690)
ಒಂದು ವಾರದ ಡೆಲಿವರಿ	1695 (1685)
ಪಾಮ್ ವಾರದ ಡೆಲಿವರಿ	1343 (1338)
ಸೂರ್ಯಕಾಂತಿ ಎಣ್ಣೆ ಕಚ್ಚಾ	1540 (1535)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,74,000 (1,64,000)
ಬೆಳ್ಳಿ ಕೆ.ಜಿಗೆ	3,78,000 (3,62,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ನೈಗರ್: ವಿಮಾನ ನಿಲ್ದಾಣ ಬಳಿ ಸ್ಫೋಟ

ನಿಯಾಮೆ (ಎಪಿ): ನೈಗರ್‌ನ ರಾಜಧಾನಿ ನಿಯಾಮೆ ನಗರದ ವಿಮಾನ ನಿಲ್ದಾಣದ ಬಳಿ ಗುರುವಾರ ಮುಂಜಾನೆ ಭಾರಿ ಸ್ಫೋಟ ಮತ್ತು ಗುಂಡಿನ ಸದ್ದು ಕೇಳಿ ಬಂತು ಎಂದು ಇಲ್ಲಿನ ನಿವಾಸಿಗಳು ತಿಳಿಸಿದ್ದಾರೆ. ಸಂಘರ್ಷ ಪೀಡಿತ ದೇಶದಲ್ಲಿ ಶಸ್ತ್ರಧಾರಿ ಗುಂಪುಗಳು ದಾಳಿ ನಡೆಸಿರುವ ಶಂಕೆ ವ್ಯಕ್ತವಾಗಿದೆ.

ಮಧ್ಯರಾತ್ರಿ ಸುಮಾರಿಗೆ ಡಿಯೋರಿ ಹಮಾನಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸ್ಫೋಟದ ಭಾರಿ ಸದ್ದು ಮತ್ತು ಆಗಸದಲ್ಲಿ ಬೆಳಕು ಆವರಿಸಿದ ದೃಶ್ಯಗಳು ಕಂಡುಬಂದವು. ಈ ಪ್ರದೇಶ ನೈಜೀರಿಯಾ ಸೇನೆಯ ಪ್ರಮುಖ ಕೇಂದ್ರವೂ ಆಗಿದೆ.

ಚಟಕೆ ಸುದ್ದಿ

ಎಸ್‌.ವಿ.ಪಿ. ಪ್ರಶಸ್ತಿಗೆ ಸುಬ್ರಾಯ ಚೊಕ್ಕಾಡಿ ಆಯ್ಕೆ

ಸುಬ್ರಾಯ ಚೊಕ್ಕಾಡಿ

ಉಡುಪಿ: ಕವಿ ಮತ್ತು ವಿಮರ್ಶಕ ಸುಬ್ರಾಯ ಚೊಕ್ಕಾಡಿ ಅವರು ಪ್ರತಿಷ್ಠಿತ ಎಸ್‌.ವಿ. ಪರಮೇಶ್ವರ ಭಟ್ಟ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಕನ್ನಡ ಸಾಹಿತ್ಯ, ಅನುವಾದ ಮತ್ತು ಸಂಶೋಧನ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಹಿತಿಗಳಿಗೆ ಎಸ್‌.ವಿ.ಪಿ. ಪ್ರತಿಷ್ಠಾನದಿಂದ ನೀಡುವ ಪ್ರಶಸ್ತಿ ಇದಾಗಿದೆ. 2026ರ ಸಾಲಿನಿಂದ ಈ ಪ್ರಶಸ್ತಿಯನ್ನು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಮೂಲಕ ನೀಡಲಾಗುವುದು. ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ ಎಂದು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಆಡಳಿತಾಧಿಕಾರಿ ಬಿ. ಜಗದೀಶ್ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಗನ ಕಾಯಿಲೆ: 30ಗಳಲ್ಲಿ 9 ಪ್ರಕರಣ

ಬಾಳೆಹೊನ್ನೂರು: ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಂಗನ ಕಾಯಿಲೆ (ಕೆಎಫ್‌ಡಿ) ಪ್ರಕರಣಗಳು ಹೆಚ್ಚಾಗುತ್ತಿದ್ದು, ಜನವರಿ ತಿಂಗಳಲ್ಲಿ 9 ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ.

ನರಸಿಂಹರಾಜಪುರ ತಾಲ್ಲೂಕಿನ ಮೇಲ್ಪಾಲ್ ಮತ್ತು ಕೊಪ್ಪ ತಾಲ್ಲೂಕಿನ ಹಿರೇಗದ್ದೆ ಸುತ್ತಮುತ್ತ ಮಂಗನ ಕಾಯಿಲೆ ಕಾಣಿಸಿಕೊಂಡಿದೆ. ಒಟ್ಟು ಒಂಬತ್ತು ಪ್ರಕರಣಗಳಲ್ಲಿ 12 ವರ್ಷದ ಬಾಲಕ ಮತ್ತು 7 ತಿಂಗಳ ಬಾಲಕಿ ಸೇರಿದ್ದಾರೆ.

ಏಳು ಜನರು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ಹೋಗಿದ್ದಾರೆ. 7 ತಿಂಗಳ ಬಾಲಕಿ ಮತ್ತು 36 ವರ್ಷದ ವ್ಯಕ್ತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕು ವೈದ್ಯಾಧಿಕಾರಿ ಡಾ.ಮಹೇಂದ್ರ ಕಿರೀಟಿ ತಿಳಿಸಿದ್ದಾರೆ.

ಮೂರು ಹೆಡೆಯ ನಾಗ ಶಿಲ್ಪ ಪತ್ತೆ

ಗದಗ: ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದಲ್ಲಿ ನಡೆದಿರುವ ಉತ್ಖನನದಲ್ಲಿ ಮೂರು ಹೆಡೆಯ ನಾಗಶಿಲ್ಪ, ಮೂಳೆ ತುಂಡುಗಳು ಸಿಕ್ಕಿವೆ.

‘ಉತ್ಖನನ ಕೆಲಸ ಗುರುವಾರಕ್ಕೆ 12 ದಿನಗಳನ್ನು ಪೂರ್ಣಗೊಳಿಸಿದೆ. ಮೂರು ಹೆಡೆಯ ನಾಗ ಶಿಲ್ಪದ ಜತೆಗೆ ಕಳಸದ ಮೇಲ್ಭಾಗದಲ್ಲಿ ಇರುವ ರಚನೆಯ ಅವಶೇಷ, ಮೂಳೆ ತುಂಡುಗಳು ಸಿಕ್ಕಿವೆ’ ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

ಬೆದರಿಕೆ ಪ್ರಕರಣ: ಮಂಗಳೂರಿನಲ್ಲಿ ಸ್ಥಳ ಮಹಜರು

ಮಂಗಳೂರು: ಶಿಡ್ಲಘಟ್ಟ ನಗರಸಭೆ ಆಯುಕ್ತೆ ಅಮೃತಾ ಗೌಡ ಅವರಿಗೆ ದೂರವಾಣಿಯಲ್ಲಿ ಧಮ್ಕಿ ಹಾಕಿದ ಆರೋಪದ ಮೇಲೆ ಬಂಧನದಲ್ಲಿರುವ ಕಾಂಗ್ರೆಸ್ ಮುಖಂಡ ರಾಜೀವ್ ಗೌಡರನ್ನು ಗುರುವಾರ ಮಂಗಳೂರಿಗೆ ಕರೆತಂದ ಪೊಲೀಸರು ಸ್ಥಳ ಮಹಜರು ನಡೆಸಿದರು. ಕಾರು ಪತ್ತೆಯಾಗಿದ್ದ ಮಂಗಳೂರು ಜಂಕ್ಷನ್ ರೈಲ್ವೆ ನಿಲ್ದಾಣದಲ್ಲೂ ಸ್ಥಳ ಮಹಜರು ನಡೆಯಿತು.

ತಲೆ ಮರೆಸಿಕೊಂಡಿದ್ದ ವೇಳೆ ಕೆಲ ದಿನ ತಂಗಿದ್ದ ಮಂಗಳೂರಿನ ಮೈಕೆಲ್ ಎಂಬುವವರ ಪಚ್ಚನಾಡಿಯ ಫಾರ್ಮ್‌ಹೌಸ್‌ನಲ್ಲಿ ಸ್ಥಳ ಮಹಜರು ನಡೆಯಿತು. ಶಿಡ್ಲಘಟ್ಟ ಸರ್ಕಲ್ ಇನ್‌ಸ್ಪೆಕ್ಟರ್ ಆನಂದ್ ಕುಮಾರ್ ನೇತೃತ್ವದಲ್ಲಿ ಪೊಲೀಸರು, ಆರೋಪಿಯನ್ನು ಮಂಗಳೂರಿಗೆ ಕರೆತಂದಿದ್ದರು.

ಅಪೆಕ್ಸ್ ಬ್ಯಾಂಕ್ ಚುನಾವಣೆ ಮುಂದಕ್ಕೆ

ಅಭ್ಯರ್ಥಿ ಆಯ್ಕೆಯಲ್ಲಿ ಕಾಂಗ್ರೆಸ್ ಬೆಂಬಲಿತರ ಮಧ್ಯೆ ಮೂಡದ ಒಮ್ಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಸ್ಥಾನಕ್ಕೆ ಜನವರಿ 29ರಂದು ನಡೆಯಬೇಕಿದ್ದ ಚುನಾವಣೆಯನ್ನು ಕೊನೆಯ ಕ್ಷಣದಲ್ಲಿ ಮುಂದೂಡಲಾಗಿದೆ.

ಬೆಳಿಗ್ಗೆ 11 ಗಂಟೆಗೆ ನಾಮಪತ್ರ ಪ್ರಕ್ರಿಯೆ ಆರಂಭವಾದಾಗ ಮಾಜಿ ಶಾಸಕ ಬಿಜೆಪಿಯ ಬೆಳ್ಳಿ ಪ್ರಕಾಶ್ ಅಧ್ಯಕ್ಷ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ್ದರು. ಅಪೆಕ್ಸ್ ಬ್ಯಾಂಕ್‌ನ 18 ನಿರ್ದೇಶಕರಲ್ಲಿ 15 ಮಂದಿ ಕಾಂಗ್ರೆಸ್ ಬೆಂಬಲಿಗರಾಗಿದ್ದು, ಇಬ್ಬರು ಬಿಜೆಪಿ (ಕೊಡಗು–ಕೊಡಂದೇರ ಪಿ. ಗಣಪತಿ ಮತ್ತು ಚಿಕ್ಕಮಗಳೂರು– ಬೆಳ್ಳಿಪ್ರಕಾಶ್) ಮತ್ತು ಒಬ್ಬ ಜೆಡಿಎಸ್ (ಹಾಸನ–ಆರ್. ಸೂರಜ್) ಬೆಂಬಲಿತರಿದ್ದಾರೆ.

ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಆಯ್ಕೆಯಲ್ಲಿ ಕಾಂಗ್ರೆಸ್ ಬೆಂಬಲಿತರ ಮಧ್ಯೆ ಒಮ್ಮತ ಮೂಡದ ಕಾರಣ ಯಾರೂ ಅರ್ಜಿ ಸಲ್ಲಿಸಲಿಲ್ಲ. ಕೊನೆಗೆ ಒಮ್ಮತದ ಅಭ್ಯರ್ಥಿಯ ಆಯ್ಕೆಗೆ ಸಹರಿಸಲು ಬೆಳ್ಳಿ ಪ್ರಕಾಶ್ ಸಮ್ಮತಿಸಿ, ನಾಮಪತ್ರ ವಾಪಸ್ ಪಡೆದರು. ಹಾಗಾಗಿ, ಚುನಾವಣೆಯನ್ನು ಮುಂದೂಡಲಾಯಿತು.

ಒಟ್ಟು 21 ನಿರ್ದೇಶಕರ ಪೈಕಿ, ಮೈಸೂರು–ಚಾಮರಾಜನಗರ, ಬಾಗಲಕೋಟೆ ಮತ್ತು ಕೋಲಾರ ಜಿಲ್ಲಾ ಸಹಕಾರಿ ಕೇಂದ್ರ (ಡಿಸಿಸಿ) ಬ್ಯಾಂಕುಗಳನ್ನು ಹೊರತುಪಡಿಸಿ, ಉಳಿದ 18 ಡಿಸಿಸಿ ಬ್ಯಾಂಕುಗಳು ನಾಮನಿರ್ದೇಶಿತರನ್ನು ನಿಯೋಜಿಸಿವೆ.

ಅಧ್ಯಕ್ಷ ಸ್ಥಾನದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿರುವ ಮಾಜಿ ಸಹಕಾರ ಸಚಿವ ಕೆ.ಎನ್. ರಾಜಣ್ಣ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋದರ ಸಂಬಂಧಿ, ವಿಧಾನ ಪರಿಷತ್ ಸದಸ್ಯ ಎಸ್.ರವಿ ಹಾಗೂ ಬಿಜೆಪಿಯ ಉಚ್ಚಾಟಿತ ಶಾಸಕ ಶಿವರಾಮ ಹೆಬ್ಬಾರ್ ಅವರು ಕಣ್ಣಿಟ್ಟಿದ್ದಾರೆ. ಬ್ಯಾಂಕಿಗೆ ನೂತನವಾಗಿ ಆಯ್ಕೆಯಾಗಿರುವ ನಿರ್ದೇಶಕರಿಗೆ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಮೂರು ದಿನಗಳ ಹಿಂದೆ ಚಹಾ ಕೂಟ ಏರ್ಪಡಿಸಿದ್ದರು. ಈ ವೇಳೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಒಮ್ಮತದಿಂದ ಆಯ್ಕೆ ಪ್ರಕ್ರಿಯೆ ನಡೆಸುವ ಬಗ್ಗೆ ಚರ್ಚೆ ನಡೆದಿತ್ತು.

ವಿಧಾನಪರಿಷತ್‌ನ ಕಾಂಗ್ರೆಸ್ ಸದಸ್ಯ ಶರಣಗೌಡ ಬಯ್ಯಾಪುರ ಅವರು ಉಪಾಧ್ಯಕ್ಷ ಸ್ಥಾನಕ್ಕೆ ಸಲ್ಲಿಸಿದ್ದ ನಾಮಪತ್ರವನ್ನು ಕೊನೆಯ ಕ್ಷಣದಲ್ಲಿ ಹಿಂಪಡೆದರು. ಯಾರೂ ನಾಮಪತ್ರ ಸಲ್ಲಿಸದ ಕಾರಣ ಆಯ್ಕೆ ನಡೆಯಲಿಲ್ಲ.

ಹೊಸ ಸೂತ್ರ: ರವಿ, ಹೆಬ್ಬಾರ್ ಹಾದಿ ಸುಗಮ

ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡುವ ಕಾಂಗ್ರೆಸ್‌ನ ತಂತ್ರ ಗುರುವಾರ ಫಲಿಸದ ಕಾರಣ ಚುನಾವಣೆ ಮುಂದೂಡಲಾಗಿದ್ದು, ಪಕ್ಷದ ನಾಯಕರು ಸಂಜೆಯ ವೇಳೆಗೆ ಹೊಸ ಸೂತ್ರ ಸಿದ್ಧಪಡಿಸಿದ್ದಾರೆ.

ಕೆಲ ನಿರ್ದೇಶಕರು ಮಾಜಿ ಸಹಕಾರ ಸಚಿವ ಕೆ.ಎನ್.ರಾಜಣ್ಣ ಪರ, ಕೆಲ ನಿರ್ದೇಶಕರು ವಿಧಾನಪರಿಷತ್ ಸದಸ್ಯ ಎಸ್.ರವಿ ಪರ ನಿಂತಿದ್ದರು. ಎರಡೂ ಬಣಗಳ ಸಂಘರ್ಷ ತಪ್ಪಿಸಿ, ಅವಿರೋಧ ಆಯ್ಕೆ ಸುಗಮಗೊಳಿಸಲು ಹೊಸ ಸೂತ್ರ ಹೆಣೆಯಲಾಗಿದ್ದು, ಆ ಪ್ರಕಾರ ಹಿಂದೆ ಅಧ್ಯಕ್ಷರಾದವರು ಮತ್ತೆ ಸ್ಪರ್ಧಿಸದಂತೆ ಸೂಚಿಸಲಾಗಿದೆ.

ಹೊಸ ಸೂತ್ರದಂತೆ ಈಗಾಗಲೇ ಎರಡು ಬಾರಿ ಅವರು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿರುವ ಕೆ.ಎನ್.ರಾಜಣ್ಣ ಸ್ಪರ್ಧೆಯಿಂದ ಹೊರಗೆ ಉಳಿಯುವುದು ಖಚಿತವಾಗಿದೆ. ಆರ್.ಎಂ. ಮಂಜುನಾಥ್ ಗೌಡ, ರಾಜೇಂದ್ರಕುಮಾರ್ ಸೇರಿದಂತೆ ಕೆಲವರು ಈಗಾಗಲೇ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನ ಅಲಂಕರಿಸಿದ್ದಾರೆ. ಹಾಗಾಗಿ, ಎಸ್. ರವಿ ಹಾಗೂ ಶಿವರಾಮ ಹೆಬ್ಬಾರ್ ಇಬ್ಬರಲ್ಲಿ ಒಬ್ಬರ ಆಯ್ಕೆ ಅಂತಿಮವಾಗಬಹುದು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಎಚ್‌.ಡಿ.ದೇವೇಗೌಡ ಹಾಗೂ ನರೇಂದ್ರ ಮೋದಿ ಚರ್ಚಿಸಿದರು

ಮೋದಿ–ದೇವೇಗೌಡ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರುವಾರ ಇಲ್ಲಿ ಭೇಟಿ ಮಾಡಿ ಸಮಾಲೋಚಿಸಿದರು.

‘ದೇವೇಗೌಡ ಅವರೊಂದಿಗೆ ಸಂವಾದ ನಡೆಸಲಾಯಿತು. ಪ್ರಮುಖ ವಿಷಯಗಳ ಕುರಿತು ಅವರ ಅರ್ಥಪೂರ್ಣ ವಿಚಾರಗಳು ಗಮನಾರ್ಹವಾಗಿವೆ. ಭಾರತದ ಅಭಿವೃದ್ಧಿಯ ಬಗ್ಗೆ ಅವರಿಗಿರುವ ಉತ್ಸಾಹವು ಅಷ್ಟೇ ಪ್ರಶಂಸನೀಯವಾಗಿದೆ’ ಎಂದು ಮೋದಿ ‘ಎಕ್ಸ್’ ಮಾಡಿದ್ದಾರೆ.

‘ಮೋದಿ ಜತೆಗಿನ ಚರ್ಚೆ ಆತ್ಮೀಯವಾಗಿತ್ತು. ನಾನು ಹಂಚಿಕೊಂಡ ಅಭಿವೃದ್ಧಿ ವಿಚಾರಗಳನ್ನು ತಾಳ್ಮೆಯಿಂದ ಆಲಿಸಿದರು. ಈ ನಡೆಯು ಅವರ ಕಾಳಜಿ, ತಿಳಿವಳಿಕೆ ಹಾಗೂ ವಿನಮ್ರತೆಯ ಪ್ರತಿಬಿಂಬ’ ಎಂದು ದೇವೇಗೌಡ ತಿಳಿಸಿದ್ದಾರೆ.

ಕಲಾಕೃತಿ ವೀಕ್ಷಣೆ...

ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿಯ ಕನ್ನಡ ಭವನದಲ್ಲಿ ಗುರುವಾರ ನಡೆದ ಪಿ.ಎಂ. ವಿಶ್ವಕರ್ಮ ಯೋಜನೆಯಡಿ ಆಯೋಜಿಸಿದ್ದ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಕಲಾಕೃತಿಗಳನ್ನು ವೀಕ್ಷಿಸುತ್ತಿರುವ ಮಹಿಳೆಯರು

ಹುಟ್ಟು ಹಬ್ಬ, ವಿವಾಹ ವಾರ್ಷಿಕೋತ್ಸವ: ಪೊಲೀಸರಿಗೆ ರಜೆ

ಬೆಂಗಳೂರು: ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಜನ್ಮದಿನಾಚರಣೆ ಹಾಗೂ ವಿವಾಹ ವಾರ್ಷಿಕೋತ್ಸವಕ್ಕೆ ಸಾಂದರ್ಭಿಕ ರಜೆ ಮಂಜೂರು ಮಾಡುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಅವರು ಎಲ್ಲ ಘಟಕದ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಎಂ.ಎ. ಸಲೀಂ

ವಿಶೇಷ ದಿನಗಳಲ್ಲಿ ರಜೆ ಪಡೆಯುವುದರಿಂದ ಅಧಿಕಾರಿಗಳು, ಸಿಬ್ಬಂದಿ ಭಾವನಾತ್ಮಕವಾಗಿ ಪುನಶ್ಚೇತನಗೊಳ್ಳಲು, ಕುಟುಂಬದ ಜತೆಗೆ ಸಂಭ್ರಮದಿಂದ ಸಮಯ ಕಳೆಯುವುದಕ್ಕೆ ಸಾಧ್ಯವಾಗಲಿದೆ. ಕರ್ತವ್ಯ ಹಾಗೂ ವೈಯಕ್ತಿಕ ಜೀವನದ ನಡುವೆ ಸಮತೋಲನ ಕಾಪಾಡಿಕೊಳ್ಳಲು ಸಹಾಯವಾಗಲಿದೆ. ಮನೋಬಲವೂ ವೃದ್ಧಿ ಆಗುತ್ತದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಜನ್ಮದಿನಾಚರಣೆ ಹಾಗೂ ವಿವಾಹ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿ ರಜೆ ಕೋರಿದಲ್ಲಿ ತಪ್ಪದೇ ರಜೆ ಮಂಜೂರು ಮಾಡಬೇಕು ಎಂದು ಅವರು ಸೂಚನೆ ನೀಡಿದ್ದಾರೆ.

ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟ ಆಗ್ರಹ

‘6 ತಿಂಗಳು ಅವಧಿ ವಿಸ್ತರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವಧಿ ಮುಗಿಯುತ್ತಿರುವ ಗ್ರಾಮ ಪಂಚಾಯಿತಿಗಳಿಗೆ ಈಗಿರುವ ಆಡಳಿತ ಸಮಿತಿಯನ್ನೇ ಮುಂದಿನ ಆರು ತಿಂಗಳು ಮುಂದುವರಿಸಬೇಕು ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ ಸರ್ಕಾರವನ್ನು ಒತ್ತಾಯಿಸಿದೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಎಂ.ಚಲಪತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸದಸ್ಯರು ಭಾಗವಹಿಸಿದ್ದರು.

ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್ ಮಾತನಾಡಿ, ‘ಗ್ರಾಮ ಪಂಚಾಯಿತಿಗಳ ಅವಧಿಯು 2026ರ ಜನವರಿಯಿಂದ ಮಾರ್ಚ್ ತಿಂಗಳಲ್ಲಿ ಮುಕ್ತಾಯಗೊಳ್ಳುತ್ತದೆ. ರಾಜ್ಯ ಸರ್ಕಾರ ಚುನಾವಣೆಗಳನ್ನು ನಡೆಸಲು ಕ್ರಮ ಕೈಗೊಳ್ಳದೇ ಆಡಳಿತಾಧಿಕಾರಿಯನ್ನು ನೇಮಿಸಲು ಆದೇಶಿಸಿದೆ’ ಎಂದು ಹೇಳಿದರು.

‘ಆಡಳಿತಾಧಿಕಾರಿ ನೇಮಿಸುವ ಆದೇಶವನ್ನು ಸರ್ಕಾರ ಕೂಡಲೇ ಹಿಂಪಡೆದು, ಈಗಿರುವ ಆಡಳಿತ ಸಮಿತಿಯನ್ನೇ, ನೂತನ ಆಡಳಿತ ಸಮಿತಿಯಾಗಿ ಮುಂದಿನ ಆರು ತಿಂಗಳು ನೇಮಕ ಮಾಡಬೇಕು. 90ರ ದಶಕದಲ್ಲಿ ಗ್ರಾಮ ಪಂಚಾಯಿತಿಗಳ ಅವಧಿಯನ್ನು ವಿಸ್ತರಿಸಿದ್ದನ್ನು ಗಮನಿಸಬಹುದು’ ಎಂದು ತಿಳಿಸಿದರು.

‘2020ರಲ್ಲಿ ಕೋವಿಡ್ ಕಾರಣದಿಂದ ಚುನಾವಣೆ ನಡೆಸಲು ಸಾಧ್ಯವಾಗದೇ, ಗ್ರಾಮ ಪಂಚಾಯಿತಿ ಅವಧಿ ಮುಕ್ತಾಯವಾದ ಸಂದರ್ಭದಲ್ಲಿ, ಆಗ ವಿರೋಧ ಪಕ್ಷದಲ್ಲಿದ್ದ ಡಿ.ಕೆ.ಶಿವಕುಮಾರ್ ಅವರು ಆಡಳಿತ ಸಮಿತಿಯ ಅವಧಿಯನ್ನೇ ಆರು ತಿಂಗಳು ವಿಸ್ತರಿಸಬೇಕು ಎಂದು ಅಂದಿನ ಸರ್ಕಾರವನ್ನು ಒತ್ತಾಯಿಸಿದ್ದರು. ಹಾಗಾಗಿ ಪಂಚಾಯಿತಿಗಳ ಅವಧಿಯನ್ನು ಆರು ತಿಂಗಳು ವಿಸ್ತರಿಸುವ ಮೂಲಕ ಪ್ರಜಾಪ್ರಭುತ್ವದ ಅಡಿಪಾಯ ಗಟ್ಟಿಗೊಳಿಸಬೇಕು’ ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ನೇತೃತ್ವದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು ಪ್ರಜಾವಾಣಿ ಚಿತ್ರ

ಜಾರ್ಜ್ ‘ರಾಜೀನಾಮೆ’ ಸದ್ದು

ಒಂದನೇ ಪುಟದಿಂದ...

‘ಹಿಂದೆಲ್ಲಾ ದಿನಕ್ಕೆ ಮೂರು ಬಾರಿ ನ್ಯೂಸ್ ಬರುತ್ತಿತ್ತು. ಈಗ ಗಂಟೆಗೊಂದು ಬ್ರೇಕಿಂಗ್ ನ್ಯೂಸ್ ಬರುತ್ತಿದೆ. ಅವರೇ (ಸುದ್ದಿ ವಾಹಿನಿಗಳು) ಸೃಷ್ಟಿ ಮಾಡುತ್ತಿದ್ದಾರೆ. ಮಾಧ್ಯಮಗಳಲ್ಲಿ ಬರುತ್ತಿರುವ ಸುದ್ದಿ ಸತ್ಯಕ್ಕೆ ದೂರವಾದದ್ದು. ಬುಧವಾರ ನಡೆದ ಸಿಎಲ್‌ಪಿ ಸಭೆಯಲ್ಲೂ ನಾನು ಭಾಗಿಯಾಗಿದ್ದೆ. ನನಗೆ ಮುಖ್ಯಮಂತ್ರಿ ಹಾಗೂ ಸರ್ಕಾರದ ಮೇಲೆ ಸಂಪೂರ್ಣ ನಂಬಿಕೆ ಮತ್ತು ಬೆಂಬಲ ಇದೆ’ ಎಂದರು.

ಬಳಿಕ ವಿಧಾನಸಭೆಯ ಮೊಗಸಾಲೆಯಲ್ಲಿ ಅನೌಪಚಾರಿಕವಾಗಿ ಮಾತನಾಡಿದ ಜಾರ್ಜ್, ‘ನಾನು ಮುಖ್ಯಮಂತ್ರಿ ಮೇಲೆ ಸಂಪೂರ್ಣ ವಿಶ್ವಾಸ ಹೊಂದಿದ್ದೇನೆ. ಅನಗತ್ಯವಾಗಿ ಸುಳ್ಳು ಸುದ್ದಿ ಹಾಕುವುದು ಯಾಕೆ? ನನ್ನ ಇಲಾಖೆಯಲ್ಲಿ ಯಾರ ಹಸ್ತಕ್ಷೇಪವೂ ಇಲ್ಲ’ ಎಂದು ಮಧ್ಯಮಗಳ ಮೇಲೆ ಬೇಸರ ವ್ಯಕ್ತಪಡಿಸಿದರು.

‘ಒಬ್ಬರು ಸಚಿವರು ರಾಜೀನಾಮೆ ಕೊಡುವುದು ಅಷ್ಟು ಸುಲಭವೇ? ರಾಜೀನಾಮೆ ಕೊಡುತ್ತಾರಾ? ನಾನು ಯಾವ ಅಧಿಕಾರಿಯ ವಿಚಾರದಲ್ಲಿಯೂ ಪಟ್ಟು ಹಿಡಿಯುವುದಿಲ್ಲ. ನಮ್ಮ ಇಲಾಖೆಯಲ್ಲಿ ಯತೀಂದ್ರ (ಸಿದ್ದರಾಮಯ್ಯ ಅವರ ಪುತ್ರ) ಅವರ ಯಾವುದೇ ಹಸ್ತಕ್ಷೇಪ ಇಲ್ಲ. ಅವರು ಒಳ್ಳೆಯವರು. ಅವರಿಗೆ ಯಾಕೆ ಸುಮ್ಮನೆ ಕೆಟ್ಟ ಹೆಸರು’ ಎಂದರು.

‘ನಾನು ಗಣಪತಿ ಪ್ರಕರಣದಲ್ಲಿ ರಾಜೀನಾಮೆ ಕೊಡುವಾಗ ಸುದ್ದಿಗೋಷ್ಠಿ ಮಾಡಿಯೇ ಕೊಟ್ಟಿದ್ದೇನೆ. ನಾನು ಮತ್ತು ಮುಖ್ಯಮಂತ್ರಿ ಪ್ರತಿದಿನ ಮಾತನಾಡುತ್ತೇವೆ. ಅದಕ್ಕೆ ನಿಮ್ಮ ಅನುಮತಿ ಪಡೆಯಬೇಕೇ’ ಎಂದೂ ಪ್ರಶ್ನಿಸಿದರು. ‘ಪಂಕಜ್ ಕುಮಾರ್ ಪಾಂಡೆ ವಿಚಾರ ಎಲ್ಲವೂ ಸೃಷ್ಟಿ ಅಷ್ಟೇ’ ಎಂದರು.

ಅಂಕೇಗೌಡರ ಪುಸ್ತಕ ಮನೆ: ನೆರವಿಗೆ ಸೂಚನೆ

ಬೆಂಗಳೂರು: ಮಂಡ್ಯದ ಅಂಕೇಗೌಡರ ‘ಪುಸ್ತಕ ಮನೆ’ಯಲ್ಲಿ ಪುಸ್ತಕಗಳನ್ನು ಜೋಡಿಸಲು ಅಗತ್ಯವಿರುವ ರ‍್ಯಾಕ್‌ಗಳ ಅಳವಡಿಕೆಗೆ ಅನುದಾನ ಮಂಜೂರು ಮಾಡುವ ಬಗ್ಗೆ ಕಡತ ಮಂಡಿಸಿ ಎಂದು ಸಚಿವ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

‘ಅಂಕೇಗೌಡರು ಪುಸ್ತಕ ಮನೆಯಲ್ಲಿ 25 ಲಕ್ಷಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿದ್ದಾರೆ. ಪುಸ್ತಕಗಳ ನಿರ್ವಹಣೆ ಸಾಧ್ಯವಾಗುತ್ತಿಲ್ಲ ಎಂದು ಮಾಧ್ಯಮಗಳು ವರದಿ ಮಾಡಿವೆ. ಸರ್ಕಾರದಿಂದ ರ‍್ಯಾಕ್ ಒದಗಿಸಬೇಕು’ ಎಂದು ಶಾಸಕ ದಿನೇಶ್ ಗೂಳಿಗೌಡ ಅವರು ಸಚಿವ ಶಿವರಾಜ ತಂಗಡಗಿ ಅವರಿಗೆ ಮನವಿ ಸಲ್ಲಿಸಿದ್ದರು.

ಹೊಸ ನಿಯಮಗಳಿಗೆ ‘ಸುಪ್ರೀಂ’ ತಡೆ

ಒಂದನೇ ಪುಟದಿಂದ...

ಯುಜಿಸಿಯ ನೂತನ ನಿಯಮಗಳನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠ ನಡೆಸಿತು.

ಯುಜಿಸಿ ನಿಯಮ– 2026ಕ್ಕೆ ತಡೆ ನೀಡಿದ ಪೀಠವು, ‘2012ರ ನಿಯಮಗಳು ಮುಂದುವರಿಯಲಿ’ ಎಂದು ಹೇಳಿತು. ತಜ್ಞರನ್ನು ಒಳಗೊಂಡ ಸಮಿತಿಯು ಈ ನಿಯಮಗಳನ್ನು ಪುನರ್ ಪರಿಶೀಲಿಸಬೇಕು ಎಂದೂ ಸೂಚಿಸಿತು. ಹೊಸ ನಿಯಮಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ಯುಜಿಸಿಗೆ ನೋಟಿಸ್ ಜಾರಿಗೊಳಿಸಿದ ಪೀಠವು, ಮಾ. 19ರೊಳಗೆ ಉತ್ತರಿಸುವಂತೆ ನಿರ್ದೇಶಿಸಿತು.

ಹೊಸ ನಿಯಮದಲ್ಲೇನಿದೆ?: ದೇಶದ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಜಾತಿ ತಾರತಮ್ಯದ ದೂರುಗಳನ್ನು ಪರಿಶೀಲಿಸಲು ಮತ್ತು ಸಮಾನತೆಯನ್ನು ಉತ್ತೇಜಿಸಲು ‘ಸಮಾನತೆ ಸಮಿತಿ’ಗಳನ್ನು ಕಡ್ಡಾಯವಾಗಿ ರಚಿಸಬೇಕು ಎಂದು ಯುಜಿಸಿ ಜನವರಿ 13ರಂದು ಹೊರಡಿಸಿದ್ದ ಹೊಸ ನಿಯಮಗಳಲ್ಲಿ ತಿಳಿಸಿತ್ತು.

ಈ ಸಮಿತಿಗಳು ಇತರ ಹಿಂದುಳಿದ ವರ್ಗ (ಒಬಿಸಿ), ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡ (ಎಸ್‌ಟಿ), ಅಂಗವಿಕಲ ಮತ್ತು ಮಹಿಳಾ ಸದಸ್ಯರನ್ನು ಒಳಗೊಂಡಿರಬೇಕು ಎಂದು ಹೇಳಲಾಗಿತ್ತು.

ಈ ನಿಯಮಗಳಲ್ಲಿನ ‘ಜಾತಿ ತಾರತಮ್ಯದ ವ್ಯಾಖ್ಯಾನ’ ಮತ್ತು ಅದರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಮೃತ್ಯುಂಜಯ ತಿವಾರಿ, ವಿನೀತ್ ಜಿಂದಾಲ್, ರಾಹುಲ್ ದಿವಾನ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಜಾತಿ ತಾರತಮ್ಯವನ್ನು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗೆ ಸೇರಿದವರ ವಿರುದ್ಧದ ತಾರತಮ್ಯ ಎಂದು ವ್ಯಾಖ್ಯಾನಿಸಲಾಗಿದೆ. ಉಳಿದಂತೆ ಮೀಸಲು ರಹಿತ ಅಥವಾ ಸಾಮಾನ್ಯ ವರ್ಗದವರಿಗೆ ಸಾಂಸ್ಥಿಕ ರಕ್ಷಣೆಯನ್ನು ಮತ್ತು ಅವರ ಕುಂದುಕೊರತೆಗಳಿಗೆ ಪರಿಹಾರವನ್ನು ನಿರಾಕರಿಸಿರುವುದು ಸರಿಯಲ್ಲ ಎಂದು ಅರ್ಜಿದಾರರು ವಾದಿಸಿದ್ದಾರೆ.

ಈ ನಿಯಮಗಳನ್ನು ವಿರೋಧಿಸಿ ದೇಶದ ವಿವಿಧೆಡೆ ಪ್ರತಿಭಟನೆಗಳು ನಡೆದಿದ್ದವು. ಅಲ್ಲದೆ ವಿವಿಧ ವಿದ್ಯಾರ್ಥಿ ಸಂಘಟನೆಗಳು ಈ ನಿಯಮಗಳನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿದ್ದವು.

‘ವಿಳಂಬವಾದರೂ ಸ್ವಾಗತಾರ್ಹ ಹೆಜ್ಜೆ’

ಒಂದನೇ ಪುಟದಿಂದ...

‘ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಶೇಷವಾಗಿ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳ ಆತ್ಮಹತ್ಯೆ ಹೆಚ್ಚಾಗಿದೆ. ದಕ್ಷಿಣ ಭಾರತ, ಕಾಶ್ಮೀರದ ವಿದ್ಯಾರ್ಥಿಗಳು ಮತ್ತು ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳನ್ನು ಗುರಿಯಾಗಿಸಿ ಕಿರುಕುಳ ನೀಡಲಾಗುತ್ತಿದೆ. ಇಂಥ ಸಂದರ್ಭದಲ್ಲಿ ಈ ಸುಧಾರಣೆ ಅನಿವಾರ್ಯ’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ಕೈ’ ಕಮಿಷನ್ ದುಪ್ಪಟ್ಟು: ಆರೋಪ

ಒಂದನೇ ಪುಟದಿಂದ...

ಮೂರು ವರ್ಷದಿಂದ ಬಿಲ್ ಬಾಕಿ ಬಿಡುಗಡೆ ಆಗದೆ ನಾವು ತೀವ್ರ ಸಂಕಷ್ಟ ಎದುರಿಸುತ್ತಿದ್ದೇವೆ. ಮನೆ, ಚಿನ್ನ ಅಡವಿಟ್ಟು ಹಣ ತಂದು, ಕಾಮಗಾರಿ ಮುಗಿಸಿದ್ದೇವೆ. ಮುಖ್ಯಮಂತ್ರಿಯವರು ಒಂದು ಬಾರಿ ನಮ್ಮ ಸ್ಥಾನದಲ್ಲಿ ನಿಂತು ನೋಡಲಿ’ ಎಂದೂ ಆಗ್ರಹಿಸಿದರು.

‘ಮೂರು ವರ್ಷದ ಹಿಂದೆ ಮುಗಿದಿರುವ ಕಾಮಗಾರಿಗಳಿಗೆ ಬಿಲ್ ಪಾವತಿಸಿಲ್ಲ. ಹಿಂದಿನ ಸರ್ಕಾರ ಮಾಡಿದ್ದು ಎಂದು ಹೇಳುವುದರಲ್ಲಿ ಯಾವುದೇ ಹುರುಳಿಲ್ಲ. ಇವರು ಅಧಿಕಾರಕ್ಕೆ ಬಂದು ಎರಡೂವರೆ ವರ್ಷಗಳಾಗಿವೆ. ಮುಖ್ಯಮಂತ್ರಿ ಅವರು ಆಗಾಗ್ಗೆ ನಮ್ಮನ್ನು ಔಪಚಾರಿಕವಾಗಿ ಭೇಟಿ ಮಾಡಿದ್ದಾರೆಯೇ ಹೊರತು ಅಧಿಕೃತವಾಗಿ ಸಭೆ ಮಾಡಿಲ್ಲ. ನಮ್ಮ ಸಮಸ್ಯೆ ಕೇಳಿಲ್ಲ’ ಎಂದು ದೂರಿದರು.

‘ಸರ್ಕಾರದ ಪ್ರತಿಯೊಂದು ಇಲಾಖೆಯಲ್ಲೂ ಬಿಲ್ ಹಣ ಬಿಡುಗಡೆ ಆಗಬೇಕೆಂದರೆ, ಕಮಿಷನ್ ನೀಡಲೇಬೇಕು. ಹಿಂದಿನ ಸರ್ಕಾರಕ್ಕಿಂತಲೂ ಅದು ಹೆಚ್ಚಾಗೇ ಇದೆ. ನಾವು ಕಷ್ಟಪಟ್ಟು ದುಡಿದಿದ್ದೇವೆ. ನಾವು ಮಾಡಿರುವ ಕೆಲಸಕ್ಕೆ ಹಣ ಬಿಡುಗಡೆ ಮಾಡಿ ಎಂದು ಮನವಿ ಮಾಡಿಕೊಳ್ಳುತ್ತಿದ್ದೇವೆ. ಅದಕ್ಕೆ ಸ್ಪಂದಿಸದಿದ್ದರೆ ಹೋರಾಟವೇ ನಮ್ಮ ಮುಂದಿರುವ ದಾರಿ’ ಎಂದು ಹೇಳಿದರು.

‘ರಾಜ್ಯ ಸರ್ಕಾರ ಗುತ್ತಿಗೆದಾರರಿಗೆ ಇಷ್ಟೊಂದು ಹಣ ಬಾಕಿ ಇರಿಸಿಕೊಂಡುವುದರ ಬಗ್ಗೆ, ಲೋಕಸಭೆಯ ವಿರೋಧ ಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಪತ್ರ ಬರೆದು, ನಮ್ಮ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕೆಂದು ಮನವಿ ಮಾಡಿಕೊಳ್ಳಲು ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು’ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಂ. ನಂದಕುಮಾರ್ ತಿಳಿಸಿದರು.

‘ಕಲ್ಯಾಣ ಕರ್ನಾಟಕಕ್ಕೆ ಅನ್ಯಾಯ’

‘2025–26ನೇ ಸಾಲಿನ ಬಜೆಟ್‌ನಲ್ಲಿ ಕಲ್ಯಾಣ ಕರ್ನಾಟಕಕ್ಕೆ ₹5,000 ಕೋಟಿ ಯೋಜನೆಗಳನ್ನು ಪ್ರಕಟಿಸಲಾಗಿದೆ. ಈವರೆಗೆ ಒಂದೂ ಟೆಂಡರ್ ಮಾಡಿಲ್ಲ. ಕಳೆದ ಬಾರಿಯೂ ಇದೇ ರೀತಿಯಾಗಿ, ಮಾರ್ಚ್‌ನಲ್ಲಿ ಆತುರದಲ್ಲಿ ನಿರ್ಮಿತಿ ಕೇಂದ್ರದವರಿಗೆ ಟೆಂಡರ್ ನೀಡಿದ್ದರು. ಏಳು ಜಿಲ್ಲೆಗಳಿಗೆ ಉಸ್ತುವಾರಿ ಸಚಿವರಿದ್ದರೂ ಕಲ್ಯಾಣ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ’ ಎಂದು ಸಂಘದ ಗೌರವ ಅಧ್ಯಕ್ಷ ಜಗನ್ನಾಥ್ ಬಿ. ಶೇಗಜಿ ಹೇಳಿದರು.

‘ಬಜೆಟ್‌ನಲ್ಲಿ ಮೀಸಲಿಟ್ಟಿರುವ ಹಣವನ್ನು ಆಯಾ ವರ್ಷ ಉಪಯೋಗಿಸದಿದ್ದರೆ ಅದು ‘ಲ್ಯಾಪ್ಸ್’ ಆಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿಯವರ ಗಮನಕ್ಕೂ ತಂದಿದ್ದೇವೆ. ಆದರೆ, ಯಾರೂ ಕ್ರಮ ಕೈಗೊಂಡಿಲ್ಲ’ ಎಂದರು.

ಗಾಳಿಯಲ್ಲಿ ಗುಂಡು ಬೇಡ: ಬೈರತಿ

ಒಂದನೇ ಪುಟದಿಂದ...

‘ಬಿಜೆಪಿ ಸರ್ಕಾರದ ಅವಧಿಯಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ಬಾಕಿ ಇರುವ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಸಂಘದ ಅಧ್ಯಕ್ಷ ಮಂಜುನಾಥ್ ಅವರು, ನನ್ನ ಬಳಿ ಮನವಿ ಮಾಡಿದ್ದರು. ಹಣಕಾಸು ಇಲಾಖೆ ಅನುಮೋದನೆ ಪಡೆದು ಹಂತಹಂತವಾಗಿ ಬಾಕಿ ಇರುವ ₹200 ಕೋಟಿ ಬಿಡುಗಡೆ ಮಾಡಲಾಗುತ್ತದೆ’ ಎಂದು ಬೈರತಿ ಸುರೇಶ್ ತಿಳಿಸಿದರು.

ಶೇ 65 ಲಂಚದ ಸರ್ಕಾರ: ಸುನಿಲ್

ಒಂದನೇ ಪುಟದಿಂದ...

‘ಸರ್ಕಾರದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ ಅವರೇ ಆರೋಪಿಸಿದ್ದಾರೆ. ಕರ್ನಾಟಕ ಗುತ್ತಿಗೆದಾರರ ಸಂಘ ಮುಖ್ಯಮಂತ್ರಿಯವರಿಗೆ ಪತ್ರ ಬರೆದು, ಕಮಿಷನ್ ಹಾವಳಿ ಹಿಂದಿನ ಸರ್ಕಾರಕ್ಕಿಂತ ಈ ಸರ್ಕಾರದಲ್ಲಿ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದು ದೂರಿದೆ’ ಎಂದು ಹೇಳಿದರು.

‘ಬೆಂಗಳೂರಿನಲ್ಲಿ ಕಟ್ಟಡ ನಿರ್ಮಾಣಕ್ಕೆ ಪ್ರತಿ ಚದರ ಅಡಿಗೆ ಇಂತಿಷ್ಟು ಹಣ ನೀಡಬೇಕು ಎಂದು ಬಿಲ್ಡರ್‌ಗಳಿಗೆ ದರ ನಿಗದಿ ಮಾಡಿ ವಸೂಲಿ ಮಾಡಲಾಗುತ್ತಿದೆ. ಜಲ ಸಂಪನ್ಮೂಲ ಇಲಾಖೆಯಲ್ಲಿ ಟೆಂಡರ್, ಎಲ್‌ಒಸಿ ಮತ್ತು ಅಧಿಕಾರಿಗಳ ವರ್ಗಾವಣೆಗೂ ದರ ನಿಗದಿ ಮಾಡಲಾಗಿದೆ. ಭ್ರಷ್ಟಾಚಾರ ಮತ್ತು ದುರಾಡಳಿತಕ್ಕಾಗಿ ಈ ಸರ್ಕಾರವನ್ನು ವಜಾ ಮಾಡಬೇಕು’ ಎಂದು ಸುನಿಲ್ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಸರ್ಕಾರ – ಮುಜರಾಯಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು–571301. ಮೈಸೂರು ಜಿಲ್ಲೆ
ದೂರವಾಣಿ ಸಂಖ್ಯೆ: 08221 228245, ಇ–ಮೇಲ್: etnanjangud@gmail.com
ಸಂ:ಎಸ್‌ಎಸ್‌ಟಿ/ಎ.ಇ/ಡಿ.ವಿ.ಪಿ/13/2025–26 ದಿನಾಂಕ:–22–01–2026

ಪತ್ರಿಕಾ ಟೆಂಡರ್ ಪ್ರಕಟಣೆ

ವಿಷಯ:–ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ 2025–26ನೇ ಸಾಲಿನ ದೊಡ್ಡ ಜಾತ್ರೆಯ ಪ್ರಯುಕ್ತ ರಥೋತ್ಸವದಲ್ಲಿ ಶ್ರೀ ಸ್ವಾಮಿಯವರ ರಥ ಎಳೆಯಲು ಹೆಚ್ಚುವರಿಯಾಗಿ ಅಗತ್ಯವಾದ 350 ಅಡಿ (100 ಮೀಟರ್) ಉದ್ದದ 18 ಇಂಚು ಸುತ್ತಳತೆಯ ಉತ್ತಮ ಗುಣ ಮಟ್ಟದ ತೆಂಗಿನ ನಾರಿನ ಹಗ್ಗವನ್ನು ದೇವಸ್ಥಾನದ ಪ್ರಾಂಗಣದವರೆಗೆ ಸಾಗಾಣಿಕೆ ವೆಚ್ಚ ಸೇರಿ ಸರಬರಾಜು ಮಾಡುವ ಬಗ್ಗೆ.

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ 2025–26ನೇ ಸಾಲಿನ ಪ್ರಯುಕ್ತ ರಥೋತ್ಸವದಲ್ಲಿ ಶ್ರೀ ಸ್ವಾಮಿಯವರ ರಥ ಎಳೆಯಲು ಹೆಚ್ಚುವರಿಯಾಗಿ ಅಗತ್ಯವಾದ 350 ಅಡಿ (100 ಮೀಟರ್) ಉದ್ದದ 18 ಇಂಚು ಸುತ್ತಳತೆಯ ಉತ್ತಮ ಗುಣ ಮಟ್ಟದ ತೆಂಗಿನ ನಾರಿನ ಹಗ್ಗವನ್ನು ದೇವಸ್ಥಾನದ ಪ್ರಾಂಗಣದವರೆಗೆ ವೆಚ್ಚ ಸೇರಿ ಸರಬರಾಜು ಮಾಡುವ ಬಗ್ಗೆ. ಟೆಂಡರ್ ಪ್ರಕಟಣೆ ಹೊರಡಿಸಿದ್ದು, ಸ್ಪರ್ಧಾತ್ಮಕ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹರು ದರಸೂಚಿಯನ್ನು ಮುಚ್ಚಿದ ಲಕೋಟೆಯಲ್ಲಿರಿಸಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯ ನಂಜನಗೂಡು ರವರ ವಿಳಾಸ ದೊಂದಿಗೆ ದಿನಾಂಕ;–09–02–2026 ರಂದು ಸಂಜೆ 4–00ಗಂಟೆಯ ಒಳಗೆ ಸಲ್ಲಿಸತಕ್ಕದ್ದು. ಆ ನಂತರ ಬರುವ ದರಪಟ್ಟಿಗಳನ್ನು ಪರಿಗಣಿಸದೆ ತಿರಸ್ಕರಿಸಲಾಗುವುದು.

ಕ್ರ.ಸಂ.	ವಿಷಯ	ಇ.ಎಂ.ಡಿ ಮೊತ್ತ
1	ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ 2025–26 ನೇ ಸಾಲಿನ ದೊಡ್ಡ ಜಾತ್ರೆಯ ಪ್ರಯುಕ್ತ ರಥೋತ್ಸವದಲ್ಲಿ ಶ್ರೀಯವರ, ರಥ ಎಳೆಯಲು ಹೆಚ್ಚುವರಿಯಾಗಿ ಅಗತ್ಯವಾದ 350 ಅಡಿ (100 ಮೀಟರ್) ಉದ್ದದ 18 ಇಂಚು ಸುತ್ತಳತೆಯ ಉತ್ತಮ ಗುಣ ಮಟ್ಟದ ತೆಂಗಿನ ನಾರಿನ ಹಗ್ಗವನ್ನು ದೇವಸ್ಥಾನದ ಪ್ರಾಂಗಣದವರೆಗೆ ಸಾಗಾಣಿಕೆ ವೆಚ್ಚ ಸೇರಿ ಸರಬರಾಜು ಮಾಡುವ ಬಗ್ಗೆ	10000–00

1. ನಿಗಧಿತ ಅರ್ಜಿ ಶುಲ್ಕ ಪಾವತಿಸಿ, ನಮೂನೆಯನ್ನು ಪಡೆಯತಕ್ಕದ್ದು.
2. ಟೆಂಡರ್‌ದಾರರು ಅರ್ಜಿಯ ಜೊತೆಯಲ್ಲಿ ಇ.ಎಂ.ಡಿಯನ್ನು ಡಿ.ಡಿ. ಮೂಲಕ ಪಾವತಿಸತಕ್ಕದ್ದು,
3. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ;–09–02–2026 ಸಂಜೆ 4.00 ಗಂಟೆ ವರೆಗೆ ಮಾತ್ರ.
4. ಟೆಂಡರ್ ತೆರೆಯುವ ದಿನಾಂಕ;–09–02–2026 ರಂದು ಸಂಜೆ; 5.00 ಗಂಟೆಗೆ,
5. ದರವನ್ನು ನಮೂದಿಸುವಂತೆ ಜಿ.ಎಸ್.ಟಿ. ಸೇರಿ ನಮೂದಿಸುವುದು.
6. ಹೆಚ್ಚಿನ ವಿವರಗಳಿಗೆ ಆಡಳಿತ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 08221–226245.

ಕಾರ್ಯನಿರ್ವಾಹಕ ಅಧಿಕಾರಿಗಳು,
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

ಕರ್ನಾಟಕ ಸರ್ಕಾರ
ತಾಲೂಕಾ ಆಸ್ಪತ್ರೆ, ಜೋಯಿಡಾ – 581186
ಇ–ಮೇಲ್: talukahospitaljoida@gmail.com ದೂರವಾಣಿ: 08383–282703
ಸಂ:ತಾಆಜೋ/ಸಿಬ್ಬಂದಿ/ಹೊರ ಗುತ್ತಿಗೆ/302/2025–26 ದಿನಾಂಕ: 28/01/2026

ಇ–ಟೆಂಡರ್ ಪ್ರಕಟಣೆ

ಉತ್ತರ ಕನ್ನಡ ಜಿಲ್ಲೆಯ ತಾಲೂಕಾ ಆಸ್ಪತ್ರೆ ಜೋಯಿಡಾದಲ್ಲಿ 2026–27 ನೇ ಸಾಲಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಬಾಹ್ಯ ಸಂಪನ್ಮೂಲ ಸಂಸ್ಥೆಯ ಮೂಲಕ ಗ್ರೂಪ್ “ಡಿ” ಮತ್ತು ನಾನ್–ಕ್ಲಿನಿಕಲ್ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಇ–ಟೆಂಡರ್ ಕರೆಯಲಾಗಿರುತ್ತದೆ. ಆದ್ದರಿಂದ ಈ ಕುರಿತು ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂ: 08383–282703 ಕ್ಕೆ ಕಛೇರಿ ಅವಧಿಯಲ್ಲಿ ಬೆಳಿಗ್ಗೆ 09:00 ಗಂಟೆ ಯಿಂದ ಸಾಯಂಕಾಲ 04:30 ಗಂಟೆಯ ವರೆಗೆ ಸಂಪರ್ಕಿಸಬಹುದಾಗಿದೆ.

ವೆಬ್‌ಸೈಟ್ ವಿಳಾಸ: www.kppp.karnataka.gov.in
ಹುದ್ದೆಗಳ ವಿವರ: ಗ್ರೂಪ್ ‘ಡಿ’ ಮತ್ತು ನಾನ್–ಕ್ಲಿನಿಕಲ್ ಸೇವೆಯನ್ನು ಪೂರೈಸಲು, ಪೂರೈಸಬೇಕಾದ ಗ್ರೂಪ್ ‘ಡಿ’ ನಾನ್‌ಕ್ಲಿನಿಕಲ್ ಸೇವೆಯ ನೌಕರರ ಸಂಖ್ಯೆ: 20, ಒಟ್ಟೂ ಟೆಂಡರ ಮೊತ್ತ: 57,85,560.00, ಇ.ಎಂ.ಡಿ ಮೊತ್ತ: 2.5%: 1,44,639.00, ಷರಾ:.....
ಟೆಂಡರ್ ವೇಳಾ ಪಟ್ಟಿ: ವಿವರ: (1) ಟೆಂಡರ್ ಪ್ರಕಟಣೆ ದಿನಾಂಕ: 28–01–2026 (2) ಇ–ಟೆಂಡರ್ ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭಿಸುವ ದಿನಾಂಕ: 29–01–2026 (3) ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 27–02–2026 ಸಂಜೆ 4.00 ಘಂಟೆಗೆ (4) ಇ–ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: 02–03–2026 ಮಧ್ಯಾಹ್ನ 3.00 ಕ್ಕೆ (5) ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: ಟೆಂಡರ್ ಅಂಗೀಕಾರ ಸಮೀತಿಯ ಅನುಮೋದನೆಯ ನಂತರ.
ಕ್ರಮ ಸಂಖ್ಯೆ: 04 ಮತ್ತು 05 ರಲ್ಲಿ ನಮೂದಿಸಿದ ದಿನಾಂಕಗಳಂದು ಸಾರ್ವಜನಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು.

ಸಹಿ/– ಆಡಳಿತ ವೈದ್ಯಾಧಿಕಾರಿ,
ತಾಲೂಕಾ ಆಸ್ಪತ್ರೆ, ಜೋಯಿಡಾ
DIPR/KWR/KSMCA/1004/25-26 dt.29.01.2025

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಶಿವಗಂಗಾ ಲೇಔಟ್,
ಹು.ವಿ.ಸ.ಕಂ.ನಿ., ಹುಬ್ಬಳ್ಳಿ – 580023. ದೂರವಾಣಿ: 0836–2364144, ಫ್ಯಾಕ್ಸ್: 0836–2366184
ಇ–ಮೇಲ್: seehbl.hescom@gmail.com GST No: 29AABCH3176JEZZ
Corporate Identity Number (CIN) : 31401KA2002SGC030437
No:HESCOM/SEE/EEE(O)/AEE-1/F-48/2025-26/4367-70 Dated: 16-01-2026

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ರವರು, ಧಾರವಾಡ ಜಿಲ್ಲಾ ವ್ಯಾಪ್ತಿಯಲ್ಲಿನ ವಿವಿಧ ಕಛೇರಿಗಳಲ್ಲಿ ಅವಶ್ಯವಿರುವ ಸೇವೆಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ.ಪಿ. ಮುಖಾಂತರ ಇಂಡೆಂಟ್: HESCOM/2025-26/SE0679, 680, 681, 682, 683, 684, 685, 686, 687, 688, 689, 690, 691, 692, 693, 694, 695, 696, 697, 698, 699, 700, 701, 702, 703, 704, 705, 706, 707, 710, 711, 712, 713, 714, 715, 716, 717 and 718 ಗಳ ಪ್ರಕಾರ ಟೆಂಡರನ್ನು ಆಹ್ವಾನಿಸಿರುತ್ತಾರೆ.
ಸದರಿ ಟೆಂಡರಿನ ಪೂರ್ಣ ವಿವರಗಳನ್ನು ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 31–01–2026 ರ ನಂತರ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ಮೊಬೈಲ್ ಸಂಖ್ಯೆ: 9480883827 / 9448370227 ಗಳ ಮೂಲಕ ಸಂಪರ್ಕಿಸಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನೀಯರರು (ವಿ),
ಕಾರ್ಯ ಮತ್ತು ಪಾಲನೆ ವೃತ್ತ,
ಹು.ವಿ.ಸ.ಕಂ.ನಿ., ಹುಬ್ಬಳ್ಳಿ.
ವಾಸಾಸಂಇ/ಧಾರವಾಡ/1162/ಅಡ್ವರ್ಟೋ/2025–26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ,
ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ. ದೂರವಾಣಿ: 08426–281027.
ಇ–ಮೇಲ್: dam_division@rediffmail.com
ಸಂ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2025–26/2798
ದಿನಾಂಕ:27.01.2026

ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ಸುರಕ್ಷತಾ ಘಟಕ–2 ಆಲಮಟ್ಟಿ, ತಾ: ನಿಡಗುಂದಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Percentage basis & Service tenders from from the eligible contractors for the work indents of **Two Cover** – (1) I .No. SE0260 – 72.22 Lakhs, **Single Cover** (2) I.No. 2710- 10.14 Lakh
ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ KW ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.
1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: **28.01.2026** ರಿಂದ **13.02.2026** ಸಾಯಂಕಾಲ 5.00 ಘಂಟೆಯವರೆಗೆ
2. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ (Two Cover)** & ಆರ್ಥಿಕ ಬಿಡ್ ತೆರೆಯುವ **ದಿನಾಂಕ (Single Cover): 17.02.2026 ಮುಂಜಾನೆ 11.00 ಘಂಟೆಗೆ.**
3. ಆರ್ಥಿಕ ಬಿಡ್ ತೆರೆಯುವ **ದಿನಾಂಕ (Two Cover): 20.02.2026 ಮುಂಜಾನೆ 11.00 ಘಂಟೆಗೆ.**
ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. https://kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ.
ವಾಸಾಸಂಇ/ವಿಜಯಪುರ/642/ಕೆಎಸ್‌ಎಂಸಿಎ/2025–26

ಫೈನಲ್‌ಗೆ ಆರ್‌ಸಿಬಿ ಲಗ್ಗೆ

ಹ್ಯಾರಿಸ್, ಮಂದಾನ ಅರ್ಧಶತಕ • ಕ್ಲರ್ಕ್‌ಗೆ ನಾಲ್ಕು ವಿಕೆಟ್ • ವಾರಿಯರ್ಸ್‌ಗೆ ನಿರಾಸೆ

ಮಹಿಳಾ ಪ್ರೀಮಿಯರ್ ಲೀಗ್

ವಡೋದರ (ಪಿಟಿಐ): ನದೀನ್ ಡಿ ಕ್ಲರ್ಕ್ ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ಬಳಿಕ ಗ್ರೇಸ್ ಹ್ಯಾರಿಸ್ ಮತ್ತು ಸ್ಮೃತಿ ಮಂದಾನ ಅವರು ಮಿಂಚಿನ ಶತಕದ ಜೊತೆಯಾಟವಾಡಿದರು. ಇದರಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗುರುವಾರ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಫೈನಲ್‌ಗೆ ಲಗ್ಗೆ ಹಾಕಿತು.

ಕೋತಂಬಿ ಕ್ರೀಡಾಂಗಣದಲ್ಲಿ ಸ್ಮೃತಿ ಮಂದಾನ ನಾಯಕತ್ವದ ತಂಡವು ಲೀಗ್ ಹಂತದ ತನ್ನ ಕೊನೆಯ ಪಂದ್ಯದಲ್ಲಿ ಎಂಟು ವಿಕೆಟ್‌ಗಳಿಂದ ಯು.ಪಿ ವಾರಿಯರ್ಸ್ ತಂಡವನ್ನು ಸುಲಭವಾಗಿ ಮಣಿಸಿತು. ಎರಡನೇ ಕಿರೀಟದ ನಿರೀಕ್ಷೆಯಲ್ಲಿರುವ 2024ರ ಚಾಂಪಿಯನ್ ಆರ್‌ಸಿಬಿ ತಂಡವು ಎಲಿಮಿನೇಟರ್ ಪಂದ್ಯದ ವಿಜೇತರನ್ನು ಫೆ.5ರಂದು ಫೈನಲ್‌ನಲ್ಲಿ ಎದುರಿಸಲಿದೆ. ಈ ಸೋಲಿನೊಂದಿಗೆ ವಾರಿಯರ್ಸ್ ತಂಡದ ಪ್ಲೇ ಆಫ್ ಕನಸು ಭಗ್ನಗೊಂಡಿತು.

ಮೊದಲು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ವಾರಿಯರ್ಸ್ ತಂಡಕ್ಕೆ ಕ್ಲರ್ಕ್ (22ಕ್ಕೆ 4) ಮತ್ತು ಹ್ಯಾರಿಸ್ (22ಕ್ಕೆ 2) ಕಡಿವಾಣ ಹಾಕಿದರು. ಮೆಗ್ ಲ್ಯಾನಿಂಗ್ (41; 30ಎ, 4X6, 6X1) ಮತ್ತು ದೀಪ್ತಿ ಶರ್ಮಾ (55; 43ಎ, 4X6, 6X1) ಅವರ ಆಟದ ನೆರವಿನಿಂದ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 143 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಗುರಿ ಬೆನ್ನತ್ತಿದ ಬೆಂಗಳೂರು ತಂಡಕ್ಕೆ ಹ್ಯಾರಿಸ್ (75;37ಎ, 4x13, 6x2) ಮತ್ತು ಮಂದಾನ (ಔಟಾಗದೇ 54;27ಎ, 4x8, 6x2) ಅವರು ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ಬಿರುಸಿನ 108 (55ಎ) ರನ್ ಪೇರಿಸಿದರು. ಹ್ಯಾರಿಸ್ ಔಟಾದ ಬಳಿಕ ಜಾರ್ಜಿಯಾ ವೋಲ್ (16) ಅವರೊಂದಿಗೆ ಮಂದಾನ ತಂಡವನ್ನು ಜಯದತ್ತ ಕೊಂಡೊಯ್ದರು. 41 ಎಸೆತಗಳು ಬಾಕಿ ಇರುವಂತೆ ಎರಡು ವಿಕೆಟ್‌ಗೆ 147 ರನ್ ಗಳಿಸಿ ಗೆಲುವಿನ ಹಳಿಗೆ ಮರಳಿತು. ಮಂದಾನ ಹಾಲಿ ಆವೃತ್ತಿಯಲ್ಲಿ ಎರಡನೇ ಮತ್ತು ಲೀಗ್‌ನಲ್ಲಿ ಆರನೇ ಅರ್ಧಶತಕ ದಾಖಲಿಸಿದರು.

ಇದಕ್ಕೂ ಮೊದಲು ವಾರಿಯರ್ಸ್ ತಂಡದ ಆರಂಭಿಕ ಜೋಡಿ ಲ್ಯಾನಿಂಗ್ ಮತ್ತು ದೀಪ್ತಿ ಮೊದಲ ವಿಕೆಟ್ ಜೊತೆಯಾಟದಲ್ಲಿ 74 ರನ್ ಸೇರಿಸಿದರು. ಅದೂ ಎಂಟು ಓವರ್‌ಗಳಲ್ಲಿ. ಇದರಿಂದಾಗಿ ತಂಡವು ಉತ್ತಮ ಮೊತ್ತ ಗಳಿಸುವ ಭರವಸೆ ಮೂಡಿತ್ತು. ಆದರೆ, ನಂತರದಲ್ಲಿ ದಕ್ಷಿಣ ಆಫ್ರಿಕಾದ ಕ್ಲರ್ಕ್ ದಾಳಿಗೆ ಕುಸಿಯಿತು.

ಲ್ಯಾನಿಂಗ್ ಅವರ ವಿಕೆಟ್ ಗಳಿಸುವ ಮೂಲಕ ಕ್ಲಕ್ ಮೊದಲ ವಿಕೆಟ್ ಜೊತೆಯಾಟ ಮುರಿದರು. ಅದೇ ಓವರ್‌ನಲ್ಲಿ ಎಮಿ ಜೋನ್ಸ್ (1 ರನ್) ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಉತ್ತಮ ಲಯದಲ್ಲಿದ್ದ ಹರ್ಲೀನ್ ಡಿಯೊಲ್ (14; 14ಎ) ಅವರನ್ನು ಕ್ಲೀನ್‌ಬೌಲ್ಡ್ ಮಾಡುವಲ್ಲಿ ಹ್ಯಾರಿಸ್ ಸಫಲರಾದರು. ಇದು ಮಧ್ಯಮ ಕ್ರಮಾಂಕದ ಮೇಲೆ ಒತ್ತಡ ಹೆಚ್ಚು ಹಾಕಿತು. ಎರಡು ಓವರ್ ನಂತರ ಗ್ರೇಸ್ ಮತ್ತೊಂದು ಆಘಾತ ನೀಡಿದರು. ಕ್ಲೊಯೆ ಟ್ರಯಾನ್ ವಿಕೆಟ್ ಗಳಿಸಿದರು. ಇದೆಲ್ಲದರ ನಡುವೆ ದೀಪ್ತಿ ಅರ್ಧಶತಕದ ಗಡಿ ದಾಟಿದರು. ಶ್ರೇಯಾಂಕಾ ಪಾಟೀಲ ಹಾಕಿದ 19ನೇ ಓವರ್‌ನಲ್ಲಿ ದೀಪ್ತಿ ಅವರು ಕ್ಲರ್ಕ್ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು.

ಸಂಕ್ಷಿಪ್ತ ಸ್ಕೋರು: ಯುಪಿ ವಾರಿಯರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 143 (ಮೆಗ್ ಲ್ಯಾನಿಂಗ್ 41, ದೀಪ್ತಿ ಶರ್ಮಾ 55, ನದೀನ್ ಡಿ ಕ್ಲರ್ಕ್ 22ಕ್ಕೆ4, ಗ್ರೇಸ್ ಹ್ಯಾರಿಸ್ 22ಕ್ಕೆ2). ರಾಯಲ್ ಚಾಲೆಂಜರ್ಸ್ ಬೆಂಗಳೂರು: 13.1 ಓವರ್‌ಗಳಲ್ಲಿ 2 ವಿಕೆಟ್‌ಗೆ 147 (ಗ್ರೇಸ್ ಹ್ಯಾರಿಸ್ 75, ಸ್ಮೃತಿ ಮಂದಾನ ಔಟಾಗದೇ 54; ಆಶಾ ಶೋಭನಾ 24ಕ್ಕೆ 1). ಪಂದ್ಯದ ಆಟಗಾರ್ತಿ: ಗ್ರೇಸ್ ಹ್ಯಾರಿಸ್.

ಇಂದಿನ ಪಂದ್ಯ
ಗುಜರಾತ್ ಜೈಂಟ್ಸ್– ಮುಂಬೈ ಇಂಡಿಯನ್ಸ್ (ರಾತ್ರಿ 7.30)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅರ್ಧಶತಕ ದಾಖಲಿಸಿದ ಗ್ರೇಸ್ ಹ್ಯಾರಿಸ್ ಪಿಟಿಐ ಚಿತ್ರ

ಸ್ಮೃತಿ ಮಂದಾನ

ಮಹಿಳಾ ಪ್ರೀಮಿಯರ್ ಲೀಗ್: ಅಂಕ ಪಟ್ಟಿ

	ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
1	ರಾಯಲ್ ಚಾಲೆಂಜರ್ಸ್ ಬೆಂಗಳೂರು	8	6	2	12	1.247
2	ಗುಜರಾತ್ ಜೈಂಟ್ಸ್	7	4	3	8	-0.271
3	ಮುಂಬೈ ಇಂಡಿಯನ್ಸ್	7	3	4	6	0.146
4	ಡೆಲ್ಲಿ ಕ್ಯಾಪಿಟಲ್ಸ್	7	3	4	6	-0.164
5	ಯು.ಪಿ.ವಾರಿಯರ್ಸ್	7	2	5	4	-1.146

ಅಭಿಜಿತ್ ಅರ್ಧಶತಕ • ವಿದ್ಯಾಧರ್, ಶ್ರೇಯಸ್ ಉತ್ತಮ ಬೌಲಿಂಗ್

ಪಂಜಾಬ್‌ಗೆ ಇಮಾನ್ಜೋತ್ ಆಸರೆ

ಮೊಹಾಲಿ (ಪಿಟಿಐ): ಇಮಾನ್ಜೋತ್ ಸಿಂಗ್ ಅವರ ತಾಳ್ಮೆಯ ಬ್ಯಾಟಿಂಗ್ ಬಲ ದಿಂದ ಪಂಜಾಬ್ ತಂಡವು ಗುರುವಾರ ಆರಂಭವಾದ ರಣಜಿ ಟ್ರೋಫಿ ಬಿ ಗುಂಪಿನಲ್ಲಿ ಕರ್ನಾಟಕ ಎದುರಿನ ಪಂದ್ಯದಲ್ಲಿ ಉತ್ತಮ ಮೊತ್ತ ಪೇರಿಸಿತು.

ಮೊಹಾಲಿಯ ಐ.ಎಸ್. ಬಿಂದ್ರಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಟಾಸ್ ಗೆದ್ದ ಪಂಜಾಬ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಇಮಾನ್ಜೋತ್ (ಬ್ಯಾಟಿಂಗ್ 77; 134ಎ, 4X8, 6X1) ಅವರ ಆಟದ ಬಲದಿಂದ ತಂಡವು ದಿನದಾಟದ ಮುಕ್ತಾಯಕ್ಕೆ 91 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 303 ರನ್ ಗಳಿಸಿತು.

ಇನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿ ವಿದ್ಯಾಧರ್ ಪಾಟೀಲ ಅವರ ನಿಖರ ದಾಳಿಯಿಂದಾಗಿ ಪ್ರಭಸಿಮ್ರನ್ ಸಿಂಗ್ ಅವರು ಶಿಖರ್ ಶೆಟ್ಟಿಗೆ ಕ್ಯಾಚಿತ್ತರು. ಈ ಸಂದರ್ಭದಲ್ಲಿ ಅಭಿಜಿತ್ ಗರ್ಗ್ (81; 133ಎ, 4X8, 6X2) ಮತ್ತು ನಾಯಕ ಉದಯ್ ಸಹರಾನ್ (44; 72ಎ, 4X6, 6X1) ಎರಡನೇ ವಿಕೆಟ್ ಜೊತೆಯಾಟದಲ್ಲಿ 102 ರನ್ ಸೇರಿಸಿದರು. ಇದರಿಂದಾಗಿ ತಂಡವು ದೊಡ್ಡಮೊತ್ತ ಪೇರಿಸುವ ನಿರೀಕ್ಷೆ ಮೂಡಿತ್ತು.

ಆದರೆ ವಿದ್ಯಾಧರ್ (46ಕ್ಕೆ3) ಮತ್ತು ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ (48ಕ್ಕೆ3) ಅವರ ಉತ್ತಮ ಬೌಲಿಂಗ್ ಎದುರು ಪಂಜಾಬ್ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ವಿಫಲರಾದರು. ಇದರಿಂದಾಗಿ ತಂಡವು 168 ರನ್‌ಗಳಿಗೆ 6 ವಿಕೆಟ್ ಕಳೆದು ಕೊಂಡಿತ್ತು. 60 ರನ್‌ಗಳ ಅಂತರದಲ್ಲಿ ನಾಲ್ಕು ವಿಕೆಟ್‌ಗಳು ಪತನವಾದವು.

ಈ ಸಂದರ್ಭದಲ್ಲಿ ಚಾಹಲ್ ಅವರು ತಂಡಕ್ಕೆ ಆಸರೆಯಾದರು. ಆಯುಷ್ ಗೋಯಲ್ (23; 82ಎ) ಜೊತೆಗೂಡಿ 81 ರನ್ ಕಲೆಹಾಕಿದರು. ಇದರಿಂದಾಗಿ ಪಂಜಾಬ್ ಇನಿಂಗ್ಸ್‌ಗೆ ಮರುಜೀವ ಬಂದಿತು. ಇಮಾನ್ಜೋತ್ ಅವರು ಎರಡು ವರ್ಷಗಳ ನಂತರ ಪಂಜಾಬ್ ತಂಡಕ್ಕೆ ಮರಳಿದ್ದಾರೆ. ಎಡಗೈ ಸ್ಪಿನ್ನರ್ ಮತ್ತು ಬಲಗೈ ಬ್ಯಾಟರ್ ಆಗಿರುವ ಸಿಂಗ್ ಕರ್ನಾಟಕದ ಸ್ಪಿನ್ನರ್‌ಗಳನ್ನು ಎಚ್ಚರಿಕೆಯಿಂದ ಎದುರಿಸಿದರು. ಸ್ವೀಪ್, ಬ್ಯಾಕ್‌ಫುಟ್ ಪಂಚ್ ಪ್ರಯೋಗಿಸಿದರು. ಭಾರತ ತಂಡದ ವೇಗಿ ಪ್ರಸಿದ್ಧ ಎಂ ಕೃಷ್ಣ ಅವರನ್ನೂ ಏಕಾಗ್ರತೆಯಿಂದ ಎದುರಿಸಿದ ಸಿಂಗ್ ಅವರು ಎರಡನೇ ದಿನಕ್ಕೂ ಆಟ ಉಳಿಸಿಕೊಂಡಿದ್ದಾರೆ. ಹತ್ತನೇ ಕ್ರಮಾಂಕದ ಬ್ಯಾಟರ್ ಸುಖದೀಪ್ ಭಜ್ವಾ (20; 13ಎ, 4X4) ಅವರಿಗೆ ಶಿಖರ್ ಶೆಟ್ಟಿ ಅವರು ಕ್ಯಾಚ್ ಬಿಟ್ಟು ಜೀವದಾನ ನೀಡಿದರು. 89ನೇ ಓವರ್‌ನಲ್ಲಿ ಪ್ರಸಿದ್ಧ ಕೃಷ್ಣ ಸುಖದೀಪ್ ಅವರ ವಿಕೆಟ್ ಕಬಳಿಸಿದರು.

ನಾಕೌಟ್ ಹಂತ ಪ್ರವೇಶಿಸಲು ಕರ್ನಾಟಕ ತಂಡಕ್ಕೆ ಈ ಪಂದ್ಯದಲ್ಲಿ ಜಯ ಸಾಧಿಸುವ ಒತ್ತಡವಿದೆ. ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಈ ಪಂದ್ಯದ ಮೂಲಕ ನಾಯಕನಾಗಿ ಪದಾರ್ಪಣೆ ಮಾಡಿದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್: 91 ಓವರ್‌ಗಳಲ್ಲಿ 9ಕ್ಕೆ303 (ಅಭಿಜಿತ್ ಗರ್ಗ್ 81, ಉದಯ ಸಹರಾನ್ 44, ಇಮಾನ್ಜೋತ್ ಸಿಂಗ್ ಚಾಹಲ್ ಬ್ಯಾಟಿಂಗ್ 77, ಆಯುಷ್ ಗೋಯಲ್ 23, ಸುಖದೀಪ್ ಭಜ್ವಾ 20, ವಿದ್ಯಾಧರ್ ಪಾಟೀಲ 46ಕ್ಕೆ3, ಮೊಹ್ಸಿನ್ ಖಾನ್ 85ಕ್ಕೆ2, ಶ್ರೇಯಸ್ ಗೋಪಾಲ್ 48ಕ್ಕೆ3) ವಿರುದ್ಧ ಕರ್ನಾಟಕ.

ಕರ್ನಾಟಕದ ವಿದ್ಯಾಧರ್ ಪಾಟೀಲ ಬೌಲಿಂಗ್ ಪ್ರಜಾವಾಣಿ ಸಂಗ್ರಹ ಚಿತ್ರ

ಮುಖ್ಯಾಂಶಗಳು
- ನಾಯಕನಾಗಿ ದೇವದತ್ತ ಪಡಿಕ್ಕಲ್ ಪದಾರ್ಪಣೆ
- ತಂಡದಲ್ಲಿ ಕೆ.ಎಲ್. ರಾಹುಲ್, ಪ್ರಸಿದ್ಧಕೃಷ್ಣ

ಸೌರಾಷ್ಟ್ರಕ್ಕೆ ಮುನ್ನಡೆ

ಚಂಡೀಗಢ: ನಾಕೌಟ್ ಹಂತ ಪ್ರವೇಶಿಸುವ ಪೈಪೋಟಿಯಲ್ಲಿರುವ ಸೌರಾಷ್ಟ್ರ ತಂಡವು ಚಂಡೀಗಢ ಎದುರಿನ ಪಂದ್ಯದ ಮೊದಲ ದಿನವೇ ಪ್ರಥಮ ಇನಿಂಗ್ಸ್ ಮುನ್ನಡೆ ಸಾಧಿಸಿತು.

ಸೆಕ್ಟರ್ –16 ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಸೌರಾಷ್ಟ್ರ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅನುಭವಿ ಮಧ್ಯಮವೇಗಿ ಜಯದೇವ್ ಉನದ್ಕತ್ (44ಕ್ಕೆ4), ಚೇತನ್ ಸಕಾರಿಯಾ (43ಕ್ಕೆ2) ಮತ್ತು ಚಿರಾಗ್ ಜಾನಿ (18ಕ್ಕೆ2) ಅವರ ಅಮೋಘ ದಾಳಿಯಿಂದಾಗಿ ಚಂಡೀಗಢ ತಂಡವು 136 ರನ್‌ಗಳಿಗೆ ಕುಸಿಯಿತು.

ಇದಕ್ಕುತ್ತರವಾಗಿ ಸೌರಾಷ್ಟ್ರ ತಂಡವು ದಿನದಾಟದ ಮುಕ್ತಾಯಕ್ಕೆ38 ಓವರ್‌ಗಳಲ್ಲಿ 1 ವಿಕೆಟ್‌ಗೆ 167 ರನ್ ಗಳಿಸಿತು. ಹರ್ವಿಕ್ ದೇಸಾಯಿ (ಔಟಾಗದೇ 80) ಮತ್ತು ಜೈ ಗೋಹಿಲ್ (ಬ್ಯಾಟಿಂಗ್ 61) ಕ್ರೀಸ್‌ನಲ್ಲಿದ್ದಾರೆ. ಸೌರಾಷ್ಟ್ರವು ಒಟ್ಟು 31 ರನ್‌ಗಳ ಮುನ್ನಡೆ ಸಾಧಿಸಿದೆ.

ಹಂಗರಗೇಕರ್ ದಾಳಿಗೆ ಕುಸಿದ ಮಧ್ಯಪ್ರದೇಶ

ಇಂದೋರ್: ಮಹಾರಾಷ್ಟ್ರದ ವೇಗಿ ರಾಜವರ್ಧನ್ ಹಂಗರಗೇಕರ್ (44ಕ್ಕೆ5) ಅವರ ಪರಿಣಾಮಕಾರಿ ದಾಳಿಯ ಮುಂದೆ ಮಧ್ಯಪ್ರದೇಶ ತಂಡವು ಅಲ್ಪಮೊತ್ತಕ್ಕೆ ಕುಸಿಯಿತು.

ಗುರುವಾರ ಹೋಳ್ಕರ್ ಮೈದಾನದಲ್ಲಿ ಆರಂಭವಾದ ರಣಜಿ ಟ್ರೋಫಿ ಕೊನೆಯ ಸುತ್ತಿನ ಪಂದ್ಯದಲ್ಲಿ ಆತಿಥೇಯ ಮಧ್ಯಪ್ರದೇಶ ತಂಡವು 61 ಓವರ್‌ಗಳಲ್ಲಿ 187 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ವೆಂಕಟೇಶ್ ಅಯ್ಯರ್ (39; 50ಎ, 4X4, 6X2) ಅವರು ತಂಡದ ಅತ್ಯಧಿಕ ವೈಯಕ್ತಿಕ ಸ್ಕೋರ್ ಗಳಿಸಿದ ಬ್ಯಾಟರ್ ಆದರು.

ಇನಿಂಗ್ಸ್ ಆರಂಭಿಸಿದ ಮಹಾರಾಷ್ಟ್ರ ತಂಡವು ಮೊದಲ ದಿನದಾಟದ ಮುಕ್ತಾಯಕ್ಕೆ 13.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 52 ರನ್ ಗಳಿಸಿದೆ. ಪೃಥ್ವಿ ಶಾ 17 ಎಸೆತಗಳಲ್ಲಿ 14 ರನ್ ಗಳಿಸಿದರು. ಕುಲದೀಪ್ ಸೇನ್ ಬೌಲಿಂಗ್‌ನಲ್ಲಿ ಹಿಮಾಂಶು ಮಂತ್ರಿಗೆ ಕ್ಯಾಚಿತ್ತರು.

ಅರ್ಷಿನ್ ಕುಲಕರ್ಣಿ (27; 33ಎ, 4X5) ಅವರು ಕುಮಾರ್ ಕಾರ್ತಿಕೆಯ ಸಿಂಗ್ ಅವರ ಬೌಲಿಂಗ್‌ನಲ್ಲಿ ರಜತ್ ಪಾಟೀದಾರ್ ಅವರಿಗೆ ಕ್ಯಾಚಿತ್ತರು. ನೀರಜ್ ಜೋಶಿ (ಔಟಾಗದೇ 4) ಕ್ರೀಸ್‌ನಲ್ಲಿದ್ದಾರೆ.

ಈಚೆಗೆ ಮಧ್ಯಪ್ರದೇಶ ತಂಡವು ಬೆಂಗಳೂರು ಸನಿಹದ ಆಲೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಕರ್ನಾಟಕದ ಎದುರು ಜಯಭೇರಿ ಬಾರಿಸಿತ್ತು.

ಚಿಟಿಕೆ ಸುದ್ದಿ

ಆಸ್ಟ್ರೇಲಿಯಾ ತಂಡಕ್ಕೆ ಸೋಫಿ ನಾಯಕಿ

ಸಿಡ್ನಿ (ಪಿಟಿಐ): ಆಸ್ಟ್ರೇಲಿಯಾ ಮಹಿಳಾ ಟಿ20 ಕ್ರಿಕೆಟ್ ತಂಡಕ್ಕೆ ಸೋಫಿ ಮಾಲಿನೆ ಅವರನ್ನು ನೂತನ ನಾಯಕಿಯನ್ನಾಗಿ ನೇಮಕ ಮಾಡಲಾಗಿದೆ. ಏಕದಿನ ಮತ್ತು ಟೆಸ್ಟ್ ಕ್ರಿಕೆಟ್ ತಂಡಗಳಿಗೆ ಅಲಿಸಾ ಹೀಲಿ ಅವರು ನಾಯಕಿಯಾಗಿದ್ದಾರೆ.

ಮುಂದಿನ ತಿಂಗಳು ಭಾರತ ತಂಡವು ಆಸ್ಟ್ರೇಲಿಯಾಕ್ಕೆ ತೆರಳಲಿದೆ. ಅದರಲ್ಲಿ ಆಸ್ಟ್ರೇಲಿಯಾ ಟಿ20 ಕ್ರಿಕೆಟ್ ತಂಡವನ್ನು ಸೋಫಿ ಮುನ್ನಡೆಸಲಿದ್ದಾರೆ.

ಹಾಕಿ ಮಾಜಿ ಕೋಚ್ ನಾಬ್ಸ್ ನಿಧನ

ಮೆಲ್ಬರ್ನ್ (ಪಿಟಿಐ): ಲಂಡನ್ ಒಲಿಂಪಿಕ್ಸ್ (2012) ಸಂದರ್ಭದಲ್ಲಿ ಭಾರತ ಪುರುಷರ ಹಾಕಿ ತಂಡದ ಕೋಚ್ ಆಗಿದ್ದ ಆಸ್ಟ್ರೇಲಿಯಾದ ಮಾಜಿ ಆಟಗಾರ ಮೈಕೆಲ್ ನಾಬ್ಸ್ (72) ಅವರು ಅನಾರೋಗ್ಯದಿಂದ ಗುರುವಾರ ನಿಧನರಾದರು.

ಅವರಿಗೆ ಪತ್ನಿ ಲೀ ಕೇಪ್ಸ್ ಮತ್ತು ಪುತ್ರಿ ಕೈಟ್ಲಿನ್ ಇದ್ದಾರೆ. ಲೀ ಕೇಪ್ಸ್ ಅವರೂ ಅಂತರರಾಷ್ಟ್ರೀಯ ಆಟಗಾರ್ತಿ ಯಾಗಿದ್ದರು. ಕೈಟ್ಲಿನ್ ಹಾಲಿ ಆಸ್ಟ್ರೇಲಿಯಾ ತಂಡದಲ್ಲಿ ಆಡುತ್ತಿದ್ದಾರೆ. 2008ರಲ್ಲಿ ಭಾರತ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಲು ವಿಫಲವಾದ ನಂತರ ನಾಬ್ಸ್ ಅವರನ್ನು ಕೋಚ್ ಆಗಿ ನೇಮಕ ಮಾಡಲಾಗಿತ್ತು.

ಕೇರಳಕ್ಕೆ 36–0 ಜಯ

ಬೆಂಗಳೂರು: ಗೋಲುಗಳ ಮಳೆಗರೆದ ಕೇರಳ ತಂಡವು ಗುರುವಾರ ನಡೆದ ಖೇಲೊ ಇಂಡಿಯಾ– ಅಸ್ಮಿತಾ 13 ವರ್ಷದೊಳಗಿನ ಬಾಲಕಿಯರ ಫುಟ್‌ಬಾಲ್ ಲೀಗ್ (ದಕ್ಷಿಣ ವಲಯ) ಪಂದ್ಯದಲ್ಲಿ 36–0ಯಿಂದ ಅಂಡಮಾನ್ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕೇರಳ ಪರ ದಿವ್ಯಾ ಯು. ಅವರು 15 ಗೋಲುಗಳನ್ನು ಬಾರಿಸಿದರೆ, ಶಜಾನಾ ಇ.ಬಿ. 11 ಗೋಲುಗಳನ್ನು ದಾಖಲಿಸಿದರು.

‘ಲೈಂಗಿಕ ಹಗರಣ: ವಿಚಾರಣೆ ಪ್ರಕ್ರಿಯೆಗೆ ತಡೆ ಇಲ್ಲ’

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ನಿಕಟಪೂರ್ವ ಅಧ್ಯಕ್ಷ, ಬಿಜೆಪಿಯ ಮಾಜಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಕೆಲವು ಮಹಿಳಾ ಕುಸ್ತಿಪಟುಗಳು ದಾಖಲಿಸಿರುವ ಲೈಂಗಿಕ ಕಿರುಕುಳ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಯ ಮೇಲೆ ಯಾವುದೇ ತಡೆ ಹೇರಿಲ್ಲ ಎಂದು ದೆಹಲಿ ಹೈಕೋರ್ಟ್ ಗುರುವಾರ ಸ್ಪಷ್ಟಪಡಿಸಿದೆ.

ಡಬ್ಲ್ಯುಎಫ್‌ಐ ಮುಖ್ಯಸ್ಥರ ಮೇಲಿನ ಎಫ್‌ಐಆರ್ ಹಾಗೂ ಅವರ ವಿರುದ್ಧ ಆರೋಪಗಳನ್ನು ರದ್ದುಪಡಿಸುವಂತೆ ಸಲ್ಲಿಸಿರುವ ಅರ್ಜಿಯನ್ನು ಏಪ್ರಿಲ್ 21ರಂದು ವಿಚಾರಣೆಗೆ ಪಟ್ಟಿ ಮಾಡುವ ವೇಳೆ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಈ ಸ್ಪಷ್ಟನೆ ನೀಡಿದರು.

ಆಸ್ಟ್ರೇಲಿಯಾ ಓಪನ್: ಸತತ ನಾಲ್ಕನೇ ಬಾರಿ ಪ್ರಶಸ್ತಿ ಸುತ್ತಿಗೆ ಸಬಲೆಂಕಾ

ಹೋರಾಡಿ ಗೆದ್ದ ರಿಬಾಕಿನಾ ಫೈನಲ್‌ಗೆ

ಮೆಲ್ಬರ್ನ್ (ರಾಯಿಟರ್ಸ್/ ಎಎಫ್‌ಪಿ): ಉಕ್ರೇನಿನ ಎಲಿನಾ ಸ್ವಿಟೊಲಿನಾ ಅವರನ್ನು ಗುರುವಾರ ನಡೆದ ಸೆಮಿಫೈನಲ್‌ನಲ್ಲಿ 6–2, 6–3 ರಿಂದ ನೇರ ಸೆಟ್‌ಗಳಲ್ಲಿ ಮಣಿಸಿದ ಬೆಲರೂಸ್‌ನ ಅರಿನಾ ಸಬಲೆಂಕಾ ಸತತ ನಾಲ್ಕನೇ ಬಾರಿ ಆಸ್ಟ್ರೇಲಿಯನ್ ಓಪನ್ ಫೈನಲ್‌ಗೆ ಮುನ್ನುಗ್ಗಿದರು. ಈ ಎರಡು ದೇಶಗಳ ನಡುವಣ ರಾಜಕೀಯ ವೈಷಮ್ಯದ ನೆರಳು ಆಟದ ಮೇಲೂ ಆವರಿಸಿತು.

ವಿಶ್ವದ ಅಗ್ರಮಾನ್ಯ ಆಟಗಾರ್ತಿ ಸಬಲೆಂಕಾ ಅವರು ಶನಿವಾರ ನಡೆಯುವ ಫೈನಲ್‌ನಲ್ಲಿ ‘ಪರಿಚಿತ ಎದುರಾಳಿ’ ಎಲಿನಾ ರಿಬಾಕಿನಾ ಅವರನ್ನು ಎದುರಿಸಲಿದ್ದಾರೆ. ಐದನೇ ಶ್ರೇಯಾಂಕದ ರಿಬಾಕಿನಾ ಇನ್ನೊಂದು ಸೆಮಿಫೈನಲ್‌ನಲ್ಲಿ 6–3, 7–6 (9–7) ರಿಂದ ಆರನೇ ಶ್ರೇಯಾಂಕದ ಅಮೆರಿಕದ ಆಟಗಾರ್ತಿ ಜೆಸಿಕಾ ಪೆಗುಲಾ ಅವರನ್ನು ಮಣಿಸಿದರು.

ಸಬಲೆಂಕಾ ಮತ್ತು ರಿಬಾಕಿನಾ 2023ರ ಫೈನಲ್‌ನಲ್ಲೂ ಮುಖಾಮುಖಿಯಾಗಿದ್ದರು. ಆ ಫೈನಲ್‌ನಲ್ಲಿ ಸಬಲೆಂಕಾ ಸೆಟ್ ಹಿನ್ನಡೆಯಿಂದ ಗೆದ್ದು ಮೊದಲ ಬಾರಿ ಇಲ್ಲಿ ಚಾಂಪಿಯನ್ ಆಗಿದ್ದರು. ಸಬಲೆಂಕಾ ಅವರಿಗೆ ಮೆಲ್ಬರ್ನ್ ಪಾರ್ಕ್ ಅಚ್ಚುಮೆಚ್ಚಿನ ತಾಣವಾಗಿದ್ದು, ನಾಲ್ಕು ವರ್ಷಗಳಲ್ಲಿ ಮೂರನೇ ಬಾರಿ ಇಲ್ಲಿ ಪ್ರಶಸ್ತಿ ಗೆಲ್ಲುವ ಹಾದಿಯಲ್ಲಿದ್ದಾರೆ. ಒಟ್ಟಾರೆ ಐದನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಅವರ ಕೈಎಟುಕಿನಲ್ಲಿದೆ.

26 ವರ್ಷ ವಯಸ್ಸಿನ ರಿಬಾಕಿನಾ ಈವರೆಗಿನ ಅಭಿಯಾನದಲ್ಲಿ ಒಂದೂ ಸೆಟ್ ಕಳೆದುಕೊಂಡಿಲ್ಲ. ರಾಡ್ ಲೇವರ್ ಅರೇನಾದಲ್ಲಿ ಇನ್ನೊಂದು ಸೆಮಿಫೈನಲ್ ಪಂದ್ಯವನ್ನು 1 ಗಂಟೆ 40 ನಿಮಿಷಗಳ ಹೋರಾಟದಲ್ಲಿ ಗೆದ್ದ ರಷ್ಯಾ ಸಂಜಾತ ಕಜಾಕಸ್ತಾನದ ಆಟಗಾರ್ತಿ ಈಗ ಎರಡನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ವಿಶ್ವಾಸದಲ್ಲಿದ್ದಾರೆ. ಅವರು 2022ರಲ್ಲಿ ವಿಂಬಲ್ಡನ್ ಟೂರ್ನಿಯಲ್ಲಿ ವಿಜೇತೆಯಾಗಿದ್ದರು.

ದುಬೈನಲ್ಲಿ ನೆಲಸಿರುವ ರಿಬಾಕಿನಾ ನವೆಂಬರ್‌ನಲ್ಲಿ ನಡೆದ ಡಬ್ಲ್ಯುಟಿಎ ಫೈನಲ್ಸ್‌ನಲ್ಲಿ ಸಬಲೆಂಕಾ ವಿರುದ್ಧ ಜಯಗಳಿಸಿದ್ದರು. ಉತ್ತಮ ಲಯದಲ್ಲಿರುವ ಅವರು ಕೊನೆಯ 20 ಪಂದ್ಯಗಳಲ್ಲಿ 19ರಲ್ಲಿ ಜಯಗಳಿಸಿದ್ದಾರೆ.

ಆರಂಭದಲ್ಲೇ ಹಿಡಿತ ಸಾಧಿಸಿದ ರಿಬಾಕಿನಾ ಎದುರಾಳಿಯ ಮೊದಲ ಗೇಮ್ ಬ್ರೇಕ್ ಮಾಡಿದರಲ್ಲದೇ ಬೇಗನೇ 3–0 ಮುನ್ನಡೆ ಗಳಿಸಿದರು. ಕೆಲಸಮಯದ ನಂತರ ಪೆಗುಲಾ ಲಯಕಂಡುಕೊಂಡರು. ಬೇಸ್‌ಲೈನ್ ರ್‍ಯಾಲಿಗಳ ಮೂಲಕ ಎದುರಾಳಿಗೆ ಸವಾಲೊಡ್ಡಿದರು. ಮುಂದಿನ ಸರ್ವ್ ಉಳಿಸಿಕೊಂಡರು. ಆದರೆ ಐದನೇ ಗೇಮ್‌ನಲ್ಲಿ ಒಂದೂ ಪಾಯಿಂಟ್ ಗಳಿಸಲು ಆಗಲಿಲ್ಲ. ಕಜಾಕ್ ಆಟಗಾರ್ತಿ ಮೊದಲ ಸೆಟ್ಟನ್ನು 32 ನಿಮಿಷಗಳಲ್ಲಿ ಪಡೆದರು.

ಎರಡನೇ ಸೆಟ್‌ನಲ್ಲಿ ಪೆಗುಲಾ ಹೋರಾಟ ನಡೆಸಿದರು. 3–5 ಹಿನ್ನಡೆಯಲ್ಲಿದ್ದಾಗ ಮೂರು ಬಾರಿ ಮ್ಯಾಚ್ ಪಾಯಿಂಟ್ ರಕ್ಷಿಸಿಕೊಂಡ ಅಮೆರಿಕದ ಆಟಗಾರ್ತಿ ಚೇತರಿಕೆಯೊಂದಿಗೆ ಪಂದ್ಯವನ್ನು ಟೈಬ್ರೇಕರ್‌ಗೆ ಒಯ್ಯುವಲ್ಲಿ ಯಶಸ್ವಿಯಾದರು. ಆದರೆ ಟೈಬ್ರೇಕರ್‌ನಲ್ಲಿ ಶಾಂತಚಿತ್ತರಾಗಿ ಆಡಿದ ರಿಬಾಕಿನಾ ಮೂರನೇ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿ ಫೈನಲ್ ತಲುಪಿದರು.


ಗೆಲುವಿನ ಸಂಭ್ರಮದಲ್ಲಿ ಬೆಲರೂಸ್‌ನ ಅರಿನಾ ಸಬಲೆಂಕಾ ಎಎಫ್‌ಪಿ ಚಿತ್ರ

ನಡೆಯದ ಹಸ್ತಲಾಘವ

ಬೆಲರೂಸ್ ಆಟಗಾರ್ತಿ ಸಬಲೆಂಕಾ ಅವರು ಸೆಮಿಫೈನಲ್‌ನಲ್ಲಿ ಉಕ್ರೇನ್‌ನ ಆಟಗಾರ್ತಿ ಸ್ವಿಟೊಲಿನಾ ಅವರನ್ನು ಸೋಲಿಸಿದ ನಂತರ ಸಾಂಪ್ರದಾಯಿಕ ಹಸ್ತಲಾಘವ ನಡೆಯಲಿಲ್ಲ. ಸಬಲೆಂಕಾ– ಸ್ವಿಟೊಲಿನಾ ಹಣಾಹಣಿಗೆ ಮೊದಲು, ರಾಡ್ ಲೇವರ್ ಅರೇನಾದಲ್ಲಿ ಮಾಡಲಾದ ಘೋಷಣೆಯಲ್ಲಿ ‘ಪಂದ್ಯದ ನಂತರ ಹಸ್ತಲಾಘವ ಇರುವುದಿಲ್ಲ. ಅಭಿಮಾನಿಗಳು ಇದನ್ನು ಗೌರವಿಸಬೇಕು’ ಎಂದು ವಿನಂತಿಸಲಾಯಿತು. ಕೋರ್ಟ್ ಬಳಿಯ ದೊಡ್ಡ ಪರದೆಯಲ್ಲೂ ಈ ಹೇಳಿಕೆ ಮೂಡಿತು.

ಸಿನ್ನರ್‌ಗೆ ಜೊಕೊ ಸವಾಲು

ಸತತ ಎರಡು ಬಾರಿಯ ಚಾಂಪಿಯನ್ ಯಾನಿಕ್ ಸಿನ್ನರ್ (ಇಟಲಿ) ಅವರು ಶುಕ್ರವಾರ ನಡೆಯುವ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ 10 ಬಾರಿಯ ಪ್ರಶಸ್ತಿ ವಿಜೇತ ನೊವಾಕ್ ಜೊಕೊವಿಚ್ (ಸರ್ಬಿಯಾ) ಅವರನ್ನು ಎದುರಿಸಲಿದ್ದಾರೆ.

ಮತ್ತೊಂದು ಸೆಮಿಫೈನಲ್‌ನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೋಸ್ ಅಲ್ಕರಾಜ್ (ಸ್ಪೇನ್) ಅವರು ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಎದುರಿಸಲಿದ್ದಾರೆ.

ಚೆಸ್: ಅರ್ಜುನ್‌ಗೆ ಮತ್ತೊಮ್ಮೆ ಹಿನ್ನಡೆ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ ಅರ್ಜುನ್ ಇರಿಗೇಶಿ ಅವರು ಆಟದ ನಿರ್ಣಾಯಕ ಘಟ್ಟದಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ ಅವರ ಕೌಶಲಕ್ಕೆ ಸರಿಸಾಟಿಯಾಗಲಿಲ್ಲ. ಹೀಗಾಗಿ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ ಹತ್ತನೇ ಸುತ್ತಿನಲ್ಲಿ ಸೋಲು ಕಾಣಬೇಕಾಯಿತು. ಇದು ಟೂರ್ನಿಯಲ್ಲಿ ಅವರಿಗೆ ಮೂರನೇ ಸೋಲು.

ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಎಂಡ್‌ಗೇಮ್‌ನಲ್ಲಿ ಚಾಣಾಕ್ಷ ನಡೆಗಳ ಮೂಲಕ ಟರ್ಕಿಯ ಪ್ರತಿಭಾನ್ವಿತ ಯಾಗಿಝ್ ಕಾನ್ ಎರ್ಡೋಗ್ಮಸ್ ಅವರನ್ನು ಮಣಿಸಿದರು. ಆದರೆ ಭಾರತದ ಆಟಗಾರ, ಪ್ರಶಸ್ತಿ ರೇಸ್‌ನಲ್ಲಿ ಉಳಿಯಬೇಕಾದರೆ ಕೊನೆಯ ಮೂರೂ ಸುತ್ತುಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಬೇಕಾಗಿದೆ. ಗುಕೇಶ್ 10 ಸುತ್ತುಗಳ ನಂತರ 5 ಪಾಯಿಂಟ್ಸ್ ಗಳಿಸಿದ್ದು ಎಂಟನೇ ಸ್ಥಾನದಲ್ಲಿದ್ದಾರೆ.

14 ಆಟಗಾರರು ಕಣದಲ್ಲಿದ್ದು, ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ ಅವರು 6.5 ಅಂಕ ಕಲೆಹಾಕಿದ್ದು ಅಗ್ರಸ್ಥಾನದಲ್ಲಿದ್ದಾರೆ. ಉಜ್ಬೇಕಿಸ್ತಾನದ ಇನ್ನೊಬ್ಬ ಆಟಗಾರ ಜಾವೊಖಿರ್ ಸಿಂದರೊವ್, ಆತಿಥೇಯ ಡಚ್ ಆಟಗಾರ ಜೋರ್ಡನ್ ವಾನ್ ಫೋರೀಸ್ಟ್, ಜರ್ಮನಿಯ ಬ್ಲೂಬಾಮ್ ಮಥಾಯಸ್ ಅವರು ತಲಾ ಆರು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಅಬ್ದುಸತ್ತಾರೋವ್ ಹತ್ತನೇ ಸುತ್ತಿನಲ್ಲಿ ವ್ಲಾದಿಮಿರ್ ಫೆಡೊಸೀವ್ (5) ಜೊತೆ ಡ್ರಾ ಮಾಡಿಕೊಂಡರು. ಅತ್ಯುತ್ತಮ ಲಯದಲ್ಲಿರುವ ಮಥಾಯಸ್ ಬ್ಲೂಬಾಮ್, ಆತಿಥೇಯ ದೇಶದ ಅನಿಶ್ ಗಿರಿ (4.5) ಅವರನ್ನು ಸೋಲಿಸಿದರು.

ಅರ್ಜುನ್ (4) ಮೊದಲ ಕೆಲವು ಸುತ್ತುಗಳಲ್ಲಿ ಉತ್ತಮವಾಗಿ ಆಡಿದ್ದರು. ಆದರೆ ಕೊನೆಯ ಕೆಲವು ಸುತ್ತುಗಳಲ್ಲಿ ಗಮನಸೆಳೆಯುವಂಥ ಆಟವಾಡಿಲ್ಲ. ಕೀಮರ್ (5) ಸಹ ಈ ಟೂರ್ನಿಯಲ್ಲಿ ಮಿಶ್ರಫಲ ಉಂಡಿದ್ದಾರೆ.

ಇತರ ಪಂದ್ಯಗಳಲ್ಲಿ ಆರ್. ಪ್ರಜ್ಞಾನಂದ (4.5), ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್ (5.5) ಜೊತೆ, ವಾನ್ ಫೋರೀಸ್ಟ್, ಜಾವೊಖಿರ್ ಸಿಂದರೋವ್ ಜೊತೆ ಪಾಯಿಂಟ್ ಹಂಚಿಕೊಂಡರು.

ಮಾಸ್ಕ್ ಧರಿಸಿ ಆಡಿದ ಮುಂಬೈ ಆಟಗಾರರು

ಮುಂಬೈ (ಪಿಟಿಐ): ಆತಿಥೇಯ ಮುಂಬೈ ತಂಡದ ಆಟಗಾರರು ಗುರುವಾರ ಇಲ್ಲಿ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ದೆಹಲಿ ಎದುರಿನ ಪಂದ್ಯದಲ್ಲಿ ಮುಖಗವಸು ಧರಿಸಿ ಆಡಿದರು.

ಎಂಸಿಎ–ಬಿಕೆಸಿ ಮೈದಾನದಲ್ಲಿ ಈ ಪಂದ್ಯ ನಡೆಯುತ್ತಿದೆ. ಈ ಕ್ರೀಡಾಂಗಣದ ಪಕ್ಕದ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಅದರಿಂದಾಗಿ ಈ ಪ್ರದೇಶದಲ್ಲಿ ವಾಯುಮಾಲಿನ್ಯ ಹೆಚ್ಚಿದೆ. ಇಲ್ಲಿಯ ವಾಯು ಗುಣಮಟ್ಟ ಸೂಚ್ಯಂಕ (ಎಕ್ಯೂಐ) 160ರ ಪ್ರಮಾಣದಲ್ಲಿದೆ. ಇದು ‘ಅನಾರೋಗ್ಯಕರ’ ಮಟ್ಟವಾಗಿದೆ.

ಮುಂಬೈ ನಗರಿಯಲ್ಲಿ ವಾಯು ಮಾಲಿನ್ಯವು ಸಾಮಾನ್ಯ ಸಂಗತಿ. ಆದರೆ ಪಂದ್ಯ ನಡೆಯುತ್ತಿರುವ ಜಾಗದ ಸಮೀಪದಲ್ಲಿ ಕಟ್ಟಡ ನಿರ್ಮಾಣದಿಂದಾಗಿ ಮಾಲಿನ್ಯದ ಪ್ರಮಾಣ ಹೆಚ್ಚಿದೆ ಎನ್ನಲಾಗಿದೆ.

ಪ್ರೊ ಲೀಗ್: ಸಂಭವನೀಯರ ತಂಡದಿಂದ ಮನ್‌ಪ್ರೀತ್‌ಗೆ ಕೊಕ್

ಮನ್‌ಪ್ರೀತ್

ನವದೆಹಲಿ (ಪಿಟಿಐ): ಮುಂದಿನ ತಿಂಗಳು ರೂರ್ಕೆಲಾದಲ್ಲಿ ಆರಂಭವಾಗಲಿರುವ ಪುರುಷರ ಎಫ್‌ಐಎಚ್ ಪ್ರೊ ಲೀಗ್ ಆವೃತ್ತಿಗೆ 33 ಸಂಭಾವ್ಯ ಆಟಗಾರರ ಪಟ್ಟಿಯನ್ನು ಹಾಕಿ ಇಂಡಿಯಾ ಗುರುವಾರ ಪ್ರಕಟಿಸಿದೆ. ಈ ತಂಡದಲ್ಲಿ ಅನುಭವಿ ಮಿಡ್‌ಫೀಲ್ಡರ್ ಮನ್‌ಪ್ರೀತ್ ಸಿಂಗ್ ಸ್ಥಾನ ಪಡೆದಿಲ್ಲ.

ಎರಡು ಒಲಿಂಪಿಕ್ ಕಂಚಿನ ಪದಕ ವಿಜೇತ ಭಾರತ ತಂಡದ ಭಾಗವಾಗಿದ್ದ 33 ವರ್ಷದ ಮನ್‌ಪ್ರೀತ್ ಅವರು 15 ವರ್ಷಗಳಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಶಿಬಿರದ ಸಂಭವನೀಯರ ಪಟ್ಟಿಯಲ್ಲಿ ಸ್ಥಾನ ಪಡೆಯಲು ವಿಫಲರಾಗಿದ್ದಾರೆ.

ಮನ್‌ಪ್ರೀತ್ ಅವರು ಭಾರತದ ಪರ ಅತಿ ಹೆಚ್ಚು (411) ಅಂತರ ರಾಷ್ಟ್ರೀಯ ಪಂದ್ಯಗಳನ್ನು ಆಡಿದ ಎರಡನೇ ಆಟಗಾರನಾಗಿದ್ದಾರೆ. ಹಾಕಿ ಇಂಡಿಯಾ ಹಾಲಿ ಅಧ್ಯಕ್ಷ ದಿಲೀಪ್ ಟರ್ಕಿ ಅತಿ ಹೆಚ್ಚು (412) ಪಂದ್ಯಗಳನ್ನು ಆಡಿದ ದಾಖಲೆ ಹೊಂದಿದ್ದಾರೆ.

ಫೆ.10ರಿಂದ 15ರವರೆಗೆ ರೂರ್ಕೆಲಾದಲ್ಲಿ ನಿಗದಿಯಾಗಿರುವ ಪಂದ್ಯಗಳಿಗೂ ಮುನ್ನ ಫೆ.1ರಿಂದ ಶಿಬಿರ ನಡೆಯಲಿದೆ.

ಸಂಭಾವ್ಯ ಆಟಗಾರರು: ಗೋಲ್ ಕೀಪರ್‌ಗಳು: ಪವನ್, ಸೂರಜ್ ಕರ್ಕೇರ, ಮೋಹಿತ್ ಶಶಿಕುಮಾರ್, ಪ್ರಿನ್ಸ್‌ದೀಪ್ ಸಿಂಗ್. **ಡಿಫೆಂಡರ್‌ಗಳು:** ಹರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಜರ್ಮನ್‌ಪ್ರೀತ್ ಸಿಂಗ್, ಸಂಜಯ್, ಜುಗರಾಜ್ ಸಿಂಗ್, ಸುಮಿತ್, ಪೂವಣ್ಣ ಚಂದೂರಾ ಬಾಬಿ, ಯಶದೀಪ್ ಸಿವಾಚ್, ನೀಲಂ ಸಂಜೀಪ್ ಸೆಸ್, ಅಮನದೀಪ್ ಲಾಕ್ರಾ. **ಮಿಡ್‌ಫೀಲ್ಡರ್‌ಗಳು:** ರಾಜಿಂದರ್ ಸಿಂಗ್, ಮನ್‌ಮೀತ್ ಸಿಂಗ್, ಹಾರ್ದಿಕ್ ಸಿಂಗ್, ರವಿಚಂದ್ರ ಸಿಂಗ್ ಮೋಯಿರಾಂಗ್ತೇಮ್, ವಿವೇಕ್ ಸಾಗರ್ ಪ್ರಸಾದ್, ವಿಷ್ಣುಕಾಂತ್ ಸಿಂಗ್, ರಾಜ್ ಕುಮಾರ್ ಪಾಲ್, ನೀಲಕಂಠ ಶರ್ಮಾ, ರೋಸನ್ ಕುಜೂರ್. **ಫಾರ್ವರ್ಡ್‌ಗಳು:** ಅಭಿಷೇಕ್, ಸುಖಜೀತ್ ಸಿಂಗ್, ಶಿಲಾನಂದ ಲಾಕ್ರಾ, ಮನದೀಪ್ ಸಿಂಗ್, ಅರೈಜೀತ್ ಸಿಂಗ್ ಹುಂಡಲ್, ಅಂಗದ್ ಬೀರ್ ಸಿಂಗ್, ಉತ್ತಮ್ ಸಿಂಗ್, ಸೆಲ್ವಂ ಕಾರ್ತಿ, ಆದಿತ್ಯ ಅರ್ಜುನ್ ಲಾಲಾಗೆ, ಮಣಿಂದರ್ ಸಿಂಗ್.

ಕ್ವಾರ್ಟರ್ ಫೈನಲ್‌ಗೆ ಇಶಾರಾಣಿ

ಬ್ಯಾಂಕಾಕ್ (ಪಿಟಿಐ): ಭಾರತದ ಇಶಾರಾನಿ ಬರುವಾ ಅವರು ಗುರುವಾರ ಥಾಯ್ಲೆಂಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್‌ನ ಮಹಿಳಾ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ವಿಶ್ವದ 48ನೇ ಕ್ರಮಾಂಕದ ಇಶಾರಾಣಿ 21-13, 14-21, 21-14ರಿಂದ ಎರಡನೇ ಶ್ರೇಯಾಂಕದ ಸುಂಗ್ ಶುವೊ ಯುನ್ ಅವರಿಗೆ ಆಘಾತ ನೀಡಿದರು. ದಕ್ಷಿಣ ಕೊರಿಯಾದ ಯುನ್ ಅವರು 34ನೇ ಕ್ರಮಾಂಕ ಹೊಂದಿದ್ದಾರೆ. ಭಾರತದ ಮತ್ತೊಬ್ಬ ಆಟಗಾರ್ತಿ ದೇವಿಕಾ ಶೈಗ್ 21-14, 21-14ರಿಂದ ಶ್ರೇಯಾಂಕಿತ ಆಟಗಾರ್ತಿ ತುಂಗ್ ಸಿಯೊ-ಟಾಂಗ್ (ತೈವಾನ್) ಅವರನ್ನು ಸೋಲಿಸಿ ಎಂಟರ ಘಟ್ಟ ಪ್ರವೇಶಿಸಿದರು.

ಆದರೆ, ಪುರುಷರ ಸಿಂಗಲ್ಸ್ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಕಿರಣ್ ಜಾರ್ಜ್, ತರುಣ್ ಮನ್ನೆಪಳ್ಳಿ, ಮಿಥುನ್ ಮಂಜುನಾಥ್ ಹೊರಬಿದ್ದರು.

Digital ಪ್ರಜಾವಾಣಿ

ವ್ಯಾಲೆಂಟೈನ್ಸ್ ಡೇ ರೀಲ್ಸ್ ಸ್ಪರ್ಧೆಗೆ ಆಹ್ವಾನ

ವ್ಯಾಲೆಂಟೈನ್ಸ್ ಡೇ ಅಂಗವಾಗಿ ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನಾರ್ಥ್ ಕ್ಯಾಂಪಸ್ ಸಹಯೋಗದೊಂದಿಗೆ ವಿಶೇಷ ರೀಲ್ಸ್ ಸ್ಪರ್ಧೆಯನ್ನು ‘ಪ್ರಜಾವಾಣಿ ಡಿಜಿಟಲ್’ ಆಯೋಜಿಸಿದೆ. ಪ್ರೀತಿ, ಸ್ನೇಹ, ನಂಬಿಕೆ, ಸಂಬಂಧಗಳ ಮೌಲ್ಯ ಹಾಗೂ ಜೀವನದ ಸೌಂದರ್ಯವನ್ನು ಪ್ರತಿಬಿಂಬಿಸುವ ಸೃಜನಾತ್ಮಕ ರೀಲ್‌ಗಳನ್ನು ಆಹ್ವಾನಿಸಲಾಗುತ್ತಿದೆ.

CAMBRIDGE INSTITUTE OF TECHNOLOGY NORTH CAMPUS

ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತರು ತಮ್ಮ ಮೂಲ ಸೃಜನಾತ್ಮಕ ಮತ್ತು ಕುಟುಂಬ ಸ್ನೇಹಿ ರೀಲ್‌ಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸಬಹುದು. ಅಶ್ಲೀಲತೆ, ಹಿಂಸೆ, ದ್ವೇಷ ಭಾಷೆ, ಹಕ್ಕುಸ್ವಾಮ್ಯ ಉಲ್ಲಂಘನೆ ಅಥವಾ ಇತರರ ವಿಷಯದ ನಕಲು ಇರುವ ರೀಲ್‌ಗಳನ್ನು ಪರಿಗಣಿಸಲಾಗುವುದಿಲ್ಲ.

ಆಯ್ಕೆಯಾದ ರೀಲ್‌ಗಳನ್ನು ಪ್ರಜಾವಾಣಿ ಡಿಜಿಟಲ್‌ನ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಪ್ರಕಟಿಸಲಾಗುವುದು. ವಿಜೇತರಿಗೆ ವಿಶೇಷ ಗೌರವ/ಪ್ರಶಸ್ತಿಗಳನ್ನು ನೀಡಲಾಗುತ್ತದೆ.

- ಪ್ರಥಮ ಬಹುಮಾನ ₹25 ಸಾವಿರ
- ದ್ವಿತೀಯ ಬಹುಮಾನ ₹20 ಸಾವಿರ
- ತೃತೀಯ ಬಹುಮಾನ ₹15 ಸಾವಿರ

ಜತೆಗೆ, 10 ಸಮಾಧಾನಕರ ಬಹುಮಾನಗಳು

ರೀಲ್ ಕಳುಹಿಸಲು ಫೆ.5 ಕೊನೆಯ ದಿನ

ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಿ, ಪ್ರೀತಿಯನ್ನು ಸಂಭ್ರಮಿಸಿ!

ರೀಲ್‌ಗಳನ್ನು ಕಳುಹಿಸಬೇಕಾದ ಇ-ಮೇಲ್
events.pvdigital@prajavani.co.in
ಕಳುಹಿಸುವವರು ತಮ್ಮ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು ನಮೂದಿಸಿ

ನಿಯಮ ಮತ್ತು ಷರತ್ತುಗಳಿಗೆ ಕೋಡ್ ಸ್ಕ್ಯಾನ್ ಮಾಡಿ